ಮುಂದಿನ ಜನವರಿ ತಿಂಗಳಲ್ಲಿ ನಮ್ಮ ಹಿಂದೂ ದೇಶದ ಚಕ್ರವರ್ತಿಗಳ ಪಟ್ಟಾಭಿಷೇಕದ ದರ್ಬಾರು ಡೆಲ್ಲಿ ಮಹಾನಗರದಲ್ಲಿ ನಡೆಯುವದೆಂಬುದು ವಾಚಕರಿಗೆ ತಿಳಿದಿರುವದಷ್ಟೆ. ಅಗ್ಗ ನಮ್ಮ ಹಿಂದೂ ದೇಶದ ಸಕಲ ಪ್ರಾಂತ್ಯಗಳಲ್ಲಿರತಕ್ಕಂಥ ಸಮರ್ಥರಾದ ಕೈಗಾರಿಕೆಯವರು ಲೋಹದಿಂದಲೂ ಕಲ್ಲು ಕಟ್ಟಿಗೆ ಮಣ್ಣು ಮರ ದಂತ ಚರ್ಮ ಮೊದಲಾದ ಪದಾರ್ಥಗಳಿಂದಲೂ ಮಾಡಿದ ವಸ್ತುವಿಶೇಷಗಳನ್ನೂ ಚಿತ್ರಬರೆಯುವದು ನೇಯುವದು ಕಸೂತಿ ಮುಂತಾದ ಕೈಕೆಲಸಗಳನ್ನೂ ಶೇಖರಿಸಿಕೊಂಡು ಪ್ರದರ್ಶನ ಪಡಿಸಬೇಕೆಂದು ನಮ್ಮ ವೈಸರಾಯಿ ಪ್ರಭುಗಳು ಅಪ್ಪಣೆ ಕೊಟ್ಟಿದ್ದಾರೆ. ತಂದಿಡಬೇಕೆಂದಿರುವ ವಸ್ತುಗಳು ಅತ್ಯುತ್ಕೃಷ್ಟವಾಗಿ ಮಾಡಿದವುಗಳೂ ಅತ್ಯಂತ ಸುಂದರವಾದವುಗಳೂ ಆಗಬೇಕೆಂದು ವಿಧಿಸಿರುವದಲ್ಲದೆ ನಮ್ಮ ಹಿಂದೂ ದೇಶೀಯರೇ ಹಿಂದೂ ದೇಶದ ಮಾದರಿಯನ್ನನುಸರಿಸಿ ಮಾಡಿದ ವಸ್ತುಗಳನ್ನು ಮಾತ್ರ ಈ ಪ್ರದರ್ಶನದಲ್ಲಿ ಅಂಗೀಕರಿಸುವರು. ಹಿಂದೂ ದೇಶದ ಶ್ರೇಯೋಭಿವೃದ್ಧಿ ವಿಷಯದಲ್ಲಿ ಅನವರತ ಚಿಂತಿಸುತ್ತಿರುವಂಥ ನಮ್ಮ ವೈಸರಾಯಿಗಳು ಈ ಪ್ರದರ್ಶನದ ಉದ್ದೇಶವನ್ನು ಕುರಿತು ಹೇಳಿರುವ ಮಾತುಗಳು ನಿರಂತರವಾಗಿ ಲಕ್ಷ್ಯವಿಡತಕ್ಕವುಗಳಾಗಿವೆ. ಅವರು ಹೇಳಿರುವದೇನಂದರೆ:— "ಈ ಹಿಂದೂ ದೇಶದ ರಾಜರೂ ಸಂಸ್ಥಾನಾಧಿಪತಿಗಳೂ ಒಂದೆಡೆಯಲ್ಲಿ ಒಟ್ಟಿಗಾಗಿ ಸೇರುವ ಕಾಲವು ಬಹು ಅನುಕೂಲವಾದ ಸಂದರ್ಭವಾಗಿದೆ. ಇಷ್ಟು ಯೋಗ್ಯವಾದ ಕಾಲದಲ್ಲಿ ಈ ದೇಶಾಧಿಪತಿಗಳಿಗೆ ತಮ್ಮ ದೇಶದಲ್ಲಿ ಎಂಥೆಂಥ ಉತ್ಕೃಷ್ಟ ಪದಾರ್ಥಗಳು ಉತ್ಪನ್ನವಾಗುತ್ತವೆಂಬುವದನ್ನೂ ಪಾಶ್ಚಾತ್ಯ ದೇಶಗಳ ವಸ್ತುವಿಶೇಷಗಳನ್ನು ಉತ್ಕೃಷ್ಟವಾದವುಗಳೆಂದು ಭಾವಿಸಿಕೊಂಡು ಅವುಗಳನ್ನು ಸ್ವೀಕರಿಸುವದರಲ್ಲಿ ಸ್ವದೇಶದ ಉತ್ಕೃಷ್ಟ ಪದಾರ್ಥಗಳನ್ನು ತಿರಸ್ಕರಿಸುತ್ತಿದ್ದಾರೆಂಬುವದನ್ನು ಪ್ರತ್ಯಕ್ಷವಾಗಿ ನಡೆಸುವಂತೆ ಮಾಡಿ ಅವರನ್ನು ದೇಶೀಯ ಕೌಶಲ್ಯ ಪಕ್ಷಪಾತಿಗಳನ್ನಾಗ ಮಾರ್ಪಡಿಸಬೇಕೆಂಬುದೇ ನನ್ನ ಉದ್ದೇಶವಾಗಿದೆ. ಈ ನನ್ನ ಉದ್ದೇಶ ಪೂರ್ತಿಗೆ ಇಂಥ ಸಮಯವು ಪುನಃ ಸಿಕ್ಕಲಾರದು."

ಈ ಉದ್ದೇಶಕ್ಕನುಸಾರವಾಗಿ ವೈಸರಾಯಿ ಪ್ರಭುಗಳು ಈ ಪ್ರದರ್ಶನ ಕಾರ್ಯಕ್ಕೆ ಡಾಕ್ಟರ್ ವಾಟ್ ಎಂಬ ಪ್ರಸಿದ್ಧ ಗ್ರಂಥಕಾರನನ್ನು ಸರ್ವಾಧಿಕಾರಿಯಾಗಿ ನೇಮಿಸಿದ್ದಾರೆ. ಈತನು ಇಂಡಿಯಾ ರಾಷ್ಟ್ರೀಯ ಪ್ರಭುತ್ವದವರ ಅಪ್ಪಣೆಯ ಪ್ರಕಾರ ಈ ದೇಶದ ವಿವಿಧ ಕೈಗಾರಿಕೆಗಳ ವಿಷಯದಲ್ಲಿ ಬಹು ವಿಶೇಷವಾದ ಗ್ರಂಥಗಳನ್ನು ಬರೆದಿರುತ್ತಾನೆ. ಈ ವಿದ್ವಾಂಸನು ಪ್ರದರ್ಶನಕ್ಕೆ ಯೋಗ್ಯವಾದ ಪದಾರ್ಥಗಳನ್ನು ಹುಡುಕುತ್ತಾ ಈಗ ಮದ್ರಾಸು ಅಧಿಪತ್ಯದಲ್ಲಿ ಸಂಚರಿಸುತ್ತಿರುತ್ತಾನೆ. ಸ್ವಲ್ಪ ಕಾಲದಲ್ಲಿ ನಮ್ಮ ಮೈಸೂರು ಸಂಸ್ಥಾನಕ್ಕೂ ಈ ವಿದ್ವಾಂಸನು ಬರುವನೆಂಬ ವರ್ತಮಾನವಿದೆ. ಈತನು ಮದ್ರಾಸು ಅಧಿಪತ್ಯದಲ್ಲಿ ಸಂಚರಿಸಿ ಅಲ್ಲಲ್ಲಿ ನೋಡಿದ ವಿಷಯಗಳನ್ನು ಕುರಿತು ಮದ್ರಾಸಿನ ಒಂದು ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸಿದೆ. ಅದರ ಸಾರಾಂಶವನ್ನು ನಮ್ಮ ವಾಚಕರಿಗೋಸ್ಕರ ಇಲ್ಲಿ ಬರೆಯುತ್ತೇವೆ.

ನಮ್ಮ ದೇಶದ ಪುರಾತನ ಕೈಗಾರಿಕೆಗಳು ಕ್ಷಯಿಸಿಹೋಗುತ್ತಲಿವೆಯೆಂದೂ ಅದಕ್ಕೆ ಎರಡು ಮೂರು ಕಾರಣಗಳಿವೆಯೆಂದೂ ಡಾಕ್ಟರ್ ವಾಟ್ ವಿದ್ವಾಂಸನು ತಿಳಿಸುತ್ತಾನೆ. ಆ ಕಾರಣಗಳು ಯಾವವೆಂದರೆ, ಮೊದಲನೇದಾಗಿ—ಈ ಕೈಗಾರಿಕೆಯವರು ಸ್ವಂತ ಬುದ್ಧಿಯಿಂದ ಅಪೂರ್ವವಾದ ಪದಾರ್ಥಗಳನ್ನಾಗಲಿ ನೂತನವಾದವುಗಳೂ ದೇಶಕ್ಕೆ ಅನುಕೂಲವಾದವುಗಳೂ ಸುಂದರವಾದವುಗಳೂ ಆಗಿರುವ ಸ್ವದೇಶೀಯ ಮಾದರಿಗಳಂತಿರುವ ವಸ್ತುಗಳನ್ನಾಗಲಿ ಮಾಡುವದು ಬಿಟ್ಟು ಪಾಶ್ಚಾತ್ಯ ಮಾದರಿಗಳಲ್ಲಿ ನಿಕೃಷ್ಟವಾದವುಗಳನ್ನನುಕರಿಸತಕ್ಕವರಾಗಿದ್ದಾರೆ. ಡಾಕ್ಟರ್ ವಾಟ್ ಇದಕ್ಕೆ ದೃಷ್ಟಾಂತಗಳನ್ನು ಕೊಟ್ಟಿದ್ದಾನೆ. ಸಂಪೂರ್ಣವಾಗಿ ಹಿಂದೂ ಮಾದರಿಯನ್ನೇ ಅನುಸರಿಸಿ ಮಾಡಿದ ಎರಡು ವಿಧ ರತ್ನಗಂಬಳಿಗಳನ್ನೂ ಜಮಖಾನಗಳನ್ನೂ ಮಾತ್ರ ಈತನು ಕಂಡನು. ಅವುಗಳಲ್ಲೊಂದು ರಾಮಚಂದ್ರನೆಂಬ ಹೆಸರಿನದು ಬಳ್ಳಾರಿನಲ್ಲಿ ನೂರಿನಿಂದ ಮಾಡಲ್ಪಡುತ್ತೆ. ಈ ಕೈಗಾರಿಕೆಯನ್ನು ಮಾಡುವವರು ಎಂಟು ಹತ್ತು ಮನೆಯವರು ಮಾತ್ರ ಇದ್ದಾರೆ. ಮತ್ತೊಂದು ವಿಧವು ತುಂಟನಿಂದ ಮಾಡಿದ್ದು, ಹುಲ್ಲಿನ ಚಾಪೆಯನ್ನು ಹೋಲುವದಾಗಿದೆ. ಇವೆರಡು ವಿಧಗಳೂ ಬಹು ಸುಂದರವಾಗಿದ್ದಾಗ್ಯೂ ಅವುಗಳನ್ನು ಅಪೇಕ್ಷಿಸಿ ಕೊಂಡುಕೊಳ್ಳುವವರು ಬಹು ಮಂದಿಯಿಲ್ಲ. ಆ ದೇಶದಲ್ಲಿ ಮಾಡಲ್ಪಟ್ಟ ರತ್ನಗಂಬಳಿಗಳನ್ನೂ ಜಮಖಾನಗಳನ್ನೂ ಇಂಗ್ಲಾಂಡಿಗೆ ಕಳುಹಿಸಿಕೊಡುವ ವರ್ತಕರು ಪರ್ಷಿಯಾ ದೇಶದ ರತ್ನಗಂಬಳಿಗಳಂತಿರುವವುಗಳನ್ನು ಮಾಡುವದಕ್ಕೆ ಪ್ರೋತ್ಸಾಹಪಡಿಸುತ್ತಾರೆ. ಈ ಕೈಗಾರಿಕೆಯವರು ಮಾಡುವ ಕೆಲಸವು ಪರ್ಷಿಯಾ ದೇಶದವರ ಕೈಯಿಂದಾಗುವಷ್ಟು ನಯವಾಗಿರುವದಿಲ್ಲ, ಅಷ್ಟು ಬೆಲೆಯೂ ಬಾಳುವದಿಲ್ಲವಾದ್ದರಿಂದ ಅವರಿಗೆ ಸ್ವಂತ ಕೆಲಸವನ್ನು ಉತ್ಕೃಷ್ಟವಾಗಿ ಮಾಡುವ ಅಭ್ಯಾಸವೂ ತಪ್ಪಿ, ಆ ಕುಶಲ ವಿದ್ಯೆಯೂ ಕ್ಷಯಿಸಿ ಹೋಗುವ ವಿಪತ್ತು ಸಂಭವಿಸಿದೆ. ಕಾಶೀ ನಗರದಲ್ಲೊಬ್ಬ ಕೈಗಾರಿಕೆಯವನು ರತ್ನಗಂಬಳಿಗಳನ್ನು ನೇಯುವವನು ದೇಶೀಯ ಮಾದರಿಯನ್ನು ಬಿಟ್ಟು ಇಂಗ್ಲೆಂಡ್ ದೇಶಕ್ಕೆ ಹೋಗಿದಾಗ್ಯೆ ತನಗೆ ಸಿಕ್ಕಿದ ಮಾದರಿ ಪುಸ್ತಕದಲ್ಲಿದ್ದಂತೆ ಗೋಡೆಗಳಿಗೆ ಹಚ್ಚುವ ಕಾಗದಗಳ ಮಾದರಿಯ ಹಾಗೆ ನೇಯುತ್ತಾ ತನ್ನಿಂದ ತಯಾರಾದ ವಸ್ತುವಿಗೆ ಸಮಾನವಾದದ್ದು ಯಾವದೂ ಇಲ್ಲವೆಂದು ಹೇಳಿಕೊಳ್ಳುತ್ತಿದ್ದನು! ಈ ಪ್ರಕಾರ ಈ ದೇಶೀಯರು ವಿದೇಶೀಯರ ಕೈಗಾರಿಕೆಗಳ ಮಾದರಿಗಳನ್ನನುಸರಿಸುವದರಲ್ಲಿ ಕಾಲಹರಣ ಮಾಡುತ್ತಿರುವದರಿಂದ ಸ್ವದೇಶೀಯವಾದ ಪುರಾತನ ಮಾದರಿಗಳನ್ನು ಮರೆತು ಹೋಗುವ ಸಂಭವವು ಒದಗಿರುವದಲ್ಲದೆ ವಿದೇಶೀಯರನ್ನನುಸರಿಸಿ ಮಾಡುವ ಸಾಮರ್ಥ್ಯವನ್ನೂ ಬೇಗ ಕಳೆಕೊಳ್ಳತಕ್ಕ ನಷ್ಟವೂ ಉಂಟಾಗುವದು. ಯಾಕೆಂದರೆ ಅವರ ಕೆಲಸವೂ ಅಷ್ಟು ಲಕ್ಷ್ಯವಿಟ್ಟು ಮಾಡತಕ್ಕದ್ದಾಗಿಲ್ಲ, ಅಷ್ಟು ನಯವಾಗಿಯೂ ಇಲ್ಲ. ಲೋಹದಿಂದ ಮಾಡುವ ಕೆಲಸದಲ್ಲಿಂತೂ ಮಿಶ್ರಲೋಹವನ್ನು ಉಪಯೋಗಿಸಿ ಮಾಡಿಸುವದುಂಟು.

ಎರಡನೇದಾಗಿ—ದೇಶೀಯ ಕೈಗಾರಿಕೆಗಳು ಕ್ಷಯಿಸುವದಕ್ಕೆ ದೇಶೀಯ ರಾಜರೂ ಸಂಸ್ಥಾನಾಧಿಪತಿಗಳೂ ಪ್ರಭುಗಳೂ ಕಾರಣರಾಗಿರುತ್ತಾರೆ. ಇವರು ಸ್ವದೇಶದ ಕುಶಲ ವಿದ್ಯೆಗೆ ಪ್ರೋತ್ಸಾಹವನ್ನುಂಟುಮಾಡುವದನ್ನು ಬಿಟ್ಟು ಕೆಲಸಕ್ಕೆ ಬಾರದ ಪಾಶ್ಚಾತ್ಯ ವಸ್ತುಗಳನ್ನು ಕೊಟ್ಟು ಕೊಂಡುಕೊಳ್ಳುತ್ತಾರೆ. ಈ ದೇಶದ ಐಶ್ವರ್ಯವಂತರ ಮನೆಗಳಲ್ಲಿಯೂ ರಾಜರ ಅರಮನೆಗಳಲ್ಲಿಯೂ ಕಾಣಸಿಗುವ ವಸ್ತುಗಳೂ ಕನ್ನಡಿಗಳೂ ದೀಪಗಳೂ ಆದಿಯಾದ ಪಾಶ್ಚಾತ್ಯ ವಸ್ತುಗಳೂ ಪರೀಕ್ಷೆಯಲ್ಲಿ ಮಧ್ಯಮ ತರದ ಸಾಧಾರಣ ಜನಗಳ ಮನೆಗಳಲ್ಲಿ ಉಪಯೋಗಿಸುವದಕ್ಕಾದರೂ ಯೋಗ್ಯವಲ್ಲದವುಗಳಾಗಿರುವದುಂಟು. ಇದಕ್ಕೆ ದೃಷ್ಟಾಂತವಾಗಿ ಡಾಕ್ಟರ್ ವಾಟ್ ಉದಾಹರಿಸಿದ ಒಂದು ವೃತ್ತಾಂತವನ್ನು ಇಲ್ಲಿ ತಿಳಿಸುತ್ತೇವೆ. "ರಾಮಪುರದ ನವಾಬರು ಸಾವಿರಾರು ಕುರ್ಚಿಗಳನ್ನೂ ಸೋಫಾಗಳನ್ನೂ ಇಟ್ಟುಕೊಂಡಿದ್ದಾರೆ. ಇವುಗಳನ್ನು ಅವರು ಜಾಗ್ರತೆಯಾಗಿ ಕಟ್ಟಿರುವ ವಿಸ್ತಾರವಾದ ಕೊಟ್ಟಡಿಗಳಲ್ಲಿ ತುಂಬಿಸಿಟ್ಟಿರುತ್ತಾರೆ. ನಾನು ಆ ವರ ಸಂಸ್ಥಾನಕ್ಕೆ ಹೋಗಿದ್ದ ವೇಳೆಗೆ ನವಾಬರು ಅವುಗಳಿಗೆಲ್ಲ ಹೊಸದಾಗಿ ರೇಶಿಮೆ ಬಟ್ಟೆಯ ಹೊದ್ದಿಕೆಯನ್ನು ಹಾಕುವ ಕೆಲಸಕ್ಕೋಸ್ಕರ ಜರ್ಮನ್ ವರ್ತಕನೊಬ್ಬನಲ್ಲಿ ಸಾವಿರಾರು ರೂಪಾಯಿಗಳ ಬಾಳುವ ರೇಶಿಮೆಯನ್ನು ತರಿಸಿಟ್ಟುಕೊಂಡಿದ್ದರು. ಆ ಬಟ್ಟೆಯು ಹಾದಿ ಹೋದರೋ ಬಹು ಅಸಹ್ಯವಾಗಿತ್ತು. ಭೂಲೋಕದಲ್ಲೆಲ್ಲಾ ಪ್ರಸಿದ್ಧವಾದ ಕಾಶ್ಮೀರ ಕಿನ್ಖಾಬು ಬಟ್ಟೆಗಳು ಆ ರಾಮಪುರದ ಒಳಗಲ್ಲೇ ಬೇಕಾದಷ್ಟು ದೊರಕುತ್ತಿದ್ದರೂ ನವಾಬರು ಪರದೇಶದಲ್ಲಿ ಮಾಡಿದಂಥ ಮೇಲೆ ಮಾತ್ರ ರೇಶಿಮೆ ಹಾಕಿರುವಂಥಾ ಕೇವಲ ನಿಕೃಷ್ಟವಾಗಿರುವಂಥ ರೇಶಿಮೆಯನ್ನು ತಮ್ಮ ಅರಮನೆಯ ಸಾಮಾನುಗಳಿಗಾಗಿ ಕೊಂಡುಕೊಂಡದ್ದನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಇದನ್ನು ದಿವಾನರಿಗೆ ತಿಳಿಸಿದಾಗ್ಯೂ ಜರ್ಮನ್ ವರ್ತಕರಿಗೇ ಲಾಭವಾಯಿತೇ ಹೊರತು ದೇಶೀಯ ಕೈಗಾರಿಕೆಗೆ ಪ್ರೋತ್ಸಾಹವು ದೊರಕದೆ ಹೋಯಿತು. ಈ ಅನ್ಯಾಯವನ್ನು ನೋಡಿ ನನ್ನ ಬಾಯಿಯಿಂದ ಮಾತು ಹೊರಡದೆ ಹೋಯಿತು."

ಈ ದೇಶದ ಕೈಗಾರಿಕೆಯವರಿಗೂ ಪರದೇಶದ ಕೈಗಾರಿಕೆಯವರಿಗೂ ಪ್ರಾವೀಣ್ಯವಿರುವದೆಂಬುವದು ಸಹಜವಾಗಿದೆಯಷ್ಟೇ. ಒಂದೊಂದು ದೇಶದವರು ಒಂದೊಂದು ವಸ್ತುವನ್ನು ಇತರ ದೇಶೀಯರು ಮಾಡುವದಕ್ಕಿಂತ ಉತ್ತಮವಾಗಿ ಮಾಡಬಲ್ಲ ಸಾಮರ್ಥ್ಯವುಳ್ಳವರಾಗಿದ್ದಾರೆ. ನಮ್ಮ ಹಿಂದೂ ದೇಶದ ಕೈಗಾರಿಕೆಯವರ ಪ್ರಕೃತ ಸ್ಥಿತಿಯನ್ನು ನೋಡುವಲ್ಲಿ ಪ್ರತ್ಯಕ್ಷವಾಗುವದೇನೆಂದರೆ—ಇತರ ದೇಶೀಯರು ಮಾಡುವದನ್ನು ಶ್ರೇಷ್ಠವಾಗಿ ಪದಾರ್ಥಗಳನ್ನು ಮಾಡಬಲ್ಲ ತಮ್ಮ ಕೌಶಲ್ಯವನ್ನು ಮರೆತುಬಿಡುತ್ತಾ ಅವುಗಳಿಗಿಂತ ಚೆನ್ನಾಗಿ ಮಾಡಬಲ್ಲ ವಿದೇಶೀಯರ ವಸ್ತು ಪ್ರದೇಶಗಳಿಂದಿರುವ ಪದಾರ್ಥಗಳನ್ನು ಉತ್ಪನ್ನ ಮಾಡುವದರಲ್ಲಿ ಆಸಕ್ತರಾಗಿರುವರು. ಇದಲ್ಲದೆ ನಮ್ಮ ದೇಶೀಯ ರಾಜರೂ ಶ್ರೀಮಂತರೂ ವಿದೇಶೀಯರಿಂದ ಮಾಡಲ್ಪಟ್ಟ ವಸ್ತುಗಳಲ್ಲಿ ಒಂದನ್ನು ಯೋಗ್ಯವಾದವುಗಳು ಯಾವುವು ಅಯೋಗ್ಯವಾದವುಗಳು ಎಂದು ಗುಣವಿಚಾರ ಮಾಡದೆ ಉತ್ಕೃಷ್ಟ ವಸ್ತುಗಳಿಗೆ ಒದಗಿರುವ ಬೆಲೆಗಿಂತಲೂ ಹೆಚ್ಚಾಗಿ ಕೊಡುವದಕ್ಕೆ ಯೋಗ್ಯವಾದ ಪದಾರ್ಥಗಳಿಗೆ ಹಣವನ್ನು ಚೆಲ್ಲಿಸುವವರಾಗಿದ್ದಾರೆ. ಆದರೆ ಈ ಭಾಗದಲ್ಲಿ ನಮ್ಮ ಮೈಸೂರು ಸಂಸ್ಥಾನಕ್ಕೆ ಕೀರ್ತಿಯನ್ನು ತಂದಿರುವ ಅರಮನೆಯನ್ನು ಕಟ್ಟುವದರಲ್ಲಿ ಆಗಿರುವ ದೇಶೀಯ ಕೈಗಾರಿಕೆಯವರಿಗೆ ಕೊಟ್ಟಿರುವ ಪ್ರೋತ್ಸಾಹವು ನಮ್ಮ ಹಿಂದೂ ದೇಶದ ಜನರ ಪ್ರಾಶಸ್ತ್ಯಗಳನ್ನು ಒಪ್ಪುವ ರೀತಿಯನ್ನು ಎತ್ತಿ ತೋರುತ್ತಿದೆ. ಇದಕ್ಕನುಗುಣವಾಗಿ ಮೈಸೂರು ದೇಶದ ಪ್ರಜೆಗಳಿಂದ ಪಡೆಯಲ್ಪಡುವ ಗಂಧದ ಮರದ ಕೆತ್ತನೆ ಕೆಲಸಗಳನ್ನು ಚಿನ್ನದ ಬೆಳ್ಳಿಯ ಕೆಲಸಗಳಲ್ಲಿ ತಯಾರಾಗುವ ಒಳ್ಳೆಯ ಸಾಮಾನು ಕೆಲಸಗಳನ್ನು ಕೇವಲ ಪ್ರೋತ್ಸಾಹವನ್ನು ಕೊಡಬೇಕೆಂದು ನಂಬಿದ್ದೇವೆ. ಮೇಲ್ಕಂಡ ಈ ಕುಶಲ ವಿದ್ಯೆಗಳನ್ನಲ್ಲದೆ ಈ ಸಂಸ್ಥಾನದಲ್ಲಿ ಬೇರೆ ಬೇರೆ ವಿಧದ ವಿದ್ಯೆಗಳನ್ನು ತಿಳಿದಿರುವ ಕೈಗಾರಿಕೆಯವರು ಇರಬಹುದು. ಇವರೆಲ್ಲರೂ ತಮ್ಮ ಕೌಶಲ್ಯವನ್ನು ಪ್ರಕಟಿಸಲು ಈಗ ಒಳ್ಳೇ ಅವಕಾಶವಿದೆ. ಇವರೆಲ್ಲರೂ ಕೂಡಿ ತಮ್ಮ ಸಂಸ್ಥಾನದ ಕೀರ್ತಿಗೆ ಕಾರಣರಾಗಬೇಕೆಂದು ಕೋರುತ್ತೇವೆ.

ಆಸ್ತಿ ವಿಭಾಗ.

ರಾ.—ಹರಿ, ಹರಿ, ನಾರಾಯಣಾ! ನಾಕವಷ್ಟು ಸಾಕು! ಈ ಸಾಕುಲೋಕಕ್ಕೆ ಬಂದು ಸಾಕೆ ಸುಟ್ಟರು! ಇಂಥ ನಾಶವೂ ಉಂಟೆ? ಮನುಷ್ಯನಿಗೇನು ಶಾಶ್ವತವಿದ್ದಾ? ಎರಡು ದಿವಸದ ಬಾಳಿಗೆ ಏನು ಜೋಡಿಸಿಕೊಳ್ಳುತ್ತಾರಪ್ಪಾ? ರಾಮ, ರಾಮ!

ಸ. ವಿ.—ಏನು ಸ್ವಾಮಿ, ಬಹಳ ನೊಂದು ಕೊಳ್ಳುತ್ತೀರಿ? ಭೂಲೋಕದಲ್ಲಿ ಅನೇಕ ಅಕೃತ್ಯಗಳು ನಡೆಯುತ್ತಿವೆ. ಇದಕ್ಕೆ ಶಾಂತರಾಗುವದರಿಂದ ಫಲವೇನೂ ಇಲ್ಲ. ಇದಲ್ಲದೆ ಭೂಲೋಕವನ್ನು ಸೃಷ್ಟಿಸಿದ ಭಗವಂತನು ಸುಮ್ಮನೆ ನೋಡುತ್ತಿರುವಾಗ ನೀವೂ ನಾನೂ ಎಷ್ಟು ಚಿಂತಿಸಿದರೇನು? ಈ ಲೋಕದ ಆಕಾಶತ್ವವಾದದ್ದೇನು ನೀವು ಹೇಳುವದು ಸಹಜವೇ. ಆದರೂ ಮಾತಿರಲಿ. ಸದ್ಯಕ್ಕೆ ನಿಮ್ಮ ಮನೋವ್ಯಥೆಗೆ ಕಾರಣವೇನೆಂಬುವದನ್ನು ತಿಳಿಸಿದರೆ ಕೆಲವು ಹೊತ್ತು ಕಳೆಯಬಹುದು.

ರಾ.—ಓಹೋ, ತಾವೂ! ಒಳ್ಳೇ ಹೊತ್ತಿಗೆ ದೊರಕಿದಿರಿ ಸ್ವಾಮಿ. ಈ ಅನ್ಯಾಯವನ್ನು ನೀವಾದರೂ ಸ್ವಲ್ಪ ಕೇಳಿ. ನಿಮಗೆ ಇನ್ನಾಗೆ ಹೇಳಬೇಕೋ ನೋಡೋಣ.

ಸ. ವಿ.—ಕೇಳಿ, ಹೇಳಿ. ಕೇಳುವದಕ್ಕೆ ಸಿದ್ಧನಾಗಿದ್ದೇನೆ.

ರಾ.—ಸ್ವಾಮಿ, ನಮ್ಮ ಪೂರ್ವೋತ್ತರವನ್ನೆಲ್ಲಾ ಹೇಳುವದಕ್ಕೆ ತೊಡಗಿದರೆ ದೊಡ್ಡ ಪುರಾಣವೇ ಆದೀತು. ಆದಕಾರಣ ಸೂಕ್ಷ್ಮದಲ್ಲಿ ತಿಳಿಸುತ್ತೇನೆ, ಕೇಳಿ. ನಮ್ಮ ಹಿರಿಯರು ಬಹಳ ಚನ್ನಾಗಿ ಬಾಳಿದವರು. ಹೊಲ ಮನೆ ಗದ್ದೆ ತೋಟ ನಗ ನಾಣ್ಯಗಳು ಎಲ್ಲಾ ಸೇರಿ ಸಾವಿರಾರು ರೂಪಾಯಿ ಬೆಂದಿಗೆ ಮಾಡಿ ಕೊಟ್ಟು ಹೋದರು. ನಾನೇ ಅಲ್ಲಿ ನಾಲ್ಕನೆಯ ಒನಾ ಅಣ್ಣ ತಮ್ಮನಾಗಿರು. ನಾನೇ ಹಿರಿಯವನು. ತಮ್ಮ ತಂದೆಗಳು ತೀರಿಹೋದ ಕಾಲದಲ್ಲಿ ನಾನೊಬ್ಬನು ಮಾತ್ರ ಪ್ರಾಯಸಮರ್ಥನಾಗಿದ್ದು, ನಮ್ಮ ಸುತ್ತಿಗೆ ಹಕ್ಕುದಾರರೆಂಬುದಾಗಿ ಬಂದಂಥ ಮೋಸಗಾರರನ್ನೆಲ್ಲಾ ಒಯಿಸಿ ಆಸ್ತಿ ಬಿಡಿಸಿಕೊಂಡಂತೆ ಕಾಪಾಡಿ ಕೊಂಡು ಚಿಕ್ಕವರಾದ ತಮ್ಮಂದಿರನ್ನು ದೊಡ್ಡವರಾಗುವವರೆಗೂ ಇದು ಒಂದು ಮನೆ ಯೆನಿಸಿಕೊಳ್ಳುವಂತೆ ಮಾಡಿದೆನು. ಇದಕ್ಕೆ ಈಗ ಪಕ್ಕಿಸಿಕೊಂಡಿದೆ. ನೆನಸಿಕೊಂಡರೆ ನನ್ನ ಹೊಟ್ಟೆ ಉರಿಯುತ್ತದೆ. ಯಾರಿಗೆ ಹೇಳಲಿ? ಅಯ್ಯೋ ದೇವರೇ, ಒಂದು ಮನೆಯಾಗಿ, ಒಂದೇ ಕುಟುಂಬವಾಗಿ ಒಡೂಡಿ ಬಾಳಿದ ಸಂಸಾರ ಮುರಿಯುವ ಕಾಲವಾಯಿತೇ! ಇದನ್ನು ಆ ನಾರಾಯಣ ಚನ್ನ ನೋಡದೇ ಕುಳಿತಿರುವನೇ? ಆ ದೇವರಿಗೆ ಕಣ್ಣಿಲ್ಲ—

ಸ. ವಿ.—ಸ್ವಾಮಿ, ಸ್ವಾಮಿ, ನೀವು ಹಿರಿಯರಾಗಿ ಹೀಗೆ ಅವಿಚಾರಕ್ಕೆ ಸ್ಥಳ ಕೊಡಬಹುದೇ? ನ್ಯಾಯಾನ್ಯಾಯಗಳನ್ನು ಭಗವಂತನು ನೋಡುತ್ತಿದ್ದಾನೆ, ಇದಕ್ಕೆ ಚ್ಯುತಿಯೇನೂ ಇಲ್ಲ. ಭಗವಂತನ ಕಣ್ಣುನೋಟವು ಭೂಲೋಕದ ಮೇಲೆ ಒಂದು ನಿಮಿಷವಾದರೂ ತಪ್ಪಿದರೆ ಭೂಲೋಕವು ಉಳಿಯುವದೇ? ನಿಮ್ಮ ಮನೋವ್ಯಥೆಯಲ್ಲಿ ನಿಮ್ಮ ದೇವರ ಭಕ್ತಿಯು ಸ್ವಲ್ಪ ಮಲಿನವಾಗಿ ಅವಿಚಾರದ ಮಾತು ಹೊರಡುವದಕ್ಕಿತ್ತು. ಹೋಗಲಿ ಬಿಡಿ, ಅಂಥ ಮನೋವ್ಯಥೆಗೆ ಪ್ರಧಾನ ಕಾರಣವಿರಬೇಕು. ಅದೇನು, ಅಪ್ಪಣೆಯಾಗಲಿ.

ರಾ.—ಕಾರಣವಿನ್ನೇನು? ಎಲ್ಲರೂ ಅವಿಭಕ್ತಕುಟುಂಬವಾಗಿದ್ದು ಅನೇಕ ವರ್ಷಗಳು ಸುಖವಾಗಿ ಬಾಳುತ್ತಿದ್ದು ಈಗ ಬೇರೆ ಬೇರೆ ಯಾಗಬೇಕಂತೆ. ಆಸ್ತಿಯೆಲ್ಲಾ ವಿಭಾಗವಾಗಬೇಕಂತೆ ನೋಡಿದಿರಾ ಸ್ವಾಮಿ, ನಾನು ಇದರ ಮೊದಲನೆಯ ಮಾತನ್ನೆತ್ತಿದ್ದರೆ ಒಡೊಂದು ಸಂಸಾರ ಚನ್ನಿಸಿಕೊಳ್ಳುತ್ತಿತ್ತೇ? ಇಷ್ಟೆಲ್ಲಾ ಅನ್ಯಾಯವಾಗುತ್ತಿತ್ತೇ? ಈಗ ವಿಭಾಗವಾಗಬೇಕೆಂದು ಪಟ್ಟು ಹಿಡಿದಿರುವವರಿಗೆ ವಿದ್ಯಾ ಬುದ್ಧಿಗೆ ಅವಕಾಶವಿರುತ್ತಿತ್ತೇ? ನನ್ನಿಂದೆ ಚೋಟುದ್ದ ಹುಡುಗರಾದವರೆಲ್ಲಾ ಈಗ ನನಗೆ ಬುದ್ಧಿ ಹೇಳುವದಕ್ಕೆ ಒರುತ್ತಾರೆ. ನನ್ನ ಹೊಟ್ಟೆ ಉರಿಯೋದು ಯಾರಿಗೂ ತಿಳಿಯದು. ನಾನೊಂದು ಮಾತು ನುಡಿದರೆ ಅವರಿಗೆ ನಗೆಯೇ ಆಗುವದೇ? ನಮ್ಮ ಜ್ವಾಲಾಸ್ಪದ ಅಗ್ನಿಯಲ್ಲಿ ಸಿಕ್ಕಿದವರು ಸಿಕ್ಕಿದ್ದವರೇ ಧಸ್ಮವಾಗಿ ಹೋಗುವರು, ಇದು ಅನುಭವಸಿದ್ಧವಾದ ಮಾತು ಒಲ್ಲಿರಾ!

ಸ. ವಿ.—ನಿಮ್ಮ ಜ್ವಾಲಾಸ್ಪದ ಹಿಡಿತವಿರಲಿ ಸ್ವಾಮಿ, ಅವಿಭಕ್ತಕುಟುಂಬದಲ್ಲಿ ಏನು ಸುಖವಿರುತ್ತೇ ನಾನರಿಯೆ.

ರಾ.—ಇದೇನು ಹೀಗೆ ಹೇಳುತ್ತೀರಿ! ನೀವುಂದೂ ಅವಿಭಕ್ತ ಕುಟುಂಬದಲ್ಲಿ ಬಾಳಿದವರಲ್ಲವೆಂದು ತೋರುತ್ತೆ.

ಸ. ವಿ.—ಇಲ್ಲಾ ಸ್ವಾಮಿ, ನನಗೆ ಬುದ್ಧಿಬಂದಾಗಿನಿಂದಲೂ ನಮ್ಮ ತಂದೆಗಳು ನನ್ನನ್ನು ಪ್ರತ್ಯೇಕವಾಗಿ ಸಂಸಾರ ಮಾಡಿಕೊಂಡಿರುವಂತೆ ನೇಮಿಸಿದ್ದಾರೆ.

ರಾ.—ಆದುದರಿಂದಲೇ ನಿಮಗೆ ಅವಿಭಕ್ತ ಕುಟುಂಬ ಸುಖ ಗೊತ್ತಿಲ್ಲದೆ ಹೋಯಿತು. ನೋಡಿ, ನಮ್ಮ ಮನೆಯಲ್ಲಿ ಅಣ್ಣತಮ್ಮಂದಿರು ಆ ವರವರ ಹೆಂಡತಿ ಮಕ್ಕಳು ಎಲ್ಲಾ ಸೇರಿ ಇಪ್ಪತ್ತು ಮಂದಿಯಾದೆವು. ಒಬ್ಬರ ಸಂಪಾದನೆ, ಎಲ್ಲರ ಜೀವನ ಸುಖವಾಗಿ ನಡೆಯುತ್ತಿತ್ತು. ಮನೆಯವರೊತ್ತು ಊಟ ಅಚ್ಚುಕಟ್ಟಾಗಿ ನಡೆಯುತ್ತಿತ್ತು. ಊಟವಾದ ಮೇಲೆ ಸ್ವಲ್ಪ ಹೊತ್ತು, ಆದರೆ ಸಾಮಾನ್ಯವಾಗಿ ಹಾಸ್ಯ ಗೋಷ್ಠಿ ಹರಟೆ ಸ್ವಲ್ಪ ಮಾಡಿ ಸುಧಾರಿಸಿಕೊಂಡು ಏನು ಕೆಲಸವೇನಾದರೂ ಇದ್ದರೆ ಸ್ತ್ರೀಯರು ಪುನಃ ಊಟದ ಹೊತ್ತಿನ ವರೆಗೂ ಎಲ್ಲಾದರೂ ಕೂತು ಹರಟೆಯಾಡುತ್ತಾ ಸುಖವಾಗಿ ಕಾಲಹರಣ ಮಾಡುತ್ತಿರಬಹುದು. ಕುಟುಂಬದಲ್ಲಿ ಹಿರಿಯರಾಗಿದ್ದರೆ ಮತ್ತೂ ಅನುಕೂಲ. ಹೆಂಗಸರನ್ನೂ ಮಕ್ಕಳನ್ನೂ ಪೋಷಿಸಿಕೊಳ್ಳುತ್ತಿಕೊಂಡು ಇಷ್ಟೆ ಬಂದಂತೆ ಆನಂದ ಸ್ವಾದ ಮಾಡಿಕೊಳ್ಳಬಹುದು. ನನಗೇನೂ ಚಿಂತೆ ಇರುವದಿಲ್ಲ, ಮಹಾರಾಜರು ತಿಂದುಂಡು ಇರುತ್ತಾನೆ, ನಾವು ತಿಂದುಂಡು ಇರುತ್ತಿರುವದೇಕೆಂದು ಬುಧರೇ ಭಗವಂತನು ಮಾಡಿರುವ ಕಟ್ಟಳೆ. ಇಂಥ ಸುಖ ಜೀವನದಲ್ಲಿ ಕಲ್ಲುಹಾಕಬೇಕೆಂದು ಯೋಚಿಸಿದವರಲ್ಲಾ! ಅಯ್ಯೋ ಅನ್ನಿಸುವರು ಚನ್ನಾಗಿ ಬಾಳುವದುಂಟೋ?

ಸ. ವಿ.—ನೀವು ಹೇಳಿದ್ದೆಲ್ಲಾ ಕೇಳುವಲ್ಲಿ ಅವಿಭಕ್ತ ಕುಟುಂಬದಲ್ಲಿರುವ ಕೆಲವು ಮಂದಿಯ ಜೀವನವು ಪಶುವಿನ ಜೀವನವೂ ಒಂದೇ ಎಂದು ಕಾಣುತ್ತೆ. ನೀವು ವಿವರಿಸಿದ ಮಹಾ ಪುರುಷನಂತಿರುವವನು ಒಂದು ಕುಟುಂಬದಲ್ಲಿ ಇದ್ದಿದ್ದರೆ ಏನಾಗುತ್ತೆ? ನನಗೆ ಬೇಕು, ತನಗೆ ಬೇಕು ಎಂಬ ಕಲಹವಿಲ್ಲದೆ ಆ ಸಂಸಾರವು ಹಾಳಾಗಿ ಹೋಗದೇ ಉಳಿದೀತೇ? ಆ ಮನೆಯಲ್ಲಿ ಸಮಾಧಾನವಿರುವದೇ? ಒಂದು ಮನೆಯಲ್ಲಿ ಇಪ್ಪತ್ತು ಮಂದಿ ಗಂಡಸರು ಇರಬಹುದು, ಇಷ್ಟರು ಹೆಂಗಸರನ್ನು ಆಸಾಧ್ಯವೆಂದು ನಮ್ಮವರೇ ಹೇಳಿದ್ದಾರಲ್ಲ. ಹೀಗಿರುವಲ್ಲಿ ಹಿರಿಯರಾದವರ ಕುಟುಂಬವೂ ಮಕ್ಕಳೂ ಕಿರಿಯರಾದವರ ಕುಟುಂಬವನ್ನೂ ಮಕ್ಕಳನ್ನೂ ಬಾಯಿಬಿಡದು ಮನೆಯಲ್ಲಿ ಇದ್ದುದದ್ದನ್ನೆಲ್ಲಾ ಕೀಳು ಹಾಕುವದರಲ್ಲಿ ಉದ್ಯುಕ್ತರಾಗುವದಲ್ಲದೆ ಅದನ್ನು ನಾನಾ ಬಗೆಯಲ್ಲಿ ಹಿಂಸೆ ಮಾಡುವದೂ ಉಂಟಷ್ಟೇ. ಸಂಪಾದನೆ ಮಾಡಿಕೊಂಡು ಬರತಕ್ಕವನು ಕಿರಿಯವನಾಗಿದ್ದರೂ ಆತನ ಸಂಸಾರ ಮಕ್ಕಳಿಗೇ ಆ ಮನೆಯಲ್ಲಿ ಅಧಿಕವಾದ ಸೌಖ್ಯವೂ ಅಧಿಕಾರವೂ ಲಭಿಸುವದು ನ್ಯಾಯವಾಗಿರುವದು. ಆದರೆ ಅವಿಭಕ್ತ ಕುಟುಂಬದವರಲ್ಲಿ ಹಾಗಾ ಬಿಡಿಯತಕ್ಕವರಿಗೆ ಸುಖವೂ ಬಾಯಿಲ್ಲದ ಬಡವರಿಗೆ ಕಷ್ಟವೂ ಸಂಭವಿಸುವದು. ಇಂಥಾ ಅನ್ಯಾಯವೊಂದಲ್ಲದೆ ಸಮಾಧಾನವು ಸ್ವಲ್ಪವೂ ಇರುವದಿಲ್ಲ. ಇಷ್ಟೇ ಅಲ್ಲ. ಕೆಲವರು ಸೋಮಾರಿಗಳಾದರು ಚನ್ನಾಗಿ ತಿಂದು ಮೈಕೊಬ್ಬಿ ಅನೇಕ ದುಷ್ಟಕೆಲಸಗಳನ್ನು ಮಾಡುವ ದಕ್ಕೆ ಅವಕಾಶವಿರುತ್ತದೆ. ಇಷ್ಟು ಅನರ್ಥಗಳಿಗೆ ಕಾರಣವಾದ ಅವಿಭಕ್ತ ಕುಟುಂಬದ ಕ್ರಮವನ್ನು ಮೆಚ್ಚುವದು ತಪ್ಪೆಂದು ನನಗೆ ತೋರುತ್ತೆ.

ರಾ.—ಹಾಗಾದರೆ ಅದರಲ್ಲಿ ಫಲವೇ ಇಲ್ಲವೆಂದು ನಿಶ್ಚಯವಾಗಿ ಹೇಳುತ್ತೀರೋ? ಹಿರಿಯರು ನಿತ್ಯ ಯೋಚನೆಯಿಂದ ಕಲ್ಪಿಸಿರುವ ಕ್ರಮವನ್ನು ಸ್ಥಾಪಿಸುವಷ್ಟು ಮೂಢರೋ? ನಿಮ್ಮ ಮಾತು ಸಮಂಜಸವಾಗಿರುವಂತೆ ನನಗೆ ತೋರುವದಿಲ್ಲ.

ಸ. ವಿ.—ಅದರಿಂದ ಪ್ರಯೋಜನವೇ ಇಲ್ಲವೆಂದು ನಾನು ಹೇಳಲಿಲ್ಲವಲ್ಲ? ಪ್ರಯೋಜನವೇನೋ ಉಂಟು—

ರಾ.—ಹಾಗೆ ಹೇಳಿ ಮತ್ತೇ. ಪ್ರಯೋಜನವೇ ಇಲ್ಲವೆಂದು ನೀವು ಸ್ಥಾಪಿಸಿದರೆ ನಾನು ಒಪ್ಪಬೇಕಲ್ಲ! ಈ ಕಾಲದ ಪ್ರವೃತ್ತಿಯಾದದ್ದು ಮಹಾ ಸುಧಾರಣೆಯ ಹಿರಿಯರ ಕಟ್ಟಳೆಗೆ ವಿರುದ್ಧವಾದ ಕ್ರಮವಿಲ್ಲವೇ? ಸುಬುದ್ಧಿಯನ್ನು ನೆನಸಿದವನೆಲ್ಲ ನನಗೆ ನೀವು ಹೇಳುವದನ್ನು ಒಪ್ಪುವನೇ?

ಸ. ವಿ.—ಒಳ್ಳೇ ರಾಯರು ಸಿಕ್ಕಿದಿರಲ್ಲಾ ಸ್ವಾಮಿ! ಕುಟುಂಬ ಕೆಲಸದ ಮೂಲವಾದ ನಿಮ್ಮ ಶರೀರಕ್ಕೆ ಅತ್ಯಂತ ಸುಲಭವಾಗಿ ಪೋಷಣೆಯಾಗತಕ್ಕ ವಿಧಾನವನ್ನು ಕೇವಲ ಆದರ ದ ವನ್ನಿಸುವವು ನಿಮ್ಮಂಥವರಿಗೆ ಸ್ವಭಾವಿಕವಾದದ್ದೇ. ಅವಕ್ಕೋಸ್ಕರವೇ ಕುಟುಂಬವು ಒಡೆದು ಬೇರೆ ಬೇರೆಯಾಗುವದು ನಿಮಗೆ ಹಿತವಲ್ಲ. ಈಗ ಎಲ್ಲಾ ಗೊತ್ತಾಯಿತು. ಜಯಾ, ಅಯ್ಯೋ, ಪಾಪ! ಕಷ್ಟದಲ್ಲಿ ಆಸರೆಗೂ ಸುಖದಲ್ಲಿ ಸಂತೋಷಾಪೇಕ್ಷೆಗೂ ಅನುಕೂಲವಾಗಿರುವದೆಂದೇ ಅವಿಭಕ್ತ ಕುಟುಂಬದ ಪ್ರಯೋಜನವು. ಆದರೆ ಇಂಥಾ ಸುಖವು ಪ್ರಾಪ್ತಿಯಾಗತಕ್ಕ ಅವಿಭಕ್ತ ಕುಟುಂಬವು ಎಲ್ಲರುವದೋ ಗೊತ್ತಿಲ್ಲ. ಈ ಸುಖಕ್ಕೆ ಬದಲಾಗಿ ನಿರಂತರವಾದ ದುಃಖವೂ ಅಸಮಾಧಾನವೂ ಜಗಳವೂ ಹುಟ್ಟಿಕೊಂಡು ಕುದಿಯುವಂಥದ್ದು ಮನೆಯೇ, ನರಕವೋ ನೀವೇ ಹೇಳಬಹುದು. ಇಂಥಾ ನರಕದಲ್ಲಿ ದಿನಾಲು ಬೇಯುತ್ತಿರುವದಕ್ಕಿಂತ ಪ್ರತ್ಯೇಕವಾಗಿರುವದು ಒಳ್ಳೆಯದಲ್ಲವೇ? ಪ್ರತ್ಯೇಕವಾದರೂ ಮಹತ್ಕಷ್ಟ ಪರಸ್ಪರ ಕಷ್ಟ ಸುಖದಲ್ಲಿ ಭಾಗಿಗಳಾಗಿರಬೇಕೋ? ಸೋದರ ಅವಿಭಕ್ತರಲ್ಲ. ಬೇರೆ ಬೇರೆಯಾಗಿರುವವರು ಪರಸ್ಪರ ಕಷ್ಟಕ್ಕೆ ಒದಗಿದರೆ ಅವರ ಸಹಾಯವು ಅಭಿವೃದ್ಧಿಗೆ ಕೇವಲ ಹಿತವಾಗಿರುತ್ತದೆ. ಪರಸ್ಪರ ಪ್ರೀತಿಯೂ ರಾಗವೂ ನೆಲಸಿ ಸಂತೋಷವಾಗಿದೆ. ಅವಿಭಕ್ತ ಕುಟುಂಬದಲ್ಲಿ ಒಡಹುಟ್ಟಿದವರ ಹೆಂಡತಿಯರ ಪರಸ್ಪರ ಮತ್ಸರ ನಿಂದೆಗಳಿಗಿಂತ ಇವು ಮಾಡುವ ಪ್ರೀತಿಯು ಸಹ ತಮ್ಮ ನಡುವಿನ ಪ್ರೀತಿ ಬಾಳಲು ಉತ್ತಮವಾದದ್ದಲ್ಲವೇ?

ರಾ.—ಅದೇನೋ ಸ್ವಾಮಿ ನಮಗೆ ಹಾಗೆ ತೋರುವದೇ ಇಲ್ಲ. ಕೇಳಿ. ಇದಕ್ಕೆ ಕಲ್ಲು ಹಾಕಿದರೆ ನನ್ನ ಹೊಟ್ಟೆ ಉರಿಯುವುದಿಲ್ಲವೇ!

ಸ. ವಿ.—ಉರಿಯಲಿ ಉರಿಯಲಿ ಮತ್ತೂ ಚೆನ್ನಾಗಿ ಉರಿಯಲಿ! ಹೊಟ್ಟೆಯಲ್ಲಿ ಉರಿಯಲ್ಲವೇ ನೈವೇದ್ಯ ಕರ್ಪೂರ ಹಚ್ಚುವದಕ್ಕೆ ಮನಸ್ಸು ಬಂದೀತು. ಇತರರ ಕಷ್ಟಾರ್ಜಿತವಾದ ಹಣವನ್ನು ತಿನ್ನುವದಕ್ಕಿಂತ ತನ್ನ ಬೆವರು ಸುರಿಸಿ ಪಡೆದ ಅನ್ನವು ಸವಿಯಾದುದಲ್ಲವೇ. ಉಟಿರೋ ದೇಶಕ್ಕೆ ಚನ್ನಾಗಿ ಹಿತವಾದದ್ದು, ನನಗೆ ಹೇಳಿದ್ದು ಈ ಮಾತು. ನಿನಗೆ ತಿಳಿದಿರುವದು ಹೀಗೆ ಮಾಡಿ. ಜಂಬದ ನಗೆ ತಿಂದುಂಡು ಬಿಟ್ಟರೆ ಹೇಳಿದೆ. ಗೃಹಿಣಿಯರ ನಿಮಗೆ ಒಳ್ಳೆಯದು. ಯಾರಂತೆ ದೇವನಂಥ ಯೋಗ್ಯ ಶಕ್ತಿವಂತರಲ್ಲ. ಅಂಥ ಶಕ್ತಿಯುಳ್ಳವರೇ ದೇಶಕ್ಕೆ ಪೋಷಕರು. ದುಃಖದಲ್ಲಿ ಈ ಕ್ಷಣಿಕವಾಗಿರುವ ಈ ಮನಸ್ಸಿಗೆ ನಾನು ಹೇಳುವ ಪ್ರಾಯವು ಸಮರ್ಪಕವಾಗಿ ತೋರದಿದ್ದರೂ ಆಲೋಚಿಸಿದರೆ ಇದರ ಮರ್ಮವು ನಿಮಗೆ ತಿಳಿದು ಬಂದೀತು. ದೃಷ್ಟಾಂತವನ್ನು ಹೇಳುತ್ತೇನೆ. ಕೇಳಿ.

ಸಾವಿರಾರು ಜನರು ಸಿದ್ಧರಿದ್ದರು ತಾಳಿಯೆಂಬುವಷ್ಟು ಸರಿಯಾದ ಬುದ್ಧಿವಂತರಲ್ಲಿ ಒಬ್ಬನು ನೀನು ಕೇಳುವದಕ್ಕೆ ಸಿದ್ಧನಾಗಿದ್ದನು. ಆತನು ತನ್ನ ಪಿಸ್ತೂಲಿಗೆ—ಈತನನ್ನು ನಾನೇನಾದರೂ ಅಪೇಕ್ಷಿಸಿದ್ದೇನೆ ಎಂದು ಆಲೋಚನೆ ಮಾಡಿದರು. ಇದಕ್ಕೆ ನಿದರ್ಶನವಾಗಿ ಹೇಳಬೇಕಾದರೆ ನಾವು ದೂರಕ್ಕೆ ಹೋಗಬೇಕೆಂದರೆ, ಮನಸ್ಸು ನಾನಾವಿಧ ನೆನಪುಗಳಿಗೆ ಒಳಪಡುತ್ತದೆ. ಅಧಿಕಾರವುಳ್ಳವನಿಗೆ ಬಹಳ ದುಃಖವು ಉಂಟಾಗುವದು. ಇದು ದುರ್ಬುದ್ಧಿಗೆ ಏನು ಸುಮ್ಮನಿರುವವರು? ಅವುಗಳಲ್ಲಿ ಒಂದಾದರೂ ದೇವರು ನಿರ್ವಹಿಸದೆ ಮಕ್ಕಳ ಹಾಗೆ ಮಾಡುವವು. ಸಹಾಯವು ಗುಪ್ತವಾಗಿ ಒದಗಿತು. ಹೆಚ್ಚಿನವರು ಅಂದರು ಅಗ ಜನರಲ್ಲಿ ಒಬ್ಬನು ಆತನನ್ನು ಸಿಕ್ಕಿಸಿ—ಹೋಗಲಿ, ನನ್ನ ತಂದೆಯು ಇನ್ನೂ ನನಗೆ ಹಂಚಿಕೊಂಡಂತೆ ನನ್ನ ಕಣ್ಣಾಸಿಗೆ ಹೇಳು ಅಂದರು. ಆತನು ಜನರಿಗೆ—ಎಲ್ಲರೂ ಬಿಟ್ಟರೆ ಬೇಡವೆಂದು ಕಷ್ಟ ಎತ್ತಲಿಕ್ಕೆ ನಿಮಗೆ ನನ್ನನ್ನು ಕಳಿಸಿಕೊಟ್ಟರು. ತನ್ನ ತಂದೆಯ ತನ್ನ ಆತ್ಮವನ್ನು ನಾಶಮಾಡಲಿಕ್ಕೆ ಬಂದಿರುವದು ಏನೆಂದು ಕೇಳಿದನು. ಇದು ಆತನು ಅವನಿಗೆ ಒಂದು ಕಥೆಯನ್ನು ಹೇಳಿದನು. ಅದೇನಂದರೆ—ಒಬ್ಬನೊಬ್ಬ ಸ್ವಸಾಮರ್ಥ್ಯದ ಗುಣವು ಚೆನ್ನಾಗಿ ಬೆಳೆಯಿತು. ಆಗ ಅವನು ತನ್ನ ಮಕ್ಕಳಿಗೆ—ನಾನೇನು ಮಾಡಲಿ? ನನ್ನ ದೇಹವನ್ನು ಸಂಶೋಧಿಸುವದಕ್ಕೆ ನನಗೆ ಸ್ವಲ್ಪವಾದರೂ ಎಂದು ಕೇಳಿದನು—ಒಂದು ಮಾಡುತ್ತೇನೆ! ನನ್ನ ಕಣಜಗಳನ್ನು ಕೆಡವಿ, ಹಾಕಿ ಅವುಗಳಿಗಿಂತ ದೊಡ್ಡ ಕಣಜಗಳನ್ನು ಕಟ್ಟಿಸುತ್ತೇನೆ. ಅವುಗಳಲ್ಲಿ ನನ್ನ ಎಲ್ಲಾ ದವಸಧಾನ್ಯಗಳನ್ನೂ ಸರಕುಗಳನ್ನೂ ತುಂಬಿಸಿ ನನ್ನ ಆತ್ಮಕ್ಕೆ—ಆತ್ಮವೇ, ಅನೇಕ ವರುಷಗಳಿಗೆ ಬೇಕಾದಷ್ಟು ಸರಕು ಇದ್ದಿತು! ವಿಶ್ರಮಿಸಿಕೋ; ಊಟಮಾಡು, ಕುಡಿ, ಸುಖಪಡು ಎಂದು ಹೇಳುತ್ತೇನೆ ಅಂದನು. ಅದೇ ರಾತ್ರಿ ಅವನು ಸತ್ತು ಹೋದನು. ತನಗೋಸ್ಕರ ದ್ರವ್ಯವನ್ನಿಟ್ಟುಕೊಂಡು ದೇವರ ಲೆಕ್ಕದಲ್ಲಿ ಐಶ್ವರ್ಯವಂತನಾಗದೆ ಇರುವವರ ಗತಿಯೆಲ್ಲಾ ಹೀಗೇ ಸರಿ.

[illegible] ವರ್ತಮಾನಗಳು.

ದಾವಣಗೆರೆ.—[illegible]

[illegible] ನಡೆಯುತ್ತಿದ್ದಾರೆ.

ತ್ಯಾಮಗೊಂಡ್ಲು.— [illegible]

[illegible]

[illegible] ವೃತ್ತಾಂತಗಳು.

[illegible]

[illegible]

[illegible] ಮಾಡಿದ್ದಾರೆ.

[illegible] ನಡೆಯುತ್ತಿದ್ದಾರೆ.

ಈಗ ಹಿಂದುಸ್ಥಾನದಲ್ಲಿ ಲಾರ್ಡ್ ಕರ್ಜನ್ [illegible] ವರ್ತಮಾನವಿದೆ.

[illegible] ಪಟ್ಟಣದಲ್ಲಿ [illegible] ಉಂಟಾಯಿತು. [illegible] ಮಳೆ [illegible]

[illegible] ಪಟ್ಟಣದಲ್ಲಿ [illegible] ದೇವಾಲಯವನ್ನು [illegible] ಗೌವರ್ನಮೆಂಟಿನವರು [illegible] ಮಾಡಿದ್ದಾರೆ.

[illegible] ಪಟ್ಟಣದಲ್ಲಿ [illegible] ಮಳೆ [illegible]

[illegible]

[illegible]

[illegible] ಎಂಬುದಾಗಿ [illegible] ತಿಳಿಸುತ್ತಾರೆ.

[illegible] ಗೌವರ್ನಮೆಂಟಿಗೆ [illegible] ಭಾಷೆಯಲ್ಲಿ [illegible] ಮಾಡುತ್ತಿದ್ದಾನೆ.

[illegible] ಪಟ್ಟಣದಲ್ಲಿ [illegible]

[illegible]

[illegible]

[illegible] ಅವರು ಸತ್ತು ಹರಡಿರುವ ವಿಷಯವು ತಿಳಿದುಬಂದಿದೆ.

[illegible]

[illegible] ಒಂದು ವರ್ತಮಾನ ಪತ್ರಿಕೆಗೆ ಬರೆದಿರುತ್ತಾರೆ.

ವಿದೇಶ ವರ್ತಮಾನಗಳು.

[illegible]

[illegible] ಸಂಗತಿ ನಡೆಯುತ್ತಿದೆ.

[illegible]

ROBINSON'S PATENT BARLEY.

ರಾಬಿನ್‌ಸನ್‌ಯವರ ಬಾರ್ಲಿ ಹಿಟ್ಟು.

ಸರ್ವತ್ರದಲ್ಲಿ ಪ್ರಸಿದ್ಧವಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಜವೆಗೋಧಿಯಿಂದ ಮಾಡಿದೆ. ಇದಕ್ಕೆ ಸ್ಪರ್ಧಿಯಿಂದ ಇದಕ್ಕಿಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಕುದಿಸಿದಾಗ [illegible] ಹಾಕಿ ಕಾಲು ಗಂಟೆ ಕುದಿಸಿ ತಯಾರಿಸಿದ [illegible] ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವುದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಅತ್ಯುತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದ [illegible] ಕೊಡತಕ್ಕಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ನಿಂಬೆಹುಳಿಯನ್ನೂ ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.— ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ [illegible] ವಸ್ತುವನ್ನು ಕೆಲವರು ಮಾರುತ್ತಿರುವುದರಿಂದ ಖಾತ್ರಿಯಾಗಿ ನಮ್ಮ ಹಿಟ್ಟು ತುಂಬಿದ ಡಬ್ಬಿಯ ಮೇಲ್ಭಾಗದಲ್ಲಿ ಮೇಲ್ಕಂಡ [illegible] ಹೆಸರನ್ನೂ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

ವೃತ್ತಾಂತ ಪತ್ರಿಕೆ.

ವೃತ್ತಾಂತ ಪತ್ರಿಕೆಯ ಚಂದಾ ನಿರ್ಣಯ.

ಮೈಸೂರು, ಬೆಂಗಳೂರು, ಮತ್ತು ಇತರ ಸ್ಥಳಗಳಲ್ಲಿರುವ [illegible] ಮುಂತಾಗಿ ಸ್ಥಳದಲ್ಲೇ ಬೇಕಾದವರು ಆ [illegible] ಅಡ್ವಾನ್ಸಾಗಿ [illegible] ಕೊಟ್ಟು ಅಲ್ಲಿಂದ ೧ ವರುಷ ಪತ್ರಿಕೆಯನ್ನು ಪಡೆಯುತ್ತ ಬರಬಹುದು. ೧ ಪತ್ರಿಕೆಯನ್ನು ಈ ಆಫೀಸಿನಿಂದ ತರಿಸಿಕೊಳ್ಳತಕ್ಕವರು ವರುಷಕ್ಕೆ ರೂ. ೧-೧೪-೦ ಮುಂಗಡ, ೬ ತಿಂಗಳಿಗಾದರೆ ೧೪ ಆಣೆಯನ್ನು ಮುಂಗಡವಾಗಿ ಅಡ್ವಾನ್ಸ್ ಕಳುಹಿಸಬೇಕು. ಆರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ತೆಗೆದುಕೊಳ್ಳುವದಿಲ್ಲ. ಒಂದೇ ವಿಳಾಸಕ್ಕೆ ೨ ಪತ್ರಿಕೆಗಳನ್ನು ತರಿಸಿಕೊಳ್ಳತಕ್ಕವರು ವರುಷಕ್ಕೆ ರೂ. ೩-೧೦-೦ ಯನ್ನು, ೩ ಪತ್ರಿಕೆಗಳಿಗೆ ರೂ. ೪-೧೧-೦ ಯನ್ನು, ಇದಕ್ಕಿಂತ ಹೆಚ್ಚು ಪತ್ರಿಕೆಗಳಿಗೆ ಕೆಳಗೆ ಕಂಡಂತೆಯೂ ಅಡ್ವಾನ್ಸು ಕಳುಹಿಸತಕ್ಕದ್ದು.

ಪತ್ರಿಕೆಗಳು		ಚಂದಾ	ಪತ್ರಿಕೆಗಳು		ಚಂದಾ
೪	ರೂ.	೬-೦-೦	೧೩	ರೂ.	೧೯-೦-೦
೫	„	೮-೦-೦	೧೪	„	೨೧-೦-೦
೬	„	೯-೦-೦	೧೫	„	೨೨-೦-೦
೭	„	೧೧-೦-೦	೧೬	„	೨೪-೦-೦
೮	„	೧೨-೦-೦	೧೭	„	೨೫-೦-೦
೯	„	೧೪-೦-೦	೧೮	„	೨೬-೦-೦
೧೦	„	೧೫-೦-೦	೧೯	„	೨೭-೦-೦
೧೧	„	೧೬-೦-೦	೨೦	„	೨೮-೦-೦
೧೨	„	೧೮-೦-೦			

ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟನೆಯ ದರಗಳು.

ನೋಟೀಸ್, ವ್ಯಾಪಾರವಿಷಯ, ಪುಸ್ತಕಗಳ ಬೆಲೆ, ಮನೆ ಜಮೀನುಗಳ ವಿಕ್ರಯ ಅಥವಾ ಬಾಡಿಗೆ ವರ ಈ ಮೊದಲಾದ ಸಂಗತಿಗಳನ್ನು ವೃತ್ತಾಂತ ಪತ್ರಿಕೆಯಲ್ಲಿ ಪ್ರಕಟಿಸುವದರಿಂದ ವ್ಯಾಪಾರಸ್ಥರೇ ಮುಂತಾದವರಿಗೆ ಹೆಚ್ಚು ಲಾಭಕರವಾಗಿದ್ದೀತೆಂಬುದಕ್ಕೆ ಸಂಶಯವಿಲ್ಲ. ಈ ಪತ್ರಿಕೆಯು ಮೈಸೂರು ಸಂಸ್ಥಾನದ ಸಕಲ ಹಳ್ಳಿ ಗ್ರಾಮಗಳಿಗೂ ಪ್ರಸರಿಸುತ್ತಿದೆ. ಪ್ರಕಟನೆಯ ದರವು ಏನೆಂದರೆ.—ಮೊದಲನೇ ಸಲ ಪ್ರತಿ ಲೈನಿಗೆ (ಸುಮಾರು ೧೮ ಅಕ್ಷರಗಳು ಹಿಡಿಯುತ್ತವೆ.) ೩ ಆಣೆ. ಎರಡನೇ ಮತ್ತು ತರುವಾಯ ಪ್ರತಿ ಸಲಕ್ಕೂ ಲೈನ್ ೧ಕ್ಕೆ ೨ ಆಣೆ. ೧ರೂ. ಕ್ಕಿಂತಲೂ ಕಡಿಮೆ [illegible] ಯಾವ ನೋಟೀಸನ್ನೂ ಪ್ರಕಟಿಸಲಾರೆವು. ವರುಷಕ್ಕೆ ಸುಲಭವಾದ ದರಗಳು:—

೧ ಕಾಲಂ(ಸುಮಾರು ೩೬ ಪಂಕ್ತಿಗಳು)೧ ಸಲಕ್ಕೆ.	ರೂ.	೬-೦-೦
ಅರ್ಧಕಾಲಂ	೧ „	„ ೩-೮-೦
ಕಾಲುಕಾಲಂ	೧ „	„ ೨-೦-೦

ನೋಟೀಸ್ ಮುಂತಾದ್ದನ್ನು ಅನೇಕ ಸಲ ಪ್ರಕಟಿಸಬೇಕಾದವರಿಗೆ ಮುಂದೆ ಹೇಳಿರುವ ಡಿಸ್ಕೌಂಟು ದೊರೆಯುವದು.—೧ ತಿಂಗಳಿಗಾದರೆ ಶೇಕಡಾ ೧೦ ರಂತೆ, ೨ ತಿಂಗಳಿಗೆ ಶೇಕಡಾ ೨೦ ರಂತೆ, ೩ ತಿಂಗಳಿಗಾದರೆ ಶೇಕಡಾ ೩೦ ರಂತೆ, ೬ ತಿಂಗಳಿಗೆ ಶೇಕಡಾ ೪೦ ರಂತೆ, ೧೨ ತಿಂಗಳಿಗೆ ಶೇಕಡಾ ೫೦ ರಂತೆ. [illegible] ಸಲ ಬರೆದು ಕೇಳಿದರೆ ಪ್ರಕಟನೆಯ ದರಗಳನ್ನು ಕಳುಹಿಸಲಾಗುವದು.

ಮ್ಯಾನೇಜರ್, ವೃತ್ತಾಂತ ಪತ್ರಿಕೆ, ಮೈಸೂರು.

ಅತ್ಯುತ್ತಮವಾದ ಹೊಸ ಪುಸ್ತಕವು.

“ ಪ್ರಬೋಧ ಚಂದ್ರಿಕೆ. ”

ಈ ನಮ್ಮ ದೇಶವನ್ನು ಕೆಲವು ವರುಷಗಳ ಹಿಂದೆ ವೈಸ್‌ರಾಯಿಗಳಾಗಿ ಆಳಿದ ಲಾರ್ಡ್ ನಾರ್ತ್‌ಬ್ರೂಕ್ ಮಹಾ ಪ್ರಭುಗಳು ಹಿಂದೂ ದೇಶೀಯರ ಉಪಯೋಗಾರ್ಥವಾಗಿ ಈ ಪುಸ್ತಕವನ್ನು ಬರೆದಿರುತ್ತಾರೆ ಯೇಸು ಸ್ವಾಮಿಯವರು ಮಾಡಿದ ಲೋಕಪ್ರಸಿದ್ಧವಾದ ಬೋಧನೆಗಳನ್ನು ಜನಗಳು ಸುಲಭ ರೀತಿಯಲ್ಲಿ ತಿಳಿದುಕೊಳ್ಳುವದಕ್ಕಾಗಿ ಈ ಪುಸ್ತಕವನ್ನು ಬರೆದಿದ್ದಾರೆ. ಪ್ರತಿಯೊಬ್ಬರೂ ತಪ್ಪದೆ ಈ ಪುಸ್ತಕವನ್ನು ಓದಬೇಕು. ಮಕ್ಕಳಿಗೆ [illegible], ಕ್ರಯ—ಎರಡು ಆಣೆ ಮಾತ್ರ.

ವಿಳಾಸ:—ಮ್ಯಾನೇಜರ್, ವಿಷನ್ ಬುಕ್‌ಡಿಪೋ, ಮೈಸೂರು.

ನೋಟೀಸು.

ಚನ್ನರಾಯಪಟ್ಟ ತಾಲ್ಲೋಕು ಬಾಗೂರು ಸಮ್ಮತ್ತು ಹೆಬ್ಬಾಳೆ ಗ್ರಾಮದ ಕಾಳೇ ಗೌಡನ ಮಕ್ಕಳು ತಿಳಿಯಪಡಿಸುವದೇನೆಂದರೆ—ನಮ್ಮ ತಂದೆ ನಮ್ಮಗಳ ಮೇಲೆ ದ್ವೇಷಮಾಡಿ ತನ್ನ ಹೆಸರಿಗೆ ಕಾತೆ ಇರುವ ನೆಟ್ಟಗೆರೆ ಗ್ರಾಮದಲ್ಲಿ ಇರತಕ್ಕ ಬುಷ್ಕಿ ಜಮೀನು ಕ್ರಯ ಭೋಗ್ಯ ಮಾಡುವದಕ್ಕೆ ಪ್ರಯತ್ನಪಟ್ಟಿ ಇದ್ದಾನೆ. ಯಾರಾದರೂ ನಮ್ಮಗಳ ಅನುಮತಿ ಇಲ್ಲದೆ ತೆಗೆದುಕೊಳ್ಳಕೂಡದು. ಹಾಗೆ ತೆಗೆದುಕೊಂಡರೆ ರದ್ದು ಆಗುತ್ತೆ ತಿಳಿಸುವದು.

ಹನುಮನ ಗೆರೆ ರುಜು.	ಚಿಕ್ಕನ ಗೆರೆ ರುಜು.
ರಾಮನ ಗೆರೆ ರುಜು.	ಪುಟ್ಟನ ರೆಗೆ ರುಜು.

ಪುಸ್ತಕಪ್ರಕಾರ.

ವ್ಯವಸಾಯ ಕ್ರಮ ಬೋಧಿನಿ	0—1—0	ಮೈಸೂರು ಚರಿತ್ರಸಾರ	0—2—
ಎಳೆ ವ್ಯವಸಾಯ ಪಾಠ	0—1—0	ಮಹಾತ್ಮ ಪಂಚಕ	1—0—0
ಅಂಕಗಣಿತ ಪಾಠಶಿಕ್ಷೆ	0—1—0	ಕಥಾಸಂಗ್ರಹ ೧—೩ ಭಾಗಗಳು	1—0—0
ದೊಡ್ಡ ಅಂಕಗಣಿತ	0—1—0	ಕಥಾಸಂಗ್ರಹ ೪—೬ ಭಾಗಗಳು	1—0—0
ಚಿಕ್ಕ ಅಂಕಗಣಿತ	0—1—0	ತ್ರಿವಿಧವರ್ಣನೆ (ಸಚಿತ್ರ)	0—1—0
ಸಾಗಿ ಪುಸ್ತಕಗಳು	0—1—0	ದೇಹವೆಂಬ ನನ್ನ ಮನೆ (ಸಚಿತ್ರ)	0—1—0
ಆರೋಗ್ಯ ಪದ್ಧತಿ ಬೋಧಿನಿ	0—1—0	ಚಿಕ್ಕವರಿಗೆ ಹೇಳಿದ ಕಥೆಗಳು (ಸಚಿತ್ರ)	0—1—0
ಕನ್ನಡ ಬಾಲಬೋಧೆ ೧ನೆ ಭಾಗ	0—1—0	ಜಾರ್ಜ್‌ಸ್ಟೀವನ್‌ಸನ್ ಚರಿತ್ರೆ (ಸಚಿತ್ರ)	0—1—0
ಕನ್ನಡ ಬಾಲಬೋಧೆ ೨ನೆ ಭಾಗ	0—2—6	ಪಾಲಿಸಿ ಚರಿತ್ರೆ (ಸಚಿತ್ರ)	0—1—0
ಬಾಲಿಕಾ ಗೀತಮುಕ್ತಾ ಕಲಾಪ	0—1—0	ದೇವಗಳ ಕಾಲದಲ್ಲಿ ಹಿಂದು ದೇಶದ ಸ್ಥಿತಿ	0—1—0
ಭೂವಿವರಣೆ ೧ನೆ ಭಾಗ	0—1—0	ದಕ್ಷಿಣ ಆಫ್ರಿಕಾ ಮತ್ತು ಅದರ ಜನಗಳು	0—1—0
ಭೂವಿವರಣೆ ೨ನೆ ಭಾಗ	0—1—6	ಚೀನ ದೇಶವೂ ಮತ್ತು ಅದರ ಜನಗಳು	0—2—0
ಗಣಿತಶಾಸ್ತ್ರ	0—3—6	ಹಿಮವತ ದೇಶಗಳು	0—1—0
ಪದ್ಯಸಂಗ್ರಹ	0—1—0	ಘನತೆಯುಳ್ಳ ಸಿಸರೋನ ಚರಿತ್ರೆ	0—2—6
ವಾಕ್ಯಶಾಸ್ತ್ರ	1—0—0	ನಡತೆಯ ಸೂತ್ರಗಳು	0—1—0
ಪಂಚತಂತ್ರ	0—1—0	ಪ್ರಬೋಧ ಚಂದ್ರಿಕೆ	0—2—0
ಶಬ್ದಾದರ್ಶ	0—1—0	ಆರೋಗ್ಯ ಶಾಸ್ತ್ರ	0—1—0
ಸರ್ವಜ್ಞನ ವಚನ	0—1—6	ಮಕ್ಕಳ ಆರೋಗ್ಯ	0—2—6
ಹೊಸಗನ್ನಡ ವ್ಯಾಕರಣ	0—2—0	ನೆಪೋಲಿಯನ್ ಬೋನಪಾರ್ಟ ಚರಿತ್ರೆ	0—1—0
ಮೈಸೂರು ಚರಿತ್ರೆ ೧—೩ ಭಾಗಗಳು	0—2—0	ಸುಮತಿ ಶತಕ	0—1—0
ಮೈಸೂರು ಚರಿತ್ರೆ ೪—೬ ಭಾಗಗಳು	0—1—0	ಭೂಗೋಳ ಸಂಗ್ರಹ	0—1—0
ಕನ್ನಡ ಮೊದಲನೆಯ ಪುಸ್ತಕ	0—1—0	ಶಾಕುಂತಳ ನಾಟಕ	0—12—0
ಕನ್ನಡ ಎರಡನೆಯ ಪುಸ್ತಕ	0—3—6	ಗೀತಮಂಜರಿ	0—2—0
ಶಬ್ದಮಂಜರಿ	0—1—0	ಚರಿತ್ರಸಾರ ಸಂಗ್ರಹ	0—10—0
ಕಥಾಮಂಜರಿ	0—1—0	ವಸ್ತುಪಾಠ	0—1—0
ರಘುವಂಶ ಸ್ತವನ	0—12—0		
ಶಬ್ದಾನುಶಾಸನ	0—5—0		

ಈ ಮೇಲ್ಕಂಡ ಪುಸ್ತಕಗಳನ್ನು ವಿ. ಪಿ. ಪಿ. ಮೂಲಕವಾಗಲಿ ಅಥವಾ ಹಣವನ್ನು ಮುಂಗಡವಾಗಿ ಕೊಡೋಣದರಿಂದಲಾಗಲಿ ಪಡೆಯಬಹುದು. ಪೂರ್ತಿ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ವಿಳಾಸ:— ಮ್ಯಾನೇಜರ್, ವಿಷನ್ ಬುಕ್ ಡಿಪೋ, ಮೈಸೂರು.

ಮೈಸೂರು ಮಿಷನ್ ಪ್ರೆಸಿನಲ್ಲಿ ಯಾವ ಪುಸ್ತಕಗಳೂ ಅಚ್ಚು ಹಾಕಲ್ಪಡುತ್ತವೆ. ಯಾವಾಗಲೂ ಪುಸ್ತಕಗಳೆಲ್ಲವೂ ಮಿಷನ್ ಪ್ರೆಸ್ ಮ್ಯಾನೇಜರ್ ಅವರಿಗೆ ಮೈಸೂರು ಮಿಷನ್ ಬುಕ್ ಡಿಪೋ ಮ್ಯಾನೇಜರಿಗೆ ಬರೆಯತಕ್ಕದ್ದು. [illegible]

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

೨೦-೬-೧೯೦೩ರಿಂದ ೨೬-೬-೧೯೦೩ರ ವರೆಗೆ.

ಸ್ಥಳ.	ಪ್ಲೇಗ್. ಆರಂಭ ವ್ಯ.	ಪ್ಲೇಗ್. ಸತ್ತ ವ್ಯ.	ಇಲಿಗಳು
ಬೆಂಗಳೂರು ಪಟ್ಟಣ	0	1	೩೮
ಮೈಸೂರು „	6	7	೪೭
ಬೆಂಗಳೂರು ಡಿಸ್ಟ್ರಿಕ್ಟ್	21	9	
ಮೈಸೂರು „	125	70	
ಕೋಲಾರ್ „	10	3	
„ ಚಿನ್ನದ ಗಣಿಗಳು	4	1	
ತುಮಕೂರು ಡಿಸ್ಟ್ರಿಕ್ಟ್	0	0	
ಹಾಸನ „	15	13	
ಶಿವಮೊಗ್ಗ „	19	14	
ಕಡೂರ್ „	4	3	
ಚಿತ್ರದುರ್ಗ „	0	0	
ಒಟ್ಟು	205	128	

ಶಾಲೀವಾಹನ ಶಕ ೧೮೨೫ ನೇ ಶೋಭಕೃತುನಾಮ ಸಂವತ್ಸರದ ಜ್ಯೇಷ್ಠ ಬಹುಳ ಪಂಚಮಿ ಗುರುವಾರದಿಂದ ಜ್ಯೇಷ್ಠ ಬಹುಳ ಏಕಾದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೩ನೇ ಇಸವಿ ಜೂನ್. ಸುಮಾರು ಜುಲೈ.

ತಾ.	ವಾರ	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ವೈಶಾಖ ಮಾಸ ತೇದಿ.
26	ಗುರು	ಪಂಚಮಿ	15 5	ಶ್ರ	6 0	13
27	ಶುಕ್ರ*	ಷಷ್ಠಿ	11 10	ಧ	56 12	14
28	ಶನಿವಾರ	ಸಪ್ತಮಿ	12-56	ಶತ	55-35	15
29	ರವಿವಾರ§	ಅಷ್ಟಮಿ	9 50	ಪೂಭಾ	53 16	16
30	ಚಂದ್ರ	ನವಮಿ	5 58	ಉ	50-56	17
ಜುಲೈ 1	ಮಂಗಳ†	ದಶಮಿ	1 15	ರೇ	51-32	18
2	ಬುಧ ¶	ಏಕಾದಶಿ	19 59	ಅ	41 6	19

* ಸಿದ್ಧಯೋಗ. § ಹಿಂದೂಮತದ ತೀರ್ಥದೇವೇಶ್ವರಾಧ.

† ಸ್ವಾತಂತ್ರ್ಯಸಾರ್ವಭೌಮದಿನ

¶ ಸ್ಮಾರ್ತ ವೈಷ್ಣವಸಾರ್ವಭೌಮದಿನ, ಉಪವಾಸ, ಅಮೃತಯೋಗ.

ಪೇಟೆ ಧಾರಣೆ.

ದಿನಸಿ.		ಮೈಸೂರು	ಬೆಂಗಳೂರು
ಬತ್ತದ ಅಕ್ಕಿ ಪಲ್ಲ ೧ಕ್ಕೆ	ರೂ.	೧೦-೮-೦	೧೧-೦-೦
ಕೆಂಪುಸಿಂಗ ಅಕ್ಕಿ ಅವಲ್		೧೦-೪-೦	೧೧-೪-೦
ಬಿಳೇ ಜೋಳ		೯-೧೨-೦	೧೧-೦-೦
ಜವೆಗೋಧಿ ಅಕ್ಕಿ		೯-೮-೦	೧೨-೮-೦
ಸಣ್ಣ ಅವಲ್		೧೩-೦-೦	೧೩-೮-೦
ಬಿಳೀ ಜೋಳ		೧೨-೦-೦	೧೩-೦-೦
ಹೊಗೆಸೊಪ್ಪು ಪಲ್ಲ ೧ಕ್ಕೆ		೧೧-೦-೦	೧೧-೮-೦
ಬಿಳೀ ಜೋಳ		೧೨-೮-೦	೧೦-೬-೦
ಸ್ವೀಟ್ ರಾಗಿ ಪಲ್ಲ ೧ಕ್ಕೆ		೪-೮-೦	೪-೧೩-೦
ಕರಿಗೆ		೫-೪-೦	೪-೮-೦
ಹೆಸರು		೪-೪-೦	೬-೮-೦
ಹುರುಳಿ ಪಲ್ಲ ೧ಕ್ಕೆ		೪-೮-೦	೬-೦-೦
ಬಿಳೇ ಅವರೆ		೫-೧೨-೦	೬-೮-೦
ಹೆಸರು		೬-೧೨-೦	೭-೧೨-೦
ಉದ್ದು		೯-೦-೦	೯-೮-೦
ಕಡಲೆ		೯-೦-೦	೯-೮-೦
ಎಳ್ಳು		೨೦-೦-೦	೧೨-೧೫-೦
ಹುರುಳಿ		೪-೬-೦	೪-೪-೦
ಹರಳು ೨೦ ಸೇರಿಗೆ		೮-೦-೦	೬-೪-೬
ಸೀಗೆಕಾಯಿ ಮಣ ೧ಕ್ಕೆ		೬-೦-೦	೧-೦-೦
ಪೌಡಿ ಹರಳು		೨-೮-೦	೧೦೧೨-೦
ದನಿಯ ತರಹ		೨-೦-೦	೬-೮-೦
ಬಿಳಿ ದೊಡ್ಡ ಅಚ್ಚು		೩-೮-೦	೧೩-೦
ಒಣಮೆಣಸು ಮಣ ೧ಕ್ಕೆ		೫-೬-೦	೫-೦-೦
ಹರಳೆಣ್ಣೆ		೩-೨-೦	೩-೪-೦
ಕೊಬ್ಬರಿ ಮಣ ೧ಕ್ಕೆ		೩-೦-೦	೩-೨-೦
ತುಪ್ಪ		೯-೦-೦	೮-೧೧-೦
ಹುಣಸೇ ಹಣ್ಣು		೬-೧೨-೦	[illegible]
ಬೆಳ್ಳೇ ಹುಣಸೆಹಣ್ಣು		೬-೮-೦	೦-೧೧-೦
ಹುಚ್ಚು		೧೦-೬-೦	೧೦-೧೨-೦
ಸೀಮೆಯಂಚಿ ಹಿಟ್ಟು ೧ಕ್ಕೆ		೪-೬-೦	೩-೧೦-೦
ತೆಂಗಿನಕಾಯಿ ೧೦೦ಕ್ಕೆ		೫-೮-೦	೪-೮-೦
ಅಡಿಕೆಕಾಯಿ ಮಣ ೧ಕ್ಕೆ		೬-೮-೦	೬-೧೨-೦
ಹಿಪ್ಪೆಹಣ್ಣು ಮಣಕ್ಕೆ		೦-೧೨-೦	೬-೯-೦
ಬೆಲ್ಲ (ಸಾಗರ) ಕಂಡಿ		೧೫-೪-೦	೧೫-೬-೦
„ „ ಮಡಿಕೆ		೧೫-೮-೦	೧೫-೧೦-೦
„ „ ಕಟ್ಟು ಜೋಡಿ ೧ಕ್ಕೆ		೨೬-೦-೦	೨೬-೮-೦
ಬೆಲ್ಲ ಕಟ್ಟು ಜೋಡಿ ೧೦೦ಕ್ಕೆ		೩೨-೦-೦	೨೬-೦-೦

Printed and Published by the Rev. E. W. Thompson, the Proprietor and Manager, Wesleyan Mission Press, Mysore. 26/6/1903.

ವೃತ್ತಾಂತ ಪತ್ರಿಕೆ.

ಕ್ರಯ ೧ ಪು ಷ್ಟು — ಕ್ರಯ ೧ ಹು ಷ್ಟು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

[illegible] — [illegible] — [illegible]

MELLIN'S FOOD.

ಮೆಲ್ಲಿನ್ [illegible]

15

೧. [illegible]

[illegible]

[illegible]

33

[illegible]

[illegible]

11

[illegible]

ROBINSON'S

PATENT BARLEY.

ರಾಬಿನ್‌ಸನ್ನರ

ಬಾರ್ಲಿ ರೊಟ್ಟಿ.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

[illegible]

ಇದಕ್ಕೆ ಸ್ವಲ್ಪ [illegible] ಮಕ್ಕಳಿಗೆ [illegible] ಆಹಾರವಾಗುತ್ತದೆ.

[illegible]

[illegible]

[illegible]

ವೃತ್ತಾಂತ ಪತ್ರಿಕೆ.

[illegible]

ಚಕ್ರವರ್ತಿಯವರ ಕಾಯಿಲೆಯು.

ವಿಲಾಯತಿಯು ಎಡ್ವರ್ಡ್ ಮಹಾರಾಜಾ ಚಕ್ರವರ್ತಿಯವರ ದೇಹಸ್ಥಿತಿಯ ವಿಷಯದಲ್ಲಿ ಮೊನ್ನೆ ಮಂಗಳವಾರ ರಾತ್ರಿ ಬಂದಿರುವ ತಂತೀವರ್ತಮಾನದ ಸಾರಾಂಶವೇನಂದರೆ.—" ನೆನ್ನೆರಾತ್ರಿ ಚಕ್ರವರ್ತಿಯವರಿಗೆ ಬಹಳ ಚನ್ನಾಗಿ ನಿದ್ರೆಯಾಯಿತು. ಅವರು ಬಳ್ಳೇ ಸಿದ್ಧವಾಗಿದರು. ಎಲ್ಲ ರೀತಿಯಲ್ಲಿಯೂ ದೇಹವು ತುಂಬಾ ಹಗುರವಾಯಿತು. ದೇಹದಲ್ಲಿ ಶಕ್ತಿಯು ಕೂಡಿಕೊಳ್ಳುತ್ತಾ ಇದೆ. ದಿನೇದಿನೇ ಅವರು ಆರೋಗ್ಯ ಹೊಂದುತ್ತಾ ಇದ್ದಾರೆ. "

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆ

ಮೈಸೂರು ಸಂಸ್ಥಾನದ ವಿದ್ಯಾಭ್ಯಾಸದ ಇಲಾಖೆಯ ಒಂದು ವರುಷದ ರಿಪೋರ್ಟು ನಮ್ಮಲ್ಲಿಗೆ ಬಂದಿರುತ್ತದೆ. ಇದು ೧೯೦೧ ನೆ ಮೇ ೩೧ ಕ್ಕೆ ಆಖೈರಾದ ಒಂದು ಸಾಲಿನ ವಿಷಯಗಳನ್ನು ತಿಳಿಸುವದು. ಈ ಶೀಮೆಯ ದಿವಾನ್ ಮಹಾರಾಜರಿಗೆ ವಹಿಸಿ ೫೦ ವರುಷಗಳಾಗಿರುವದರಿಂದ ವಿದ್ಯಾಭ್ಯಾಸವು ೧೮೮೧ ನೆ ಇಸವಿಯಲ್ಲಿ ಹ್ಯಾಗಿತ್ತು, ೧೯೦೧ನೇ ಇಸವಿಯಲ್ಲಿ ಹ್ಯಾಗಿದೆ ಎಂಬದಾಗಿ ಇನ್‌ಸ್ಪೆಕ್ಟರ್ ಜನರಲ್‌ರವರು ಹೋಲಿಸಿರುತ್ತಾರೆ. ಮುಂದೆ ಹೇಳುವ ಸಂಖ್ಯೆಗಳನ್ನು ನೋಡಲಾಗಿ ವಿದ್ಯಾಭಿವೃದ್ಧಿಯು ಪರಮಾಶ್ಚರ್ಯವನ್ನು ಉಂಟುಮಾಡುವದು

	ಪಾಠಶಾಲೆಗಳು.	ವಿದ್ಯಾರ್ಥಿಗಳು.
[illegible]	[illegible]	[illegible]
[illegible]	[illegible]	[illegible]
	ಪ್ರೈವೇಟ್ ಪಾಠಶಾಲೆಗಳು.	ವಿದ್ಯಾರ್ಥಿಗಳು.
[illegible]	[illegible]	[illegible]
[illegible]	[illegible]	[illegible]

ಮೇಲ್ಕಂಡ ಸಂಖ್ಯೆಗಳನ್ನು ನೋಡಲಾಗಿ ಪಬ್ಲಿಕ್ ಸ್ಕೂಲ್ ಅಂದರೆ ಸರ್ಕಾರಿ ಪಾಠಶಾಲೆಗಳೂ ಸರ್ಕಾರದಿಂದ ಗ್ರಾಂಟು ಪಡೆಯುವ ಪಾಠಶಾಲೆಗಳೂ ಪ್ರೈವೇಟ್ (ಸಾಹುಕಾರಿ) ಸ್ಕೂಲುಗಳಿಗಿಂತಲೂ ಬಹಳವಾಗಿ ಹೆಚ್ಚಿರುತ್ತವೆ ಎಂದು ಗೊತ್ತಾಗುತ್ತೆ. ಕಳೆದ ೫೦ ವರುಷಗಳಲ್ಲಿ ಪಬ್ಲಿಕ್ ಸ್ಕೂಲುಗಳ ಸಂಖ್ಯೆಯು ಮೂರರಷ್ಟು ಜಾಸ್ತಿಯಾಗಿರುವದು. ಈ ಸಂಸ್ಥಾನದಲ್ಲಿರುವ ಬಾಲಕರ ಸಂಖ್ಯೆಯಲ್ಲಿ ಶೇಕಡಾ ೨೨ ಮಂದಿಯಂತೆಯೂ, ಬಾಲಿಕೆಯರ ಸಂಖ್ಯೆಯಲ್ಲಿ ಶೇಕಡಾ ೪ ಮಂದಿಯಂತೆಯೂ ವಿದ್ಯಾಭ್ಯಾಸ ಮಾಡುತ್ತಿದ್ದಾರೆಂದು ಈ ರಿಪೋರ್ಟಿನಿಂದ ತಿಳಿದು ಬರುವದು. ಅಂದರೆ ಪ್ರತಿ ನಾಲ್ಕು ಹುಡುಗರಲ್ಲೂ ಒಬ್ಬನೂ, ಪ್ರತಿ ೨೫ ಹುಡುಗಿಯರಲ್ಲೂ ಒಬ್ಬ ಹುಡುಗಿಯೂ ಅಕ್ಷರಸ್ಥರಾಗುತ್ತಿದ್ದಾರೆಂದು ಹೇಳಬಹುದಾಯಿತು. ಅದ್ದರಿಂದ ಇನ್ನೂ ಜೋರಾಗಿ ಹುಡುಗಿಯರಿಗೆ ವಿದ್ಯಾಭ್ಯಾಸ ಮಾಡಿಸುವದಕ್ಕೆ ತುಂಬಾ ಅವಕಾಶವೂ ಅವಶ್ಯಕತೆಯೂ ಇರುವದೆಂದು ಕಂಡು ಬರುವದು. ಈ ಸಂಸ್ಥಾನದಲ್ಲಿರುವ ಬಾಲಿಕಾ ಪಾಠಶಾಲೆಗಳ ಮೇಲ್ವಿಚಾರಣೆ ನೋಡಿಕೊಳ್ಳುವದಕ್ಕೆ ಮೆಂಬರುಗಳನ್ನು ಸರ್ಕಾರದವರು ನೇಮಕ ಮಾಡಿರುವರು. ಯಾವದೊಂದು ಕಮಿಟಿಯ ಮೆಂಬರುಗಳೂ ಮೇಲ್ವಿಚಾರಣೆಯನ್ನು ಶ್ರದ್ಧೆಯಿಟ್ಟು ಮಾಡಿಲ್ಲವೆಂಬದಾಗಿ ಇನ್‌ಸ್ಪೆಕ್ಟರ್ ಜನರಲ್ ರವರು ಈ ರಿಪೋರ್ಟಿನಲ್ಲಿ ಆಕ್ಷೇಪಣೆ ಮಾಡಿ ಬರೆದಿರುತ್ತಾರೆ. ಮೈಸೂರು ಮಹಾರಾಣಿಯವರ ಶಾಲೆಯಿಂದ ಇಬ್ಬರು ಯುವತಿಯರು ಎಫ್. ಎ. ಪರೀಕ್ಷೆಯಲ್ಲೂ, ಒಬ್ಬಳು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲೂ ತೇರ್ಗಡೆಯಾಗಿರುವಂತೆ ಈ ರಿಪೋರ್ಟು ತಿಳಿಸುವದು

ಆದರೆ ಗ್ರಾಮಾಂತರ ಪಾಠಶಾಲಾ ಉಪಾಧ್ಯಾಯರುಗಳಿಗೆ ಸಂಬಳ ಬಡ್ತಿ ಮಾಡಿ ಕೊಟ್ಟ ವಿಷಯವೇ ಈ ರಿಪೋರ್ಟಿನಲ್ಲಿ ಕಂಡು ಬರುವ ಮುಖ್ಯ ಸಂಗತಿ ಎಂದು ನಮಗೆ ತೋರುವದು. ಈ ಉಪಾಧ್ಯಾಯರ ಸಂಬಳವನ್ನು ಸರ್ಕಾರದವರು ೪ ರೂಪಾಯಿನಿಂದ ೬ ಕ್ಕೆ ಬಡ್ತಿ ಮಾಡಿದ್ದಾರೆ. ಇದನ್ನು ನೋಡಿ ನಾವು ಸುಸಂತೋಷವಾಗಿ ಸಂತೋಷಪಡುತ್ತೇವೆ. ಆದರೆ ಈ ಬಡ ಸ್ಕೂಲ್ ಮಾಸ್ತರುಗಳಿಗೆ ಬಡ್ತಿ ಸಿಕ್ಕುವ ವಿಷಯದಲ್ಲಿ ಸರ್ಕಾರದವರು ಜಾಗರೂಕರಾದರೆ ಇಷ್ಟು ಬಡ್ತಿ ಮಾಡುವದು ಅವಶ್ಯವೆಂದು ತೋರುವದು: ಯಾಕೆಂದರೆ ಸಾಧಾರಣವಾಗಿ ತಿಂಗಳಿಗೆ ೬ ರೂಪಾಯಿಗಿಂತ ಜಾಸ್ತಿ ಸಿಕ್ಕುವದಿಲ್ಲವೆಂಬ ಈ ಉಪಾಧ್ಯಾಯರು ಕೆಲಸಕ್ಕೆ ತಕ್ಕಷ್ಟು ಯೋಗ್ಯರಾದವರು ಬಂದು ಸೇರುತ್ತಾರೆಂದು ನಿರೀಕ್ಷಿಸುವದು ಕಷ್ಟ. ಆದಕಾರಣ ಗೌವರ್ನಮೆಂಟಿನವರು ಅವರಿಗೆಲ್ಲಾ ಆಗಾಗ್ಯೆ ಅಲ್ಪ ಸ್ವಲ್ಪ ಬಡ್ತಿ ದೊರಕುವ ಹಾಗೆ ದರ್ಜೆಗಳನ್ನು ಕಲ್ಪಿಸುವದು ಅಪೇಕ್ಷಣೀಯವಾದದ್ದು. ಈಗ ೧೦ ೧೨ ರೂಪಾಯಿ ತಲಬಿನ ಉಪಾಧ್ಯಾಯ ಕೆಲಸವೇನೋ ಇದೆ. ಇವುಗಳ ಸಂಖ್ಯೆ ಬಹಳ ಕಡಿಮೆಯಾದದ್ದರಿಂದ ೬ ರೂಪಾಯಿ ತಲಬಿನ ಉಪಾಧ್ಯಾಯರಿಗೆ ಈ ಬಡ್ತಿ ದೊರಕುವದು ಅಪರೂಪ. ಸರ್ಕಾರದವರು ಸದ್ಯ ಬಾಲಿಕಾ[illegible]ಗಳನ್ನು ಕಲಿಸತಕ್ಕ ಉಪಾಧ್ಯಾಯರುಗಳಿಗೆ ಪ್ರೋತ್ಸಾಹ ಕೊಡಬೇಕೆಂಬ ಅಂಶವನ್ನೇ ಆಲೋಚನೆ ಮಾಡುತ್ತಿರಬಹುದೆಂದು ಊಹಿಸುತ್ತೇವೆ

ದೇಶಾಂತರದ ವಿಶೇಷ ಸಮಾಚಾರಗಳು.

ಹಿಂದುಸ್ಥಾನದ ಶಿಲ್ಪಕಾರರು ಉತ್ಸವಕ್ಕಾಗಿ ದಿಮಾ[illegible] ರದ ಜಯಪುರದ ಮಹಾರಾಜರು ಲಂಡನ್ ನಗರದ ಮೇಲೆ [illegible] ಒಂದು ಒಡವೆಯನ್ನು ಇಟ್ಟುಕೊಂಡಿದ್ದಾರೆ. ಈ ಒಡವೆಯು ಮೈದಾನದಲ್ಲಿ ಅವರು ಇನ್ನು ಸಣ್ಣ ತೋರಣಕ್ಕೆ ಅನುಕೂಲವಾದ [illegible] ಮನೆಗಳನ್ನು ಕಟ್ಟಿಸುತ್ತಾ ಇದ್ದರು. [illegible] ಮನೆಗಳಿಗೆ [illegible] ಮುಖ್ಯವಾಗಿ ಸುತ್ತುಹೋಯಿತು. ಅವರಲ್ಲೇ ಬಿಸಿ[illegible] ಯೂಕರಗಳನ್ನು ಕಂಡಿತು ಹೋಯಿತು, ಅಂಗಡಿ[illegible] ಊರಿಯ [illegible] ಲಿಯನ್ನಲ್ಲಾ ಪ [illegible] ಎನ್ನುವನ್ನು [illegible] ಎದ್ದಿತ್ತು. ಆದರೆ ಅವರು [illegible] ಇರಿಸಿದ್ದರು. ಆದರೂ ಮುಂಭಾಗಗಳೆಲ್ಲ ಸಂಪೂರ್ಣವಾಗಿ [illegible] ವಿದಾಯಕವಾದ ನಕ್ಷೆಯನ್ನು [illegible] ಮಾಡಿದೆ.

• • •

ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರ ಜ್ಯೇಷ್ಠಪುತ್ರರಾದ ಪ್ರಿನ್ಸ್ ಆಫ್ ವೇಲ್ಸ್ (ಯುವರಾಜ) ರವರು [illegible] ಸ್ತ್ರೀ ಸಮೇತರಾಗಿ [illegible] ಪ್ರಯಾಣವಾದ [illegible] ವಿಷಯವನ್ನು [illegible] ಎ. ಡಾಲೆಸ್ ಎಂಬವರು ಒಂದು ಪುಸ್ತಕವನ್ನು ಬರೆದು ಪ್ರಕಟಿಸಿರುತ್ತಾರೆ. ಇದರಲ್ಲಿ [illegible] ಮುಖ್ಯವಾದ ಭಾಗವನ್ನು ಇಲ್ಲಿ ಸೂಚಿಸುವೆವು. [illegible] ಒಟ್ಟು [illegible] ಮೈಲಿ ದೂರವೂ ಇತರ [illegible] ಮೇಲೆ [illegible] ಮೈಲಿ ದೂರವೂ ಸಮುದ್ರಯಾನ ಮಾಡಿದ್ದಾರೆ [illegible] ಮೈಲಿ ದೂರ ಪ್ರಯಾಣ ಮಾಡಿದರು. [illegible] ಲಕ್ಷ [illegible] ಪತ್ರಿಕೆಗಳೂ ಒಪ್ಪಿಸಲ್ಪಟ್ಟವು. [illegible] ಯುವರಾಜರು ಪ್ರತ್ಯಕ್ಷ[illegible] ಮಾಡಿದರು. [illegible] ದಕ್ಷಿಣ ಆಫ್ರಿಕದ [illegible] ಮೆಡಲ್ (ಬಿಲ್ಲೆ) ಗಳನ್ನು ದಯಪಾಲಿಸಿರುತ್ತಾರೆ. [illegible] ಯಾಣದಲ್ಲೆಲ್ಲಾ ಅವರು ಒಟ್ಟು ೩೫,೦೦೦ ಮಂದಿ ದೊಡ್ಡ ಮನುಷ್ಯರನ್ನು ಕಂಡು, ಅವರೆಲ್ಲರ ಷೇಕ್ ಹ್ಯಾಂಡ್ (ಹಸ್ತವನ್ನು ಕುಲುಕುವದು) ಮಾಡಿರುವರು.

• • •

ಇಂಗ್ಲಾಂಡಿನ ಮತ್ತು [illegible] ಉತ್ತರಕ್ಕೆ [illegible] ಯಲ್ಲಿ [illegible] ಸೀಮೆಯು [illegible] ಪ್ರಧಾನ [illegible] ಪ್ರತಿನಿಧಿಗಳಾಗಿ ಹೋಗಿದ್ದರು. [illegible] ಸೀಮೆಯು [illegible] ಸನಾನಾಗಿ [illegible] ಇಲ್ಲ ಇಂಗ್ಲೆಂಡು [illegible] ಪ್ರತಿನಿಧಿಗಳ [illegible] ಇವರು ಸ್ವತಂತ್ರ [illegible] ಹಳೆ [illegible] ಅನ್ನಗೆ [illegible] ಮನೆಯನ್ನು [illegible] ಮಾಡಿದ್ದಾರೆ. [illegible] ವಿದ್ಯಾರ್ಥಿಯು [illegible] ಇದರ ವಿಷಯವಾಗಿ ಪ್ರಧಾನ [illegible] ೫೦,೦೦೦ [illegible] ಕೂಡುವ [illegible] ಎಂದು ತಿಳಿದನು.

ಒಳದೇಶದ ವೃತ್ತಾಂತಗಳು.

[illegible]

[illegible] (ಮು[illegible]) [illegible]

[illegible]

[illegible]

ಇಂಡಿಯಾ ದೇಶದ ವರ್ತಮಾನಗಳು

[illegible]

ಮೈಸೂರು ಗೆಜೆಟ್ ಸಂಗ್ರಹ

[illegible]

ಎಡ್ವರ್ಡ್ ಚಕ್ರವರ್ತಿಯವರ ಕಾಯಿಲೆಯು.

ಕಳೆದವಾರ ಪತ್ರಿಕೆಯನ್ನು ಪ್ರಿಂಟುಮಾಡುವ ಸಮಯದಲ್ಲಿ ವಿಲಾಯತಿಯ ಮಹಾರಾಜಾ ಚಕ್ರವರ್ತಿಯವರಿಗೆ ತುಂಬಾ ಕಾಯಿಲೆಯಾಗಿದೆ ಎಂತಲೂ, ಇದರಿಂದ ಕಿರೀಟಧಾರಣೆಯ ಉತ್ಸವವು ೩-೪ ತಿಂಗಳ ತನಕ ನಿಲ್ಲಿಸಲ್ಪಟ್ಟಿದೆ ಎಂತಲೂ ಅನಿರೀಕ್ಷ್ಯವಾದ ತಂತೀವರ್ತಮಾನಬಂತು. ಈ ವಿಷಯಕ್ಕೆ ಸಂಬಂಧಪಟ್ಟ ಸಂಗತಿಗಳನ್ನೆಲ್ಲಾ ವಿವರವಾಗಿ ತಿಳಿಸಲು ಈ ವಾರ ನಮಗೆ ಅವಕಾಶ ದೊರಕಿದೆ.

ಸುಮಾರು ಹದಿನೈದು ದಿನಗಳಿಂದ ಚಕ್ರವರ್ತಿಯವರಿಗೆ ಸ್ವಲ್ಪ ದೇಹಾಲಸ್ಯ ಉಂಟಾಗಿದೆ ಎಂಬದಾಗಿ ತಿಳಿದಿತ್ತು. ಈಚೆಗೆ ಜೂನ್ ೧೪ ನೇ ಆಲ್ಡರ್‌ಷಾಟ್‌ನಲ್ಲಿ ಒಂದು ಭಾರೀ ಸೈನ್ಯದ ಕವಾತು ಮುಂತಾದ್ದು ನಡೆಯಿತು. ಇದನ್ನು ಪರಾಂಬರಿಸುವದಕ್ಕಾಗಿ ಚಕ್ರವರ್ತಿಯವರು ಅಲ್ಲಿಗೆ ದಯಮಾಡಿದ್ದಾಗ ಅವರು ತಮ್ಮ ಬಿಡಾರದಲ್ಲಿ ಆ ರಾತ್ರಿ ಒದ್ದೆಯಾದ ಮಗ್ಗುಲುಹಾಸಿಗೆ ಹಾಸಿದ್ದ ತಲ್ಪದ ಮೇಲೆ ಮಲಗಿ ನಿದ್ದೆ ಮಾಡಿದ್ದರಿಂದ ಅವರಿಗೆ ಶೀತವಾಯಿತೆಂದು ಒಂದು ತಂತೀವರ್ತಮಾನ ಕೇಳಿತು. ಅಲ್ಲಿಂದ ಚಕ್ರವರ್ತಿಯವರು ವಿಂಡ್ಸರ್ ಎಂಬ ರಾಜಧಾನಕ್ಕೆ ಚಿತ್ತೈಸಿ, ಆ ಭಾಗದಲ್ಲಿ ಕೆಲವು ದಿನಗಳ ತನಕ ಬಾಗಿಲು ಹಾಕಿದ ಗಾಡಿಯಲ್ಲಿ ಸಂಚಾರ ಮಾಡುತ್ತಿದ್ದರು. ಆಸ್ಕಟ್ ಎಂಬಲ್ಲಿ ನಡೆದ ಕುದುರೆ ಓಟಕ್ಕೆ ಅವರು ದಯಮಾಡಿಸಲಿಲ್ಲ. ಅವರ ದೇಹಸ್ಥಿತಿಯನ್ನು ನೋಡಿದ ವೈದ್ಯ ಡಾಕ್ಟರುಗಳು—ಗಲಾಟೆಯಾಗತಕ್ಕ ಯಾವ ಕಾರ್ಯಗಳಿಗೂ ಚಕ್ರವರ್ತಿಯವರು ದಯಮಾಡದೆ, ಕೆಲವು ದಿನಗಳ ತನಕ ರಾಜಭವನದಲ್ಲೇ ಇದ್ದುಕೊಂಡು, ಪೂರ್ಣ ವಿಶ್ರಾಂತಿಯನ್ನು ತಕ್ಕೊಳ್ಳಬೇಕಾಗಿ ತಿಳಿಸಿದರು. ಇಷ್ಟು ಮಾತ್ರ ಪ್ರಜೆಗಳಿಗೆಲ್ಲಾ ತಿಳಿದಿತ್ತು. ಇದರ ಹೊರತು ಗಂಭೀರವಾದ ಕಾಯಿಲೆ ಇಲ್ಲವೆಂದು ತಿಳಿದಿದ್ದ ಕಾರಣ ಇದರಿಂದ ಕಿರೀಟಧಾರಣೆಯ ಉತ್ಸವಕ್ಕೆ ವಿಘ್ನಬಾರದೆಂದು ಯಾರೂ ನೆನಸಲಿಲ್ಲ. ಚಕ್ರವರ್ತಿಯವರೇ ತಮ್ಮ ಕಾಯಿಲೆಯ ವಿಷಯದಲ್ಲಿ ಅಲಕ್ಷ್ಯವಾಗಿದ್ದರು. ಮತ್ತು ಮಹಾ ಉತ್ಸವವನ್ನು ನಿಲ್ಲಿಸಿದಲ್ಲಿ ತುಂಬಾ ಖೇದವನ್ನುಂಟುಮಾಡೀತೆಂದು ನೆನಸಿ, ಹ್ಯಾಗಾದರೂ ಇದನ್ನು ನೆರವೇರಿಸಬೇಕೆಂದು ಸಂಕಲ್ಪ ಮಾಡಿಕೊಂಡಿದ್ದರು. ತಮ್ಮ ದೇಹಸ್ಥಿತಿಯ ವಿಷಯದಲ್ಲಿ ಹೊರಕ್ಕೆ ಖಂಡಿತವಾದ ಸಮಾಚಾರ ತಿಳಿಯಬಾರದೆಂದು ಅವರು ನಿಯಮದಲ್ಲಿ ಎಷ್ಟೋ ಕಟ್ಟುಮಾಡಿದ್ದರೂ ಲಂಡನ್ ಪಟ್ಟಣದ ಕೆಲವು ವರ್ತಮಾನ ಪತ್ರಿಕೆಗಳು ಚಕ್ರವರ್ತಿಯವರಿಗೆ ತುಂಬಾ ಕಾಯಿಲೆಯಾಗಿದೆ ಎಂಬ ಸುದ್ದಿಯನ್ನು ಕಳೆದವಾರ ಪ್ರಕಟಿಸಿಬಿಟ್ಟವು.

ಜೂನ್ ೨೧ ನೇ ಶನಿವಾರ ಚಕ್ರವರ್ತಿಯವರು ವಿಂಡ್ಸರ್ ಅರಮನೆಯಿಂದ ಲಂಡನ್ ನಗರಕ್ಕೆ ದಯಮಾಡಿದರು. ಆಗ ವೈದ್ಯರು ಅವರನ್ನು ನೋಡಿದ್ದರಲ್ಲಿ ಸ್ವಲ್ಪ ಜಾಗರೂಕರಾಗಿದ್ದರೆ ಚಕ್ರವರ್ತಿಯವರು ಕಿರೀಟಧಾರಣೆಯ ಆಯಾಸ ಮತ್ತು ಕಷ್ಟವನ್ನೂ ದೀರ್ಘವಾದ ಮೆರವಣಿಗೆ ಮತ್ತು ಇತರ ಕ್ರಿಯೆಯನ್ನೂ ನೆರವೇರಿಸುವಷ್ಟು ಆರೋಗ್ಯವಾಗಿರುವಂತೆ ಕಾಣುತ್ತಾರೆಂದು ಊಹಿಸಿದರು. ಸೋಮವಾರ ಚಕ್ರವರ್ತಿಯವರು ಲಂಡನ್ ಪಟ್ಟಣದ ರಾಜಬೀದಿಗಳಲ್ಲಿ ವಾಹನಾರೂಢರಾಗಿ ಸವಾರಿ ಚಿತ್ತೈಸಿದರು. ಆಗ್ಯೆ ಅವರು ಆರೋಗ್ಯವಾಗಿರುವಂತೆ ಕಂಡುಬಂತು. ಇದನ್ನು ನೋಡಿ ಚಕ್ರವರ್ತಿಯವರ ವೈದ್ಯರುಗಳು ಅವರು ಆರೋಗ್ಯವಾಗಿದ್ದಾರೆಂತಲೂ, ಅದುವರೆಗೆ ಪ್ರಕಟವಾಗಿದ್ದ ಸುದ್ದಿಗಳೆಲ್ಲಾ ನಿಜವಲ್ಲದವುಗಳೆಂತಲೂ ಪ್ರಕಟಿಸಿದರು. ಆ ದಿನ ರಾತ್ರಿ ಬಕಿಂಗ್‌ಹಾಂ ಅರಮನೆಯಲ್ಲಿ ಒಂದು ದೊಡ್ಡ ಔತಣವಾಯಿತು. ಚಕ್ರವರ್ತಿಯವರು ಅಲ್ಲಿಗೆ ದಯಮಾಡಬೇಕಾಗಿತ್ತು. ಆದರೆ ಅವರ ದೇಹಸ್ಥಿತಿಯು ಆ ಸಾಯಂಕಾಲವೇ ಚೆನ್ನಾಗಿರಲಿಲ್ಲವಾದಕಾರಣ ಆ ಔತಣಕ್ಕೆ ದಯಮಾಡದೆ ನಿಂತುಬಿಟ್ಟರು.

ಜೂನ್ ೨೪ ನೇ ಮಂಗಳವಾರ ಪ್ರಮುಖ ಸರ್ಜನ್‌ರುಗಳು [ಇವರು ವಿಲಾಯಿತಿಯಲ್ಲೆಲ್ಲಾ ಮಹಾ ವೈದ್ಯರೆಂದು ಕೀರ್ತಿಪಡೆದಿರತಕ್ಕವರು.] ಮಹಾರಾಜಾ ಚಕ್ರವರ್ತಿಯವರ ಶರೀರಸ್ಥಿತಿಯನ್ನು ಬಹಳ ಸೂಕ್ಷ್ಮವಾಗಿ ಪರೀಕ್ಷೆಮಾಡಿ, ಅವರ ಪ್ರಾಣ ಉಳಿಯಬೇಕಾದರೆ ಶಸ್ತ್ರಪ್ರಯೋಗಮಾಡುವದು ಅತ್ಯವಶ್ಯವೆಂಬದಾಗಿಯೂ, ಶಸ್ತ್ರಪ್ರಯೋಗ ಮಾಡದೆ ಇಲ್ಲವಾಗಿರುವದು ಅಪಾಯಕರವೇ ಸರಿ ಎಂತಲೂ ಖಂಡಿತವಾಗಿ ತೀರ್ಮಾನ ಮಾಡಿದರು. ಚಕ್ರವರ್ತಿಯವರ ಹೊಟ್ಟೆಯಲ್ಲಿ ಕರುಳಿನ ಮೇಲೆ ಶೀತವಾಯು ಊದಿಕೊಂಡು ದೊಡ್ಡ ಕುರು ಎದ್ದಿತ್ತು. ಅದು ಒಳಗೇ ಒಡೆದಿದ್ದ ಪಕ್ಷಕ್ಕೆ ಚಕ್ರವರ್ತಿಯವರ ಪ್ರಾಣ ಉಳಿಯುತ್ತಲೇ ಇರಲಿಲ್ಲ. ಆದಕಾರಣ ಮಂಗಳವಾರ ಮಧ್ಯಾಹ್ನ ೩ ಗಂಟೆಗೆ ಡಾಕ್ಟರುಗಳು ಶಸ್ತ್ರವಿಕ್ಕಿ ಆ ಹುಣ್ಣನ್ನು ಕತ್ತರಿಸಿ, ಕೀವು ಮೊದಲಾದ ಕೆಟ್ಟ ನೀರನ್ನೆಲ್ಲಾ ಹೊರಕ್ಕೆ ತೆಗೆದರು. ೬೧ ವಯಸ್ಸಾಗಿರುವಂಥವರಿಗೆ ಈ ಪ್ರಕಾರ ಶಸ್ತ್ರವಿಕ್ಕಿ ಚಿಕಿತ್ಸೆ ಮಾಡುವದೇನೂ ಸುಲಭವಲ್ಲ. ಮಹಾ ಪ್ರಖ್ಯಾತರಾದ ಸರ್ಜನ್ ಡಾಕ್ಟರುಗಳಾದರೂ ಕಡೇವರೆಗೂ ಅನುಮಾನಿಸುತ್ತಲೇ ಇದ್ದರು. ಶೀಘ್ರವಾಗಿ ಗುಣ ಬಂದದ್ದರಿಂದ ಶಸ್ತ್ರಪ್ರಯೋಗ ಮಾಡಿದರು. ಚಕ್ರವರ್ತಿಯವರ ದೇಹದ ಬಹಳ ಸಾಮರ್ಥ್ಯದಿಂದಲೂ ಅವಲಂಬಿಸಿಕೊಂಡಿದ್ದರೂ ಆ ಹುಣ್ಣಿನ ಬಾಧೆಯನ್ನು ತಾಳಿಕೊಳ್ಳುತ್ತಾ ಹನ್ನೆರಡು ದಿನಗಳನ್ನು ಕಳೆದರು. ಇಷ್ಟುವರೆಗೆ ಕಿರೀಟಧಾರಣೆಯ ಉತ್ಸವಗಳು ಸನ್ನಿಹಿತವಾಗಿ ಬಂದು ಹೋಗಿ ತುಂಬಾ ಆಯಾಸವಾಗುವದೆಂತಲೂ, ಪ್ರಜೆಗಳೆಲ್ಲಾ ವ್ಯಸನಾಕ್ರಾಂತರಾಗಿ ಕಳವಳಪಡುವರೆಂತಲೂ ಚಕ್ರವರ್ತಿಯವರು ತಿಳಿದುಕೊಂಡು ತಮ್ಮ ಬಾಧೆಯನ್ನು ಪ್ರಕಟಮಾಡದೆ ಇದ್ದರು. ಶಸ್ತ್ರಪ್ರಯೋಗ ಮಾಡದಿದ್ದರೆ ವಿಧಿಯೇ ಇಲ್ಲವೆಂದು ಗೊತ್ತಾದಾಗ ಚಕ್ರವರ್ತಿಯವರು ತಮ್ಮ ಜನ ವ್ಯಸನಾಕ್ರಾಂತರಾಗಿ ಕಿರೀಟಧಾರಣೆಯ ಉತ್ಸವಾದಿಗಳೆಲ್ಲಾ ಸದ್ಯಕ್ಕೆ ನಿಲ್ಲಿಸಲ್ಪಡಬೇಕಾದರೂ ಬಡಪ್ರಜೆಗಳಿಗೆ ಮಾಡಿಸತಕ್ಕ ಔತಣವನ್ನು ನೆರವೇರಿಸಬೇಕೆಂಬದಾಗಿ ಅಪ್ಪಣೆ ಕೊಡಿಸಿದರು. ಚಕ್ರವರ್ತಿಯವರ ಈ ಅಪ್ಪಣೆಯ ಪ್ರಕಾರ ವಿಲಾಯತಿಯಲ್ಲೂ ಹಿಂದುಸ್ಥಾನದಲ್ಲೂ ಬಡವರಿಗೆ ಊಟ ಮಾಡಿಸುವಂತೆ ಕಂಡುಬರುವದು. ಬೊಂಬಾಯಿ, ಮದರಾಸ್, ಬೆಂಗಳೂರು ಮುಂತಾದ ಕಡೆಗಳಲ್ಲಿ ಮೊದಲೇ ಏರ್ಪಾಡಾಗಿದ್ದಂತೆ ಬಡಬಗ್ಗರಿಗೆ ಅನ್ನದಾನ ಮಾಡುತ್ತಾರೆಂದು ತಿಳಿಯುತ್ತೇವೆ. ತಾ|| ೨೬ನೇ ಗುರುವಾರ ಅನೇಕಾನೇಕ ಕ್ರೈಸ್ತ ದೇವಾಲಯಗಳಲ್ಲಿ ಜನರು ಕೂಡಿ ಚಕ್ರವರ್ತಿಯವರಿಗೆ ಬೇಗ ಆರೋಗ್ಯವಾಗಲೆಂದು ಪ್ರಾರ್ಥನೆಗಳನ್ನು ನಡಸಿದರು.

ಚಕ್ರವರ್ತಿಯವರ ಕಾಯಿಲೆ ಸಮಾಚಾರವು ಪ್ರಕಟವಾದ ಮಂಗಳವಾರ ಮಧ್ಯಾಹ್ನ ಲಂಡನ್ ನಗರವು ಪ್ರಪಂಚದ ಸಕಲ ದಿಗ್ದೇಶಗಳಿಂದಲೂ ಕಿರೀಟಧಾರಣೆಯ ಉತ್ಸವಾದಿಗಳನ್ನು ನೋಡುವದಕ್ಕಾಗಿ ಹೋಗಿದ್ದ ಜನಗಳಿಂದ ಗಿಜಗುಟ್ಟುತ್ತಿತ್ತು. ಇಂಥಾ ಅನಿರೀಕ್ಷ್ಯವಾದ ಸುದ್ದಿಯನ್ನು ಕೇಳಿದ ಕೂಡಲೆ ಸಕಲರೂ ವಿಸ್ಮಯಹೊಂದಿದರು. ಆಗ ಜನರಲ್ಲಿ ಉಂಟಾದ ಗಾಬರಿಯೂ, ವ್ಯಸನವೂ, ಆಶ್ಚರ್ಯವೂ ಅಪಾರವಾಗಿತ್ತು. ಹೌಸ್ ಆಫ್ ಕಾಮನ್ಸ್ ಎಂಬ ಪಾರ್ಲಿಮೆಂಟ್ ಸಭೆಯ ಮನೆಯಲ್ಲಿ ಅಧಿಕಾರಿಯು ಎದ್ದು ನಿಂತು ಟೋಪಿ ತೆಗೆದು ಈ ವ್ಯಸನಕರವಾದ ಸಮಾಚಾರವನ್ನು ಮೆಂಬರುಗಳಿಗೆಲ್ಲಾ ಓದಿ ಹೇಳಿದನು. ಮಾರನೇ ದಿನ ಆದ ಬುಧವಾರ ಉತ್ಸವವನ್ನು ನಿಂತು ನೋಡುವದಕ್ಕಾಗಿ ರಾಜಬೀದಿಗಳ ಇದ್ದಕಡೆ ಉಭಯಪಾರ್ಶ್ವಗಳಲ್ಲಿ ಕಟ್ಟಿದ್ದ ಜಾಗೆಗಳನ್ನು ಕೂಲಿಯವರು ಮುರಿದು ತೆಗೆಯುವದಕ್ಕಾರಂಭಿಸಿದರು. ಬೇರೆ ಬೇರೆ ಕಡೆಗಳಿಂದ ಬಂದಿದ್ದ ಸೈನ್ಯಗಳೆಲ್ಲಾ ವಾಪಸು ಹೊರಟು ಹೋಗುವಂತೆ ಅಪ್ಪಣೆ ಕೊಡಲಾಯಿತು. ಹಡಗು ಜಹಜುಗಳ ಕವಾತು ಮುಂತಾದ್ದು ನಿಲ್ಲಿಸಲ್ಪಟ್ಟಿತು. ಪರರಾಜ್ಯಗಳಿಂದ ಬಂದಿದ್ದ ದೊಡ್ಡ ಮನುಷ್ಯರೂ ರಾಯಭಾರಿಗಳೂ ಕೆಲಕಾಲದ ತಮ್ಮ ತಮ್ಮ ಊರುಗಳನ್ನು ಕುರಿತು ಪ್ರಯಾಣ ಮಾಡಿದರು. ಮೊದಲು ಹಿಂದುಸ್ಥಾನದಿಂದ ಹೋಗಿದ್ದ ರಾಜರುಗಳು ಕೂಡಲೇ ವಾಪಸು ಹೊರಟು ಬರುತ್ತಾರೆಂಬ ವರ್ತಮಾನವಿತ್ತು. ಈಗಾದರೋ ಇನ್ನು ೨-೩ ತಿಂಗಳಲ್ಲೇ ಕಿರೀಟಧಾರಣೆಯ ಉತ್ಸವಗಳು ನಡೆಯಬಹುದೆಂಬ ಭರವಸೆ ಉಂಟಾಗಿರುವದರಿಂದ ಅವರೆಲ್ಲಾ ಇನ್ನು ಕೆಲವು ಕಾಲ ವಿಲಾಯತಿಯಲ್ಲೇ ಇದ್ದು ಬರುವರೆಂದು ತೋರುತ್ತದೆ. ಪ್ರಪಂಚದ ಸಕಲ ದಿಗ್ದೇಶಗಳಿಂದಲೂ ಸಂತಾಪ ಸೂಚಕವಾದ ಕಾಗದಗಳೂ, ತಂತೀವರ್ತಮಾನಗಳೂ ಲಂಡನ್ ನಗರಕ್ಕೆ ಸಮೃದ್ಧಿಯಾಗಿ ಬಂದು ಸುರಿದವು. ಅವುಗಳನ್ನೆಲ್ಲಾ ನೋಡಿ ಮಹಾರಾಜಾ ಚಕ್ರವರ್ತಿಯವರು ತಮ್ಮ ಪ್ರಜೆಗಳಿಗೆಲ್ಲಾ ರಾಜಭಕ್ತಿ, ವಿಶ್ವಾಸಗಳನ್ನು ಕುರಿತು ಕೃತಜ್ಞತಾ ಭಾವವನ್ನು ಪ್ರಕಾಶಪಡಿಸಿದರು.

ಲಾರ್ಡ್ ಲಿಸ್ಟರ್, ಸರ್ ಥಾಮಸ್ ಸ್ಮಿತ್, ಸರ್ ಥಾಮಸ್ ಬಾರ್ಲೋ, ಸರ್ ಫ್ರಾನ್ಸಿಸ್ ಲಾಕಿಂಗ್, ಸರ್ ಫ್ರೆಡ್ರಿಕ್ ಟ್ರೀವ್ಸ್—ಎಂಬೀ ಐದು ಮಂದಿ ಪ್ರಸಿದ್ಧರಾದ ಡಾಕ್ಟರುಗಳು ಚಕ್ರವರ್ತಿಯವರ ದೇಹಸ್ಥಿತಿಯನ್ನು ನೋಡಿಕೊಳ್ಳುತ್ತಿದ್ದಾರೆ. ಇವರು ಚಕ್ರವರ್ತಿಯವರ ಶರೀರಸ್ಥಿತಿಯನ್ನು ಕುರಿತು ಆಗಿಂದಾಗ್ಗೆ ಪ್ರಕಟಪಡಿಸುವ ಸಮಾಚಾರಗಳನ್ನು ಕಾಲಕ್ರಮವಾಗಿ ಇಲ್ಲಿ ಸೂಚಿಸುತ್ತೇವೆ.

ಜೂ|| ತಾ|| ೨೪ನೆ ಮಂಗಳವಾರ.

ಲಂಡನ್, ಸಾಯಂಕಾಲ ೪ ಗಂಟೆ.—ಮಹಾರಾಜಾ ಚಕ್ರವರ್ತಿಯವರ ಕಾಯಿಲೆಗೆ ಪೆರಿಟಿಫ್ಲೈಟಿಸ್ ಎಂದು ಹೆಸರು. [ಇದನ್ನು ಮೇಲ್ಭಾಗದಲ್ಲಿ ವಿವರಿಸುತ್ತೇವೆ.] ಶನಿವಾರ ಅವರ ದೇಹಸ್ಥಿತಿಯನ್ನು ನೋಡಲಾಗಿ ಉತ್ಸವದ ದಿನವನ್ನು ಅವರು ಸಹಿಸಿಕೊಂಡಾರೆಂಬ ವಷ್ಟು ತೃಪ್ತಿಕರವಾಗಿತ್ತು. ಅದರೆ ಸೋಮವಾರ ಸಾಯಂಕಾಲ ಅವರ ಕಾಯಿಲೆ ಮಂಕಳಿಸಿಕೊಂಡಿತು. ಈ ದಿನ ಶಸ್ತ್ರವಿಕ್ಕುವದು ಅವಶ್ಯವಾಗಿ ಕಂಡು ಬಂತು.—(ಸಹಿ) ಲಿಸ್ಟರ್, ಟಿ. ಸ್ಮಿತ್, ಎ. ಬಾರ್ಲೋ, ಎಫ್. ಲಾಕಿಂಗ್, ಎಫ್. ಟ್ರೀವ್ಸ್.

ಮಧ್ಯಾಹ್ನ ೩ ಗಂಟೆಗೆ ಶಸ್ತ್ರಪ್ರಯೋಗ ಮಾಡಿ, ಹುಣ್ಣನ್ನು ಕತ್ತರಿಸಿ ತೆಗೆದಾಯಿತು. ಚಕ್ರವರ್ತಿಯವರು ಬಹು ಧೈರ್ಯದಿಂದ ಶಸ್ತ್ರ ಬಾಧೆಯನ್ನು ತಾಳಿಕೊಂಡರು. ಅವರ ದೇಹಸ್ಥಿತಿ ತೃಪ್ತಿಕರವಾಗಿದೆ.

ಲಂಡನ್, ಸಾಯಂಕಾಲ ೬-೪೦.—ಚಕ್ರವರ್ತಿಯವರ ದೇಹಸ್ಥಿತಿ ಅನುಕೂಲವಾಗುತ್ತದೆ. ಅವರಿಗಿದ್ದ ನೋವು ಶಸ್ತ್ರ ಹಾಕಿದ್ದರಿಂದ ತುಂಬಾ ಕಡಿಮೆಯಾಯಿತು.

ಲಂಡನ್, ರಾತ್ರಿ ೧೧ ಗಂಟೆ.—ಅಷ್ಟು ಕಠಿಣವಾದ ಶಸ್ತ್ರಪ್ರಯೋಗ ಮಾಡಿದ ಮೇಲೆ ಅವರ ದೇಹಸ್ಥಿತಿ ಎಷ್ಟು ಚೆನ್ನಾಗಿರಬಹುದೆಂದು ನಿರೀಕ್ಷಿಸಬಹುದೋ ಅಷ್ಟು ಚೆನ್ನಾಗಿದೆ. ಅವರ ಶಕ್ತಿಯು ಕಡಿಮೆಯಾಗಿಲ್ಲ. ನೋವು ಇಳಿದಿದೆ. ಚಕ್ರವರ್ತಿಯವರು ಸ್ವಲ್ಪ ನಿದ್ರೆಯನ್ನೂ ತೆಗೆದುಕೊಂಡರು. ಅಪಾಯವೇನೂ ಇಲ್ಲವೆಂದು ಹೇಳುವದಕ್ಕೆ ಇನ್ನೂ ಕೆಲವು ದಿನ ಕಳೆಯಬೇಕು.

ಲಂಡನ್, ರಾತ್ರಿ ೧೧-೪೦.—ದೊರೆಯವರು ಚೆನ್ನಾಗಿ ನಿದ್ರೆ ಮಾಡಿದರು. ಅವರ ಶಕ್ತಿಯು ಚೆನ್ನಾಗಿದೆ. ಕಳವಳಪಡುವದಕ್ಕೆ ಅವಕಾಶವಾಗಿನ ಕಂಡು ಬರುವದಿಲ್ಲ.

ಜೂ|| ತಾ|| ೨೫ನೆ ಬುಧವಾರ.

ಲಂಡನ್, ಬೆಳಿಗ್ಗೆ ೧೧-೩೦—ಚಕ್ರವರ್ತಿಯವರು ಹೊರಳಾಡುತ್ತಿದ್ದರು. ರಾತ್ರಿ ಮೊದಲು ನೋವಿನಿಂದ ಅವರಿಗೆ ನಿದ್ರೆ ಬರಲಿಲ್ಲ. ಬೆಳಗಿನ ಝಾವ ೧ ಗಂಟೆಗೆ ಸ್ವಲ್ಪ ನಿದ್ದೆ ಹತ್ತಿತು. ದೊರೆಯವರಿಗೆ ನೋವಿನಿಂದ ನಿವೃತ್ತಿಯಾಯಿತು. ಅಪಲಕ್ಷಣ ಸೂಚನೆಗಳೇನೂ ಇಲ್ಲ. ಅವರ ಶರೀರ ಸ್ಥಿತಿಯು ತೃಪ್ತಿಕರವಾಗಿ ಚೆನ್ನಾಗುತ್ತಿದೆ ಎಂದು ಹೇಳಬಹುದು.

ಲಂಡನ್, ಸಾಯಂಕಾಲ ೬ ಗಂಟೆ.—ಚಕ್ರವರ್ತಿಯವರಿಗೆ ಹಗಲು ಅನುಕೂಲವಾಗಿ ಕಳೆಯಿತು. ಅವರ ಶರೀರಶಕ್ತಿಯು ಚೆನ್ನಾಗಿದೆ. ವಿಶೇಷ ಕಳವಳಕ್ಕೆ ಕಾರಣವೇನೂ ಕಾಣುವದಿಲ್ಲ.

ಲಂಡನ್, ರಾತ್ರಿ ೧೧ ಗಂಟೆ.—ದೊರೆಯವರ ದೇಹಸ್ಥಿತಿಯು ತೃಪ್ತಿಕರವಾಗಿದೆ. ಹಗಲಿನಲ್ಲಿ ಸ್ವಲ್ಪ ನಿದ್ರೆಮಾಡಿದರು. ನೋವೇನೂ ವಿಶೇಷವಾಗಿಲ್ಲವೆಂದು ಹೇಳುತ್ತಾರೆ. ಗಲಿಬಿಲಿಯೂ ಉಂಟಾಗಿದೆ. ಗಾಯವು ವಾಸಿಯಾಗುತ್ತಾ ಇದೆ.

ಜೂ|| ತಾ|| ೨೬ ನೆ ಗುರುವಾರ.

ಲಂಡನ್, ಬೆಳಿಗ್ಗೆ ೧೦ ಗಂಟೆ.—ಮೊನ್ನೆಗಿಂತಲೂ ನೆನ್ನೆರಾತ್ರಿ ವಿಶೇಷ ಅನುಕೂಲವಾಗಿತ್ತು. ಚಕ್ರವರ್ತಿಯವರು ಸುಖನಿದ್ರೆ ಮಾಡಿದರು. ಎಲ್ಲಾ ವಿಷಯಗಳಲ್ಲೂ ಅವರ ದೇಹಸ್ಥಿತಿ ಅನುಕೂಲವಾಗಿದೆ. ಗಾಯದ ಸ್ಥಿತಿಯು ತೃಪ್ತಿಕರವಾಗಿದೆ.

ಲಂಡನ್, ರಾತ್ರಿ ೧೧ ಗಂಟೆ.—ಚಕ್ರವರ್ತಿಯವರಿಗೆ ಹಗಲು ಚೆನ್ನಾಗಿ ಕಳೆಯಿತು. ಅವರ ದೇಹದಾರ್ಢ್ಯವು ಚೆನ್ನಾಗಿದೆ. ಹಸಿವು ವಿಶೇಷವಾಗಿ ಕಾಣಿಸಿಕೊಂಡಿದೆ. ಬಹಳ ಜಾಗ್ರತೆಯಿಂದ ಪಥ್ಯ ಕೊಡಬೇಕು. ಗಾಯದಲ್ಲಿ ಸ್ವಲ್ಪ ನೋವು ಉಂಟಾಗಿದೆ.

ಜೂ|| ತಾ|| ೨೭ ನೆ ಶುಕ್ರವಾರ.

ಲಂಡನ್, ಬೆಳಿಗ್ಗೆ ೧೧-೩೦.—ರಾತ್ರಿ ಬಹಳ ಅನುಕೂಲವಾಗಿ ಕಳೆಯಿತು. ಸ್ವಲ್ಪ ಸ್ವಾಭಾವಿಕವಾದ ನಿದ್ರೆಯೂ ಬಂತು. ಆಹಾರದಲ್ಲಿ ಅಭಿರುಚಿ ಉಂಟಾಗುತ್ತಿದೆ. ಗಾಯದ ನೋವು ಕಡಿಮೆಯಾಗಿ ತೃಪ್ತಿಕರವಾಗಿರುವದು. ಅವರ ದೇಹಸ್ಥಿತಿ ವಿಷಯದಲ್ಲಿ ಗಾಬರಿಯು ಕಡಿಮೆಯಾಗಿದೆ.

ಈಚೆಗೆ ಬಂದಿರುವ ತಂತೀವರ್ತಮಾನಗಳನ್ನು ನೋಡಲಾಗಿ ಚಕ್ರವರ್ತಿಯವರ ಶರೀರಸ್ಥಿತಿ ತೃಪ್ತಿಕರವಾಗಿದೆಯೆಂತಲೂ, ಜ್ವರವು ಇಳಿದು ಸಾಧಾರಣವಾಗಿದೆಯೆಂತಲೂ, ಅವರು ಓದುವದಕ್ಕೂ ಮಾತನಾಡುವದಕ್ಕೂ ಶಕ್ಯರಾಗಿರುತ್ತಾರೆಂತಲೂ, ಮಹಾರಾಣಿಯವರನ್ನೂ ಪ್ರಿನ್ಸ್ ಆಫ್ ವೇಲ್ಸ್ ಎಂಬವರನ್ನೂ, ಇತರ ಸ್ನೇಹಿತರನ್ನೂ ನೋಡಿ ಅವರ ಸಂಗಡ ಮಾತನಾಡಿದರೆಂತಲೂ ತಿಳಿದು ಬರುವದು.

ಜೂ|| ತಾ|| ೨೯ ನೆ ಭಾನುವಾರ.

ಮಹಾರಾಜಾ ಚಕ್ರವರ್ತಿಯವರ ಕಾಯಿಲೆಯು ವಾಸಿಯಾಗುತ್ತದೆ. ಅವರು ಆಶ್ಚರ್ಯಕರವಾಗಿ ಬೇಗ ಬೇಗನೆ ಆರೋಗ್ಯ ಹೊಂದುತ್ತಿರುವರು.

ಎಡ್ವರ್ಡ್ ಮಹಾರಾಜರಿಗಾಗಿ ಅರ್ಪಿಸಿದ ದೇವರ ಪ್ರಾರ್ಥನೆಗಳು.

ನಮ್ಮ ಇಂಡಿಯಾ ದೇಶಕ್ಕೆ ಚಕ್ರವರ್ತಿಗಳಾಗಿರುವ ಎಡ್ವರ್ಡ್ ಮಹಾರಾಜರು ಪಟ್ಟಾಭಿಷೇಕವಾಗುವದಕ್ಕಿದ್ದ ಕಾಲಕ್ಕೆ ಸರಿಯಾಗಿ ಪ್ರಮಾದಕರವಾದ ಅಸ್ವಸ್ಥತೆಗೆ ಸಿಕ್ಕಿ ಶುಭಸಮಯಕ್ಕೆ ವಿಘ್ನಬಂದದ್ದನ್ನು ತಿಳಿದು ವಾಚಕರು ವ್ಯಸನಾಕ್ರಾಂತರಾಗಿರುವರು. ಚಕ್ರವರ್ತಿಯವರು ಪುನಃ ಆರೋಗ್ಯವನ್ನು ಪಡೆಯಬೇಕೆಂದು ಬೇಡಿ ಕ್ರೈಸ್ತರೂ ಹಿಂದೂ ಮತಸ್ಥರೂ ಮಹಮ್ಮದೀಯರೂ ತಮ್ಮ ತಮ್ಮ ದೇವಾಲಯಗಳಲ್ಲಿ ಭಗವಂತನಿಗೆ ಪ್ರಾರ್ಥನೆಗಳನ್ನು ಅರ್ಪಿಸುತ್ತಾರೆ. ಈ ಪ್ರಾರ್ಥನೆಗಳಲ್ಲಿ ಕ್ರೈಸ್ತರ ದೇವಾಲಯಗಳಲ್ಲಿ ಉಪಯೋಗವಾದ ಪ್ರಾರ್ಥನೆಗಳನ್ನು ಇಲ್ಲಿ ಬರೆದಿರುತ್ತೇವೆ. ಅವು ಯಾವವೆಂದರೆ:—

“ಸರ್ವಶಕ್ತನಾದ ನಿತ್ಯದೇವರೇ, ಜೀವರಾಶಿಗಳ ಕರ್ತನೇ, ಸಂಕಟ ಪ್ರಾಪ್ತಿಸಿದ ಈ ಕಾಲದಲ್ಲಿ ನಿನ್ನ ಸನ್ನಿಧಾನಕ್ಕೆ ಬಂದಿರುತ್ತೇವೆ. ನೀನು ಸರ್ವಜ್ಞನೂ ಪ್ರೀತಿಯುಳ್ಳವನೂ ಆಗಿರುವದರಿಂದ ನಮ್ಮ ಸಂಕಟಗಳಿಂದಲೂ ಬಾಧೆಯಿಂದಲೂ ಬಿಡಿಸಿ ಕಾಪಾಡುವಂತೆ ನಿನ್ನ ಜನರೆಲ್ಲರಿಗೂ ಕೃಪೆಯನ್ನು ಅನುಗ್ರಹಿಸಬೇಕೆಂದು ನಿನ್ನನ್ನು ಪ್ರಾರ್ಥಿಸುತ್ತೇವೆ. ಗುಣಹೀನರಾದರೂ ಪ್ರೀತಿಪಾತ್ರರೂ ನಿನ್ನ ಸೇವಕರೂ ಆಗಿರುವ ನಮ್ಮ ರಾಜರಿಗೆ ಈ ಅಸ್ವಸ್ಥ ಸ್ಥಿತಿಯಲ್ಲಿ ಸಹಾಯಮಾಡುವಂತೆ ಅನುಗ್ರಹಿಸು. ನಿನ್ನ ಚಿತ್ತವಾದರೆ ಅವರಿಗೆ ರೋಗನಿವಾರಣವನ್ನು, ಆರೋಗ್ಯವನ್ನು, ಬಲವನ್ನು ದಯಪಾಲಿಸಿ ರಾಜಭಕ್ತರಾದ ಪ್ರಜೆಗಳ ಸಂತೋಷಕ್ಕಾಗಿ ಅವರ ಪ್ರಾಣವನ್ನು ಇನ್ನೂ ಬಹಳ ವರ್ಷಗಳವರೆಗೆ ಕಾಪಾಡು. ನಿನ್ನ ಮಹಿಮೆಗಾಗಿ ನಮ್ಮ ಪ್ರಭುವಾದ ಯೇಸು ಕ್ರಿಸ್ತನ ಮೂಲಕ ಅನುಗ್ರಹಿಸು.”

ಮತ್ತೊಂದು ಪ್ರಾರ್ಥನೆ ಯಾವದೆಂದರೆ—

“ಸರ್ವಶಕ್ತನೂ ಅತ್ಯಂತ ಕರುಣಾವೃಕ್ಷವನೂ ಆದ ನಮ್ಮ ರಕ್ಷಕನಾದ ದೇವರೇ, ರೋಗದಿಂದ ಚಿಂತಾಕ್ರಾಂತನಾಗಿರುವ ಈ ನಿನ್ನ ಸೇವಕನಿಗೆ ನಿನ್ನ ಸ್ವಭಾವಸಿದ್ಧವಾದ ಕೃಪೆಯನ್ನು ತೋರಿಸು. ಇತನಿಗೆ ನೀನು ಕಳುಹಿಸಿಕೊಟ್ಟಿರುವ ಪೀಡೆಯಿಂದೊದಗಿದ ಪರಿತಾಪದ ಈ ಶಿಕ್ಷೆಯನ್ನು ಪರಮೌಷಧವಾಗಿ ಪ್ರತಿಷ್ಠಿಸು. ತಾನು ಬಲಹೀನನೆಂಬುವ ತಿಳುವಳಿಕೆಯು ನಿನ್ನಲ್ಲಿರುವ ತನ್ನ ನಂಬಿಕೆಯನ್ನು ಬಲಪಡಿಸುವಂತೆಯೂ ಕಷ್ಟವನ್ನು ಸಹಿಸುವ ಸಹನೆಯನ್ನೂ ಸ್ಥಿರಪಡಿಸುವಂತೆಯೂ ಮಾಡು. ಇತನಿಗೆ ಪುನಃ ಸಂಪೂರ್ಣ ಕ್ಷೇಮವನ್ನು ಅನುಗ್ರಹಿಸುವದು ನಿನ್ನ ಪವಿತ್ರ ಚಿತ್ತಕ್ಕೆ ಯುಕ್ತವಾಗಿ ತೋರಿದರೆ, ಇತನು ಜೀವಿಸುವ ಕಾಲವೆಲ್ಲವೂ ನಿನಗೆ ಭಯಪಡುತ್ತಾ ನಿನ್ನ ಮಹಿಮೆಗಾಗಿ ಬದುಕುವಂತೆ ಪ್ರೇರಿಸು. ಇದು ನಿನ್ನ ಚಿತ್ತಕ್ಕೆ ಯುಕ್ತವಾಗಿ ತೋರದಿದ್ದರೆ ಇತನು ತನ್ನ ಈ ಸಂಕಟಕರವಾದ ಲೋಕ ಯಾತ್ರೆಯನ್ನು ಪೂರೈಸಿದಾಗ ನಿನ್ನ ಸಂಗಡ ನಿತ್ಯ ಜೀವಿತನಾಗಿ ವಾಸಿಸುವದಕ್ಕನುಕೂಲಿಸ

ತಂದೆ ನೀನು ಕಳುಹಿಸಿಕೊಟ್ಟಿರುವ ಈ ಅಪ್ಪಣೆಯನ್ನು ಕಾಪಾಡಿಕೊಳ್ಳುವ ಹಾಗೆ ನಮ್ಮ ಪ್ರಭುವಾದ ಯೇಸು ಕ್ರೀಸ್ತನ ಮೂಲಕ ಅನುಗ್ರಹಿಸು."

ಈ ಪ್ರಾರ್ಥನೆಗಳೆರಡನ್ನು ನಾವು ಓದುವಲ್ಲಿ ಇವುಗಳೊಳಗೆ ಅಡಗಿರುವ ಅತಿಮುಖ್ಯವಾದ ಒಂದು ಭಾವವು ನಮ್ಮ ಮನಸ್ಸಿಗೆ ಹೊಳೆಯದೆ ಇರಲಾರದು. ಅದು ಯಾವದೆಂದರೆ- ದೇವರು ಅಪರಿಮಿತವಾದ ಜ್ಞಾನದಿಂದಲೂ ಪ್ರೀತಿಯಿಂದಲೂ ಕೂಡಿದ ನಮ್ಮ ತಂದೆಯಾಗಿರುತ್ತಾನೆ ಎಂಬುವದೇ. ಹೀಗಿರುವದರಿಂದ ಎರಡು ಬುದ್ಧಿ ಮಾತುಗಳನ್ನು ಈ ಪ್ರಾರ್ಥನೆಗಳ ಮೂಲಕ ಗ್ರಹಿಸಬಹುದು. ಯಾವವೆಂದರೆ—

೧. ನಾವು ಆ ಭಗವಂತನನ್ನು ಪ್ರಾರ್ಥಿಸುವಾಗಲೆಲ್ಲಾ ನಮ್ಮ ಮನಸ್ಸಿನ ಇಚ್ಛೆಗಳನ್ನೆಲ್ಲಾ ತಿಳಿಯಪಡಿಸಿದ ತರುವಾಯ ಯೇಸು ಸ್ವಾಮಿಯು ಹೇಳಿಕೊಟ್ಟಿರುವದನ್ನು ಅನುಸರಿಸಿ—"ನನ್ನ ಚಿತ್ತದಂತಲ್ಲ, ನಿನ್ನ ಚಿತ್ತದಂತೆಯೇ ಆಗಲಿ" ಎಂದು ಹೇಳತಕ್ಕದ್ದು.

ಎಡ್ವರ್ಡ್ ಮಹಾರಾಜರು ಸ್ವಸ್ಥವಾಗಬೇಕೆಂಬದಾಗಿ ಅವರ ಭಕ್ತಿವಂತರಾದ ಪ್ರಜೆಗಳು ಎಷ್ಟು ಅಪೇಕ್ಷಿಸಿದಾಗ್ಯೂ ಅವರು ನಿಜವಾಗಿ ದೇವಭಕ್ತರಾಗಿದ್ದರೆ ದೇವರ ಚಿತ್ತಕ್ಕೆ ಅವರನ್ನು ಒಪ್ಪಿಸಿಕೊಡಬೇಕಾದದ್ದು ಅವಶ್ಯವಾಗಿದೆ. ಹೀಗೆ ದೇವರ ವಶಕ್ಕೆ ಒಪ್ಪಿಸಿಕೊಡುವಂಥಾದ್ದಕ್ಕೆ "ನಮ್ಮ ಕಣ್ಣಿಯಲ್ಲಿ ಒದಗಿದ ದುರದೃಷ್ಟಕ್ಕೆ ಮಾಡತಕ್ಕದ್ದೇನಿದೆ" ಎಂದು ಕಷ್ಟಕಾಲದಲ್ಲಿ ಅಲಕ್ಷ್ಯವನ್ನು ತಾಳುವಂಥಾದ್ದಕ್ಕೂ ಬಹಳ ವ್ಯತ್ಯಾಸವಿದೆ. ದೇವರ ವಶಕ್ಕೊಪ್ಪಿಸುವದೆಂಥಾದ್ದೆಂಬುವದನ್ನು ತಂದೆ ಮಕ್ಕಳ ದೃಷ್ಟಾಂತದಿಂದ ಗ್ರಹಿಸಬಹುದು. ತಂದೆಯಾದವನು ಮಗನಿಗೆ ಒಂದು ಅಪ್ಪಣೆಯನ್ನು ಕೊಡುತ್ತಾನೆ. ಈ ಅಪ್ಪಣೆಯು ಮಗನ ಬುದ್ಧಿಗೆ ವಿರೋಧವಾಗಿ ತೋರುತ್ತದೆ. ಆ ಅಪ್ಪಣೆಯು ಪ್ರಕಾರ ನಡೆಯುವದಕ್ಕೆ ಪ್ರಯತ್ನಿಸುವದು ಅವನಿಗೆ ಮನೋವ್ಯಥೆಯಾಗುವದು. ಆದರೆ ಮಗನು ಯೋಗ್ಯನಾಗಿದ್ದರೆ ತಂದೆ ಹೇಳುವದು ಒಳ್ಳೇದೇ. ಆತನ ಅಪ್ಪಣೆಯ ಪ್ರಕಾರ ಮನಃಪೂರ್ವಕವಾಗಿ ಸಂತೋಷದಿಂದ ನಡೆಯುವದಕ್ಕೆ ಒಪ್ಪುತ್ತಾನೆ. ಈ ಮೇರೆಗೆ ನಡೆಯುವದೇ ಭಗವಂತನಿಗೆ ಮೆಚ್ಚಿಕೆಯಾದದ್ದು.

೨. ನಮಗೆ ಒದಗುವ ರೋಗವೂ ಕಷ್ಟವೂ ಸರ್ವಜ್ಞನೂ ಪ್ರೀತಿಯುಳ್ಳವನೂ ಆಗಿರುವ ತಂದೆಯ ಶಿಕ್ಷೆಯೇ ಎಂದು ಭಾವಿಸ ಬೇಕು. ಎಡ್ವರ್ಡ್ ಮಹಾರಾಜರು ಆಳುವ ರಾಜ್ಯದಷ್ಟು ವಿಸ್ತಾರವಾದದ್ದು ಇನ್ನು ಯಾವುದೂ ಭೂಲೋಕದಲ್ಲಿ ಎಂದೂ ಇದ್ದದ್ದಿಲ್ಲ. ಇಂಥ ಚಕ್ರವರ್ತಿಗಳಾದರೂ ಎಡ್ವರ್ಡರು ಇತರರಂತೆ ಮನುಷ್ಯರೇ ಹೊರತು ಬೇರೆಯಲ್ಲ. ಅವರೂ ಮೃತ್ಯುವ ಮನುಷ್ಯರಂತೆ ಎಷ್ಟೋ ರೀತಿಯಲ್ಲಿ ಪವಿತ್ರನಾದ ಭಗವಂತನಿಂದ ಶಾಸ್ತ್ರವನ್ನು ಹೊಂದುವದಕ್ಕೆ ಯೋಗ್ಯರಾಗಿರುತ್ತಾರೆ. ಕೇವಲ ಸಾಧಾರಣವಾಗಿ [illegible] ನಮಗೆ ರೋಗಾದಿಗಳು ಸಂಭವಿಸಿದರೆ ನಾವು ಮನಸ್ಸಿನಲ್ಲಿ ನಮ್ಮ ಕಣ್ಣು ತೆರೆದು ನಮ್ಮ ತಪ್ಪುಗಳೇನಾಗಿರುವುದನ್ನು ಮತ್ತು ಪರಿಪೂರ್ಣವಾಗಿ ತಿಳುಕೊಂಡು, ಅವುಗಳನ್ನು ಬಿಟ್ಟು ಬಿಡುವದರಲ್ಲಿ ಆಸಕ್ತರಾಗಿ ಭಗವಂತನಿಂದ ಕ್ಷಮೆಯನ್ನು [illegible] ವಿನಯದಿಂದ ಬೇಡಿಕೊಳ್ಳ [illegible].

ವಿಚಿತ್ರ ಬೋಧನಾಕ್ರಮ.

[illegible] ಮಗನ [illegible] ಹೋಗುತ್ತಿ [illegible] ಸಕ್ಕಿದ [illegible] ನ [illegible], ತಂದೆ [illegible] ಹೀಗೆ [illegible] —

ತಂದೆ.—ಎಲ್ಲಿ ನಿನ್ನ ಉಪಾಧ್ಯಾಯರು! ಯಾವ ಸ್ಥಳದಲ್ಲಿ ಕಲಿಸುತ್ತಿರುವರು?

ಮಗ.—ಕಲಿಸು ಇನ್ನು ಬರುವ ವೇಳೆಯಾಗಿಲ್ಲ. ಅರ್ಥದ ಪುಸ್ತಕ [illegible] ಪಾಠಗಳನ್ನು ಕಲಿಯುತ್ತಿರುವೆನು.

ತಂ.—(ಪುಸ್ತಕ [illegible] ನೋಡಿ) ಇದೇನು ಎಲ್ಲಾ ಬಾಲಕರೂ [illegible] ಹೇಳುತ್ತಿರುವರು?

ಮೂರನೇ [illegible] ಎಂಟನೇ ವರ್ಷದ ಹುಡುಗ.—ನಮ್ಮ ಉಪಾಧ್ಯಾಯರು [illegible] ಕೇಳುವರು. ಚರಿತ್ರೆ, ಭೂಗೋಳ, ಆರೋಗ್ಯ ಎಂಬ [illegible] ಗಳನ್ನು [illegible] ಮಾಡುತ್ತಿರುವರು.

[ಇಷ್ಟರಲ್ಲಿಯೇ ಉಪಾಧ್ಯಾಯರು ಕಕ್ಷದಲ್ಲಿ ಒಂದು ಗಂಟನ್ನು [illegible] ತರಗತಿಯನ್ನು ಪ್ರವೇಶಿಸಿ]

ಉಪಾಧ್ಯಾಯರು.—ಹಿಂದೀ, ಕನ್ನಡ, ಚಿತ್ರ, ಆದಿ [illegible].

ಸ್ವಾಮಿಯವರು.—ನಮ್ಮ ಬಾಲಕನ ಪಾಠ್ಯದಂತೆ ಏನಾದರೂ ತೋರಿಸೆಂದು ಬಂದೆ. ಬಹಳ ಸಂತೋಷವಾಯಿತು. ಎಷ್ಟಕ್ಕೆ ಧರ್ಮವು ಹೇಳಿಕೊಡಲಾಗಿತ್ತು?

ಉ. ಹೀಗೇ ಇರುತ್ತದಲ್ಲಾ, ಗೃಹಕೃತ್ಯ. ಸರ್ಕಾರಿ ಕೆಲಸಕ್ಕೇನು ಬೇಕೋ ಅದು ಬರುತ್ತದೆ. ನಮ್ಮ ಸಾಹುಕಾರ್ [illegible] ಕುಟುಂಬರಕ್ಷಣೆ ಅವಶ್ಯವಾಗಿಲ್ಲ. ಅಕ್ಷರದ ಕಸರತ್ತು ಮಾತ್ರವನ್ನು ಕಲಿಸಿ ಬಿಡು.

ಸ್ವಾ. ಎಲ್ಲಾ ಪಾಠಗಳನ್ನು ಕಂಠ ಪಾಠಮಾಡಿಸುತ್ತೀರಲ್ಲಾ. ಹೀಗಾದರೆ ಬಾಲಕರಿಗೆ ಗ್ರಹಣಶಕ್ತಿ, ಯೋಚನಾಶಕ್ತಿ, ವಿಮರ್ಶನ ಜ್ಞಾನ ಮುಂತಾದವುಗಳು ವೃದ್ಧಿ ಹೊಂದುವದು ಹೇಗೆ? ಭೂಮಿತಿ ದ ಆಕಾರವು ಪಠನವಾಗಿ ಬೇಕಾದಂತೆ ಬೋಧಿಸಿದ ಪಾಠವು ಹೃದಯಂಗಮವಾಗದೇಕೆ?

ಉ. ಹಣ, ಲೇಖನ ಇವೆರಡು ಬಂದರೆ ಸಾಕು. ಚರಿತ್ರೆಯಂತೆ, ಭೂಗೋಳವಂತೆ, ಆರೋಗ್ಯವಂತೆ. ಈ ಆರೋಗ್ಯ ಪುಸ್ತಕದಂತೆ ನಡೆದರೆ ಆನಾರೋಗ್ಯವೇ ಸಿದ್ಧ. ಉಭಯ ಪಾರ್ಶ್ವಗಳಲ್ಲಿಯ ಕಿಟಿಕಿಗಳನ್ನು ತೆರೆದಿರು ಎಂದು ಹೇಳುತ್ತದೆ. ಹೀಗೆ ಮಾಡಿದರೆ ಶೀತಜ್ವರ ಬೆನ್ನಟ್ಟಿಯೇ ಇರುತ್ತದೆ. ನೋಡಿ ಈ ಪಾಠಗಳೆಲ್ಲಾ ಬಹು ಕಠಿಣವಾದವುಗಳು. ಕಂಠ ಪಾಠ ಮಾಡದಿದ್ದರೆ ಸ್ಮೃತಿಯಲ್ಲಿರುವದು ಹೇಗೆ? ಮೇಲಿನವರು ಈ ಸಂವತ್ಸರ ಪರೀಕ್ಷೆಗೆ ಹೋಗುವವರು. ದಿನಕ್ಕೆ ೧೪ ಗಂಟೆಗಳಾದರೂ ಪಠನ ಮಾಡದಿದ್ದರೆ ಹೇಗೆ?

ಸ್ವಾ.—೧೬ ಗಂಟೆ! ನಿದ್ರೆಯೇ ಎಂಟು ಗಂಟೆಗಳಾಯಿತಲ್ಲಾ! ಉಳಿದ ಕೆಲಸಗಳಿಗೆ ವೇಳೆಯೆಲ್ಲಿ? ಊಟ ಬೇಡವೆ? ಆಟ ಬೇಡವೆ?

ಉ.—ಚೆನ್ನಾಗಿತ್ತು. ೮ ಗಂಟೆನಿದ್ರೆ ಮಾಡಿದರೆ! ೨೪ ಗಂಟೆಗಳಲ್ಲಿ ೪ ಗಂಟೆ ನಿದ್ರೆ ಸಾಕು. ೪ ಗಂಟೆ ಬರವಣಿಗೆ. ಮಿಕ್ಕ ವೇಳೆಯೆಲ್ಲಾ ಪುರಸೊತ್ತೆ.

ಸ್ವಾ.—ಹಾಗಾದರೆ ಬಾಲಕರು ಉಪವಾಸವೇ ಇರಬೇಕಾಯಿತು. ಅಂಗಸಾಧನೆಗೆ ಹೊತ್ತೆಲ್ಲಿ?

ಉ.—ವ್ಯಾಯಾಮವು ಸ್ಕೂಲಿನಲ್ಲಿ ಸದಾ. ಪುಸ್ತಕವು ಬೋಧನ ವೇಳೆಯಲ್ಲಿ ಹಸ್ತದಲ್ಲಿ ನಿದ್ರೆ ಮಾಡುವಾಗ ಮಸ್ತಕದ ಕೆಳಗೆ ಇರುವದು ವಿದ್ಯಾರ್ಥಿಯ ಕರ್ತವ್ಯ! ನಾವು ಓದುತ್ತಿದ್ದಾಗ ತಲೆಗೆ ಜುಟ್ಟು ಕಟ್ಟಿ ಕೊಂಡು ನಿದ್ರೆ ಹೋಗುತ್ತಿದ್ದೆವು. ಆಧುನಿಕರ ವಿದ್ಯೆ ಬಹು ಸೂಕ್ಷ್ಮ. ಅಗಸರು ನಮ್ಮಂತೆ ಕೆಲಸ ಮಾಡುತ್ತಾರೆಯೇ! ನೋಡಿ, ಅತ್ಯಂತ ಶ್ರಮದಿಂದ ಅನೇಕ ಸಂಗ್ರಹಮಾಡಿ ಈ ತರಗತಿಯ ಟಿಕಟ್ಟಿಗೆ ಕೀಕನ್ನು ಮಾಡಿರುವೆನು.

ಚಾಲಕತಾತರಸಂಗ = ಪಿಯಾರ ಅಶ್ವಾಯವಲ್ಲಿ, ಕೂಡಿ = ಏಳಿಕವಾಗಿ, ಆದಲು ಬೇಡ = ಬೇಲಿಸ ಮಾಡಬೇಡ...... ಬೆಕ್ಕು = ಮಾರ್ಜಾಲ, ನಾಯಿ = ಶುನಕ, ಬಾಗಿಲು = ಕವಾಟ.

ಸ್ವಾ.—ಇದೇನು! ಪದಗಳಿಗಿಂತಲೂ ಅರ್ಥವೇ ಕಠಿಣವಾಗಿದೆಯಲ್ಲ?

ಉ. ಹಾಗಿಲ್ಲದಿದ್ದರೆ ಶಬ್ದಮಾಧುರ್ಯ ಹೇಗುಂಟಾಗುವದು? ಈ ನಮೂನೆ ಸುಲಭ ಶೈಲಿಯಲ್ಲಿ ಬರದರೆ ಭಾಷಾಪರಿಚಯ ಎಂದಿಗುಂಟಾಗುವದು?

ಇಷ್ಟು ಹೊತ್ತಿಗೆ ಶಾಲಾ ಗಂಟೆ ನಾಗಲು ಸ್ವಾಮಿಯವರು ಉಪಾಧ್ಯಾಯರಿಗೆ ನಮಸ್ಕಾರಮಾಡಿ ತಮ್ಮ ಮಗನನ್ನು ಬೇರೊಂದು ಗ್ರಾಮದಲ್ಲಿ ಕಲಿಸ ಬೇಕೆಂದು ಯೋಚಿಸುತ್ತಾ, ಹೊರಟು ಹೋದರು.

ರಾಜಧಾನಿಯ ಮ್ಯುನಿಸಿಪಲ್ ವಿಷಯಂಗ್.

ಕಳೆದ [illegible] ರಾಜಧಾನಿಯ ಮ್ಯುನಿಸಿಪಲ್ [illegible] ತಿಂಗಳು ಕಟ್ಟಿ [illegible] ಮರಣ ಮುಂತಾದ ಲೆಕ್ಕಗಳು [illegible]. ಆ ತಿಂಗಳಲ್ಲಿ ಮ್ಯುನಿಸಿಪಾಲಿಟಿಗೆ ರೂ. ೯,೩೬೨—೧೩—೩ [illegible] ಆಯಿತು. ರೂ. ೮,೧೫೧—೧೯—೮ ವೆಚ್ಚ [illegible]. ಜನನ ೧೨೫, ಮರಣ ೩೧೨. ಪ್ಲೇಗ್ ೨೪, ಕಾಲರಾ ೩, [illegible].

[illegible] ೧,೬೦೦ [illegible] ಸ್ಟ್ರೀಟ್ [illegible] — [illegible] ಸಭೆಯಲ್ಲಿ [illegible].

[illegible] ರಸ್ತೆಗಳ [illegible] ತಿಂಗಳು [illegible] ಎಂದು [illegible].

ರಾಜಧಾನಿಯ ಮುಖ್ಯ [illegible] ಮ್ಯುನಿಸಿಪಾಲಿಟಿ [illegible] ಬೇಕೆಂದು [illegible] ಅವರ ಅಭಿಪ್ರಾಯ [illegible] ಮಾಡಿದರು.

[illegible] ಮ್ಯುನಿಸಿಪಾಲಿಟಿ [illegible] ಪಲ್ ಫಂಡಿನಿಂದ [illegible] ಪ್ರೆಸಿಡೆಂಟರು— [illegible] ಮ್ಯುನಿಸಿಪಲ್ [illegible] ವರು ರಾಜಧಾನಿಗೆ ಬರುವದರಿಂದಲೂ, ಮಹಾರಾಜರವರ ಪಟ್ಟಾಭಿಷೇಕದ ಉತ್ಸವಗಳ ಗಲಾಟೆ ಆರಂಭವಾಗುವದರಿಂದಲೂ ಮಿ ಅಪ್ಪಣ್ಣರಾಯರನ್ನು ನೇಮಿಸಿಕೊಳ್ಳುವದು ಅವಶ್ಯವೆಂದಾಗಿ ಹೇಳಿದರು. ಆದರೆ ಕೆಲವು ಮೆಂಬರುಗಳು—ಮ್ಯುನಿಸಿಪಾಲಿಟಿಯಲ್ಲಿ ಹಣವಿದೆಯೇ? ಈಗಿರುವ ಸಿಬ್ಬಂದಿಯಿಂದಲೇ ಆವಶ್ಯಕವಾದ ಕೆಲಸವನ್ನು ಚೆನ್ನಾಗಿ ಮಾಡಿಸಿಕೊಳ್ಳುವದಕ್ಕಾಗುವದಿಲ್ಲವೆ? ಎಂದು ಕೇಳಿದರು. ಕಡೆಗೆ ಬಹುಮತ ಒಪ್ಪಿದ್ದರಿಂದ ಅವರನ್ನು ನೇಮಿಸಿಕೊಳ್ಳಬೇಕೆಂದು ತೀರ್ಮಾನವಾಯಿತು.

ರಾಜಧಾನಿಯ ರೈಲ್ವೆ ಸ್ಟೇಷನ್ ಕಂಪೌಂಡಿಗೆ ದಕ್ಷಿಣ ಭಾಗದಲ್ಲಿ ರಸ್ತೆಯನ್ನು ಸರಿಮಾಡುವದಕ್ಕೆ ೭೧೪ ರೂ. ಬೇಕಾಗಿದೆ ಎಂದೂ [illegible] ಮೆಂಬರುಗಳು [illegible] ಈ ಹಣವನ್ನು ಕೊಡಬಹುದೆಂದು [illegible] ನವಾಗಿದೆ.

ಬಳೇಪೇಟೆ [illegible] ಗೆ [illegible] ಗ್ರಾಂಟು [illegible] ವರು ಒಂದು ಕಾನೂನ್ [illegible] ಇದರಂತೆ [illegible] ಬಹುದೆಂದು ಮೆಂಬರುಗಳು ಒಪ್ಪಿಕೊಂಡರು.

ಚೆನ್ನಪ್ಪರಾಯನ ಕಟ್ಟೆ ಯೊಳಿಯನ್ನು ಕತ್ತರಿಸಿ [illegible] ೨,೫೦೦ ರೂಪಾಯಿಯನ್ನು ಸರ್ಕಾರದವರು ಮ್ಯುನಿಸಿಪಾಲಿಟಿಗೆ [illegible] ೪ ರಂತೆ ಬಡ್ಡಿ ಗೊತ್ತುಮಾಡಿ ಸಾಲ ಕೊಟ್ಟಿದ್ದಾರೆ. ಈ ಹಣದಿಂದ ಮ್ಯುನಿಸಿಪಾಲಿಟಿಯವರು ಆ ಕೆಲಸವನ್ನು ಮಾಡಿಸುತ್ತಾ ಇದ್ದಾರೆ.

ಮುಂದಿನ ಮಾರ್ಕೆಟ್ಟಿನಲ್ಲಿ ಕಾಲಿಬ್ [illegible] ಮಾಡುವದಕ್ಕೆ ೬೯೬ ರೂ. ಸ್ಯಾಂಕ್ಷನ್ ಮಾಡಿದರು, ಈ ಕಾಮಗಾರಿ [illegible] ನಡೆಯುವಂತೆ ಮ್ಯುನಿಸಿಪಾಲಿಟಿಯವರು [illegible] ನೋಡಿಕೊಳ್ಳಬೇಕೆಂದು ಮೆಂಬರುಗಳು ವೈಸ್ ಪ್ರೆಸಿಡೆಂಟರಿಗೆ ತಿಳಿಸಿದರು.

[illegible] ಮ್ಯುನಿಸಿಪಾಲಿಟಿಯವರು [illegible] ಅಭಿಪ್ರಾಯ [illegible] ವೈಸ್ ಪ್ರೆಸಿಡೆಂಟರು [illegible] ೧೫-೨೦ ರೂ.

ಹಾಸ್ಯೋಕ್ತಿ ವರ್ತಮಾನಗಳು.

ಕ್ರೋನ್ಸ್‌ಟ್ಯಾಟ್.—ಜೂನ್ ೧೬ ನೇ [illegible] [illegible]

ಸಾಧನಾಂಶಗಳನ್ನು ಚೆನ್ನಾಗಿ ಮಾಡಿದ್ದನು. ಈ ಊರಿನ ಪೋಲೀಸ್ ಇನ್ಸ್‌ಪೆಕ್ಟರ್ ಗೋಪಾಲಯ್ಯಂಗಾರ್ ಎಂಬಾತನು ಬಹು ಸಾಹಸದಿಂದ ಪತ್ತೆ ಮಾಡಿದ್ದರಿಂದ ವಿಚಾರಣೆಯಾಗಿ ಅಪರಾಧಿಗೆ ೧೮ ತಿಂಗಳು ಸಜಾ ವಿಧಿಸಿದ್ದಾರೆ. ಇವನು ಮೊದಲು ಮೈಸೂರಿನಲ್ಲಿ ಆತನನ್ನು ಕದ್ದ ಸಜಾ ಅನುಭವಿಸಿದ್ದನಂತೆ. ಎರಡನೇ ಸಾರಿ ಕೋರ್ಟಿನಲ್ಲಿ ಕದ್ದ ಆಪಾದನೆ ತಪ್ಪಿ ಹೋಗಿದ್ದನಂತೆ.—ಈ ಊರಿನ ಆಸ್ಪತ್ರೆಯು ಚೆನ್ನಾಗಿರುವ ಕೆಲಸಗಳನ್ನು ಕೊಡುತ್ತಿಲ್ಲವೆಂದೂ, ಮುಂದಿನಂತಿರುವ ಈ ಸ್ಥಳದ ಸಹಾಯಕರು ಬರುವಂಥಾ ರೋಗಿಗಳನ್ನು ಕೊಡುತ್ತಿರುವರೆಂದೂ, ಇಂಥಾ ದೊಡ್ಡ ಸ್ಥಳಕ್ಕೆ ಒಬ್ಬ ಡಾಕ್ಟರಿಗಿಂತಲೂ ಕಡಿಮೆ ಯಾಗಿ ಕೆಲಸ ನಡೆಯದಿಲ್ಲವೆಂದೂ, ರೋಗಿಗಳಿಗೆ ಸ್ವಲ್ಪ ಸುಮಾರಾದದ್ದನ್ನು ಕೊಡುತ್ತಿದ್ದಾರೆ, ಆಸ್ಪತ್ರೆಗೆ ಬರುವ ರೋಗಿಗಳಿಗೆ ತಪ್ಪದೆ ಕೊಡುವುದಿಲ್ಲವೆಂದೂ ಜನರು ಹೇಳಿಕೊಳ್ಳುತ್ತಾರೆ. ಆದ್ದರಿಂದ ಸರಕಾರದ ಅಧಿಕಾರಿಗಳು ಬೆಂಗಳೂರು ಮೈಸೂರು ಮುಂತಾದ ದೊಡ್ಡ ಸ್ಥಳಗಳಲ್ಲಿ ವಿಚಾರಿಸುವ ಪ್ರಕಾರ ಇಲ್ಲಿಯೂ ಸಹ ವಿಚಾರಿಸುವಪಕ್ಷದಲ್ಲಿ ಜನಗಳಿಗೆ ಬಹಳ ಕ್ಷೇಮವಾಗುತ್ತದೆಂದು ಕಾಣುತ್ತೆ.

ಬೆಂಗಳೂರು.—ಆಜೇ ವಾರವೆಲ್ಲಾ ಇಲ್ಲಿನ ನಯ್ಯ ಕೆಸ ಟೀಮ್ ವಿನವರಿಗೂ ಬೆಂಗಳೂರಿನ ಯೂನಿಯನಿನವರಿಗೂ ಫುಟ್ಬಾಲ್ ಮ್ಯಾಚ್ ಬಹಳ ಚಮತ್ಕಾರದಿಂದ ನಡೆಯುತ್ತಲೇ ಇದ್ದು, ಮೂರು ದಿನಗಳ ಪರಿಯಂತ ಯಾವ ಕಡೆಯೂ ಗೋಲ್ ಆಗಲಿಲ್ಲ. ಕಳೆದ ಸೋಮವಾರ ಸಾಯಂಕಾಲ ಸೆಂಟ್ರಲ್ ಕಾಲೇಜಿನ ಮೈದಾನಿನಲ್ಲಿ ಸಾಯಂಕಾಲ ೫|| ಗಂಟೆ ಸುಮಾರಿಗೆ ಸರಿಯಾಗಿ ಮ್ಯಾಚು ನಡೆಯಿತು. ಆದಿನ ಮ್ಯಾಚು ಹಿಂದಿನ ಎಲ್ಲಾ ಮ್ಯಾಚುಗಳಿಗಿಂತಲೂ ಹೆಚ್ಚು ವಿನೋದಕರವಾಗಿದ್ದಿತು. ಮೈದಾನಿನಲ್ಲಿ ಅನೇಕ ಬೆಂಗಳೂರಿನ ದೊಡ್ಡ ಮನುಷ್ಯರುಗಳೂ, ಅಧಿಕಾರಿಗಳೂ, ಅನೇಕ ಯೂರೋಪಿಯನರೂ, ಲೇಡಿಗಳೂ, ದರ್ಶಕರಾಗಿ ಬಂದಿದ್ದರು. ಗೆದ್ದವರಿಗೆ ಬಹುಮಾನ ಕೊಡಲು ಬೆಳೆಯುಳ್ಳ ಬಟ್ಟಲನ್ನು ಇಟ್ಟಿದ್ದರು. ಸೋಮವಾರದ ಮ್ಯಾಚು ನೋಡತಕ್ಕದ್ದಾಗಿದ್ದಿತು; ನೋಟಕರಿಗೆ ಬಹಳ ಉಲ್ಲಾಸವನ್ನುಂಟು ಮಾಡಿತು. ಯೂನಿಯನ್ನಿನವರ ಕಡೆ ಸೆಂಟ್ರಲ್ ಕಾಲೇಜಿನ ಹಲವು ವಿದ್ಯಾರ್ಥಿಗಳೂ ಹಾಗೂ ಊರಿನ ಹಲವರು ಅಧಿಕಾರಿಗಳೂ ಸೇರಿದ್ದರು. ಆದರೆ ಮ|| ಗಳಾದ ಎಂ. ಎ. ಶ್ರೀನಿವಾಸಚೆಟ್ಟಿ ಮತ್ತು ಸುಬ್ಬರಾಯ ಇವರುಗಳು ಆಡಿದಷ್ಟು ಚಮತ್ಕಾರದಿಂದ ಆರೂ ಆಡಿದಂತೆ ಕಂಡು ಬರಲಿಲ್ಲ. ಮ್ಯಾಚಿನ ಫಲಿತಾಂಶವು ಅಂದೇ ತಿಳಿದುಹೋಯಿತು. ನಯ್ಯ ಕೆಸ ಟೀಮಿನವರು ಒಂದು ಗೋಲನ್ನಾದರೂ ಮಾಡಲಿಲ್ಲ, ಯೂನಿಯನಿನವರಾದರೋ ಬಹು ವಿಜೃಂಭಣೆಯಿಂದ ಎರಡು ಗೋಲುಗಳನ್ನು ಮಾಡಿ, ಬೆಳೆಯುಳ್ಳ ಬಹುಮಾನಕ್ಕೆ ಅರ್ಹರಾದರು. ನಯ್ಯ ಕೆಸನವರು ಗೆಲ್ಲಲಿಲ್ಲದಿದ್ದರೂ, ಅನೇಕ ಹೆಚ್ಚು ಉತ್ಸಾಹ ವಾಗುವಂತೆ ತಮ್ಮಲ್ಲಿ ಹರ್ಷ ಸೂಚಕವಾದ ಚೀರುಗಳನ್ನು ಮಾಡಿದ್ದನ್ನು ನೋಡಿ ಹಲವು ದೊಡ್ಡ ಮನುಷ್ಯರು ಮೆಚ್ಚಲಿಲ್ಲ. ಯೂನಿಯನಿನವರೆಲ್ಲಾ ಸೇರಿ ಮ|| ಚೆಟ್ಟಿಯವರಿಗೆ ಒಂದು ಬಹುಮಾನವನ್ನು ಕೊಡಬೇಕೆಂದು ನಿಶ್ಚಯಿಸಿಕೊಂಡು ಒಂದು ಗೋಲ್ಡ್ ಮೆಡಲನ್ನು ಕೊಟ್ಟರು.

ಚನ್ನಪಟ್ಟಣ.—ಮಳೆಯಿಲ್ಲದೆ ಬಹಳ ಸೆಕೆಯಾಗಿದೆ. ಒಂದು ವಾರದ ಹಿಂದೆ ಈ ಊರಿಗೆ ಎರಡು ಮೈಲಿ ಸಮೀಪದಲ್ಲಿ ಕೆಲವು ಬಚ್ಚಲುಗಳಿಗೂ ಒಬ್ಬ ಬ್ರಾಹ್ಮಣನಿಗೂ ಕಲಹವುಂಟಾಗಿ ಏಟುಗಳು ಬಿದ್ದವೆಂದು ವರ್ತಮಾನವಿದೆ. ಇಂಥಾ ಸಂದರ್ಭಗಳಲ್ಲಿ ಮಾನ್ಯತಸ್ಥರಿಗೆ ಶಿಕ್ಷೆಯಾದರೆ ಜನಗಳಿಗೆ ಸಮಾಧಾನ. ಕಾಲೂರಿಕು ಈ ಸ್ಥಳಕ್ಕೆ ಹಿಂದು ಹತ್ತು ವರುಷಗಳಿಂದಲೂ ಇದರ ಜ್ಞಾನ ಸಹಾಯವಾಗಿ ಈ ಊರಿನ ದೊಡ್ಡ ಮನುಷ್ಯರೆಲ್ಲಾ ಸೇರಿ ವಿದ್ಯಾರ್ಥಿಗಳು ಉಪಯೋಗಕ್ಕಾಗಿ ಸಾಕ್ಷ್ಯ ಹೆಂಚು ಹೊದಿಸಿ ಏರ್ಪಾಡು ಮಾಡಿದರೆ ಚೆನ್ನಾಗಿರುವುದು. ಈ ರೀತಿ ಜನಗಳು ಮಾಡದೇ ಇದ್ದರೂ ಇಂಗ್ಲಿಷ್ ಸ್ಕೂಲ್ ಹೆಡ್ಮಾಸ್ಟರಾದರೂ ಈ ವಿಷಯದಲ್ಲಿ ಮುತುವರ್ಜಿ ತೆಗೆದುಕೊಂಡು, ಸ್ಕೂಲಿನ ಫೀಸ್ ಹೋದ ಮೇಲೆ ಏರ್ಪಾಡು ಮಾಡಿದ ಪಕ್ಷದಲ್ಲಿ ಹುಡುಗರಿಗೆ ಅನುಕೂಲ ಉಂಟು. ಇವರು ವಿದ್ಯಾ ಪಕ್ಷಪಾತಿಯಾದ್ದರಿಂದ ಈ ಕಾರ್ಯವನ್ನು ಮಾಡದೆ ಇರಲಾರರೆಂದು ನಂಬುತ್ತೇವೆ.—ಈ ಊರಲ್ಲಿ ಸ್ಥಳಿಕರೆಲ್ಲಾ ಸೇರಿ ಹೆಣ್ಣು ಹುಡುಗರಿಗೋಸ್ಕರ ಒಂದು ಸ್ಕೂಲನ್ನು ಏರ್ಪಾಡು ಮಾಡಿರುತ್ತಾರೆ. ಅದರಲ್ಲಿ ಉಪಾಧ್ಯಾಯರುಗಳನ್ನು ಪದೇ ಪದೇ ಬದಲಾಯಿಸುವುದರಿಂದ ಸ್ಕೂಲಿನ ಅಭಿವೃದ್ಧಿಗೆ ಕುಂದಕ ಬರುತ್ತದೆ. ಅದರ ಯಜಮಾನ್ಯವನ್ನು ವಹಿಸಿರುವ ಜನಗಳು ಅಲ್ಲಿನ ನೌಕರರುಗಳಿಗೆ ತಕ್ಕ ಪ್ರೋತ್ಸಾಹಗಳನ್ನು ಕೊಟ್ಟು ಕೆಲಸದಲ್ಲಿ ಆಸ್ಥೆಯನ್ನು ತಗಿಲಿಸಿಕೊಳ್ಳುವ ಹಾಗೆ ಮಾಡುವರೆಂದು ಕೋರುತ್ತೇವೆ.—ಇಲ್ಲಿ ಪೋಲೀಸ್ ದಫೇದಾರ್ ಸಯ್ಯದ್ ಹುಸೇನ್ ಸಾಹೇಬರನ್ನು ಅವಿಧೇಯತೆಗೋಸ್ಕರ ಕೆಲಸದಿಂದ ನಿವೃತ್ತಿ ಮಾಡಿರುತ್ತಾರೆ. ಇವರಿಗೆ ೨೬ ವರುಷ ಸರ್ವಿಸ್ ಆಗಿರುವುದರಿಂದ ಅದೇ ಸ್ಥಳದಲ್ಲಿ ಜವಾನಿ ಮತ್ತು ಪ್ಲೇಗ್ ಇನ್ಸ್‌ಪೆಕ್ಟರ್ ಕೆಲಸ ಕೊಡಿಸಿದರು. ದೊಡ್ಡ ಕೆಲಸಗಳು ಖಾಲಿ ಇಲ್ಲದೆ ಪುನಃ ದಫೇದಾರಿಯನ್ನೇ ನೋಡುತ್ತಿದ್ದರು. ಪ್ಲೇಗಿನ ಕಾಲದಲ್ಲಿ ತುಂಬಾ ಮೆಹನತ್ತಿನಿಂದ ಕೆಲಸ ಮಾಡಿದ್ದರು. ಇಷ್ಟು ವರ್ಷಗಳ ಕಾಲ ಕೆಲಸ ಮಾಡಿ ಕೊನೆಗೆ ಇಂಥಾ ಕಷ್ಟ ಬಂದದ್ದಕ್ಕಾಗಿ ತುಂಬಾ ವ್ಯಸನ ಪಡಬೇಕಾಗಿದೆ.—ಅಮಲ್ದಾರ್ ಮತ್ತು ಮುನಿಸಿಪಲ್ ಸ್ಕೂಲ್ ಉಪಾಧ್ಯಾಯರ ವಿಷಯವು ರಾಜಿ ಆಯಿತೆಂದು ಕೇಳಲು ಸಂತೋಷ ಪಡುತ್ತೇವೆ.

ಕೋಲಾರ.—ಗ್ರೀಷ್ಮಕಾಲದ ಗಾಳಿ. ಸತತವೂ ಮೋಡ ಕವಿದುಕೊಂಡಿರುವದು. ಮಳೆ ಮಾತ್ರ ಒಂದು ಹನಿಯೂ ಇಲ್ಲ. ಎಲ್ಲಿ ನೋಡಿದರೂ ಮಾವಿನ ಹಣ್ಣಿನ ವ್ಯಾಪಾರವೇ ವ್ಯಾಪಾರ. ಎಲ್ಲಿ ನೋಡಿದರೂ ಮಾವಿನ ಹಣ್ಣೇ. ಇದರಿಂದಲೂ, ಊರಿನ ಕೊಳಕಿನಿಂದಲೂ, ಸೊಳ್ಳೆಗಳು ಹೆಚ್ಚಿರುವುದರಿಂದಲೂ, ಹವಾ ಬದಲಾಯಿಸಿರುವುದರಿಂದಲೂ, ಜನಗಳು ಜ್ವರ, ಕಣ್ಣುಬೇನೆ ಮುಂತಾದವುಗಳಿಂದ ಬಾಧೆ ಪಡುತ್ತಿದ್ದಾರೆ. ಅದು ಅಷ್ಟು ಭಯಂಕರವೇನೂ ಅಲ್ಲ.—೨೬ರಲ್ಲಿ ಚಕ್ರವರ್ತಿಯವರಿಗೆ ಕೀರ್ತಿಧಾರಣೆ ಮಹೋತ್ಸವದ ಪಟ್ಟಾಭಿಷೇಕವು ಉತ್ಸವಗಳಿಂದಿತ್ತು. ಇಲ್ಲಿನ ಮಠದ ಎಲ್ಲರ ಮುಂದೆ ... ಅದು ನಿಲ್ಲಿಸಲ್ಪಟ್ಟಿರುವುದೆಂದು ಸರಕಾರದವರು ಕೇಳಿ ಬಾಲಬಾಲಿಕರೂ ಅತ್ಯಂತ ನಿರಾಶರಾಗಿ ಹೋದರು. ಪ್ರಭುಗಳು ಶ್ರೀಘ್ರದಲ್ಲಿಯೇ ಇಲ್ಲಿನವರನ್ನು ಪುನಃ ಹರ್ಷಕರನ್ನಾಗಿ ಮಾಡುವರೆಂದು ಹಾರೈಸುತ್ತೇವೆ.—ಕೀರ್ತಿಧಾರಣೆ ಮಹೋತ್ಸವದ ಜ್ಞಾಪಕಾರ್ಥವಾಗಿ ಕೆಲವು ಕೆಂಗಿನ ಸಸಿಗಳನ್ನು ಇಲ್ಲಿನ ಸ್ಟೇಷನ್ ರೋಡಿನಲ್ಲಿ ಡಿ. ಸಿ. ಸಾಹೇಬರೇ ಖುದ್ದಾಗಿ ನೆಟ್ಟರು.—ಇಲ್ಲಿನ ಕೋಟೆಯಲ್ಲಿ ನಿನ್ನೆ ಸಾಯಂಕಾಲ ಒಬ್ಬ ಧನಿಕಯುಳ್ಳ ಗೃಹಿಣಿಯು ನೀರಿಗಾಗಿ ಬಾವಿಗೆ ಹೋಗಿ ಧುಮ್ಮಿಕ್ಕಿದುದು ಗಂಡನ ಕಣ್ಣಿಗೆ ಬಿದ್ದ ಪೋಲೀಸಿನವರೇ ಮುಂತಾದವರಿಂದ ಮೇಲಕ್ಕೆತ್ತಲ್ಪಟ್ಟಳು. ಗಂಡಂದಿರು ಹೆಂಡಿರ ಮೇಲೆ ದುರಾಭಿಮಾನದಂತೆ ಯಾವುದೊಂದು ವಿಪರೀತ ಮಾಡಿದರೆ ಅದು ನಿಷ್ಠುರವಾಗಿಯೂ ವಿಪರೀತವಾಗಿ ಪರಿಣಮಿಸುವುದು.—ಈಗೀಗ ಈ ಊರಿನಲ್ಲಿ ಕ್ರಿಕೆಟ್ಟು ಪ್ರಬಲಿಸುತ್ತಿರುವುದು. ಮೊದಲು ಇದನ್ನು ಇಲ್ಲಿ ಕೇಳುವವರೇ ಇರಲಿಲ್ಲ. ಆದರೆ ಅದರ ಅಭಿವೃದ್ಧಿಯು ಬಪ್ಪರಿಂಗು ಪೇಟೆಯಿಂದ ಬಂದಿದ್ದ ಡಿ. ಸುಬ್ಬರಾವ್ ಎಂಬ ಒಬ್ಬ ಒಳ್ಳೆಯ ವಿದ್ಯಾರ್ಥಿಯಿಂದ ಬೀಜ ಹಾಕಲ್ಪಟ್ಟಿತು. ಅಂದಿನಿಂದ ಅದು ಉತ್ಕರ್ಷ ಸ್ಥಿತಿಗೆ ಬರುತ್ತಲಿದೆ. ಆಚೆ ವಾರ ಇಲ್ಲಿನ ಹಲವರು ಹುಡುಗರು ಬಪ್ಪರಿಂಗು ಪೇಟೆಯಲ್ಲಿ ಕ್ರಿಕೆಟ್ಟು ಮ್ಯಾಚು ನಡೆದು ಇಲ್ಲಿನವರೇ ಗೆದ್ದುಕೊಂಡು ಬಂದರು. ಇಂದು ಇಲ್ಲಿ ಬಪ್ಪರಿಂಗು ಪೇಟೆಯ ಪರ ಒಂದು ಮ್ಯಾಚು ನಡೆಯಬೇಕೆಂದು ಬರೆದಿದ್ದವರು ಇಲ್ಲಿನವರಿಗೆ ನಿರಾಶೆಯಾಗುವಂತೆ ಬಾರದೆಯೇ ಹೋಗಿ, ಅವರಿಗೆ ತುಂಬಾ ನಷ್ಟವನ್ನೂ ತೊಂದರೆಯನ್ನೂ ಉಂಟುಮಾಡಿರುತ್ತಾರೆ.

ದಾವಣಗೆರೆ.—ಈ ವಾರದಲ್ಲಿ ಬಿಸಲಿನ ತಾಪ ಹೆಚ್ಚಾಗಿದೆ. ಈಗ ಬಿತ್ತಿರುವ ಎಳ್ಳು ಮುಂತಾದ ಪೈರುಗಳಿಗೆ ವರ್ಷವು ಅವಶ್ಯಕವಾಗಿದೆ. ಕೊಲ್ಲಾಪುರದ ಗಿರಾಕಿಗಳಿಂದ ಜೋಳದ ಧಾರಣೆಯು ಸ್ವಲ್ಪ ಏರಿದೆ. ಚಿತ್ರದುರ್ಗಕ್ಕೂ ಇಲ್ಲಿಗೂ ಮಧ್ಯವರ್ತಿಯಾದ ಭರ್ಮಸಾಗರದಲ್ಲಿ ಪ್ಲೇಗು ಜಾಡ್ಯವು ಕಳೆದೊಂದು ಗ್ರಾಮವನ್ನು ಬಿಟ್ಟಿರುವ ವರ್ತಮಾನವು ಇಲ್ಲಿ ಭೀತಿಯನ್ನುಂಟುಮಾಡಿದೆ. ಭರ್ಮಸಾಗರದಿಂದ ಇಲ್ಲಿಗೆ ಸದಾ ಜನಗಳು ಬರುತ್ತಲಿರುವುದರಿಂದ ಇಲ್ಲಿನ ಅಮಲ್ದಾರರು ಇದಕ್ಕೆ ಪೂರ್ಣ ಗಮನವಿತ್ತು ತಕ್ಕವಾದ ಏರ್ಪಾಡುಗಳನ್ನು ಮಾಡುವರೆಂದು ನಂಬಿರುವೆನು.—ಈ ಗ್ರಾಮವು ಬಹು ದಿನಗಳಿಂದಲೂ ಕಂಬಳಿಗಳಿಗೆ ಪ್ರಖ್ಯಾತಿಯನ್ನು ಪಡೆದಿರುವುದು ಸರಿಯಷ್ಟೆ. ಈಗ ಮೂರು ವರ್ಷಗಳಿಂದಲೂ ಕಂಬಳಿ ನೇಯುವವರು ಲಾಭವಿಲ್ಲದಿರುವ ಪ್ರಯುಕ್ತ ತಮ್ಮ ಕಸಬನ್ನು ತ್ಯಜಿಸಿ ಬೇರೆ ಬೇರೆ ಉದ್ಯೋಗಗಳನ್ನಾರಂಭಿಸಿರುವರು. ನೇಗಿಯವರ ಸ್ಥಿತಿಯನ್ನು ಉತ್ತಮ ರೀತಿಗೆ ತರಬೇಕೆಂದು ಪ್ರಯತ್ನ ಮಾಡುತ್ತಿರುವ ನಮ್ಮ ಸರ್ಕಾರದವರು ಇಲ್ಲಿನವರಿಗೂ ಉತ್ತೇಜನವೀಯುವರೆಂದು ನಂಬಿರುತ್ತೇನೆ.—ಇಲ್ಲಿ ಹೆಂಗಸರ ಆಸ್ಪತ್ರೆಯು ಇಲ್ಲದಿರುವ ಪ್ರಯುಕ್ತ ಅನೇಕ ಕುಟುಂಬಗಳು ನಾಚಿ ಆಸ್ಪತ್ರೆಗೆ ಬರುವುದನ್ನೇ ತ್ಯಜಿಸಿ ತಮ್ಮ ತಮ್ಮ ವ್ಯಾಧಿಗಳನ್ನು ಮುಚ್ಚಿಟ್ಟುಕೊಂಡಿರುವರು. ಅನ್ಯ ಕೆಲವು ಉಪವತಿಯುಳ್ಳ ಕುಟುಂಬದವರು ವಿಶೇಷ ವೆಚ್ಚವನ್ನಿಟ್ಟುಕೊಂಡು ಬೆಂಗಳೂರಿಗೆ ಹೋಗಿ ಚಿಕಿತ್ಸೆ ಪಡೆದು ಬರುತ್ತಲಿರುವರು. ಇಷ್ಟು ತೊಂದರೆಗಳನ್ನು ಅನುಭವಿಸುತ್ತಲಿದ್ದರೂ ಇಲ್ಲಿನ ಶ್ರೀಮಂತರಾದ ವರ್ತಕರು ತಮ್ಮ ಬಡ ಸಹೋದರಿಯರಿಗಾಗಿ ಒಂದು ಹೆಂಗಸರ ಆಸ್ಪತ್ರೆಯನ್ನು ಕಟ್ಟಿಸುವ ಪ್ರಯತ್ನವನ್ನಾಗಲಿ ಅಥವಾ ಸರಕಾರದವರಿಂದ ಇಡಿಸುವ ಏರ್ಪಾಡನ್ನಾಗಲಿ ಮಾಡದಿರುವುದು ಶೋಚನೀಯವಾಗಿದೆ. ಸರಕಾರದವರು ಚಿತ್ರದುರ್ಗದ ಲೇಡಿ ಅಸಿಸ್ಟೆಂಟ್ ಸರ್ಜನವರನ್ನು ಪಕ್ಷಕ್ಕೊಂದಾವರ್ತಿಯಾದರೂ ಇಲ್ಲಿಗೆ ಬರುವಂತೆ ಏರ್ಪಾಡು ಮಾಡಿದರೆ ಎಷ್ಟೋ ಉಪಕಾರವಾದೀತು.—ಇಲ್ಲಿಗೆ ಇನ್ನೆರಡು ಮೂರು ದಿನಗಳಲ್ಲಿ ವಿದ್ಯಾಭ್ಯಾಸದ ಇಲಾಖಾ ಅಧಿಕಾರಿಗಳಾದ ಮ|| ಭಾಭಾ ಸಾಹೇಬರು ದಯಮಾಡುವರೆಂದು ವದಂತಿ ಇದೆ.

ವೈಸರಾಯಿಯವರು ಔತಣವನ್ನು ತೀರಿಸಿಕೊಂಡು, ಅದೇ ರಾತ್ರಿ ಸುಮಾರು ೧೨॥ ಗಂಟೆಗೆ ಸ್ಪೆಷಲ್ ಟ್ರೈನು ಹತ್ತಿ ಮದ್ದೂರಿಗೆ ಬಂದು, ರೈಲ್‌ಗಾಡಿ ಯಲ್ಲೇ ಶಯನಮಾಡಿದರು.

ವಿದ್ಯುಚ್ಛಕ್ತಿಯ ಕಾರ್ಖಾನೆ.

ತಾ॥ ೬ನೆ ಬುಧವಾರ.— ಆ ದಿನ ಶಿವಸಮುದ್ರದ ಮಾರ್ಗದಲ್ಲೂ ವಿದ್ಯುಚ್ಛಕ್ತಿಯ ಯಂತ್ರಗಳನ್ನಿಟ್ಟಿರುವ ಪ್ರದೇಶಗಳಲ್ಲೂ ತೋರಣ ಬಾವುಟ ಮೊದಲಾದವುಗಳಿಂದ ಅಲಂಕಾರಮಾಡಿದ್ದರು. ವಿದ್ಯುಚ್ಛಕ್ತಿ ಕಮಿಷನಾಗಿ ಕೋಲಾರ್ ಚಿನ್ನದ ಗಣಿಗಳಿಗೆ ಸಾಗಿಸುವ ಕಂಬ ಮುಂತಾದ ಭಾಗಗಳಲ್ಲಿ ವಿಲಾಯಿತಿ, ಮೈಸೂರು, ಸ್ವಿಟ್ಸರ್ಲೆಂಡು, ಅಮೇರಿಕ ಎಂಬೀ ರಾಜ್ಯಗಳ ಬಾವುಟಗಳು ನೇತ್ರಾನಂದಕರವಾಗಿ ಹಾರಾಡುತ್ತಿದ್ದವು. ರೆಸಿಡೆಂಟು ಸರ್ಜನ್ ಲೆಫ್ಟನೆಂಟ್ ಹಂಟರ್‌ಯವರೂ, ಮೊದಲನೆ ಅಸಿಸ್ಟೆಂಟ್ ಇಂಜನಿಯರ್ ಮಿ॥ ಫರ್ಬರ್‌ಯವರೂ, ಛೀಫ್ ಇಂಜನಿಯರ್ ಕರ್ನಲ್ ಮೆಕ್ನೀಲ್ ಕ್ಯಾಂಬೆಲ್ ಯವರೂ, ಕ್ಯಾಪ್ಟನ್ ಜಾಲಿ ಡಿ ಲಾಟ್ಬಿನಿಯರ್ ಯವರೂ ಕಾದಿದ್ದು ವೈಸರಾಯಿಯವರನ್ನು ಎದುರ್ಗೊಂಡು ಕರೆದುಕೊಂಡುಹೋದರು. ತರುವಾಯ ವೈಸರಾಯಿಯವರು ವಿದ್ಯುಚ್ಛಕ್ತಿ ತಯಾರಾಗುವ ಅನೇಕ ಕೊಠಡಿಗಳನ್ನು ಹೋಗಿನೋಡಿ, ಕಾರ್ಖಾನೆಯ ಇತರ ಭಾಗಗಳನ್ನೂ ಅಲ್ಲಲ್ಲಿನ ಕೆಲಸಗಳನ್ನೂ ಇಟ್ಟಿರುವ ಯಂತ್ರಗಳನ್ನೂ ಪರಾಂಬರಿಸಿದರು. ಅನಂತರ ಗಗನಚುಕ್ಕಿ ಬರಚುಕ್ಕಿಗಳೆಂಬ ಜಲಪಾತಗಳನ್ನು ಹೋಗಿ ನೋಡಿದರು. ಆ ಮಳೆಗಾಲದಲ್ಲಿ ಹೊಳೆ ವಿಪರೀತವಾಗಿ ಬಂದಿದ್ದ ಕಾರಣ ಅಗಾಧವಾದ ನೀರು ಅವೆರಡು ಕಡೆಗಳಲ್ಲೂ ಮಹಾ ಅರ್ಭಟದಿಂದ ಧುಮುಕುತ್ತಿದ್ದದ್ದು ವೈಸರಾಯಿಯವರಿಗೆ ತುಂಬಾ ನೇತ್ರಾನಂದವನ್ನುಂಟುಮಾಡಿತು.

ಆ ರಾತ್ರಿ ಶಿವಸಮುದ್ರದಿಂದ ವೈಸರಾಯಿಯವರು ಹೊರಟು ಮದ್ದೂರು ರೈಲ್ವೆ ಸ್ಟೇಷನ್ನಿಗೆ ದಯಮಾಡಿ, ಅಲ್ಲಿ ಸಿದ್ಧವಾಗಿದ್ದ ರೈಲ್‌ಗಾಡಿಯೊಳಗೇ ಶಯನಮಾಡಿದರು.

ಮೈಸೂರನ್ನು ತಲಪಿದ್ದು.

ತಾ. ೭ನೆ ಗುರುವಾರ.— ಬೆಳಗಿನ ಝಾಮದ ೫ ಗಂಟೆಗೆ ಮದ್ದೂರಿನಿಂದ ಹೊರಟು ವೈಸರಾಯಿಯವರು ಪ್ರಾತಃಕಾಲ ಸುಮಾರು ೭ ಗಂಟೆಗೆ ಶ್ರೀರಂಗಪಟ್ಟಣಕ್ಕೆ ದಯಮಾಡಿ, ಅಲ್ಲಿ ಚೋಟಾ ಹಜಾರಿ (ಬೆಳಗಿನ ಊಟ) ತೀರಿಸಿಕೊಂಡು, ಅಲ್ಲಿಂದ ಹೊರಟು ಸುಮಾರು ೮॥ ಗಂಟೆಗೆ ರಾಜಧಾನಿಯನ್ನು ತಲಪಿದರು. ಕೂಡಲೇ ಗೌರವಾರ್ಥವಾದ ೩೧ ತೋಪುಗಳು ಹಾರಿಸಲ್ಪಟ್ಟವು. ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ನಮ್ಮ ಮಹಾರಾಜರವರು, ದಿವಾನ್‌ರು, ಕೌನ್ಸಿಲರುಗಳು, ಮುಂತಾದವರೆಲ್ಲಾ ಕಾದಿದ್ದು ವೈಸರಾಯಿಯವರನ್ನು ಎದುರ್ಗೊಂಡರು. ಸ್ಟೇಷನ್ನಲ್ಲಿ ಮಹಾರಾಜರವರ ಸೈನಿಕರೂ ಬ್ಯಾಂಡು ವಾದ್ಯಗಾರರೂ ನಿಂತು ವೈಸರಾಯಿಯವರಿಗೆ ಸಲ್ಯೂಟ್ ಮಾಡಿದರು. ವೈಸರಾಯಿಯವರು ಮಹಾರಾಜರೇ ಮುಂತಾದವರ ಸನ್ಮಾನವನ್ನು ಸ್ವೀಕರಿಸಿ, ಅಲ್ಲಿಂದ ಹೊರಟು ಗಾಡಿಯೊಳಕ್ಕೆ ದಯಮಾಡಿದರು. ಆ ಮೆರವಣಿಗೆಯ ವಿವರವೇನೆಂದರೆ:—

ಮೊದಲನೇ ಗಾಡಿ, ೪ ಕುದುರೆ ಕಟ್ಟಿದ್ದು.— ವೈಸರಾಯಿಯವರು, ಮಹಾರಾಜರವರು, ರೆಸಿಡೆಂಟರು, ವೈಸರಾಯರ ಪರಿಕರಾಂಗರು— ಇವರು ಕುಳಿತುಕೊಂಡಿದ್ದರು.

ಎರಡನೇ ಗಾಡಿ.— ಬೆಂಗಳೂರು ಸೈನ್ಯದ ಕಮಾಂಡರ್ ಜನರಲ್ ಸರ್ ಜೇಂಸ್ ವೊಲ್ಫ್ ಮರ್ರೆಯವರು, ಮೈಸೂರು ಸಂಸ್ಥಾನದ ದಿವಾನರಾದ ಮಿ॥ ಕೃಷ್ಣಮೂರ್ತಿಯವರು, ಮಹಾರಾಣಿ ರೀಜಂಟರವರ ಪ್ರೈವೇಟ್ ಸೆಕ್ರೆಟರಿ ಕರ್ನಲ್ ಕ್ಯಾಂಬೆಲ್‌ಯವರು, ಮಹಾರಾಜರವರ ಟ್ಯೂಟರ್ ಮತ್ತು ಗಾರ್ಡಿಯನ್ ಮಿ॥ ಫ್ರೇಸರ್‌ಯವರು— ಇವರು ಕುಳಿತುಕೊಂಡಿದ್ದರು.

ಮೂರನೇ ಗಾಡಿ.— ವೈಸರಾಯರ ಪ್ರೈವೇಟ್ ಸೆಕ್ರೆಟರಿ ಮಿ॥ ಲಾರನ್ಸ್‌ಯವರು, ಫಾರಿನ್ ಇಲಾಖಾ ಅಂಡರ್ ಸೆಕ್ರೆಟರಿ ಮಿ॥ ವುಡ್‌ಯವರು, ವೈಸರಾಯರ ಒಬ್ಬ ಪರಿಕರಾಂಗರು, ಅಸಿಸ್ಟೆಂಟ್ ರೆಸಿಡೆಂಟ್ ಮಿ॥ ರಸ್ಸೆಲ್‌ಯವರು— ಇವರು ಕುಳಿತುಕೊಂಡಿದ್ದರು.

ನಾಲ್ಕನೇ ಗಾಡಿ.— ವೈಸರಾಯರ ಮಿಲಿಟರಿ ಸೆಕ್ರೆಟರಿ ಲೆಫ್ಟಿನೆಂಟ್ ಕರ್ನಲ್ ಬೇರಿಂಗ್ ಯವರು, ವೈಸರಾಯರ ಸರ್ಜನ್ ಕ್ಯಾಪ್ಟನ್ ಆರಂಸ್ಟ್ರಾಂಗ್‌ಯವರು, ಮಹಾರಾಜರ ಪ್ರೈವೇಟ್ ಸೆಕ್ರೆಟರಿ ಮಿ॥ [illegible]ಯವರು, ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಅಡ್ಜುಟೆಂಟ್ ಜನರಲ್‌ಯವರು— ಇವರು ಕುಳಿತುಕೊಂಡಿದ್ದರು.

ಐದನೇ ಗಾಡಿ.— ಮಿ॥ [illegible] ಅರಸಿನವರು, ಲೆಫ್ಟಿನೆಂಟ್ ಕರ್ನಲ್ ಜೆ. [illegible] ಅರಸಿನವರು, ಮಿ॥ ಲಕ್ಷ್ಮೀಕಾಂತರಾಜೇ ಅರಸಿನವರು, ಮಿ॥ [illegible]ಯವರು— ಇವರು ಕುಳಿತುಕೊಂಡಿದ್ದರು.

ಮೇಲ್ಕಂಡ ಐದು ಗಾಡಿಗಳ ಹಿಂದೆಯೂ ಮುಂದೆಯೂ ಹುಸಾರ್ ಎಂಬ ಇಂಗ್ಲಿಷ್ ಕುದುರೆ ಸೈನಿಕರು ಸವಾರಿಮಾಡಿಕೊಂಡು ಬಂದರು. ರಸ್ತೆಯ ಉದ್ದಕ್ಕೂ ಪೋಲೀಸಿನವರೂ ಸಿಲ್ಲೇದಾರ್ ಕುದುರೆಯವರೂ ನಿಲ್ಲಿಸಲ್ಪಟ್ಟಿದ್ದರು. ಮೆರವಣಿಗೆಯು ರೈಲ್ವೆ ಸ್ಟೇಷನ್ ಬಿಟ್ಟಕೂಡಲೆ ಸ್ಟೇಷನ್ ಬಾಗಿಲಲ್ಲಿ ರೈಲ್ವೆಯವರು ಸ್ಲೀಪರ್ ದಿಮ್ಮಿಗಳನ್ನು ಚೌಕಾಗಿ ಜೋಡಿಸಿ ಕಮಾನುಮಾಡಿದ್ದರು. ರಸ್ತೆಯ ಉಭಯಪಾರ್ಶ್ವಗಳಲ್ಲೂ ತೋರಣಗಳೂ ಬಾವುಟಗಳೂ ಕಟ್ಟಲ್ಪಟ್ಟಿದ್ದವು. ಮಧ್ಯಮಧ್ಯೆ ಬಗೆಬಗೆ, ಬಹಳ ದೊಡ್ಡದಾದ ಗುಡಗಳನ್ನು ಹಾಕಿದ್ದರು. ವೈಸರಾಯಿಯವರ ಮೆರವಣಿಗೆಯು ಸ್ಟೇಷನ್‌ಬಿಟ್ಟು ಸಿಲ್ಲೇದಾರ್ ಲೈನ್ ಬಳಿಗೆ ಬಂತು. ಅಲ್ಲಿ ಬಹು ಅಲಂಕಾರವಾದ ಒಂದು ಕಮಾನ್ ಹಾಕಿದ್ದರು. ಅದರೊಳಗೆ ನುಗ್ಗಿ ಸಯ್ಯಾಜಿರಾವ್ ರಸ್ತೆಗೆ ತಿರುಗಿಕೊಂಡು ಜನರಲ್ ಆಸ್ಪತ್ರೆಯ ಎದುರಾಗಿ ಮೆರವಣಿಗೆ ಬಂತು. ಆ ರಸ್ತೆಯೊಳಗೆ ಜ[illegible]ಮಹಲ್ ಎಂಬ ಒಂದು ಭಾರೀ ಗೋಪುರಾಕಾರದ ಚಪ್ಪರವೂ, ಸರುವತೀಯ ಅಂದರೆ ರಾಯಿಯ ಹಣ್ಣು ಎಲೆಗಳಿಂದ ತಯಾರಾಗಿದ್ದ ಚಪ್ಪರವೂ ನಿರ್ಮಿಸಲ್ಪಟ್ಟಿದ್ದವು. ಈ ಪೈಕಿ ಒಂದು ಚಪ್ಪರದಲ್ಲಿ ರಾಜಧಾನಿಯ ಮ್ಯುನಿಸಿಪಲ್ ಕಮಿಷನರು ನಿಂತು ಅಲ್ಲಿಗೆ ದಯಮಾಡಿದ ವೈಸರಾಯಿಯವರನ್ನು ಎದುರ್ಗೊಂಡು ಸುಸ್ವಾಗತವನ್ನು ಬಯಸಿ ಹಾರ ತುರಾಯಿಗಳನ್ನು ಒಪ್ಪಿಸಿದರು. ಮುಂದಕ್ಕೆ ಬರುವಾಗ್ಯೆ ಆ ಜಗಧಾನಿಯ ಸರ್ಕಲ್ ಬಳಿಯಲ್ಲೂ, ಬಾಲಕಿಯರ ಎಂಬುವರು ವೈಸರಾಯಿಯವರನ್ನು ನೋಡಿ ಆಶೀರ್ವಚನಗಳನ್ನು ಮಾಡಿದರು. ಅಲ್ಲಿಂದ ವೈಸರಾಯಿಯವರು ಹೊರಟು ಪಾರ್ಕಿನ ರಸ್ತೆಯಲ್ಲಿ ಕರ್ಜನ್ ಉದ್ಯಾನವನದೊಳಕ್ಕೆ ಪ್ರವೇಶಮಾಡಿ, ಲೇಟ್ ಮಹಾರಾಜರವರ ಮೆಮೋರಿಯಲ್ ಫೌಂಟನ್ (ನೀರು ಹಾರುವ ಸ್ಥಳ) ಬಳಿ ಎಡಕ್ಕೆ ತಿರುಗಿಕೊಂಡು, ಅಪ್ಪರ್ ಎಸ್ಟರ್ ರಸ್ತೆಯೊಳಗೆ ಹೋಗಿ, ಸಣ್ಣಗೆ ದೊಡ್ಡಗಡಿಯಾರದ ಬಳಿ ಬಂದು, ಭಕ್ಷಿ ನರಸಪ್ಪನವರ ಮನೆ ಪಕ್ಕದಲ್ಲಿ ಹಾಕಿದ್ದ ಕಮಾನಿನಲ್ಲಿ ನುಗ್ಗಿ ದೊಡ್ಡ ಪೇಟೆಯೊಳಕ್ಕೆ ಪ್ರವೇಶಿಸಿ, ಆ ದೊಡ್ಡ ದೊಡ್ಡ ಪೇಟೆಯಲ್ಲೇ ಹೋಗಿ, ಸರದಾರ್ ಚಾವಡಿಯ ಮುಂದೆ ಹಾಕಿದ್ದ ನೇತ್ರಾನಂದಕರವಾದ ಭುವನೇಶ್ವರಿಯನ್ನು ನೋಡುತ್ತಾ, ಅಲ್ಲೇ ಬಲಗಡೆಗೆ ತಿರುಗಿಕೊಂಡು ವೆಲ್ಲಿಂಗ್‌ಟನ್ ರಸ್ತೆ ಬಂಗಲೆಯ ರಸ್ತೆಯಲ್ಲಿ ಬಂದು, ರೆಸಿಡೆನ್ಸಿ ಬಂಗಲೆಯ ಪಶ್ಚಿಮ ಬಾಗಿಲ ಮೂಲಕ ಪ್ರವೇಶ ಮಾಡಿ, ಅಲ್ಲಿಂದ ರೆಸಿಡೆನ್ಸಿ ಬಂಗಲೆಗೆ ಚಿತ್ತೈಸಿದರು. ಬಂಗಲೆಯ ಬಳಿ ಇಂಗ್ಲಿಷ್ ಕುದುರೆ ಸೈನ್ಯದವರು ಲೈನುಕಟ್ಟಿ ಕಾದಿದ್ದು ವೈಸರಾಯಿಯವರಿಗೆ ಸಲ್ಯೂಟ್ ಮಾಡಿದರು. ಕೂಡಲೇ ೩೧ ತೋಪುಗಳು ಹಾರಿಸಲ್ಪಟ್ಟವು. ಮಹಾರಾಜರವರು ವೈಸರಾಯಿಯವರನ್ನು ಬಂಗಲೆಗೆ ತಲಪಿಸಿ, ತಮ್ಮ ಪಾಲಿ ಗಾರ್ಡ್ ಸವಾರರನ್ನು ಹಿಂದೆಮುಂದೆ ಇಟ್ಟುಕೊಂಡು, ಹಿಂತಿರುಗಿ ಅರಮನೆಯನ್ನು ಸೇರಿದರು.

ತರುವಾಯ ಸುಮಾರು ೧೧ ಗಂಟೆಗೆ ದಿವಾನ್‌ರು, ಮಿ॥ [illegible] ರಾಜೇ ಅರಸಿನವರು, ಮಿ॥ ಗೋಪಾಲರಾಜೇ ಅರಸಿನವರು, ಕೌನ್ಸಿಲರ್ ಮಿ॥ ಶ್ರೀನಿವಾಸಯ್ಯಂಗಾರ್ಯರು ರೆಸಿಡೆನ್ಸಿ ಬಂಗಲೆಗೆ ಹೋಗಿ ವೈಸರಾಯಿಯವರನ್ನು ಕಾಣಿಸಿಕೊಂಡು, ಅವರ ದೇಹಸ್ಥಿತಿ ಮುಂತಾದ್ದನ್ನು ವಿಚಾರಿಸಿಕೊಂಡು, ಅವರಿಂದ ಸನ್ಮಾನ ಪಡೆದು ವಾಪಸು ಬಂದರು.

ಭೇಟಿ ಮತ್ತು ಮರುಭೇಟಿ.

ಅದೇ ಮಧ್ಯಾಹ್ನ ನಮ್ಮ ಮಹಾರಾಜರವರು ಸಕಲ ಮರ್ಯಾದೆಗಳೊಡನೆ ೨೧ ತೋಪು ಹಾರುತ್ತಿರುವಾಗ ಅರಮನೆಯನ್ನು ಬಿಟ್ಟು ರೆಸಿಡೆನ್ಸಿ ಬಂಗಲೆಗೆ ದಯಮಾಡಿ, ವೈಸರಾಯಿಯವರನ್ನು ಕಾಣಿಸಿಕೊಂಡು ಅವರ ಸಂಗಡ ಮಾತುಕತೆ ಸ್ವಲ್ಪಹೊತ್ತು ಕ್ಷೇಮಸಮಾಚಾರವನ್ನು ವಿಚಾರಿಸುತ್ತಾ ಸಲ್ಲಾಪ ಬೆಳೆಸಿದರು. ವೈಸರಾಯಿಯವರು ಬಹು ಆದರಪೂರ್ವಕವಾಗಿ ಮಹಾರಾಜರಿಗೆ ಸಂಭಾವನೆಮಾಡಿ, ಗಂಧಪುಷ್ಪ ಮುಂತಾದ್ದನ್ನು ಒಪ್ಪಿಸಿ, ಕಳಿಸಿಕೊಟ್ಟರು. ಗೌರವಾರ್ಥವಾದ ೨೧ ತೋಪುಗಳು ಹಾರಿಸಲ್ಪಟ್ಟವು. ಮಹಾರಾಜರು ರೆಸಿಡೆನ್ಸಿಯಿಂದ ಹೊರಟು ಯಥಾಪ್ರಕಾರ ಅರಮನೆಗೆ ಬಂದು ತಲಪಿದರು.

ಸುಮಾರು ೪॥ ಗಂಟೆಗೆ ವೈಸರಾಯಿಯವರು ಸಕಲ ಮರ್ಯಾದೆಗಳೊಡನೆ ರೆಸಿಡೆನ್ಸಿ ಬಂಗಲೆಯಿಂದ ಹೊರಟು, ೩೧ ತೋಪುಗಳು ಆಗುತ್ತಿರುವಲ್ಲಿ, ಅರಮನೆಗೆ ದಯಮಾಡಿ, ಕಲ್ಯಾಣಮಂಟಪದಲ್ಲಿ ಮಹಾರಾಜರಿಗೆ ಮರುಭೇಟಿ ಕೊಟ್ಟರು. ಅಲ್ಲಿ ದಿವಾನ್‌ರೇ ಮುಂತಾದವರನ್ನೂ ಕೆಲವು ಅರಸುಮಕ್ಕಳನ್ನೂ ವೈಸರಾಯಿಯವರಿಗೆ ಪರಿಚಯ ಮಾಡಿಸಿದರು. ಮಹಾರಾಣಿ ರೀಜಂಟರನ್ನು ಕಂಡು ಅವರ ಕ್ಷೇಮವನ್ನು ವಿಚಾರಿಸಿದರು. ವೈಸರಾಯಿಯವರಿಗೆ ಮಹಾರಾಜರು ಹಾರ ತುರಾಯಿಗಳನ್ನೂ, ಅವರ ಕಡೆಯವರಿಗೆ ದಿವಾನ್‌ರೇ ಮುಂತಾದವರು ಗಂಧ ಪುಷ್ಪಗಳನ್ನೂ ಒಪ್ಪಿಸಿ ಸಂತೋಷಪಡಿಸಿದರು. ತರುವಾಯ ವೈಸರಾಯಿಯವರು ಕಳುಹಿಸಿಕೊಂಡು ಹೊರಟು ೩೧ ತೋಪುಗಳು ಆಗುತ್ತಿರುವಲ್ಲಿ ಹಿಂತಿರುಗಿ ರೆಸಿಡೆನ್ಸಿ ಬಂಗಲೆಯನ್ನು ಬಂದು ತಲಪಿದರು.

ಟೌನ್ ಹಾಲಿನಲ್ಲಿ [illegible].

ತಾ. ೭ನೆ ಗುರುವಾರ ಸಾಯಂಕಾಲ ಟೌನ್ ಹಾಲ್ ಬಂಗಲೆಯಲ್ಲಿ ಪಟ್ಟಾಭಿಷೇಕದ ಉತ್ಸವದ ನಿಮಿತ್ತವಾಗಿ ಕೆಲವು ವಿನೋದಗಳು ನಡೆದವು. ಡಾಕ್ಟರ್ ಅಚ್ಯುತರಾಯರೇ ಮುಂತಾದವರು ಮುಂದಾಗಿ ನಿಂತು ಟೌನ್ ಹಾಲ್ ಬಂಗಲೆಯನ್ನು ಬಹು ನೇತ್ರಾನಂದಕರವಾಗಿ ಅಲಂಕಾರವಮಾಡಿದ್ದರು. ಒಳಗೆ ಮಧ್ಯಭಾಗದಲ್ಲಿ ಮಹಾರಾಜರವರಿಗೂ ವೈಸರಾಯಿಯವರಿಗೂ ಕುಳಿತುಕೊಳ್ಳುವದಕ್ಕೆ ಅತ್ಯಲಂಕಾರದಿಂದ ಮಾಡಿದ್ದ ಮಂಟಪ ತಯಾರಾಗಿ ಇತ್ತು.

ಸ್ತಂಭಗಳು ಮರೆಯಾಗುವಂತೆ ನೌರಾದ ಬಟ್ಟೆಗಳನ್ನು ಇಳಿಬಿಟ್ಟಿದ್ದರು. ಮೇಲ್ಗಡೆ ಸುತ್ತಲೂ ಝಾಲರಿಗಳೂ, ತೋರಣಗಳೂ, ಹೂವುಗಳೂ, ಕಂದೀಲು ಗುಳೋಪುಗಳೂ ಕಟ್ಟಿದ್ದುವು. ಮಂಟಪದ ಉಭಯಪಾರ್ಶ್ವಗಳಲ್ಲಿ ಮತ್ತು ಹಿಂಭಾಗದಲ್ಲಿ ಸೋಫಾ ಕುರ್ಚಿ ಮುಂತಾದವುಗಳನ್ನು ಕ್ರಮವಾಗಿ ಜೋಡಿಸಿದ್ದರು. ಹಾಲಿ ಆಹ್ವಾನಿತರಾಯರು ರಾಜಧಾನಿಯಲ್ಲಿರುವ ಯೂರೋಪಿಯನ್, ಹಿಂದು, ಮುಸಲ್ಮಾನರು ದೊಡ್ಡ ಮನುಷ್ಯರುಗಳೂ, ನಾನಾ ಕಡೆಗಳಿಂದ ಮುಂತಾದವರೂ, ಪಟ್ಟಾಭಿಷೇಕೋತ್ಸವದ ನಿಮಿತ್ತ ರಾಜಧಾನಿಗೆ ದಯಮಾಡಿದ್ದ ದೊಡ್ಡ ಮನುಷ್ಯರುಗಳಿಗೂ, ಯೂರೋಪಿಯನ್ ಸರದಾರರುಗಳಿಗೂ, ಪ್ರಜಾಪ್ರತಿನಿಧಿಗಳಿಗೂ ಮುಂತಾದವರಿಗೂ ಆ ಟವನ್ ಹಾಲ್ ಬಾಗಿಲಲ್ಲಿ ನಡೆಯುವ ವಿನೋದಗಳನ್ನು ನೋಡಿಕೊಂಡು ಹೋಗಬೇಕೆಂದು ಟಿಕೀಟುಗಳನ್ನು ಬರೆದು ಕಳುಹಿಸಿದ್ದರು. ಸುಮಾರು ೫ ಗಂಟೆಯ ಹೊತ್ತಿಗೆ ದೊಡ್ಡ ಮನುಷ್ಯರೆಲ್ಲಾ ಬಂದು ಟವನ್ ಹಾಲಿನಲ್ಲಿ ಸೇರಿದರು. ಒಳಗಡೆ ಹಾಕಿದ್ದ ಸೋಫಾ, ಕುರ್ಚಿ, ಬೆಂಚುಗಳು ಸಾಕಾಗಲಿಲ್ಲ. ಬಂದವರನ್ನು ಬಾಗಿಲ ಹೊರಗೆ ಕೂರಿಸಬೇಕಾಯಿತು. ಇನ್ನೂ ಅನೇಕಾನೇಕ ಜನಕ್ಕೆ ಸ್ಥಳ ಸಾಕಾಗಲಿಲ್ಲ. ಆಗ ಟವನ್ ಹಾಲ್ ಎರಡನೇ ಅಂತಸ್ತಿನಲ್ಲಿ ಗ್ಯಾಲರಿಗಳ ಸುತ್ತಲೂ ಮೂರು ನಾಲ್ಕು ಸಾಲು ಬೆಂಚುಗಳನ್ನು ಹಾಕಿಸಿ ಕೂರಿಸಿದರು. ಅದರೂ ಸ್ಥಳ ಸಾಲದೆ ಹೋಯಿತು. ನೂರಾರು ಜನರು ನಿಂತುಕೊಂಡೇ ಇರಬೇಕಾಯಿತು. ಅಂದರೆ ಟವನ್ ಹಾಲಿನ ಒಳಗೂ [illegible] ಸಮಾರಂಭವನ್ನು ನೋಡುವವರಿಗೆ ಸೇರಿದ್ದರೆಂದು ಹೇಳಬಹುದು. ಮಹಾರಾಜರಾಗಲಿ ವೈಸರಾಯರಾಗಲಿ ಬರುವ [illegible]. ಕೌನ್ಸಿಲರುಗಳೇ ಮುಂತಾದವರೆಲ್ಲಾ ದಯಮಾಡಿದ್ದರು.

ಸುಮಾರು ೫|| ಗಂಟೆಯ ಹೊತ್ತಿಗೆ ವಿನೋದಗಳು ಪ್ರಾರಂಭವಾದವು. ಪಾರ್ಸಿ ನಾಟಕದ ಕಂಪೆನಿಯವರು ಸಣ್ಣ ಸಣ್ಣ ಹುಡುಗರು ಸುಮಾರು ೧೨—೧೪ ಮಂದಿ ರಂಗಸ್ಥಳದಲ್ಲಿ ನಿಂತು ಬಹು ರಮಣೀಯವಾಗಿ ಕುಣಿದರು. ಅವರ ದಿರಿಸು, ಅವರ ಹಾಡುಗಾರಿಕೆ, ಅಭಿನಯಕ್ಕೆ ತಕ್ಕಂತೆ ಕುಣಿಯುವುದು, ಒಟ್ಟಾಗಿಯೂ ಬೇರೆಬೇರೆಯಾಗಿಯೂ ಹಾಡುವುದು, ನರ್ತನಮಾಡುವುದು — ಇದೆಲ್ಲಾ ಬಹು ಆಹ್ಲಾದಕರವಾಗಿತ್ತು. ತರುವಾಯ ಒಬ್ಬ ಮಹಮ್ಮದೀಯನು ಜಲತರಂಗ ಬಾರಿಸಿ ಸಭಿಕರನ್ನು ಆನಂದಪಡಿಸಿದನು. ೨೫—೩೦ ಗಾಜಿನ ಸಣ್ಣ ಸಣ್ಣ ಬಟ್ಟಲುಗಳಿಗೆ ಸ್ವರಕ್ಕೆ ಬೇಕಾಗುವಷ್ಟು ನೀರು ಹಾಕಿ ಅರ್ಧಚಂದ್ರಾಕಾರವಾಗಿ ಇಟ್ಟು, ಬಿದಿರು ಕಡ್ಡಿಗಳಿಂದ ಹೊಡೆಯುತ್ತಾ, ಹಾಡು ಪಿಟೀಲು ತಬಲಾಗಳ ಸಹಾಯದಿಂದ ಕಿವಿಗಿಂಪಾಗುವಂತೆ ಜಲತರಂಗ್ ವಾದ್ಯ ಸಂಗೀತವು ಸ್ವಲ್ಪಹೊತ್ತು ನಡೆಯಿತು. ಅನಂತರ ಪಾರ್ಸಿ ಕಂಪೆನಿಯ ಕೆಲವು ನಾಟ್ಯಗಾರರು ಹೆಂಗಸರ ವೇಷದಲ್ಲಿ ಬಂದು ನಿಂತು, ಪೈಲ್ವಾನರು ಹಿಡಿಯುವಂಥಾ ಮೋಟಾದ ದೊಣ್ಣೆಗಳನ್ನು ಎರಡು ಕೈಯಲ್ಲಿ ಹಿಡಿದು, ಬಹಳ ಹೊತ್ತು ನಾನಾಪ್ರಕಾರವಾಗಿ ತಿರುಗಿಸುತ್ತಾ ಕಸರತ್ತು ಮಾಡಿದರು. ಇದಾದ ಮೇಲೆ ೮—೯ ಜನ ಇಲ್ಲಿನ ವೇಶ್ಯಾಸ್ತ್ರೀಯರು ಹಾಡುತ್ತಾ, ನರ್ತನಮಾಡುತ್ತಾ ಜನರನ್ನು ಸಂತೋಷಪಡಿಸಿದರು. ಇನ್ನೊಂದು ಗುಂಪಿನ ವೇಶ್ಯಾಸ್ತ್ರೀಯರು ಅದೇ ಪ್ರಕಾರ ಕೋಲಾಟವನ್ನು ಆಡಿದರು. ಯೂರೋಪಿಯನ್ ಸ್ತ್ರೀಯರು ಇವರ ನರ್ತನವನ್ನು ನೋಡಿ ತುಂಬಾ ಸಂತೋಷಪಟ್ಟುಕೊಂಡರು. ಅನಂತರ ಪಾರ್ಸಿ ಕಂಪೆನಿ ಹುಡುಗರ ನರ್ತನವೂ, ನಕಲಿಯೂ ನೋಡುವವರಿಗೆ ಆನಂದವನ್ನುಂಟುಮಾಡಿದವು. ಕಡೆಯಲ್ಲಿ ಸಲಾಂ ಬಾಜಾ ಆಯಿತು. ಮಹಾರಾಜರವರ ಶ್ರೇಯಸ್ಸಿಗೆ ಪ್ರಾರ್ಥನೆಯಾದ ಕೂಡಲೆ ವಿನೋದಗಳು ಮುಕ್ತಾಯವಾದವು.

ಹೊರಗಡೆ ಟವನ್ ಹಾಲ್ ಮೈದಾನದಲ್ಲಿ ಬೇರೆ ಬೇರೆ ತೋಟಗಳಲ್ಲಿ ಯೂರೋಪಿಯನರಿಗೂ, ಹಿಂದುಗಳಿಗೂ, ಮಹಮ್ಮದೀಯರಿಗೂ ಉಪಹಾರಗಳು ಸಿಕ್ಕುವಂತೆ ಏರ್ಪಾಡು ಮಾಡಿದ್ದರು. ಮೇಲ್ಕಂಡ ವಿನೋದಗಳನ್ನು ನೋಡಿ ಆದಮೇಲೆ ದೊಡ್ಡ ಮನುಷ್ಯರೆಲ್ಲಾ ತೋಟಗಳಿಗೆ ಬಂದು ಫಲಾಹಾರಗಳನ್ನು ಸ್ವೀಕರಿಸಿ, "ಇಂಥಾ ವಿನೋದವನ್ನು ನಾವೆಂದೂ ನೋಡಿರಲಿಲ್ಲ, ಲೋಪವೂ ನ್ಯೂನತೆಯೂ ಆಗದೆ ಎಲ್ಲಾ ಬಹಳ ಅಚ್ಚುಕಟ್ಟಾಗಿಯೂ ವಿಶೇಷ ಸಂತೋಷಪ್ರದವಾಗಿಯೂ ಇತ್ತು" ಎಂಬುದಾಗಿ ಪಾರ್ಕ್ ಅಧ್ಯಕ್ಷರಾಯರೇ ಮೊದಲಾದ ಕಮಿಟಿ ಮೆಂಬರುಗಳನ್ನು ಕೊಂಡಾಡುತ್ತಾ ತಂತಮ್ಮ ಮನೆಗಳನ್ನು ಕುರಿತು ತೆರಳಿದರು.

ದೀಪೋತ್ಸವವೂ ಮೋಜುವಾಣಿಯೂ.

ಅದೇ ದಿನ ರಾತ್ರಿ ಪಟ್ಟಣವೆಲ್ಲಾ ಚಿತ್ರ ವಿಚಿತ್ರವಾಗಿ ದೀಪಗಳಿಂದ ಪ್ರಕಾಶಮಾನವಾಗಿ ಹೊಳೆಯುತ್ತಿತ್ತು. ಜಗನ್ಮೋಹನ ಬಂಗಲೆ, ಲಕ್ಷ್ಮೀವಿಲಾಸ ರಸ್ತೆ, ಟವನ್ ಹಾಲ್ ಬಾಗಿಲು, ಕರ್ಜನ್ ಪಾರ್ಕ್, ಕೋಟೆ ಗೋಪುರಗಳು, ದೇವಸ್ಥಾನಗಳು, ರೆಸಿಡೆನ್ಸಿ ಬಂಗಲೆ ಈ ಮೊದಲಾದ ಕಡೆಗಳಲ್ಲೆಲ್ಲಾ ನಾನಾ ತರದ ದೀಪಗಳನ್ನು ಚಿತ್ರಗಳನ್ನು ಕಟ್ಟಿ ಬೆಳಕುಮಾಡಿದ್ದರು. ದೊಡ್ಡ ಕೆರೆಯಲ್ಲಿ ಮೆಟ್ಟಲುಗಳ ಮೇಲೂ, ಏರಿಯ ಮೇಲೂ ಸಾಲು ಸಾಲಾಗಿ ದೀಪಗಳನ್ನಿಟ್ಟು, ಅವು ನೀರಿನಲ್ಲಿ ಇಮ್ಮಡಿಯಾಗಿ ಪ್ರತಿಬಿಂಬಿಸುವಂತೆಯೂ, ನಕ್ಷತ್ರ ಮಂಡಲವು ಭೂಮಿಯ ಮೇಲೆಯೇ ಇಳಿದಿದೆಯೋ ಎನ್ನುವಂತೆಯೂ ಮಾಡಿದ್ದರು.

ರೆಸಿಡೆನ್ಸಿ ಬಂಗಲೆಯಲ್ಲಿ ಆ ರಾತ್ರಿ ವೈಸರಾಯರವರಿಗೆ ಔತಣವಾಯಿತು. ಸುಮಾರು ೧೦೦ ಜನರ ವರೆಗೆ ಸರದಾರರು ಕೂತುಕೊಂಡು ಭೋಜನ ಮಾಡಿದರು. ಭೋಜನಾನಂತರ ವೈಸರಾಯರವರು ಮುಂತಾದವರೆಲ್ಲಾ ಮಹಾರಾಜ ಚಕ್ರವರ್ತಿಯವರ ಶ್ರೇಯಃಪ್ರಾರ್ಥನೆಯನ್ನು ಮಾಡಿದರು. ತರುವಾಯ ಬಂಗಲೆಯ ಎದುರಿನ ತೋಟದಲ್ಲಿ ವಿಚಿತ್ರವಾದ ಬಾಣಗಳು ಹಾರಿಸಲ್ಪಟ್ಟವು.

ಪಟ್ಟಾಭಿಷೇಕೋತ್ಸವವು.

೮ನೇ ಶುಕ್ರವಾರ.— ಆ ದಿನ ಬೆಳಿಗ್ಗೆ ೭ ಗಂಟೆಗೆ ಮೊದಲೇ ಪಟ್ಟಣದ ಪ್ರಜೆಗಳೆಲ್ಲಾ ಶ್ರೀಮನ್ ಮಹಾರಾಜರವರ ಪಟ್ಟಾಭಿಷೇಕೋತ್ಸವದ ವಿಜೃಂಭಣೆಯನ್ನು ನೋಡುವದಕ್ಕಾಗಿ ವೈಸರಾಯರವರು ದಯಮಾಡುವ ರಸ್ತೆಯ ಉದ್ದಕ್ಕೂ ಉಭಯಪಾರ್ಶ್ವಗಳಲ್ಲೂ ಬಂದು ಸೇರಿದರು. ವೈಸರಾಯರವರ ಮೆರವಣಿಗೆ ೯||| ಗಂಟೆಗೆ; ಪಟ್ಟಾಭಿಷೇಕವಾಗುವದು ೧೦ ಗಂಟೆಗೆ ಎಂಬದಾಗಿ ಗೊತ್ತಾಯಿತು. ರೆಸಿಡೆನ್ಸಿ ಬಂಗಲೆಯಿಂದ ವೈಸರಾಯರವರು ದಕ್ಷಿಣಕ್ಕೆ ಹೊರಟು, ಕುಪ್ಪಣ್ಣನ ತೋಟದ ಮುಂಭಾಗದಲ್ಲಿ ಬಂದು, ಬಲಕ್ಕೆ ತಿರುಗಿ ಕರ್ಜನ್ ಪಾರ್ಕಿನೊಳಕ್ಕೆ ಪ್ರವೇಶಿಸಿ, ಲೇಟ್ ಮಹಾರಾಜರವರ ಪ್ರತಿಮೆಯ ಮುಂಭಾಗದಲ್ಲಿ ಹೊರಟು, ಆಲ್ಬರ್ಟ್ ವಿಕ್ಟರ್ ರಸ್ತೆ, ಅಲ್ಲಿಂದ ಎಡಕ್ಕೆ ತಿರುಗಿ ಲಾನ್ಸ್‌ಡೌನ್ ಬಜಾರ್ ಮುಂಭಾಗದ ರಸ್ತೆ, ಮುಂದೆ ಬಲಕ್ಕೆ ತಿರುಗಿ ಲಕ್ಷ್ಮೀವಿಲಾಸ ರಸ್ತೆಗಳಲ್ಲಿ ಹಾಯಿಸಿ, ಜಗನ್ಮೋಹನ ಬಂಗಲೆಯ ಪಟ್ಟಾಭಿಷೇಕ ಮಂಟಪಕ್ಕೆ ದಯಮಾಡುತ್ತಾರೆಂದು ಈ ರಸ್ತೆಗಳನ್ನೆಲ್ಲಾ ನಿರ್ಮಲವಾಗಿ ಮಾಡಿ, ಉದ್ದಕ್ಕೂ ಕಂಭಗಳನ್ನೂ ತೋರಣಗಳನ್ನೂ, ಬಾವುಟ ಮುಂತಾದ್ದನ್ನೂ ಕಟ್ಟಿ ಶೃಂಗಾರಮಾಡಿದರು. ಈ ರಸ್ತೆಯ ಉಭಯಪಾರ್ಶ್ವಗಳಲ್ಲೂ ಉದ್ದಕ್ಕೂ ೪-೬ ಗಜಗಳಿಗೊಬ್ಬನಂತೆ ಪೋಲೀಸಿನವನೂ, ಮೈಸೂರು ಸಿಲ್ಲೇದಾರ್ ಕುದುರೆ ಸವಾರನೂ ನಿಂತಿದ್ದರು. ಲೇಟ್ ಮಹಾರಾಜರ ಪ್ರತಿಮೆಯಿಂದ ಮೇಲಕ್ಕೆ ಇಂಪೀರಿಯಲ್ ಸರ್ವಿಸ್ ಕುದುರೆ ಸವಾರರೂ, ಆನೆಯ ಮೇಲೆ ಬರುವವರೂ, ಕಟ್ಟಿಗೆಯವರೂ, ಸಿಪಾಯಿಗಳೂ ಉದ್ದಕ್ಕೂ ನಿಂತುಕೊಂಡರು. ಲಕ್ಷ್ಮೀವಿಲಾಸ ರಸ್ತೆಯಲ್ಲಿ ಮಹಾರಾಜರವರ ಬಿರುದುಗಳೂ ಬಾಡಿಗಾರ್ಡ್ ಸವಾರರೂ ನಿಂತುಕೊಂಡರು. ನೋಟಕ್ಕಾಗಿ ಈ ರಸ್ತೆಯಲ್ಲಿ ಆ ದಿನ ತುಂಬಿ ನಿಂತಿದ್ದ ಪ್ರಜೆಗಳ ಸಂಖ್ಯೆಯನ್ನು ಇಷ್ಟಿಷ್ಟೆಂದು ಹೇಳುವದಕ್ಕಾಗದು. ಜನರ ಗುಂಪೂ ಮೋಜಾಟವೂ ವಿವರಿಸಕೂಡದು. ರಸ್ತೆಗೆ ಬಹಳ ನೀರು ಚೆಲ್ಲಿ ತಂಪಾಗಿ ಮಾಡಿದ್ದರು. ಹವಾ ಕೂಡಾ ಹರ್ಷಕರವಾಗಿತ್ತು. ಸೂರ್ಯಕಿರಣಗಳು ಬಹು ಶಾಂತವಾಗಿದ್ದುವು. ಮನುಷ್ಯ ಪ್ರಯತ್ನವೂ ಭಗವದನುಗ್ರಹವೂ ವಿಶೇಷವಾಗಿ ಕೂಡಿದ್ದರಿಂದ ಈ ಉತ್ಸವದ ಸಂತೋಷವು ಅಪಾರವಾದದ್ದಾಯಿತು.

ಇಷ್ಟೆಲ್ಲಾ ಸಿದ್ಧವಾದಮೇಲೆ ಸುಮಾರು ೯| ಗಂಟೆಗೆ ದಿವಾನ್ ಮೆ|| ಕೃಷ್ಣಮೂರ್ತಿಯವರೂ, ಅಳಿಯಂದಿರುಗಳಾದ ಮೆ|| ಕಾಂತರಾಜೇ ಅರಸಿನವರು ಮೆ|| ದೇವರಾಜೇ ಅರಸಿನವರು, ಮೆ|| ಲಕ್ಷ್ಮೀಕಾಂತರಾಜೇ ಅರಸಿನವರೂ ಒಂದು ಗಾಡಿಯಲ್ಲಿ ಕುಳಿತು, ಜಗನ್ಮೋಹನ ಬಂಗಲೆಯಿಂದ ಹೊರಟು, ರೆಸಿಡೆನ್ಸಿಗೆ ಹೋಗಿ, ಎಲ್ಲಾ ಸಿದ್ಧವಾಗಿದೆ, ದಯಮಾಡಿಸಬೇಕೆಂದು ವೈಸರಾಯರವರಿಗೆ ಅರಿಕೆಮಾಡಿ ವಾಪಸು ಬಂದರು.

ವೈಸರಾಯರವರು ೯||| ಗಂಟೆಗೆ ರೆಸಿಡೆನ್ಸಿ ಬಂಗಲೆಯಿಂದ ಹೊರಟು ಪಟ್ಟಾಭಿಷೇಕ ಮಂಟಪವನ್ನು ೯|| ಗಂಟೆಗೆ ತಲುಪಿದರು. ಈ ಮೆರವಣಿಗೆಯು ಅಪೂರ್ವವಾದದಾಗಿತ್ತು. ಮುಂಭಾಗದಲ್ಲಿ ಐದೈದಾಗಿ ಸಾಲುಕಟ್ಟಿದ ಇಂಗ್ಲಿಷ ಕುದುರೆ ಸವಾರರು ವಿಶೇಷವಾದ ದಿರಸುಗಳನ್ನು ಹಾಕಿಕೊಂಡು, ಕೈಯಲ್ಲಿ ಚಿಕ್ಕ ಕತ್ತಿಗಳನ್ನು ಹಿಡಿದು ಹೊರಟರು. ಎಡಪಾರ್ಶ್ವದ ನಡುವಿನಲ್ಲಿ ಬಿದಿರು [illegible]ಗಳನ್ನು ತೂಗಿಬಿಟ್ಟುಕೊಂಡಿದ್ದರು. ಈ ಸ್ವಾರರು ೨೪೦ ಮಂದಿ ವೈಸರಾಯರವರ ಮುಂದುಗಡೆಯಲ್ಲಿ ಹೋದರು. ವೈಸರಾಯರವರ ಗಾಡಿ ಬಂದಿತು. ಅದರಲ್ಲಿ ಒಂದು ಕಡೆ ವೈಸರಾಯರವರೊಬ್ಬರೇ ಕುಳಿತಿದ್ದರು. ಇವರು ಹಾಕಿಕೊಂಡಿದ್ದ ದಿರಸು ಬಹು ಅಟ್ಟಹಾಸವಾಗಿತ್ತು. ಅವರ ಬಿರುದುಗಳೆಲ್ಲಾ ಎದೆಯಮೇಲೂ, ಕೊರಳುಗಳಮೇಲೂ ಪ್ರಕಾಶಿಸುತ್ತಿದ್ದವು. ಸುವರ್ಣ ವಜ್ರಖಚಿತವಾದ ಭುಜಕೀರ್ತಿಗಳೂ, ಅಮೂಲ್ಯವಾದ ರಂಗಿಗಳಿಂದ ತಯಾರಾದ ಕಾಲ್‌ಪಟ್ಟಿ, ಕಮರುಬಂದಿ, ಕಂಠಾಭರಣಗಳೂ ನೋಟಕರ ಕಣ್ಣುಗಳನ್ನು ಸೆಳೆಯುವಹಾಗೆ ಥಳಥಳಿಸುತ್ತಿದ್ದವು. ಅವರು ಧರಿಸಿಕೊಂಡಿದ್ದ ಟೋಪಿಯಮೇಲೆ ಶ್ರೇಷ್ಠವಾದ ಸ್ವಚ್ಛ ಬಿಳಿಯ ಗರಿಗಳು ಮಂದವಾಯುವಿನಲ್ಲಿ ನೇತ್ರಾನಂದಕರವಾಗಿ ಹೊಯ್ದಾಡುತ್ತಲೂ ಅಲುಗುತ್ತಲೂ ಇದ್ದವು. ಮಂದವಾದ ಸೂರ್ಯಕಿರಣಗಳು ಅವರ ಪೋಷಾಕಿನ ಮೇಲೆ ಬಿದ್ದು ಬಹು ಗಂಭೀರವಾದ ಪ್ರಕಾಶವನ್ನುಂಟುಮಾಡಿದವು. ಅದೇ ಗಾಡಿಯಲ್ಲಿ ವೈಸರಾಯರವರ ಎದುರು ಪಾರ್ಶ್ವದಲ್ಲಿ ನಮ್ಮ ರೆಸಿಡೆಂಟರೂ, [illegible] ಕುಳಿತುಕೊಂಡಿದ್ದರು. ಇವರ ಹಿಂದೆ ಬಂದ ಎರಡನೇ ಗಾಡಿಯಲ್ಲಿ ವೈಸರಾಯರ ಸಂಗಡ ಬಂದಿರತಕ್ಕ ಅಧಿಕಾರಿಗಳೂ, ಅವರ ಹಿಂದಿನ ಗಾಡಿಯಲ್ಲಿ ಸರದಾರರೂ ಬಂದರು. ತರುವಾಯ ಐದೈದಾಗಿ ಸಾಲು ಕಟ್ಟಿದ ೨೦೦ ಇಂಗ್ಲಿಷ್ ಕುದುರೆ ಸವಾರರು ಮೇಲ್ಕಂಡಂತೆ ಆಯುಧಪಾಣಿಗಳಾಗಿ ಸಾಲು ಮಾಡಿಕೊಂಡು ಹೋದರು. ಇವರ ಹಿಂದೆ ೬ ಇಂಗ್ಲಿಷ್ ಫಿರಂಗಿಗಳು ಬಂದವು. ಪ್ರತಿ ಫಿರಂಗಿ ಗಾಡಿಗೂ ೬ ಜತೆ ಕುದುರೆಗಳಂತೆ ಕಟ್ಟಿದ್ದರು. ಇಂಗ್ಲಿಷ್ ಸಿಪಾಯಿಗಳೇ ಗಾಡಿಗಳ ಮೇಲೂ ಕುದುರೆಗಳ ಮೇಲೂ ಕೂತು ಇದ್ದರು. ಈ ಫಿರಂಗಿ ಗಾಡಿಗಳನ್ನಾಗಲಿ, ಇಷ್ಟೊಂದು ಇಂಗ್ಲಿಷ ಕುದುರೆ ಸೈನ್ಯವನ್ನಾಗಲಿ ಮೈಸೂರಿನ ಪ್ರಜೆಗಳು ಎಂದಿಗೂ ಕಂಡಿದ್ದಿಲ್ಲ. ಎಲ್ಲರೂ ಭೀತಿ, ಗಾಂಭೀರ್ಯ, ಉಲ್ಲಾಸ, ಸಂತೋಷಗಳಿಂದ ಕೂಡಿ ಈ ಮೆರವಣಿಗೆಯನ್ನು ನೋಡಿ ಆನಂದಪಟ್ಟರು. ಈ ಪ್ರಕಾರ ಅಟ್ಟಹಾಸದೊಡನೆ ಕೂಡಿದ ವೈಸರಾಯರವರು ಸುಮಾರು ೯||| ಗಂಟೆಗೆ ಜಗನ್ಮೋಹನ ಬಂಗಲೆಯನ್ನು ತಲುಪಿ, ಪಟ್ಟಾಭಿಷೇಕ ಮಂಟಪಕ್ಕೆ ಪ್ರವೇಶಮಾಡಿದರು. ಇವರು ರೆಸಿಡೆನ್ಸಿ ಬಂಗಲೆಯಿಂದ ಹೊರಟಾಗಲೂ, ಪಟ್ಟಾಭಿಷೇಕ ಮಂಟಪವನ್ನು ತಲುಪಿದಾಗಲೂ ಎರಡಾವರ್ತಿ ಗೌರವಾರ್ಥವಾಗಿ ೩೧ ತೋಪುಗಳು ಹಾರಿಸಲ್ಪಟ್ಟವು.

ಪಟ್ಟಾಭಿಷೇಕ ಮಂಟಪವು.

ನಮ್ಮ ಶ್ರೀಮನ್ಮಹಾರಾಜರವರಿಗೆ ಶ್ರೀಮತ್ ವೈಸರಾಯ ಕರ್ಜನ್ ಪ್ರಭುಗಳವರು ಮೈಸೂರು ಸಂಸ್ಥಾನದ ರಾಜ್ಯಭಾರವನ್ನು ದಯಪಾಲಿಸತಕ್ಕ ಶುಭಕಾಲವು ಈ ತಿಂಗಳ ೮ನೇ ತಾರೀಖು ಬೆಳಿಗ್ಗೆ ೯||| ಗಂಟೆಗೆ ನೆರವೇರತಕ್ಕದ್ದೆಂಬದಾಗಿ ಸರ್ಕಾರದ ಅಪ್ಪಣೆಯಾಗಿತ್ತು. ಈ ಶುಭಮುಹೂರ್ತಕ್ಕೆ ಅರ್ಧಗಂಟೆ ಹೊತ್ತಿಗೆ ಮುಂಚೆಯೇ ದರ್ಬಾರಿಗೆ [illegible] ಮಂದಿರದೊಳಗೆ ಆಗಂತುಕರೆಲ್ಲಾ ಸೇರಿ ಕುರ್ಚಿಗಳಲ್ಲಿ ಕುಳಿತಿದ್ದರು. ದರ್ಬಾರು ಮಂಟಪದ ಮೇಲ್ಭಾಗದಲ್ಲಿ ಸ್ವಲ್ಪ ಎತ್ತರವಾಗಿ ಕಟ್ಟಿಸಿದ್ದ ಜಗಲಿಯಿತ್ತು. ಇದರಮೇಲೆ ವೈಸರಾಯರವರಿಗೋಸ್ಕರವೂ ಮಹಾರಾಜರವರಿಗೋಸ್ಕರವೂ ಎರಡು ಕುರ್ಚಿಗಳನ್ನು ಇರಿಸಿದ್ದರು. ವೈಸರಾಯರವರು ಮಹಾರಾಜರವರಿಗೆ ರಾಜ್ಯಭಾರವನ್ನು ವಹಿಸುವ ಸಂಕೇತ ಅವಸರದಲ್ಲಿ ಕೂತುಕೊಳ್ಳುವದಕ್ಕಾಗಿ ಜಗಲಿಯ ಮೇಲ್ಗಡೆ ಚಿನ್ನ ಬೆಳ್ಳಿಯಿಂದ ವಿಚಿತ್ರವಾಗಿ ಮಾಡಿದ್ದ ಸುಂದರವಾದ ಎರಡು ದೊಡ್ಡ ಕುರ್ಚಿಗಳಿದ್ದುವು. ದರ್ಬಾರು ಮಂಟಪದ ಮಧ್ಯಭಾಗದಲ್ಲಿ ಉದ್ದಕ್ಕೂ ಸುಂದರವಾದ ಜಮಖಾನವನ್ನು ಹಾಸಿತ್ತು. ಈ ಭಾಗದಲ್ಲಿ ಯಾರೂ ಕುಳಿತಿರಲಿಲ್ಲ. ಮಂಟಪದ ಪಶ್ಚಿಮ ಭಾಗವಾಗಿ ನಿಂತು ಬಾಗಿಲು ಕಡೆಗೆ ನೋಡುವಲ್ಲಿ ವೈಸರಾಯರವರಿಗೋಸ್ಕರ ಇಟ್ಟಿದ್ದ ಕುರ್ಚಿಯು ಬಲಗಡೆಯಲ್ಲಿಯೂ ಮಹಾರಾಜರವರಿಗೋಸ್ಕರ ಇಟ್ಟಿದ್ದ ಕುರ್ಚಿಯು ಎಡಗಡೆಯಲ್ಲಿಯೂ ಇದ್ದವು. ಮಂಟಪದ ಬಲಗಡೆಯಲ್ಲಿ ಕುರ್ಚಿಗಳನ್ನು ಸಾಲಾಗಿಟ್ಟಿತ್ತು. ಇವುಗಳಲ್ಲಿ ಮೈಸೂರು ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರೂ ಅವರ ಸಂಸಾರದವರೂ, ಬ್ರಿಟಿಷ್ ಸೇನೆಯ ಉದ್ಯೋಗಸ್ಥರೂ ಸಿವಿಲ್ ಖಾತೆಯ ಅಧಿಕಾರಿಗಳೂ ಯೂರೋಪಿಯನ್ ದೊಡ್ಡ ಮನುಷ್ಯರೂ ಕುಳಿತುಕೊಂಡಿದ್ದರು. ಎಡಗಡೆಯಲ್ಲಿ ಹಾಕಿದ್ದ ಕುರ್ಚಿಗಳಲ್ಲಿ ಸಂಸ್ಥಾನದ ದಿವಾನರವರೂ ಸರ್ಕಾರದ ದೊಡ್ಡ ದೊಡ್ಡ ಅಧಿಕಾರಿಗಳೂ ಮುಖ್ಯ ಅತಿಥಿಗಳೂ ಕುಳಿತಿದ್ದರು. ಈ ಕುರ್ಚಿಗಳಿರುವ ಪಾರ್ಶ್ವದ ಹಿಂದುಗಡೆ ಮಹಡಿಯಲ್ಲಿ ಕೆಂಪು ರೇಶಿಮೆಯ ತೆರೆಯ ಹಿಂದುಗಡೆ ಮಹಾರಾಣಿಯವರು ಬಿಜಯಮಾಡಿದ್ದರು. ಬಲಗಡೆಯ ಮಹಡಿಯ ಮೇಲೆ ಯೂರೋಪಿಯನ್ ಸ್ತ್ರೀ ಜನರು ಕೂತಿದ್ದರು. ಇವರಿಗಿಂತಲೂ ಎಡಗಡೆಯ ಮಹಡಿಯ ಮೇಲೆ ಪರದೆಗಳಿರುವ ಹಿಂದೂ [illegible] ದೇಶೀಯ ಸ್ತ್ರೀ ಜನಗಳಿಗೋಸ್ಕರ ಸ್ಥಳವನ್ನು ಬಿಟ್ಟಿದ್ದರು. ಮಂಟಪದ ದ್ವಾರ ಪ್ರದೇಶದಲ್ಲಿ ಅನೇಕ ಮಂದಿ ಬ್ರಿಟಿಷ್ ಸ್ವಾರರು ನಿಂತಿದ್ದರು. ಇವರು ವಿನೋದವನ್ನು ನೋಡುವದಕ್ಕೆ ಬಂದಿದ್ದವರಿಂದ [illegible] ಮೇಲೆ ಒಂದಿದ್ದರು. ಆಗಂತುಕರಿಗೋಸ್ಕರ ಅಲ್ಲಲ್ಲಿ ಮಾಡಿದ್ದ ಏರ್ಪಾಡುಗಳೆಲ್ಲಾ ಸಮರ್ಪಕವಾಗಿದ್ದವು. [illegible] ಕೆಲವು ಮಂದಿ [illegible] ಕೂತುಕೊಳ್ಳುವದಕ್ಕೆ ಅನುಕೂಲವಿಲ್ಲದೆ ಹೋಯಿತು. ವೈಸರಾಯರವರು ದರ್ಬಾರು ಮಂಟಪದ [illegible] ದರ್ಬಾರು ಇಷ್ಟು ಕ್ರಮವಾಗಿ ನಡೆದದ್ದನ್ನು ನೋಡಲಿಲ್ಲವೆಂದು ಸಂತೋಷಪಟ್ಟರೆಂಬದಾಗಿ ಕೇಳುತ್ತೇವೆ. ಮಂಟಪದ [illegible] ಕಾವಲು ಕಾಯುತ್ತಿತ್ತು. ಇವರ ಬಳಿಯಲ್ಲಿ [illegible] ಬ್ರಿಟಿಷ್ ಸೇನೆಯು [illegible] ನಿಂತಿದ್ದರು.

ಆಗಂತುಕರೆಲ್ಲರೂ ಮೆತ್ತಗೆ [illegible] ಕಾಲು ಘಂಟೆ ಮುಂಚಿತವಾಗಿ ೩೧ ತೋಪುಗಳ ಹಾರಾಟವಾಗಿ ವೈಸರಾಯರವರು ರೆಸಿಡೆನ್ಸಿಯಿಂದ ಹೊರಟ [illegible] ದರ್ಬಾರು ಮಂಟಪಕ್ಕೆ [illegible] ಗೊತ್ತಾಯಿತು. ಕೂಡಲೆ ಮಂಟಪದಲ್ಲಿ ನಿಶ್ಶಬ್ದವಾಯಿತು. [illegible] ವೈಸರಾಯರವರನ್ನು [illegible] ಕರೆದುಕೊಂಡು [illegible] ವೈಸರಾಯರವರು [illegible] ರಾಜ್ಯಭಾರದ [illegible] ಮಂಟಪದ [illegible] ತರುವಾಯ ವೈಸರಾಯರವರೂ ಮಹಾರಾಜರವರೂ ತಮ್ಮ ತಮ್ಮ [illegible] ಮಂಟಪದ [illegible] ಸಂಸ್ಥಾನದ [illegible] ನಡೆಯುತ್ತಿದ್ದವು. [illegible] ಮಹಾರಾಜರವರ [illegible] ಮಹಾರಾಜರವರು [illegible] ವೈಸರಾಯರವರ [illegible] ಲಕ್ಷ್ಮೀಕಾಂತರಾಜೇ ಅರಸಿನವರು [illegible] ವೈಸರಾಯರವರೂ ಮಹಾರಾಜರವರೂ [illegible] ವೈಸರಾಯರವರೂ ಮಹಾರಾಜರವರು [illegible] ದೊಡ್ಡ ಮನುಷ್ಯರು [illegible] ಪತ್ರಗಳನ್ನು [illegible] ತರುವಾಯ [illegible] ವೈಸರಾಯರವರ [illegible] ಕರ್ಜನ್ ಪ್ರಭುಗಳು [illegible] ಗಾಂಭೀರ್ಯವಾಗಿಯೂ, [illegible]

...ಗಳನ್ನು ಸಕಲರಿಗೂ ಪ್ರತ್ಯಕ್ಷವಾಗಿ ತಿಳಿಸಿ ಒರುವಂತೆಯೂ ಕೆಲವು ಕಾಗದಗಳನ್ನು ಅಪ್ಪಣೆ ಕೊಡಿಸಿದರು.

ವೈಸರಾಯರ ಅಗ್ರಾಸನ.

ಹೈನೆಸ್ ಮಹಾರಾಜ ಶ್ರೀ ಕೃಷ್ಣರಾಜೇಂದ್ರ ಒಡೆಯರವರಿಗೆ ನಮ್ಮ ಮೈಸೂರು ಸೀಮೆಯ ರಾಜ್ಯಭಾರವನ್ನು ವಹಿಸುವಾಗ್ಗೆ ಅಪ್ಪಣೆ ಕೊಡಿಸಿದ್ದೇನೆಂದರೆ—

ನಾನು ಈ ದೇಶಕ್ಕೆ ಬಂದಂದಿನಿಂದ ಯಾವ ಮಹಾರಾಜರಿಗಾದರೂ ರಾಜ್ಯಭಾರವನ್ನು ಒಪ್ಪಿಸಿಕೊಡುವದಕ್ಕೆ ಸ್ವತಃ ಬಂದದ್ದು ಇದೇ ಮೊದಲನೇ ಸಾರಿ. ಮೈಸೂರು ಸಂಸ್ಥಾನದ ಐಶ್ವರ್ಯವನ್ನೂ ಈ ಮಹಾರಾಜರವರ ಅಭಿವೃದ್ಧಿಯನ್ನು ಬಹು ಲಕ್ಷ್ಯವಿಟ್ಟು ನೋಡಿಕೊಳ್ಳುತ್ತಾ ಬಂದಿರುವದರಿಂದಲೂ ಅವರ ವಿಷಯದಲ್ಲಿ ನನಗೆ ಪೂರ್ಣಾರ್ಧವಾದ ಹಿತಚಿಂತನೆಯಿರುವದರಿಂದಲೂ ಅವರನ್ನು ರಾಜ್ಯಾಭಿಷಿಕ್ತರಾಗಮಾಡತಕ್ಕ ಈ ಶುಭಕಾರ್ಯದಲ್ಲಿ ನನಗೆ ಪರಮಸಂತೋಷವಾಗಿದೆ. ಈ ರಾಜ್ಯದ ವಿಷಯದಲ್ಲಿಯೂ ಈ ಮಹಾರಾಜರವರ ಸುಂದರ ಅಭಿವೃದ್ಧಿಯಲ್ಲಿಯೂ ನಾನು ಬಹು ಆಸಕ್ತಿಯುಳ್ಳವನಾಗಿರದಿದ್ದರೆ ಸಿಮ್ಲಾ ಪಟ್ಟಣದಿಂದ ಇಷ್ಟು ದೂರದವರೆಗೂ ಪ್ರಯಾಣಮಾಡಿ ಬರುತ್ತಿರಲಿಲ್ಲ. ಮಹಾರಾಜರವರ ವಿಷಯದಲ್ಲಿ ಹೇಳಬೇಕಾದದ್ದನ್ನು ಹೇಳುವದಕ್ಕಿಂತ ಮುಂಚೆ ಈ ಮೈಸೂರು ರಾಜ್ಯಭಾರದ ವಿಷಯದಲ್ಲಿ ಇಂಡಿಯಾ ರಾಜ್ಯೀಯ ಆಧಿಪತ್ಯದವರು ಇಷ್ಟು ಆಸಕ್ತರಾಗುವದಕ್ಕೆ ಕಾರಣವೇನಾಯಿತೆಂಬುವದನ್ನು ಸ್ವಲ್ಪ ವಿವರಿಸುತ್ತೇನೆ.

ಈ ಸಂಸ್ಥಾನವು ೫೦ ವರ್ಷಗಳ ಕಾಲ ಬ್ರಿಟಿಷ್ ರಾಜ್ಯಭಾರಕ್ಕೆ ಒಳಪಟ್ಟಿದ್ದಾಗ್ಯೆ ತಿಂಬ ವನ್ನು ನಾವು ಮರೆಯಬಾರದು. ಆ ಕಾಲದಲ್ಲಿ ಬ್ರಿಟಿಷರ ಆಧಿಪತ್ಯದ ಕ್ರಮ, ತಿದ್ದುಪಾಟು, ಅನುಭವ ಇವುಗಳಿಂದ ಕಡೆಯುವಮಾದ ಫಲಗಳೆಲ್ಲಾ ಈ ಸಂಸ್ಥಾನಕ್ಕೆ ಲಭಿಸಿದವು. ಸ್ವದೇಶೀಯ ರಾಜರುಗಳು ತಮ್ಮ ಸಂಸ್ಥಾನಗಳನ್ನು ಯಥೋಚಿತವಾಗಿ ಆಳುವದಕ್ಕೆ ಶಕ್ತರಾಗಿರುತ್ತಾರೋ ಇಲ್ಲವೋ ಪರೀಕ್ಷಿಸಿ ತಿಳಿಯಬೇಕೆಂಬ ಅಭಿಪ್ರಾಯದಿಂದ ಬ್ರಿಟಿಷ್ ಆಧಿಪತ್ಯದವರು ಮೈಸೂರು ರಾಜ್ಯಭಾರವನ್ನು ಪುನಃ ಮಹಾರಾಜರವರ ವಶಕ್ಕೊಪ್ಪಿಸಿದರು. ಈ ಕಾರ್ಯದಲ್ಲಿ ಬಹಳ ಆಸಕ್ತರಾಗಿ ನಡೆಸಿದವರು ಇಂಗ್ಲಾಂಡಿನ ಪ್ರಧಾನಿಯಾಗಿದ್ದ ಶ್ರೀಯುತ ಗ್ಲಾಡ್‌ಸ್ಟನ್ ಮತ್ತು ಸ್ಟೇಟ್ ಸೆಕ್ರೆಟರಿಗಳ ದೇಶಕ್ಕೆ ರಾಜಿನಾಮೆ ಕೊಟ್ಟ ಸಾಲ್ಸ್‌ಬರಿ ಪ್ರಭುಗಳು. ಇವರ ಪ್ರಯಾಸದ ದೆಸೆಯಿಂದ ಬ್ರಿಟಿಷ್ ಆಧಿಪತ್ಯದವರು ಮೈಸೂರು ಸಂಸ್ಥಾನಕ್ಕೆ ದೇಶೀಯ ರಾಜರುಗಳ ಆಳ್ವಿಕೆಯನ್ನು ವಹಿಸಿಕೊಟ್ಟದ್ದು ನ್ಯಾಯವಾಗಿಯೂ ಬ್ರಿಟಿಷರ ದಯೆಯನ್ನು ವ್ಯಕ್ತಪಡಿಸತಕ್ಕದ್ದಾಗಿಯೂ ಇರುತ್ತದಷ್ಟೆ. ಇದು ಬ್ರಿಟಿಷರ ದಯೆಯಾಗಿರುವದಲ್ಲದೆ ಮೈಸೂರು ಸಂಸ್ಥಾನದ ರಾಜರ ಆಳ್ವಿಕೆಯ ಶಕ್ತಿಯನ್ನೂ ಇತರ ದೇಶೀಯ ರಾಜರುಗಳ ಸಾಮರ್ಥ್ಯವನ್ನೂ ಪರೀಕ್ಷಿಸತಕ್ಕ ಮಹಾಕಾರ್ಯವಾಗಿದೆಯೆಂದು ತಿಳಿಯಬೇಕು. ಈ ಪರೀಕ್ಷೆಯಲ್ಲಿ ಮೈಸೂರು ಸಂಸ್ಥಾನದ ಆಳ್ವಿಕೆಯು ಕೀರ್ತಿಯನ್ನು ಹೊಂದದೆ ಹೋಗಿದ್ದರೆ ಬ್ರಿಟಿಷರು ದೊಡ್ಡ ಮನಸ್ಸು ಮಾಡಿ ರಾಜ್ಯಭಾರವನ್ನು ಒಪ್ಪಿಸಿಕೊಟ್ಟದ್ದು ವ್ಯರ್ಥವಾಯಿತೆಂದು ತಿಳಿಯುವದು. ಈ ಕಾರಣದಿಂದ ಇನ್ನು ಮೇಲೆ ದೇಶೀಯ ರಾಜ್ಯಭಾರಗಳನ್ನು ಆಯಾ ಅಧಿಪತಿಗಳು ನಡಸಿಕೊಂಡು ಹೋಗುವಂತೆ ಅಪ್ಪಣೆ ಕೊಡುವದು ನಿಷ್ಫಲವೆಂದು ಕೇಳಿ ಬ್ರಿಟಿಷರು ಈ ಅಭಿಪ್ರಾಯದೊಡನೆ ಸಮಸ್ತ ದೇಶೀಯ ರಾಜರ ವಿಷಯದಲ್ಲಿ ತಿರಸ್ಕಾರಭಾವವನ್ನು ಹೊಂದುವರು. ಇಂಥಾ ವಿಪತ್ತಿಲ್ಲಿ ಸಂಭವಿಸುವದೋ ಎಂಬ ಶಂಕೆಯಿಂದ ಮೈಸೂರು ಸಂಸ್ಥಾನದ ಅಭಿವೃದ್ಧಿಯ ವಿಷಯದಲ್ಲಿ ಸಮಸ್ತರೂ ಬಹು ಕುತೂಹಲವುಳ್ಳವರಾಗಿದ್ದರು. ಈ ಸಂಸ್ಥಾನದ ಆಳ್ವಿಕೆಯು ಸ್ವಲ್ಪವೂ ತಪ್ಪಿಲ್ಲದೆ ನಡೆಯುತ್ತಲಿದೆಯೆಂದಾಗ ಲಿ ಇದರ ರಾಜ್ಯಭಾರಕ್ಕೆ ಮೇಲ್ಪಂಕ್ತಿಯಾಗಿಟ್ಟುಕೊಂಡಿರುವ ರಾಜಧರ್ಮಸೂತ್ರಗಳು ಸಕಲ ಭಾಗಗಳಲ್ಲಿಯೂ ಉತ್ಕೃಷ್ಟವಾದವುಗಳಾಗಿವೆಯೆಂದಾಗಲಿ ನಾನು ಸಾಧಿಸಲಾರೆನು. ಭೂಲೋಕದಲ್ಲಿ ತಪ್ಪಿಲ್ಲದೆ ನಡೆಯಬೇಕೆಂದು ನಿಶ್ಚಯಿಸಿಕೊಳ್ಳುವದು ಹೆಚ್ಚು; ಅದರಂತೆ ನಡೆಯುವದು ಮಾತ್ರ ಕಠಿಣ. ಇದಂತೂ ಸ್ವಾಭಾವಿಕವಾದದ್ದಷ್ಟೆ. ಆದಾಗ್ಯೂ ಈ ಮೈಸೂರು ರಾಜ್ಯದ ರಾಜ್ಯಭಾರದ ವಿಷಯದಲ್ಲಿ ನಾನು ಸ್ವಲ್ಪವೂ ಅನುಮಾನವಿಲ್ಲದೆ ಹೇಳತಕ್ಕದೇನೆಂದರೆ—ಈ ಸಂಸ್ಥಾನದ ರಾಜ್ಯಭಾರವನ್ನು ವಹಿಸಿರುವ ರಾಜವಂಶದ ಅಧಿಪತಿಗಳೂ ಸಂಬಿಗಸ್ತರಾಗಿಯೂ ದೇಶಾಭಿಮಾನಿಗಳಾಗಿಯೂ ಇರುವ ಮಂತ್ರಿಗಳೂ ಈ ಸೀಮೆಯನ್ನು ಅಭಿವೃದ್ಧಿಗೆ ತರುವದರಲ್ಲಿ ಬಹಳ ಕಷ್ಟಪಟ್ಟಿರುತ್ತಾರೆ. ಇಲ್ಲಿ ಮೊದಲನೇ ದಿವಾನರಾಗಿದ್ದ ಮಿ॥ ರಂಗಾಚಾರ್ಲು ಯವರು ಮೈಸೂರು ಸೀಮೆಯು ದೇಶೀಯ ರಾಜರ ಆಳ್ವಿಕೆಗೆ ಬಂದನಂತರ ಬಹುಕಾಲ ಮಂತ್ರಿತ್ವವನ್ನು ಮಾಡುವಂತೆ ಭಗವಂತನ ಚಿತ್ತವಿರಲಿಲ್ಲ. ಇವರ ತರುವಾಯ ದಿವಾನ್ ಪದವಿಗೆ ಬಂದ ಸರ್ ಶೇಷಾದ್ರಿ ಐಯರವರು ೧೮ ವರ್ಷಗಳವರೆಗೂ ತಮ್ಮ ಗುಣಕ್ಕೂ ಸಾಮರ್ಥ್ಯಕ್ಕೂ ಅನುಸಾರವಾದ ಅಧಿಕಾರದಿಂದ ಈ ರಾಜ್ಯವನ್ನು ಆಳಿ ಪ್ರತಿಯೊಂದು ಡಿಪಾರ್ಟ್‌ಮೆಂಟಿನಲ್ಲಿಯೂ ತಮ್ಮ ಸಾಮರ್ಥ್ಯವನ್ನು ಸೂಚಿಸುವ ಗುರುತುಗಳನ್ನು ಮಾಡಿ ಹೋದರು. ಲೇಟ್ ಮಹಾರಾಜರವರು ಸಕಲ ಗುಣಸಂಪನ್ನರಾಗಿ ಪ್ರಜೆಗಳ ವಿಶ್ವಾಸವನ್ನು ಸಂಪೂರ್ಣವಾಗಿ ಸಂಪಾದಿಸಿಕೊಂಡು ಅಕಾಲ ಮರಣವನ್ನು ಹೊಂದಿದರು. ಅವರ ತರುವಾಯ ಸರ್ ಶೇಷಾದ್ರಿಯ್ಯರವರೂ ತೀರಿಹೋದರು. ಈ ಪ್ರಕಾರ ಪೂರ್ವಿಕ ರಾಜ್ಯಭಾರವು ತೀರಿದು ಹೋಗಿ ಈಗ ಹೊಸ ರಾಜ್ಯಭಾರವಾಗಿದೆ. ಹಿಂದಿನ ಎಂಟು ವರ್ಷಗಳಿಂದಲೂ ಈ ಸೀಮೆಯಲ್ಲಿ ಒಂದು ರೀಜೆನ್ಸಿಯಿಂದ ರಾಜ್ಯಭಾರವು ನಡೆಸಲ್ಪಡುತ್ತಿತ್ತು. ಆ ಕಾಲದಲ್ಲಿ ಶ್ರೀಮನ್ಮಹಾರಾಣಿ ಯವರು ದಿವಾನರಿಂದಲೂ ಮಂತ್ರಾಲೋಚನಾ ಸಾಮಾಜಿಕರಿಂದಲೂ ಸಹಾಯವನ್ನು ಪಡೆಯುತ್ತಾ ಬ್ರಿಟಿಷ್ ರೆಸಿಡೆಂಟರ ನಿರಂತರವಾದ ಬಲವಾದ ಅಶ್ರಯದಲ್ಲಿ ಈ ರಾಜ್ಯಭಾರವನ್ನು ನಿರ್ವಹಿಸುತ್ತಾ ಬಂದಿರುತ್ತಾರೆ. ಮಹಾರಾಜರವರು ಪ್ರಬುದ್ಧವಯಸ್ಕರಾಗುವವರೆಗೂ ಈ ಸೀಮೆಯಲ್ಲಿ ಅಭಿವೃದ್ಧಿ ಕಾರ್ಯಗಳು ನಿರ್ವಿಘ್ನವಾಗಿ ನಡೆಯುತ್ತಾ ಬಂದಿರುವದಕ್ಕೆ ಶ್ರೀಮನ್ಮಹಾರಾಣಿ ರೀಜೆಂಟರವರ ವಿವೇಕವೂ ಕಾಲೋಚಿತವಾದ ಸಹವಾಸಿಕೆಯೂ ಕಾರಣಗಳಾಗಿವೆಯೆಂದು ಇಂಡಿಯಾ ಸರ್ಕಾರಕ್ಕೆ ಪ್ರತಿನಿಧಿಯಾಗಿ ನಿಂತಿರುವವನಾದ ನಾನು ಬಹು ಸಂತೋಷದೊಡನೆ ತಿಳಿಸುತ್ತೇನೆ. ಇವರ ಅಂತರಂಗ ಬಹಿರಂಗಗಳಲ್ಲಿಯೂ ತಮ್ಮ ಮನೆತನದವರಿಗೂ ಪ್ರಜೆಗಳಿಗೂ ತಾತ್ಕಿಕೊಟ್ಟಿರುವ ಮೇಲ್ಪಂಕ್ತಿಯು? ಉತ್ಕೃಷ್ಟವಾದದ್ದಾಗಿರುವದರಿಂದ ಇವರನ್ನು ಸರ್ವಜನಗಳ ಮರ್ಯಾದೆಗೆ ಯೋಗ್ಯರಾದವರನ್ನಾಗ ಮಾಡಿದೆ.

ಶ್ರೀಮನ್ಮಹಾರಾಣಿಯವರು ಈ ಸಂಸ್ಥಾನಕ್ಕೆ ಮಾಡಿರುವ ಈ ಉಪಕಾರಗಳನ್ನು ಬ್ರಿಟಿಷ ಆಧಿಪತ್ಯದವರೂ ಪುರಸ್ಕರಿಸಿದ್ದಾರೆಂಬುವದಕ್ಕೆ ಸಾಕ್ಷಿಯಾಗಿ ಇವರು ಯಾವಜ್ಜೀವವೂ ೧೯ ತೋಪುಗಳ ಮರ್ಯಾದೆಯನ್ನು ಪಡೆಯುತ್ತಲಿರಬೇಕೆಂದು ನಾನು ಎಡ್ವರ್ಡ್ ಮಹಾರಾಜ ಚಕ್ರವರ್ತಿಗಳಿಗೆ ಅರಿಕೆಮಾಡಿಕೊಳ್ಳಲು ಅವರು ನನ್ನ ವಿಜ್ಞಾಪನೆಯನ್ನು ದಯಾಪೂರ್ವಕವಾಗಿ ನಡಸಿಕೊಟ್ಟಿರುತ್ತಾರೆ. ಇದನ್ನು ತಿಳಿಸುವದರಲ್ಲಿ ನನಗೆ ಆಹ್ಲಾದವುಂಟಾಗಿದೆ. ಮಹಾರಾಣಿಯವರು ಇಷ್ಟುಕಾಲ ಸಣ್ಣಂತರವೂ ತಾಳಿದ್ದ ಘನವಾದ ಪದವಿಯನ್ನು ಇತರರ ವಶಕ್ಕೊಪ್ಪಿಸಿಕೊಟ್ಟು ವಿಶ್ರಾಂತಿ ಸುಖವನ್ನು ಪಡೆಯುತ್ತಿರುವಲ್ಲಿ ತಾವು ಅಧಿಕಾರಯುಕ್ತರಾಗಿರುವಾಗ ಬುದ್ಧಿಯಿಂದಲೂ ಧೃಕ್ರಮದಿಂದಲೂ ನಡಸಿದ ಕಾರ್ಯಗಳ ಫಲವನ್ನು ಮುಂದೆ ತಮ್ಮ ಪುತ್ರರಾದ ಮಹಾರಾಜರವರ ಉತ್ಕೃಷ್ಟವಾದ ಆಳ್ವಿಕೆಯಲ್ಲಿ ಅನುಭವಿಸುತ್ತಿರುವರೆಂದು ನಾವೆಲ್ಲರೂ ನಿರೀಕ್ಷಿಸುವವರಾಗಿದ್ದೇವೆ.

ಈಗ ನಾನು ಈ ದಿನದ ಶುಭಕಾರ್ಯವನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈಗ ರಾಜ್ಯಾಭಿಷಿಕ್ತರಾಗುವದಕ್ಕಿರುವ ಮಹಾರಾಜರವರಿಗೆ ಒಂದೆರಡು ತಿಂಗಳ ಕೆಳಗೆ ೧೮ ವರ್ಷ ತುಂಬಿತು. ಅವರು ಎಂಟು ವರ್ಷಗಳಿಂದ ಪ್ರೌಢರಾಗಿದ್ದರು. ಈ ೮ ವರ್ಷ ಕಾಲವನ್ನು ಅವರು ಸೋಮಾರಿತನದಲ್ಲಿ ಕಳೆಯಲಿಲ್ಲ. ಹೊಟ್ಟೆಗೋಸ್ಕರವಾಗಿ ಕಟ್ಟುಹೋಗುವದಕ್ಕೆ ಆಸ್ಪದವಿರಲಿಲ್ಲ. ಮುಂದೆ ತಾವು ಮಾಡುವದಕ್ಕಿರುವ ಘನವಾದ ಉದ್ಯೋಗಕ್ಕೆ ಅವಶ್ಯವಾದ ಸುಶಿಕ್ಷಣದಲ್ಲಿ ಅವರ ಕಾಲವು ಅತ್ಯಂತ ತೃಪ್ತಿಕರವಾಗಿ ಕಳೆದಿರುತ್ತದೆ. ೫೦ ಲಕ್ಷ ಪ್ರಜೆಗಳನ್ನು ಆಳತಕ್ಕ ಕೆಲಸವು ಸುಲಭವಲ್ಲ. ಇಂಥ ಕೆಲಸಕ್ಕೆ ಅವಶ್ಯವಾದ ಯೋಗ್ಯತೆಯನ್ನು ಒದಗಿಸತಕ್ಕ ಶಿಕ್ಷಣವು ತಿರಸ್ಕಾರ ಭಾವದಿಂದ ಮಾಡತಕ್ಕದ್ದಲ್ಲ. ಇಂಥ ಘನವಾದ ಉದ್ಯೋಗಕ್ಕೆ ಸಕಲ ವಿಷಯದಲ್ಲಿಯೂ ಯೋಗ್ಯರಾಗಿರುವ ಮಿ॥ ಫ್ರೇಸರ್ ಯವರು ಉಪಾಧ್ಯಾಯರಾಗಿ ದೊರೆತಿದ್ದು ನಮ್ಮ ಪುಣ್ಯವೇ ಸರಿ. ಇವರು ತಮ್ಮ ಉದ್ಯೋಗದ ಕಷ್ಟವನ್ನೂ ಭಾರವನ್ನೂ ಬಹು ಚನ್ನಾಗಿ ತಿಳಿದವರಾಗಿದ್ದಲ್ಲದೆ ತಮ್ಮ ವಶಕ್ಕೊಪ್ಪಿಸಲ್ಪಟ್ಟ ವಿದ್ಯಾರ್ಥಿಯ ನಂಬಿಕೆಯನ್ನು ಸಂಪಾದಿಸಿಕೊಂಡು ಮಹಾರಾಜರವರಲ್ಲಿ ಅಡಗಿರುವ ಬುದ್ಧಿ ಸಾಮರ್ಥ್ಯಗಳನ್ನೆಲ್ಲಾ ಪ್ರಕಾಶಪಡಿಸುವಂಥ ಉತ್ಕೃಷ್ಟವಾದ ವಿದ್ಯಾಭ್ಯಾಸವನ್ನು ಮಾಡಿಸಿದ್ದಾರೆ. ವಿದ್ಯಾಗುರುಗಳಾದ ಮಿ॥ ಫ್ರೇಸರವರಿಂದ ಮಹಾರಾಜರವರು ಪಡೆದಿರುವ ವಿದ್ಯೆಯ ಸಂಗಡ ರಾಜ್ಯಭಾರದಲ್ಲಿರಬೇಕಾದ ಇತರ ಕಾರ್ಯಸಾಧನಾ ಕೌಶಲ್ಯವನ್ನು ಪಡೆಯುವ ವಿಷಯದಲ್ಲಿ ಮಹಾರಾಜರವರಿಗೆ ನಮ್ಮ ರೆಸಿಡೆಂಟರಾದ ಕರ್ನಲ್ ರಾಬರ್ಟ್‌ಸನ್ ಯವರು ಬಹು ಸಹಾಯಕರಾಗಿರುತ್ತಾರೆ. ಇವರಿಬ್ಬರ ಶಿಕ್ಷಣದಿಂದಲೂ ನಾನು ಮೊದಲು ಸೂಚಿಸಿದ ಮಾತೃಶ್ರೀ ಯವರ ಅಪೂರ್ವವಾದ ಮಾತೃಪ್ರೀತಿಯಿಂದಲೂ ಮಹಾರಾಜರವರ ಸ್ವಾಭಾವಿಕವಾದ ವಿವೇಕವು ಕ್ರಮೇಣ ಪ್ರವರ್ಧಮಾನವಾಗಿ ಕಡೆಗೆ ಪ್ರಜೆಗಳನ್ನು ಸಂರಕ್ಷಿಸುವ ಕಷ್ಟಸಾಧ್ಯವಾದ ಭಾರವನ್ನು ನಿರ್ವಹಿಸುವದಕ್ಕೆ ತಕ್ಕಷ್ಟು ಸಮರ್ಥರಾಗಿದ್ದಾರೆಂದು ನನಗೆ ದೃಢವಾಗಿ ನಂಬುವಂತಾಗಿದೆ.

ಮಹಾರಾಜರವರು ತಮ್ಮ ಪ್ರಜೆಗಳ ಸ್ಥಿತಿಗತಿಗಳನ್ನು ತಾವೇ ನೋಡಿ ತಿಳಿಯಬೇಕೆಂಬ ಉದ್ದೇಶದಿಂದ ಕಡೇ ಪಕ್ಷ ತಮ್ಮ ಸಂಸ್ಥಾನದಲ್ಲಿ ಸಂಚಾರ ಮಾಡಿ ಬಂದಿರುತ್ತಾರೆ. ಪ್ರಜೆಗಳನ್ನಾಳುವ ಕಾರ್ಯದಲ್ಲಿ ಯಾವ್ಯಾವ ಕಷ್ಟಗಳುಂಟೆಂಬುವದನ್ನು ಗ್ರಹಿಸುವಂಥ ತಿಳುವಳಿಕೆಯು ಮಹಾರಾಜರವರಿಗೆ ಈ ದೇಶಸಂಚಾರದಿಂದುಂಟಾಗಿದೆ. ಈ ತಿಳುವಳಿಕೆಯು ಸಹಾಯದಿಂದಲೂ ಸ್ವಾಭಾವಿಕವಾಗಿ ಕಾರ್ಯಗಳನ್ನು ಕ್ರಮವರಿತು ಕಾಲವಿಳಂಬವಿಲ್ಲದೆ ಮಾಡತಕ್ಕ ಅಭ್ಯಾಸದಿಂದಲೂ ಇತರರ ಸಹಾಯವನ್ನು ಅಪೇಕ್ಷಿಸದೆ ಯಾವ ಕಾರ್ಯವನ್ನಾದರೂ ತಾವೇ ಸ್ವಯಾಸಕ್ತಿಯಿಂದ ಮಾಡಬೇಕೆಂಬುವ ಗುಣದಿಂದಲೂ ಕೂಡಿದವರಾದ ಮಹಾರಾಜರವರು ರಾಜ್ಯಭಾರಕಾರ್ಯದಲ್ಲಿ ನಷ್ಟಕರವಾದ ತಪ್ಪು ದಾರಿಯನ್ನು ಬಿಟ್ಟು ಆದರ್ಶವಾದ ಸನ್ಮಾರ್ಗವನ್ನೇ ಹಿಡಿದು ನಡೆಯುವದಕ್ಕೆ ಅವಕಾಶವಿದೆ. ಇವರಿಗೆ ರಾಜ್ಯಭಾರದಲ್ಲಿ ಸಹಾಯ ಮಾಡುವದಕ್ಕೋಸ್ಕರ ಉದ್ಯೋಗದಲ್ಲಿ ನಿಯಮಿಸಲ್ಪಟ್ಟಿರುವ ಒಬ್ಬ ದಿವಾನರೂ ಇಬ್ಬರು ಸಮರ್ಥರಾದ ಮಂತ್ರಾಲೋಚನಾ ಸಾಮಾಜಿಕರೂ ನೇಮಿಸಲ್ಪಟ್ಟಿದ್ದಾರೆ. ಇದಲ್ಲದೆ ಮಹಾರಾಜರವರಿಗೆ ಆಯಾ ಕಾಲದಲ್ಲಿ ಅವಶ್ಯವಾದ ವಿಷಯಗಳನ್ನು ತಿಳಿಯಪಡಿಸುವದಕ್ಕೆ ಸಮರ್ಥರೆಂದು ಹೆಸರು ಹೊಂದಿರುವ ಪ್ರೈವೇಟ್ ಸೆಕ್ರೆಟರಿಯವರನ್ನು ನಾವು ಆರಿಸಿಕೊಂಡು ನೇಮಿಸಿದ್ದೇವೆ. ಮತ್ತು ಈ ಸಂಸ್ಥಾನಕ್ಕೆ ರೆಸಿಡೆಂಟರುಗಳಾಗಿ ಬರತಕ್ಕವರಲ್ಲಿ ಮಹಾರಾಜರವರು ಸಕಲ ಕಾಲದಲ್ಲಿಯೂ ಸ್ನೇಹಭಾವವನ್ನು ವ್ಯಕ್ತಪಡಿಸಿ ಅವರ ಸಹಾಯವನ್ನು ಪಡೆದು ರಾಜ್ಯಭಾರ ಮಾಡುತ್ತಾ ಇರಬೇಕೇ ಹೊರತು ಅವರ ಅಪ್ಪಣೆಯ ಪ್ರಕಾರ ನಡೆದು ನಡೆಯಬೇಕೆಂಬುವದು ನನ್ನ ತಾತ್ಪರ್ಯವಲ್ಲ. ಮಹಾರಾಜರವರು ಇನ್ನೂ ಚಿಕ್ಕವರಾಗಿಯೂ ಆರೋಗ್ಯಭಾಗ್ಯತೆ ಸಹ ಒಳ್ಳೆದನ್ನೂ ಹೊಂದಿದವರಾಗಿಯೂ ಇರುತ್ತಾರೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಇಷ್ಟು ಅತಿಶಯವಾದ ವಿಸ್ತಾರಿತ ರಾಜ್ಯಭಾರವನ್ನು ವಹಿಸಿದ್ದಾರೆ. ಈ ಮುಖ್ಯ ಕಾರ್ಯಗಳಲ್ಲಿ ಭಗವಂತನು ಅವರಿಗೆ ಸಕಲವನ್ನು ಕೊಟ್ಟು ಕೀರ್ತಿಮಾರ್ಗದಲ್ಲಿ ನಡಸಲಿ!

ಈಗ ನಾನು ಮಹಾರಾಜರವರಿಗೇ ಒಂದೆರಡು ಮಾತುಗಳನ್ನು ಹೇಳುತ್ತೇನೆ. ತಮಗೆ ನಾನು ಒಂದು ಉಪನ್ಯಾಸವನ್ನು ಮಾಡಬೇಕೆಂದಿರುತ್ತೇನೆಂದು ತಾವು ಯೋಚಿಸಬಾರದು. ಉಪದೇಶ ಮಾತ್ರದಿಂದ ಸುಗುಣವಂತರಾದ ರಾಜ್ಯಾಧಿಪತಿಗಳನ್ನು ನಿರ್ಮಿಸಲಾಗುವದೇ? ಆಗಲಾರದು. ಆ ಪದವಿಗೆ ಯೋಗ್ಯವಾದ ರಾಜಲಕ್ಷಣಗಳು ಸ್ವಾಭಾವಿಕವಾಗಿ ಬರಬೇಕು. ರಾಜ್ಯಾಧಿಪತಿಗಳಾದವರು ಪ್ರಂಪಾಸರ್ವರಾದ ವಾದ ಶಿಕ್ಷಾಕ್ರಮಕ್ಕೆ ಒಳಪಡಬೇಕು. ಇತರರ ಬುದ್ಧಿಯನ್ನೂ ಅನುಭವವನ್ನೂ ಗ್ರಹಿಸಿ ತಾವೂ ಅನುಭವಶಾಲಿಗಳಾಗಬೇಕೆಂಬ ಮನಸ್ಸುಳ್ಳವರಾಗಿರಬೇಕು. ಫ್ರಾನ್ಸ್ ದೇಶದ ೧೪ ನೇ ಲೂಯಿ ಎಂಬ ದೊರೆಯು ತನ್ನ ಮೊಮ್ಮಗನಿಗೆ ರಾಜಧರ್ಮವನ್ನು ಚನ್ನಾಗಿ ತಿಳಿಯಪಡಿಸಬೇಕೆಂಬ ಅಭಿಪ್ರಾಯದಿಂದ ಮಹಾ ಸಮರ್ಥನಾದ ಒಬ್ಬ ಗುರುವನ್ನು ನೇಮಿಸಿದನು. ಆದರೆ ಆ ರಾಜಕುಮಾರನು ಗುರುಶಿಕ್ಷೆಯಿಂದ ಯಾವ ಭಾಗದಲ್ಲೂ ಫಲವನ್ನು ಪಡೆಯಲಿಲ್ಲ. ಅದೇ ಮೇರೆಗೆ ಮಹಾಜ್ಞಾನಿಯೆಂದು ಹೆಸರನ್ನು ಪಡೆದ ಸಾಲಮನ್ ಎಂಬ ಯೆಹೂದ್ಯರ ಅರಸನು ಎಷ್ಟು ಬುದ್ಧಿವಾದಗಳನ್ನು ಹೇಳಿದಾಗ್ಯೂ ಅವನ ಕುಮಾರನು ಮೂರ್ಖತನವನ್ನು ಬಿಟ್ಟು ಶೀಲವಂತನಾಗಲಿಲ್ಲ. ಲೋಕಾನುಭವವು ಹೀಗಿರುವಲ್ಲಿ ನಾನು ತಮಗೆ ರಾಜಧರ್ಮಸೂತ್ರಗಳ ಪುಸ್ತಕವನ್ನು ಬರೆದು ಕೊಡುವದಕ್ಕಿರುತೇನೆಂದು ತಿಳಿಯಬಾರದು. ಇಷ್ಟುಮಾತ್ರ ತಾವು ನೆನಪಿನಲ್ಲಿಟ್ಟರೆ ಸಾಕು. ಏನೆಂದರೆ—ಇಪ್ಪತ್ತೆಂಟು ವರ್ಷಗಳ ವಯಸ್ಸಿನ ಯೌವನಸ್ಥರು ರಾಜ್ಯಾಭಿಷಿಕ್ತರಾಗುವಲ್ಲಿ ಅವರಿಗೆ ಭೂಲೋಕದಲ್ಲಿ ಮಹಾ ಕಾರ್ಯಗಳನ್ನು ನಡಸುವದಕ್ಕೆ ಅತ್ಯಂತ ಅನುಕೂಲವಾದ ಸಂದರ್ಭಗಳು ದೊರಕುತ್ತವೆಂದೂ ಈ ಪದವಿಯು ಮಹಾ ಉತ್ತರವಾದಿತ್ವವನ್ನು ಹೊರಿಸತಕ್ಕದ್ದಾಗಿದೆಯೆಂದೂ ತಿಳಿಯಬೇಕು. ಆ ಸಂಸ್ಥಾನದ ಪ್ರಜೆಗಳ ಸುಖಸಂತೋಷಗಳಿಗೆ ತಾವೇ ಬಹುಮಟ್ಟಿಗೆ ಕಾರಣರಾಗಿರುತ್ತೀರಿ. ತಮಗೆಯೇ ಪ್ರೈವಸ್ಪತಿಗಳಾದ ಈ ಪ್ರಜೆಗಳು ತಮ್ಮನ್ನು ಕೇವಲ ಭಯಭಕ್ತಿಯಿಂದ ಕಾಣುವವರಾಗಿದ್ದಾರೆ. ತಾವು ಇವರನ್ನು ಚನ್ನಾಗಿ ಆಳಿದರೆ ಇವರು ನಿಮ್ಮನ್ನು ಪೂಜಿಸುವವರಾಗುತ್ತಾರೆ. ತಾವು ಚನ್ನಾಗಿ ಆಳದಿದ್ದರೆ ನಿಮ್ಮ ವಿಷಯದಲ್ಲಿ ಇವರು ತಿರಸ್ಕಾರವನ್ನು ವಹಿಸಿ ತಮ್ಮಲ್ಲಿ ಈಗ ಇಟ್ಟುಕೊಂಡಿರುವ ಆಶೆಯನ್ನು ತೊರೆಯುವಂಥವರಾಗುವರು. ತಮಗೆ ಈ ಪದವಿಯು ಬಂದಿರುವದು ತಮ್ಮ ಸಂತೋಷ ಸುಖಭೋಗಕ್ಕಲ್ಲ. ಹೀಗೆ ತಾವು ಯೋಚಿಸಿದ್ದೇ ಆದರೆ ಭೂಲೋಕದಲ್ಲಿ ಮಾನವರು ತಪ್ಪುಕೊಳ್ಳತಕ್ಕ ಅಪರಾಧಗಳಲ್ಲಿ ಮಹಾಪರಾಧವ ತಪ್ಪನ್ನಿಲ್ಲಿ ತೋರುತದೆ. ಆದರೆ ತಾವು ಪ್ರಜೆಗಳ ಶ್ರೇಯಸ್ಸೋಸ್ಕರ ಈ ಪದವಿಯನ್ನು ಹೊಂದಿರುವರೆಂದು ತಿಳಿದು ಸತ್ಯವಾಗಿ ನಡೆಕೊಂಡರೆ ತಮ್ಮ ಸ್ಮರಣೆಯು ಮರೆಯಲಾರದಂಥದ್ದಾಗಿ ನಿಲ್ಲುವದು. ಈಗ ತಮಗೆ ಲಭಿಸಿರುವ ಈ ಒಳ್ಳೇ ಸಂದರ್ಭವನ್ನು ಅಲಕ್ಷ್ಯಮಾಡಿ ಬಿಟ್ಟುಬಿಟ್ಟರೆ ಅಥವಾ ಸದುಪಯೋಗಪಡಿಸದೆ ಕೆಟ್ಟಕೆಲಸವನ್ನೇನಾದರೂ ಮಾಡಿದರೆ ತಮ್ಮ ಸ್ಮರಣೆಯು ನೀರಮೇಲಣ ಬರವಣಿಗೆಯಂತೆಯೂ ಹಾರಿಹೋಗುವ ಹೊಗೆಯಂತೆಯೂ ಅಸ್ಥಿರವಾಗಿರುವದು. ಆದಕಾರಣ ತಮ್ಮ ಜೀವಮಾನದ ಈ ಶುಭದಿನದಲ್ಲಿ ಈ ವಿಷಯಗಳನ್ನು ಮನಸಿನಲ್ಲಿ ದೃಢವಾಗಿ ತಿಳಿಯಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ತಮ್ಮ ಮನಸ್ಸೆಲ್ಲಾ ತಮ್ಮ ಕೆಲಸದಲ್ಲಿರಲಿ. ನೀತಿಯನ್ನು ಬಿಡಬೇಡಿ. ಅಧೈರ್ಯಪಡಬೇಡಿ. ಕನಿಷ್ಠರಾದವರಲ್ಲಿ ಕನಿಕರವುಳ್ಳವರಾಗಿರಿ. ಸಕಲರ ಹಿತೈಷಿಗಳಾಗಿರಿ. ನನಗೆ ಇನ್ನೂ ೫೦ ವರ್ಷಗಳವರೆಗೂ ರಾಜ್ಯಭಾರಮಾಡತಕ್ಕ ಸಂದರ್ಭವಿದೆಯೆಂದು ಭಾವಿಸದೆ ಪದಿನೈದು ವರ್ಷಗಳುಂಟೆಂದು ಭಾವಿಸುವವರಂತೆ ಕಾಲವಿಳಂಬಕ್ಕೆ ಅವಕಾಶಕೊಡದೆ ಕೆಲಸಮಾಡಬೇಕು. ಯಾಕೆಂದರೆ ನಮ್ಮ ನಮ್ಮ ಕೆಲಸ ಕಾರ್ಯಗಳನ್ನು ನಿಧಾನವಾಗಿ ಮಾಡಿಕೊಳ್ಳೋಣ ಎಂದು ಹೇಳಿಕೊಳ್ಳುವದಕ್ಕೆ ಯತ್ನವಿಲ್ಲ. ಇದನ್ನು ತಾವು ನಿಸ್ಸಂದೇಹವಾಗಿ ತಿಳಿಯಿರಿ. ಅಧಿಪತಿಗಳಾದವರಿಗೆ ವಿರಾಮಸುಖವಿರುತ್ತದೆಯೆಂದು ನೆನಸಬೇಡಿ. ಅವರು ಯಾವ ದಿನವನ್ನಾದರೂ ಕೆಲಸವಿಲ್ಲದೆ ಕಳೆಯುವದು ಯೋಗ್ಯವಲ್ಲ. ನಾನು ಈ ದೇಶಾಧಿಪತ್ಯವನ್ನು ವಹಿಸಿದ್ದ ಕಾಲದೊಳಗೆ ನಡೆದ ಕಾರ್ಯಗಳಲ್ಲಿ ತಮಗೆ ರಾಜ್ಯಭಾರವನ್ನು ವಹಿಸಿಕೊಟ್ಟ ಈ ಕಾರ್ಯವೇ ಮುಂದೆ ಸ್ಮರಣೀಯವಾದ ಸಂತೋಷದ ಕಾರ್ಯವಾಗಿರುವದು. ನಾನು ಈ ದೇಶದಲ್ಲಿರುವತನಕ ನನ್ನಲ್ಲಿ ತಮಗೆ ಯಾವ ವಿಷಯದಲ್ಲೇ ಆಗಲಿ ಸಹಾಯವು ಸಿದ್ಧವಾಗಿದೆಯೆಂದು ತಾವು ತಿಳಿದೇ ಇರುತ್ತೀರಿ. ನಾನು ಈ ದೇಶವನ್ನು ಬಿಟ್ಟು ಹೊರಟುಹೋದಮೇಲೆ ಈಗಲು ವೈಸರಾಯಿ ಪದವಿಗೆ ಬಂದು ತಮ್ಮ ದರ್ಶನಾರ್ಥವಾಗಿ ಮೈಸೂರು ಸಂಸ್ಥಾನಕ್ಕೆ ಬರುವಾಗ ತಮ್ಮ ಈ ರಾಜ್ಯವಹನಕಾಲದಲ್ಲಿ ನಾವು ತಮ್ಮ ವಿಷಯದಲ್ಲಿ ಏನೇನು ನೋಡಬೇಕೆಂದು ನಿರೀಕ್ಷಿಸುತ್ತೇವೋ ಅಂಥ ಪ್ರಕಾರವಾಗಿಯೇ ತಾವು ಸರ್ವದಾ ಪ್ರವರ್ಧಮಾನರಾಗುತ್ತಾ ಬರುತ್ತಿದ್ದೀರೆಂಬ ಶುಭವರ್ತಮಾನವು ನನಗೆ ತಲುಪುತ್ತಿರುವದೆಂದು ಆಶಿಸುತ್ತೇನೆ.

ವೈಸರಾಯಿ ಯವರು ಭಾಷಣ ಮಾಡುತ್ತಿರುವಾಗ್ಯೆ ಸಭಿಕರೆಲ್ಲರೂ ನಿಶ್ಶಬ್ದವಾಗಿ ನಿಂತುಕೊಂಡು ಕೇಳುತ್ತಿದ್ದರು. ಅವರು ಭಾಷಣ ಮಾಡಿದ್ದಕ್ಕೆಲ್ಲಾ ಹೇಳಿ ಮುಗಿಸಿದ ಮೇಲೆ ಬಂಗಳೂರು ಮುಂತಾದ ಪಟ್ಟಣದ ... ಮುಂತಾದ ... ಅವರ ಭಾಷಣವನ್ನು ಅಪ್ಪಣೆಯಲ್ಲಿ ...

ಎಲ್ಲರೂ ಸ್ವಸ್ಥ ಹೊತ್ತು [illegible] ಎದ್ದು ನಿಂತು [illegible] ವೈಸರಾಯಿಯವರು ಮಹಾರಾಜರವರ [illegible] ಬಾಗಿಲ ಬಳಿಗೆ ಕರೆದುಕೊಂಡು ಹೋಗಿ [illegible] ಅವರ ಕೈಗೆ ಕೊಟ್ಟರು. "ಮೈಸೂರು ಸಂಸ್ಥಾನದ [illegible] ಸಂಪೂರ್ಣವಾದ ಅಧಿಕಾರವನ್ನು [illegible]" ಎಂದು ಹೇಳಿ [illegible] ಕೊಟ್ಟರು. ತರುವಾಯ ವೈಸರಾಯಿಯವರ [illegible] ಮಹಾರಾಜರವರ [illegible] "ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದರವರು" ಎಂಬದಾಗಿ ಹೇಳಿದರು. [illegible] ಬ್ರಿಟಿಷ್ ಸೇನೆಯು [illegible] ರಾಜಾಂಗದ [illegible] ಗಾಯನ ಮಾಡಿದರು. [illegible] ಸಭಿಕರ [illegible] ವೈಸರಾಯಿಯವರ [illegible] ಮಹಾರಾಜರವರು ವೈಸರಾಯಿ [illegible] ಮಹಾರಾಜರವರ [illegible] ಅವರ [illegible] ಭಾಷೆಯಲ್ಲಿ [illegible]

ಮಹಾರಾಜರವರ ಪ್ರತ್ಯುತ್ತರ.

ಪ್ರಭುಗಳೇ,

ತಮ್ಮ ಕೈಗಳಿಂದ ಈಹೊತ್ತು ನಾನು ನನ್ನ ರಾಜ್ಯಭಾರವನ್ನು [illegible] ಈ ಮಹಾ ಶುಭದಿನವನ್ನು [illegible] ಶ್ರೀಮತ್ ಮಹಾರಾಣಿಯವರ [illegible] ಎಷ್ಟು [illegible] ವಿಶ್ವಾಸದಿಂದ [illegible]

ತಮ್ಮ ಈ ಪುರಾತನ ಸಂಸ್ಥಾನದ ಪೂರ್ವಾಪರ [illegible] ಬ್ರಿಟಿಷ್ ಪ್ರಭುತ್ವದ [illegible] ಈ ಸಭಾ [illegible] ವೈಸರಾಯಿಯವರು [illegible] ಈ ಮೈಸೂರು ಸಂಸ್ಥಾನವನ್ನು [illegible]

ಪ್ರೀತಿಯಿಂದ ತಮಗೆ ನಾನು ಸಾಧಾರಣವಾದ ವಂದನೆಗಳನ್ನು ಸಲ್ಲಿಸುವದು ಸಾಲದು. [illegible] ಸಂಸ್ಥಾನಾಧಿಪತಿಗಳ [illegible] ವೈಸರಾಯಿಯವರು [illegible]

[illegible] ಈ ಸಂಸ್ಥಾನಕ್ಕೆ [illegible] ನಾನು [illegible]

ನನ್ನ ಮೇಲೆ ಈ ದಿನ [illegible] ನಾನು ಸಂಪೂರ್ಣವಾಗಿ [illegible]

ನನಗೆ [illegible] ಈ ಸಂಸ್ಥಾನದ ರಾಜ್ಯಭಾರವು [illegible] ಬ್ರಿಟಿಷ್ ಸರ್ಕಾರ [illegible] ಮೈಸೂರು ಸಂಸ್ಥಾನಕ್ಕೆ [illegible]

[illegible] ರಾಜ್ಯಭಾರದಲ್ಲಿ [illegible] ನನಗೆ [illegible] ರಾಜ್ಯಭಾರದ [illegible]

ಈ ವಿಷಯ [illegible] ನಾನು [illegible]

ನಾನು ಈ ಸಂಸ್ಥಾನದ [illegible] ರಾಜ್ಯಭಾರವನ್ನು [illegible]

ಸಭಾ ಮುಖರೇ.

ಶ್ರೀ ಮನ್ಮಹಾರಾಜರವರು [illegible] ವೈಸರಾಯರು ಸಂಸ್ಥಾನದ [illegible] ವೈಸರಾಯಿಯವರ [illegible] ಮಹಾರಾಜರವರ [illegible] ವೈಸರಾಯಿಗೆ [illegible]

ಅನಂತರ ವೈಸರಾಯಿಯವರು ಮಹಾರಾಜರಿಗೆ ಗಂಧ [illegible] ವೈಸರಾಯಿಯವರ [illegible] ಸಂಸ್ಥಾನದ [illegible] ಮಹಾರಾಜರವರ [illegible]

ವೈಸರಾಯರು ಹಿಂತಿರುಗಿದ್ದು.

ವೈಸರಾಯಿಯವರು ಶ್ರೀಮನ್ಮಹಾರಾಜರವರ [illegible] ಇಂಗ್ಲಿಷ್ [illegible] ಇಂಗ್ಲಿಷ್ [illegible] ೧೯ [illegible]

ಪ್ರಾಂತಗಳ ಆಣಸ.

ಮಹಾರು ೧೦ ಗಂಟೆಗೆ [illegible] ವೈಸರಾಯಿಯವರ [illegible] ವೃತ್ತಾಂತ ಪತ್ರಿಕೆಯನ್ನು ಒಪ್ಪಿಸಿದರು. [illegible]

ವೈಸರಾಯಿಯವರು, ಅವರಿಗೆ ಪ್ರತ್ಯುತ್ತರ [illegible] ವೃತ್ತಾಂತ ಪತ್ರಿಕೆ [illegible] ಮಹಾರಾಜರವರ [illegible] ಸರ್ಕಾರದವರ [illegible]

ಮಹಾರಾಜರ ಆಜ್ಞೆಗಳು.

ಮಹಾರಾಜರಿಗೆ [illegible] ಸಂಸ್ಥಾನದ [illegible] ವೃತ್ತಾಂತ ಪತ್ರಿಕೆಗಳನ್ನು [illegible] ಮಹಾರಾಜರವರು [illegible]

ಶ್ರೀ ಮಹಾರಾಜ [illegible] ವೃತ್ತಾಂತ ಪತ್ರಿಕೆಗೆ ಉತ್ತರ.— [illegible]

ಕೆಂಪರಾಜ ಅರಸು ಪತ್ರಿಕೆಗೆ ಉತ್ತರ.— [illegible]

ಉತ್ತರ, ದಕ್ಷಿಣ [illegible] ಸುಭೇದಾರಿಗೆ ಕೊಟ್ಟ ಉತ್ತರ.— [illegible] ವಿಜ್ಞಾಪನಾ ಪತ್ರಿಕೆಗೆ [illegible]

ಮುಸಲ್ಮಾನ್ [illegible] ಉತ್ತರ.— [illegible] ವಿಜ್ಞಾಪನಾ ಪತ್ರಿಕೆ [illegible]

ಮೈಸೂರು ಸಂಸ್ಥಾನದ [illegible] ವಿಜ್ಞಾಪನಾ ಪತ್ರಿಕೆಗೆ ಉತ್ತರ.— [illegible]

[ಇನ್ನೊಂದು ಮುಂದಲ ಮುದ್ರಣೆಯ ಪತ್ರಿಕೆಯನ್ನು ನೋಡಿ.]

ಧರ್ಮ ದೇವತೆ—ಬರ್ನ್ನಿಯರು.

ಈ ಹೊಸ ಪುಸ್ತಕದಲ್ಲಿ ಒಬ್ಬ ದೇವರನ್ನು ಅರ್ಚಿಸ ಬೇಕಿರ ಪೂ ರ್ಣತ್ತ್ವರನ್ನೂ ಓದು ಸುಲಭವಾಗಿ ವಿವರಿಸಿದೆ. ಪುಸ್ತಕದ ತುಂಬಾ ಚಿತ್ರಗಳಿರುವವು. ಒಳ್ಳೇ ಕಾಗದ, ನೇತ್ರಾನಂದಕರವಾಗಿ ಅಚ್ಚು ಹಾಕಿದೆ.

ಕ್ರಯ ೩॥ ಆಣೆ, ಹಾಸಲು ಬೇರೆ.

ವಿಳಾಸ:—ಮಿಷನ್ ಬುಕ್ ಡಿಪೋ, ಮೈಸೂರು;

ಅಥವಾ

ಮಿಷನ್ ಬುಕ್ ಡಿಪೋ, ಬೆಂಗಳೂರು.

ಪುಸ್ತಕವ್ಯಾಪಾರ.

ಕೇರಿಬಾಟ ಕವಿಯ ಕಬ್ಬುಮಂದಿದರ್ಪಣ	೧—೮—೦
ನಾಗವರ್ಮನಛಂದಸ್ಸು	೧—೦—೦
ಇಂಗ್ಲಿಷ್—ಕನ್ನಡ ಸಂಭಾಷಣವಾಕ್ಯಗಳು	೦—೧೦—೦
ಮುದ್ರಾಮಂಜೂಷ	೧—೮—೯
ವಿಂಶತಿವರ್ಣ	೦—೩—೦
ಶಾಕುಂತಳನಾಟಕ	೦—೧೨—೦
ದಮಯಂತಿ ಸ್ವಯಂವರ	೦—೧೨—೦
ಪಂಚತಂತ್ರ	೦—೮—೦
ವಾಣಿಕಶಾಸ್ತ್ರ	೧—೦—೦
ಕಥಾಸಂಗ್ರಹ ೧—೩ ಭಾಗಗಳು	೧—೦—೦
ಕಥಾಸಂಗ್ರಹ ೪—೬ ಭಾಗಗಳು	೧—೦—೦
ಪತ್ರ ರತ್ನಾಕರ } ಅರ್ಜಿ ಬರಿಯುವ ಕ್ರಮವ	೦—೮—೦
ಲೇಖ್ಯತತ್ತ್ವ ಪ್ರಕಾಶಿಕೆ } ನನ್ನು ತೋರಿಸುವವು	೦—೧೨—೦
ಗೀತಮಂದಾರ	೦—೩—೦
ಬಾಲಕಥಾವಲ್ಲರಿ	೦—೮—೦
ಹಿತೋಪದೇಶ ಸೂತ್ರಗಳು	೦—೨—೦
ಕೊಲಂಬಸನ ಚರಿತ್ರೆ	೦—೧—೦

ಬೇಕಾದ ಪುಸ್ತಕಗಳನ್ನು ವಿ. ಪಿ. ಪಿ. ಮೂಲಕವಾಗಲಿ ಅಥ ವಾ ಹಣವನ್ನು ಮುಂಗಡವಾಗಿ ಕೊಡೋಣದ್ದರಿಂದಲಾಗಲಿ ಪಡೆಯ ಬಹುದು.

ವಿಳಾಸ:—ಮ್ಯಾನೇಜರ್, ಮಿಷನ್ ಬುಕ್ ಡಿಪೊ, ಮೈಸೂರು

ಹೋಮೋಸಿಯಾ.



ಹುಗಲುತ್ತಲೇ ನೋವು ವಾಸಿಯಾಗುತ್ತೆ.

ಈ ಔಷಧಿಯು ಮುಕ್ಕ, ಒಡದುನ, ಕಾಪಾಡಾನೆ, ಆಸ್ಪತ್ರೆ ಪೋ ಲೀಸ್ ಠಾಣಾ, ವಿದ್ಯಾಶಾಲೆ, ಫ್ಯಾಕ್ಟರಿ, ಕಛೇರಿ, ಮುಂತಾದ ಸ್ಥಳಗಳಲ್ಲೆಲ್ಲಾ ಇಟ್ಟೇ ಇರಬೇಕು ಇದಕ್ಕೆ ಸಮಾನವಾದ ಔಷ ಧಿ ಪ್ರಪಂಚದಲ್ಲಿ ಇಲ್ಲವು ಬಹಳ ಪ್ರಸಿದ್ಧವಾಗಿದೆ.

ಈ ತೈಲವು ಕಷ್ಟಬಂದಿ ಜೀವರಾಶಿಗಳಿಗೆ ಮಹತ್ತಾಗಿ ಸಿ ಕ್ಕಿದ ಔಷಧ. ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ಶಾಸ್ತ್ರಜ್ಞರುಗಳು, ಮುಂತಾದವರು ಇದರ ಗುಣವನ್ನು ಹೊಗಳಿ ಸ ರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ನೋವು ಇಂದಿಗೇ ಇದನು ಹಚ್ಚಿದರೆ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಮೊಣಕಾಲನೋವು, ಚರ್ಮರೋಗಗಳು, ಮೂಲವ್ಯಾಧಿ, ಗಾಯಗಳು, ಗಾಯಗಳು, ಪರಪೊರೆಗಳುವದು, ಬಾವುಗಳು, ಶೀತವಾಯು, ಗುಳ್ಳೆಗಳು, ಹಲ್ಲುನೋವು, ಮೂಗು ಬೀಗುವಿಕೆ, ಊತಗಳು, ಸಿಡುಬಿನ, ಗಾಯಗಳು, ಕುರುಹನ್ನು, ಸೊ ಳ್ಳೆ ಕಡಿತ, ಚೇಳು ಕಡಿದದ್ದು ಹಚ್ಚಿರುವದು, ಚಂಡಿಯನ್ನು ಸುಟ್ಟು ಕೊಂಡದು, ಕತ್ತಿ ಗಾಯ—ಇವೇ ಮೊದಲಾದ ನಾನಾ ಬಾ ಧೆಗಳನ್ನು ಹುಟ್ಟಿಸತಕ್ಕದ್ದೆ. ಜಾಕ್ರತೆ ಹಚ್ಚಿಕೊಂಡು ಮಲಗಿದರೆ ಕೂಡಲೆ ಹಸ್ತಾಂತರ ನೋವು ಕೆಡುವದಿಲ್ಲ!

ಕ್ರಯ:—ಸಣ್ಣ ಡಬ್ಬಾ ಒಕ್ಕೆ ೧ ರೂ., ದೊಡ್ಡದಕ್ಕೆ ರೂ. ೨—೫ ಆ. ಒಂದೇ ಸಲ ೧೨ ಡಬ್ಬಾ ತರಿಸಿಕೊಂಡರೆ ಟಪಾಲು ಖರ್ಚು ಮಾಫಿ ಬಿಡುತ್ತಾರೆ.

ಹೋಮೋಸಿಯಾ ಎಂಬ್ರೊಕೇಶನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ಚರ್ಮ ಒಡೆದ ಕಡೆಗೆ ಇದನ್ನು ಹಚ್ಚಕೂಡದು. ಇದರಲ್ಲಿ ಹೋ ಮೋಸಿಯಾದ ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದ ಕ್ಕಿಂತಲೂ ಇದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸಭಾಗವಿರುತ್ತೆ. ಇದನ್ನು ಚರ್ಮವು ಬಹು ಬೇಗನೆ ಸೇವಿಸಿಕೊಳ್ಳಬಲ್ಲದು. ಡಬ್ಬಿಗೆ ಕ್ರಯ ಹುಂಡಿ ೮ ಆಣೆಗಳು, ೧ ರೂ. ಗೂ ಒಂದರಂತೆ ಬಿಕರಿ ಮಾ ಡಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫ್. ಎಲ್ಲಾ ಔಷಧಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟ್‌ಗಳೂ ಉಳ್ಳ ಪುಸ್ತಕಗಳನ್ನು ಅಪೇಕ್ಷಿಸಿದವರಿಗೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೨೨ ಸೇಂಟ್ ಬ್ರೈಡ್ ಸ್ಟ್ರೀಟ್, ಲಂಡನ್.

ಸೂರ್ಯೋದಯ ಪ್ರಕಾಶಿಕಾ. 3

ಇದರ ಈಗ ಬಹಳ ಕಡಿಮೆಯಾಗಿದೆ. ವರ್ಷ ಒಕ್ಕೆ ಒಂದೇ ರೂಪಾಯಿ. ಪಡೆಯುವವರು ಟಪಾಲ್ ಹಾಸಲ್ ೧೨ ಆಣೆ ಮಾತ್ರ ಕೊಡಬೇಕು. ಚಂದಾದಾರರಿಗೆ ಒಂದು ಪುಸ್ತಕವು ಬೇರೆ ಬಹುಮಾನ ವಾಗಿ ಕೊಡಲ್ಪಡುವದು.

ವಿಳಾಸ:— ಬಿ. ನರಸಿಂಗರಾವ್, ಎಡಿಟರ್, ಬೆಂಗಳೂರು.

ಹೊಸಪುಸ್ತಕವು! ಹೊಸಪುಸ್ತಕವು!! ಹೊಸಪುಸ್ತಕವು!!!

ಬೋಯರ ಮಹಾಯುದ್ಧ.

ಡಾಕ್ಟರ್ ಕೋನನ್‌ಡಾಯಲ್ ವಿದ್ಯಾ ವಿಶಾರದನು ಇಂಗ್ಲಿಷಿನಲ್ಲಿ ಬರೆದಿರುವ ಪುಸ್ತಕದ ಆಧಾರದ ಮೇಲೆ ರಚಿಸಲ್ಪಟ್ಟಿದೆ. ಇದನ್ನು ಓದಿ ದರೆ ಬೋಯರ ಯುದ್ಧದ ಕಾರಣಗಳು,ಯುದ್ಧ ನಡೆದರೀತಿ, ಫಲಿತಾಂ ಶಗಳು ಇವೇ ಮುಂತಾದ ಅನೇಕ ಸಂಗತಿಗಳೆಲ್ಲಾ ವಿಶದವಾಗಿ ತಿಳಿ ದು ಬರುವವು.

ಇದರಲ್ಲಿ ಅಡಗಿರುವ ಅಧ್ಯಾಯಗಳನ್ನು ಸ್ವಲ್ಪ ನೋಡಿ:—(೧) ಬೋಯರರು. (೨) ಯುದ್ಧಕ್ಕೆ ಕಾರಣ. (೩) ಬ್ರಿಟಿಷರಿಗೂ ಬೋಯರ ರಿಗೂ ನಡೆದ ಸಂಗತಿಗಳು. (೪) ಸಮಾಧಾನದ ವಿಷಯವಾಗಿ ನಡೆ ದ ಸಂಗತಿಗಳು. (೫) ಬ್ರಿಟಿಷರಮೇಲೆ ಆರೋಪಿಸಲ್ಪಡುವ ಕೆಲವು ದೋಷಗಳು. (೬) ಬೋಯರ ಸಿಪಾಯಿಗಳ ಮೇಲೆ ಯಾವ ತಪ್ಪೂ ತೋರುವದಿಲ್ಲವೋ?

ಇದರ ಕ್ರಯ ಎರಡು ಆಣೆ ಮಾತ್ರ.

ಪುಸ್ತಕದ ನಾಡೋಕಾದ ಪ್ರೀತಿಗೂ, ಬೈಂಡಿಗೂ ವಿಶೇಷವಾಗಿ ಇದರಲ್ಲಿ ಅಡಗಿರುವ ಸಂಗತಿಗಳಿಗೂ ನಾಲ್ಕಾಣೆ ಕೊಟ್ಟರೂ ಸಾಲದು. ಜಾಗ್ರತೆ ನೋಡಿ!! ಪುಸ್ತಕವು ಮುಗಿದು ಹೋದೀತು!!! ವಿ. ಪಿ. ಪಿ. ಕಳಿಸಿದರೆ ಪುಸ್ತಕದ ಕ್ರಯ ಪೋಸ್ಟೇಜ್ ಸಹಿತ ನಾಲ್ಕಾಣೆ ಆದೀತು.

ಪುಸ್ತಕ ವ್ಯಾಪಾರಸ್ಥರು ಹೆಚ್ಚಾಗಿ ಪ್ರತಿಗಳನ್ನು ತರಿಸಿಕೊಂಡರೆ ವಿಶೇಷವಾದ ಡಿಸ್ಕೌಂಟು ದೊರೆಯುವದು.

ಮ್ಯಾನೇಜರ್,
ಮಿಷನ್ ಬುಕ್ ಡಿಪೋ,
ಮೈಸೂರು.

ಅಥವಾ

ಮ್ಯಾನೇಜರ್,
ಮಿಷನ್ ಬುಕ್‌ಡಿಪೋ,
ಬೆಂಗಳೂರು.

ಜ್ವರಹರಿ. 2



ಇದು—ಸಾಧಾರಣ ಜ್ವರ, ಚಳಿಜ್ವರ, ಮೈಕೈಜ್ವರ, ಪಿತ್ತ ಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು. ಇ ದರಿಂದಲೂನ್ನು ಸೇವಿಸುತ್ತಾ ಬಂದರೆ ಶರೀರಪುಷ್ಟಿಯನ್ನು ಕೊ ಡುವದು. ಪ್ರಯಾಣ ಮಾಡತಕ್ಕವರು ಈ ಔಷಧವನ್ನು ಅವಶ್ಯ ವಾಗಿ ಹತ್ತಿರ ಇಟ್ಟುಕೊಂಡಿರಬೇಕು. ಇದು ದೇಹವನ್ನು ಬಹ ಳ ಒಳ್ಳೇ ಕ್ರಮವಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬಲ್ಲದು. ಇದನ್ನು ಉಪಯೋಗಿಸಿದವರ ಕಾಗದಗಳನ್ನು ಅಪೇಕ್ಷಿಸಿದವರಿಗೆ ಕಳುಹಿ ಸುತ್ತೇವೆ. ಸಣ್ಣ ಮತ್ತು ದೊಡ್ಡ ಸೀಸೆ ಗಳಲ್ಲಿ ಮಾರಾಟ ಆಗು ಯಾಗುವದು.

ಕ್ರಯ:—ಸೀಸೆ ಒಕ್ಕೆ ೮ ಆಣೆ, ೧ ರೂ., ೧॥ ರೂ., ೩ ರೂ., ೧೧ ರೂ. ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓಮುಂತ ಸ್ಫೂರ್ತಿ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗು ಣ ತೋರಿಸುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊ ರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡ ಗುಣಪಡಿಸುತ್ತದೆ. ಕ್ರಯದ ಪದವು ಜ್ವರಹರಿ ಎಂಬ ಔಷ ಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಚಕ್ರಪಾಣಿ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಪ್ರಿನ್ಸಿಯ ಓಮು ಕರ್ಪೂರವನ್ನು ನಾನೂ ಸಹ ಬಹಳ ಮಂದಿಗೆ ದಾರರೂ ಮತ್ತು ಇ ಚಲ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿ ಸಾರಭೇದಿ, ಅಜೀರ್ಣ ರೋಗಿಷ್ಠರಿಗೆ ಕೊಡುತ್ತೇವೆ. ಕೊಟ್ಟಂಥ ಕಡೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧಿ ಎಂದ ಬರೆದಿದ್ದಾರೆ.

ಈ ಕಾಲ್ಪ ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾ ಲೆಗಳಲ್ಲೂ, ಹೊಸ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದೆ ಕೆಳಗಿನ ವಿಳಾಸದವರಲ್ಲಿ(ವಿ ಳಾಸ: — ಕೆ. ಸಿ. ಪಾಲ್‌ರ ಸ್ಪೆಷಲ್ ಇಂಡಿಯನ್ ಔಷಧಗಳ ಕಂಪೆನಿ ಸೆವೆನ್ ಕೋರ್ಟ್ ಫೈಲ್, ಮದರಾಸು.

ಮೈಸೂರು ಸೀಮೆಯಲ್ಲಿ ಪ್ಲೇಗಿನ ಸ್ಥಿತಿ.

11-7-1902ರಿಂದ 18-7-1902ರ ವರೆಗೆ.

ಸ್ಥಳ.	ಪ್ಲೇಗ್. ಹಿಡಿದ ಪ್ರಕ.	ಪ್ಲೇಗ್. ಸತ್ತ ಪ್ರಕ.	ಒಟ್ಟುಮರಣ
ಬೆಂಗಳೂರು ಪಟ್ಟಣ	3	1	57
ಮೈಸೂರು ,,	33	26	61
ಬೆಂಗಳೂರು ಡಿಸ್ಟ್ರಿಕ್ಟು	55	31	
ಮೈಸೂರು ,,	106	78	
ಕೋಲಾರ್ ,,	28	21	
,, ಚಿನ್ನದ ಗಣಿಗಳು	10	9	
ತುಮಕೂರು ಡಿಸ್ಟ್ರಿಕ್ಟು	8	1	
ಹಾಸನ ,,	2	8	
ಶಿವಮೊಗ್ಗ ,,	27	16	
ಕಡೂರ್ ,,	33	20	
ಚಿತ್ರದುರ್ಗ ,,	15	8	
ಒಟ್ಟು	314	214	

ಶಾಲೀವಾಹನ ಶಕ ೧೮೨೪ ನೇ ಶುಭಕೃತ್‌ನಾಮ ಸಂವತ್ಸರದ ಶ್ರಾವಣ ಶುದ್ಧ ಏಕಾದಶಿ ಗುರುವಾರದಿಂದ ಶ್ರಾವಣ ಬಹುಳ ಪಾಡ್ಯ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೨ನೇ ಇಸವಿ ಆಗೀಸ್ಟು.

ತಾ.	ವಾರ	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	ಶ್ರಾವಣ ಮಾಸ ತೇದಿ
14	ಗುರು*	ಏಕಾದಶಿ	55-33	ಚಿ	5-30	30
15	ಶುಕ್ರ§	ದ್ವಾದಶಿ	60-0	ಮೂಲ	11-38	31
16	ಶನಿವಾರ	ದ್ವಾದಶಿ	2-20	ಪೂರ್ವ	18-4	1
17	ರವಿವಾರ	ತ್ರಯೋದಶಿ	6-32	ಸ್ವಾತಿ	23 52	2
18	ಚಂದ್ರ†	ಚತುರ್ದಶಿ	9-55	ಉತ್ತರಾ	28-18	3
19	ಮಂಗಳ¶	ಪೌರ್ಣಮಿ	12-2	ಶ್ರ	31-50	4
20	ಬುಧ	ಪಾಡ್ಯ	12-58	ಧ	33-50	5

* ಸ್ಮಾರ್ತರನಾಮವೇಕಾದಶಿ. § ಅಧಿಕಶ್ರಾವಣ, ವರದ. ಮಹಾಲಕ್ಷ್ಮೀವ್ರತಂ, ಶರವಾಸರ. † ಅಶ್ವಲಾಯನೋಪಾಕರ್ಮ.
¶ ಅಪಸ್ತಂಭೋಪಾಕರ್ಮ, ಋಗ್ವೇದಯೋಗ.

ಪೇಟೆ ಧಾರಣೆ.

ದಿನಸು.		ಮೈಸೂರು	ಬೆಂಗಳೂರು
ಕಿಮ್ಮೀ ಅಕ್ಕಿ ಪಲ್ಲಾ ಒಕ್ಕೆ	ರೂ.	೧೧—೮—೦	೧೧—೮—[illegible]
ಕೆಂಬೂತಿ ಅಕ್ಕಿ ಅಪರ್		[illegible]	[illegible]
ಎರಡೋ ದುಯಂ		[illegible]	[illegible]
ಜಾವಸ್ರಾಲ ಅಕ್ಕಿ		[illegible]	[illegible]
ಸಣ್ಣಕ್ಕಿ ಅಪರ್		[illegible]	[illegible]
ಎರಡೋ ದುಯಂ		[illegible]	[illegible]
ಕೂಗರೇ ಬೇಳೆ ಪಲ್ಲಾ ಒಕ್ಕೆ		[illegible]	[illegible]
ಎರಡೋ ದುಯಂ		[illegible]	[illegible]
ಹೈಲ ರಾಗಿ ಪಲ್ಲಾ ಒಕ್ಕೆ		[illegible]	[illegible]
ಜವಾರಿ		[illegible]	[illegible]
ಜೋಳ		[illegible]	[illegible]
ಹುರಳಿ ಪಲ್ಲಾ ಒಕ್ಕೆ		[illegible]	[illegible]
ಬಿಳೇ ಅವರೆ		[illegible]	[illegible]
ಹೆಸರು		[illegible]	[illegible]
ಉದ್ದು		[illegible]	[illegible]
ಕಡಲೆ		[illegible]	[illegible]
ಎಳ್ಳು		[illegible]	[illegible]
ಹುರುಳಿ		[illegible]	[illegible]
ಹುರುಳಿ ಎಂಡ ಕಡಲೆ		[illegible]	[illegible]
ಸೀಗೇಕಾಯಿ ಮೂಟ ಒಕ್ಕೆ		[illegible]	[illegible]
ಬೆಲ್ಲಕಾಯಿ		[illegible]	[illegible]
ಮೆಣಸು ತರಕ		[illegible]	[illegible]
ಬೆಲ್ಲ ದೊಡ್ಡ ಅಚ್ಚು		[illegible]	[illegible]
ಒಳ್ಳೆಣ್ಣೆ ಮೂಟ ಒಕ್ಕೆ		[illegible]	[illegible]
ಸರಳೆಣ್ಣೆ		[illegible]	[illegible]
ಕೊಬ್ಬರಿ ಮಣ ಒಕ್ಕೆ		[illegible]	[illegible]
ತುಪ್ಪ		[illegible]	[illegible]
ಹುಣಸೇ ಹಣ್ಣು		[illegible]	[illegible]
ಸಳೇ ಹುಣಸೆಹಣ್ಣು		[illegible]	[illegible]
ಮೆಣಸು		[illegible]	[illegible]
ಸೀಮೆಯಂಚಿ ಬಿಟ ಒಕ್ಕೆ		[illegible]	[illegible]
ತೆಂಗಿನಕಾಯಿ ೧೦೦ ಕ್ಕೆ		[illegible]	[illegible]
ಅಡಕೇಕಾಯಿ ಮೂಟ ಒಕ್ಕೆ		[illegible]	[illegible]
ಅಡಿಕ್ಯೆಲೆಹಳಾಯಿ ಮೂಟ ಒಕ್ಕೆ		[illegible]	[illegible]
ಚಿಲ (ಹೆಗ್ಗ) ರೆಂಬೆ		[illegible]	[illegible]
,, ,, ಮಟಕು		[illegible]	[illegible]
,, ,, ಸಣ್ಣ ತೊಲ ಒಕ್ಕೆ		[illegible]	[illegible]
ದೇವ್ರ ಸಣ್ಣ ತೊಲ ೧೦೦ ಕ್ಕೆ		[illegible]	[illegible]

Printed and Published by the Rev. E. W. Thompson, the Proprietor and Manager, Wesleyan Mission Press, Mysore 14/8/1902.

ವೃತ್ತಾಂತ ಪತ್ರಿಕೆ.

ಕ್ರಯ ೧ ರೂಪಾಯಿ — o: — ಕ್ರಯ ೧ ರೂಪಾಯಿ

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೦. ಮೈಸೂರು—ಸನ್ ೧೯೦೨ ನೇ ಇಸವಿ ಆಗೋಸ್ಟ್ ತಾರೀಖು ೨೧ ನೇ ಗುರುವಾರ. ಸಂಚಿಕೆ ೧೨

ROBINSON'S PATENT BARLEY.

ರಾಬಿನ್‌ಸನ್‌ರವರ ಬಾರ್ಲಿ ಹಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟನ್ನು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಜವೆಗೋಧಿಯಿಂದ ತಯಾರಿಸಿದೆ. ಹಸ್ತ ಸ್ಪರ್ಶದಿಂದಾದದ್ದಲ್ಲ.

ಈ ಹಿಟ್ಟಿನಲ್ಲಿ ಸ್ವಲ್ಪವನ್ನು ನೀರಿನಲ್ಲಿ ಬೆರಸಿ ಮಂದವಾದ ... ಕಾಯಿಸಿ ... ಕಾಲು ಗಂಟೆ ಹೊತ್ತು ಕಾಯಿಸಿದ ... ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲನ್ನು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯಾದ ... ಪಾನವಾಗುತ್ತದೆ.

ಇದಕ್ಕೆ ಸ್ವಲ್ಪ ನಿಂಬೆಹುಳಿಯನ್ನೂ, ಸಕ್ಕರೆಯನ್ನೂ ಬೆರಸಿದರೆ ಎಲ್ಲರಿಗೂ ಹಿತಕರವಾದ ಪಾನವಾಗುತ್ತದೆ.

ಎಚ್ಚರಿಕೆ.— ಈ ಪ್ರಸಿದ್ಧವಾದ ಪದಾರ್ಥದ ... ರಾಬಿನ್‌ಸನ್ ... ಪೇಟೆಂಟ್ ಬಾರ್ಲಿ ಎನ್ನುವ ... ಡಬ್ಬಿಯ ಮೇಲ್ಭಾಗದಲ್ಲಿ ... ಮೋಹರನ್ನೂ, ಕೆಳಗೆ ನಮ್ಮ ... ನೋಡಿ ತೆಗೆದುಕೊಳ್ಳಬೇಕು.

ಈಗಲೇ ಸಿದ್ಧವಾಗಿದೆ

೧೯೦೨ನೇ ಇಸವಿ ಲೋವರ್ ಸೆಕಂಡರಿ ಕನ್ನಡ ನೋಟ್ಸು ೨ನೇ ಭಾಗ. ಮೈಸೂರು ಮಹಾರಾಜಾ ಕಾಲೇಜಿನ ಕನ್ನಡ ಪಂಡಿತರಿಂದ ಬರೆಯಲ್ಪಟ್ಟದ್ದು. ೧ನೇ ಭಾಗವನ್ನು ಕೊಂಡಿರತಕ್ಕವರು ಆದರಲ್ಲಿರುವ ಕಾರ್ಡನ್ನು ಜಾಗ್ರತೆಯಾಗಿ ನಮ್ಮಕಡೆಗೆ ಕಳುಹಿಸಿದರೆ ೨ನೇ ಭಾಗವನ್ನು ಕಳುಹಿಸುತ್ತೇವೆ.

"ಸ್ಟೈಲೋಗ್ರಾಫಿಕ್ ಇಂಡಿಪೆಂಡೆಂಟ್ ಪೆನ್" ಇಗತಾನೇ ... ಬಂದಿದೆ. ಶಾಯಿಯಿಂದಲೇ ಬರೆಯುತ್ತೆ. ದೌತಿ ಹೊತ್ತುಕೊಂಡು ಹೋಗಬೇಕಾಗಿಲ್ಲ. ವಿದ್ಯಾರ್ಥಿಗಳಿಗಂತೂ ಬಹು ಅವಶ್ಯ. ಕ್ರಯ ೧—೮—೦

ಅನಂದ್‌ಲಾಲ್ "ಇಂಗ್ಲಿಷ್ ಡಿಕ್ಷನರಿ." ಈಗ ಎಲ್ಲಾ ಸ್ಕೂಲುಗಳಲ್ಲಿ ಹೊಚ್ಚಾಗಿ ಪ್ರಚಾರದಲ್ಲಿರತಕ್ಕ ಪುಸ್ತಕ. ಕ್ರಯ ೨—೦—೦

'ಲಗ್ನ ಕಾಗದ ಬಂತು.' ಲಗ್ನಪತ್ರಿಕೆಗಳನ್ನು ಬಹು ಚನ್ನಾಗಿ ಪ್ರಿಂಟುಮಾಡಿ ಕೊಡುತ್ತೇವೆ. ಗಿಲೀಟು ಅಕ್ಷರ, ಅಂದವಾದ ಬೇಲು ದಾರಿ ಅಲಂಕಾರ, ೧೦೦ ಪ್ರತಿಗಳಿಗೆ ೨—೦—೦

ನೋಟೀಸು ಫಾರಂ, ಬ್ಯಾಲೆನ್ಸ್ ಷೀಟ್ ವಗೈರೆ ಇತರ ಪ್ರಿಂಟು ಕೆಲಸಗಳನ್ನೂ ಮಾಡಿಸಬಹುದು. ಚಾರ್ಜು ಸುಲಭ, ಹಣವನ್ನು ಮುಂಗಡವಾಗಿಯೇ ಮನಿಯಾರ್ಡರು ಮಾಡಬೇಕು.

ಸೊರ್ದೆಬೀಜದ ಪರುಷತ್ತು:—ರಕ್ತಶುದ್ಧಿಯಾಗಿ ಕಜ್ಜಿ, ತುರುಚಿ, ... ವಿಕಾರಗಳೂ— ಸಹ ಗುಣಹೊಂದುತ್ತವೆ. ಶೀಸೆ ಒಂದಕ್ಕೆ ೦—೧೨—೦, ಪ್ಯಾಕಿಂಗ್ ೦—೮—೦.

ಜ್ವರನಾಶಿನಿ:—ಸೂರಿನ ಮಂದಿ ಗುಣ ಹೊಂದಿದಾರೆ ದಿನ ದಿನಕ್ಕೆ ಒಂದಕ್ಕ ಜ್ವರ, ಮೂರರ ಜ್ವರ, ನಾಲ್ಕರ ಜ್ವರ, ಮುಂತಾಗಿ ಎಲ್ಲಾ ಜ್ವರಗಳೂ ಗುಣವಾಗುತ್ತವೆ. ಅಗ್ನಿಬಲ ಉಂಟಾಗಿ ಆಹಾರದಲ್ಲಿ ಅಪೇಕ್ಷೆ ಹುಟ್ಟುತ್ತದೆ. ಶೀಸೆ ಒಂದಕ್ಕೆ ೧೨ ಆಣೆ, ಪ್ಯಾಕಿಂಗ್ ೮ ಆಣೆ.

ನಮ್ಮ ವಿಳಾಸ.—ಕೆ. ವೆಂಕಟಕೃಷ್ಣಯ್ಯ ಮತ್ತು ಕಂಪೆನಿ—ಮೈಸೂರು.

MELLIN'S FOOD.

ಮೆಲ್ಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

22

೧. ಮೆಲ್ಲಿನರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನರು ಮಾಡಿರುವ ಆಹಾರವು ದೇಹದ ನರಗಳೂ ನಮುಗಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನರು ಮಾಡಿರುವ ಆಹಾರವು ದೇಹದ ಮೂಳೆಗಳು ದೃಢವಾಗುವದಕ್ಕೆ ಸಹಾಯವಾಗಿದೆ.

೪. ಮೆಲ್ಲಿನರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಿಕ ಮಾನಸಿಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ... ಕೆಡುವದಿಲ್ಲ.

೭. ಮೆಲ್ಲಿನರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ... ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನರು ಮಾಡಿರುವ ಆಹಾರವನ್ನು ಯುಕ್ತರೀತಿಯಾಗಿ ಪಾಕ ಮಾಡಿ ಉಪಯೋಗಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೆಲಸ ಮಾಡುವಕೆಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನರು ಮಾಡಿರುವ ಆಹಾರದಲ್ಲಿ ಉಪಯೋಗಿಸುವ ದಿನಸು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ತಾನೇ ದೇಹದ ಪಿಂಡಕರವಾಗುತ್ತದೆ.

೧೦. ಮೆಲ್ಲಿನರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹಾಕುವ ಕಾಲದಲ್ಲಿಯೂ ಜೀವನದಲ್ಲಿ ಬರತಕ್ಕ ವಿಶ್ವಾದ ರೋಗಗಳ ... ಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನರು ಮಾಡಿರುವ ಆಹಾರದಲ್ಲಿ ಗುರುಪದಾರ್ಥವಾವದೂ ಸೇರಿಸುವದಿಲ್ಲ. ತಾಯಿ ಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನ ಕೋಶಕ್ಕೆ ದಕ್ಕತಕ್ಕದ್ದಾಗಿದೆ.

೧೪. ಮೆಲ್ಲಿನರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ದೃಢಪಡಿಸುವದರಿಂದ ಬಿರುಗಳಿಗೆ ರೋಗಕಾಲದ ವಿಪತ್ತುಗಳನ್ನು ಬಾಳ ಮಟ್ಟಿಗೆ ಕಡಮೆ ಮಾಡುತ್ತದೆ.

೧೫. ಮೆಲ್ಲಿನರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಸಂಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಂದಾದರೂ, ಬೆಂಗಳೂರು ಮೈಸೂರು ವಿಂದಬಂದ ... ರುವ ಶಾಖೆಗಳಿಗೂ ಬರೆದು ತರಿಸಿಕೊಳ್ಳಬಹುದು:—

ಮಿಶನ್:—ಮೆ॥ ಕಾವಸಿ ದಿನಷಾ ಬ್ರದರ್ಸ್.

ಬೊಂಬಾಯಿ:—ಮೆ॥ ಲೇಡಂ ಆಬೆಕಾರ್ಡಿ ಕಂಪೆನಿ.

ಕಲ್ಕತ್ತಾ:—ಮೆ॥ ಮೆಕ್ಕೆನ್‌ಜಿ ಲಯಲ್ ಕಂಪೆನಿ.

ಕರಾಚಿ:—ಮೆ॥ ಹಾರ್ಬ ವಿಲ್ಸನ್ ಕಂಪೆನಿ.

ಕರಾಚಿ:—ಮೆ॥ ಎಚ್. ಜೆ. ರುಸ್ತುಂಜಿ ಕಂಪೆನಿ.

ಮದ್ರಾಸು:—ಮೆ॥ ಓಕ್ ಕಂಪೆನಿ.

ರಂಗೂನ್:—ಲೇಡಂ ಬ್ಲಾಕ್ ಕಂಪೆನಿ.

ಬೇಗ ಬರೆದು ತರಿಸಿಕೊಳ್ಳಿ.

ಪಟ್ಟಾಭಿಷೇಕದ ಚಿತ್ರಪುಸ್ತಕ. ಇದರಲ್ಲಿ ಮಹಾರಾಜರವರ ಮತ್ತು ಮೈಸೂರು ಸಂಸ್ಥಾನದ ಕೆಲವು ಮುಖ್ಯ ವೀಯರುಗಳ ತಸ್ವೀರುಗಳೂ, ಮೈಸೂರು ಬೆಂಗಳೂರುಗಳಲ್ಲಿ ನೋಡತಕ್ಕ ಯೋಗ್ಯವಾದ ಕೆಲವು ಸ್ಥಳಗಳ ತಸ್ವೀರುಗಳೂ ಅಡಕವಾಗಿರುವವು. ಎಲ್ಲಾ ಒಟ್ಟು ೪೦ ತಸ್ವೀರುಗಳಾಗುತ್ತವೆ. ಬಹು ಸುಂದರವಾದ ಕಾಗದ.

ಕ್ರಯ ೮ ಆಣೆ ಮಾತ್ರ; ಹಾಸಲು ೧ ಆಣೆ.

ಮಹಾರಾಜರ ಫೋಟೋ ೧ಕ್ಕೆ ಕ್ರಯ ೨ ಆಣೆ.

"ಮಹಿಳಾ ಸಖಿ" ಎಂಬ ಮಾಸಪತ್ರಿಕೆಗೆ ಹೊಸದಾಗಿ ಚಂದಾ ಕಟ್ಟತಕ್ಕವರಿಗೆ ಮಾತ್ರ ಮೇಲ್ಕಂಡ ಚಿತ್ರಪುಸ್ತಕವು ಅರ್ಧ ಕ್ರಯಕ್ಕೆ ಸಿಕ್ಕೀತು. ಕ್ರಯ ೪ ಆಣೆ; ಹಾಸಲು ೧ ಆಣೆ.

ವಿಳಾಸ:—ಮಿಷನ್ ಬುಕ್ ಡಿಪೋ, ಮೈಸೂರು;

ಅಥವಾ

ಮಿಷನ್ ಬುಕ್ ಡಿಪೋ, ಬೆಂಗಳೂರು.

ಜರ್ಮನ್ ಸಿಲ್ವರ್ ಗಡಿಯಾರ ಕ್ರಯ ೬ ರೂಪಾಯಿ

ಟಪಾಲು ಚಾರ್ಜ ಸಹಿತ

ಈ ಗಡಿಯಾರಕ್ಕೆ ಜರ್ಮನ್‌ಸಿಲ್ವರ್ ಎಂಬ ಸ್ವಚ್ಛ ಬೆಳ್ಳಿಯಿಂದ ...



... ಗಡಿಯಾರದ ... ಹತ್ತು ವರ್ಷದ ... ವಾರಂಟು ...

ವಿಳಾಸ.

ಟಿ. ಗೋಪಾಲಕೃಷ್ಣಯ್ಯರ್, ಅಂಡ್ ಕೋ.

... ನಾಗಪಟ್ಟಣ ...

ಹೊಸ ಪುಸ್ತಕಗಳು.

ಪ್ರಬೋಧ ಚಂದ್ರಿಕೆ	೦—೩—೦
ವಾಲಿಸಿ ಚರಿತ್ರೆ (ಸಚಿತ್ರ)	೦—೧—೦
ಜಾರ್ಜ್ ಸ್ಟೀವನ್‌ಸನ್ ಚರಿತ್ರೆ (ಸಚಿತ್ರ)	೦—೧—೦
ಘನಶೆಯಮ್ಮ ಸ್ತ್ರೀಚರಿತ್ರೆ (ಸಚಿತ್ರ)	೦—೨—೬
ಹಿಮವತ್ಪ್ರದೇಶಗಳು (ಸಚಿತ್ರ)	೦—೨—೬
ಚೀನಾ ದೇಶ ... ಮತ್ತು ಅದರ ಜನಗಳು	೦—೨—೬
ದಕ್ಷಿಣ ಅಫ್ರಿಕವೂ ಮತ್ತು ಅದರ ಜನಗಳು	೦—೨—೬
ತ್ರಿವರ್ಗ ಮಾಲಿಕೆ	೦—೧—೦
ದೇಹವೆಂಬ ನನ್ನ ಮನೆ	೦—೧—೦
ವೇದಗಳ ಕಾಲದಲ್ಲಿ ಹಿಂದೂ ದೇಶದ ಸ್ಥಿತಿ	೦—೧—೦
ಮಾರ್ಟಿನ್ ಲೂಥರನ ಚರಿತ್ರೆ	೦—೧—೬
ಆಧ್ಯಾತ್ಮ ಪ್ರಶ್ನೋತ್ತರ	೦—೧—೬
ಶುದ್ಧವಾದ ನೀರಾವಳಿ	೦—೦—೬
ವಿಷಾಚಿ ...	೦—೦—೬
ಇಂಡಿಯಾದೇಶದ ... ಕಾರಣಗಳು	೦—೦—೬
ಮಕ್ಕಳನ್ನು ಬೆಳಸತಕ್ಕವಿಧ	೦—೦—೬
ಮಕ್ಕಳ ಆರೋಗ್ಯ	೦—೩—೦

ಮೇಲ್ಕಂಡ ಪುಸ್ತಕಗಳನ್ನು ವಿ. ಪಿ. ಪಿ. ಮೂಲಕವಾಗಿ ತರಿಸಬಹುದು.

ವಿಳಾಸ.—ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು

ಪ್ರಶ್ನೋತ್ತರ ಲೇಖ್ಯಬೋಧಿನಿ.

18

ಡೆಮ್ಮಿ ಅಷ್ಟಪುಟಗಳು ೫೪೦—ವಿಷಯಗಳು ೬೧೦—ಅನೇಕ ಪುಸ್ತಕಗಳು ಮಾರಿಗೆಯಾಗಿ ಸ್ವಲ್ಪ ಪ್ರತಿಗಳೇ ಉಳಿದವೆ. ಅತಿ ಜಾಗರೂಕತೆಯಾಗಿ ಸಂಗ್ರಹ ಮಾಡಿ ಇಡುವುದು ಉತ್ತಮವು. ಇದರಲ್ಲಿ ಕ್ಷೇಮಸಮಾಚಾರ ಕಾಗದಗಳು, ಬಗೆ ಬಗೆ ಪತ್ರಗಳು, ಸಿವಿಲ್ ಕೋರ್ಟಿನ ಯಲ್ಲಾ ವಿಧವಾದ ಅರ್ಜಿಗಳು, ಕ್ರಿಮಿನಲ್, ಜಿಲ್ಲೆ ವಿವಿಧ ಅರ್ಜಿಗಳು, ರೆವಿನ್ಯು ಅರ್ಜಿಗಳು, ಅಪ್ಪೀಲುಗಳು ಅವುಗಳ ವಿಧಿ, ಲಸು ಖತ, ಸಟವಳಿ, ಸ್ಟಾಂಪು, ರಿಜಿಸ್ಟ್ರೇಷನು ಇವುಗಳ ವಿವರಗಳು, ಪೋಲಿಸ್ ಲೆಖ್ಖಗಳು, ಮುಂತಾದ ಇನ್ನೂ ಅನೇಕ ವಿಷಯಗಳು, ಸ್ವಲ್ಪ ತಿಳುವಳಿಕೆಯುಳ್ಳವರು ಕೂಡ ಸ್ವತಃ ಸುಲಭವಾಗಿ ತಿಳಿದು ಕೊಳ್ಳುವ ಹಾಗೆ ಪ್ರಶ್ನೋತ್ತರ ರೀತಿಯಾಗಿ ಪ್ರಸಿದ್ಧರಾದ ಅನೇಕರ ಸಹಾಯದಿಂದ ಬರೆಯಲ್ಪಟ್ಟಿವೆ. ಲಾಯರುಗಳ ಆಫೀಸಿನಂಥಾ ಸ್ಥಳಗಳಲ್ಲಿಯೂ ಈ ಪುಸ್ತಕ ಒಂದು ಇದ್ದೇ ಇರಬೇಕು. ಹಸನು ಕಾಗದದ ಪುಸ್ತಕ ಒಂದರ ಕ್ರಯ ಒಂದು ರೂಪಾಯಿ. ಸಾಧಾರಣ ಕಾಗದದ ಪುಸ್ತಕ ಒಂದರ ಕ್ರಯ ಹನ್ನೆರಡಾಣೆ—ಅಂಚೆ ಖರ್ಚು ಕೊಡಬೇಕು. ಮುಂಗಡ ಹಣ; ಅಥವಾ ವಿ. ಪಿ. ಮೂಲಕ ಕಳುಹಿಸಲ್ಪಡುವದು. ಹೆಚ್ಚಿರುವ ಪುಸ್ತಕಗಳಿಗೆ ಹೆಚ್ಚಾಗಿ ಒಂದೇ ಸಲ ಕೊಳ್ಳುವವರಿಗೆ ವಿಶೇಷವಾದ ದಳಾಳಿ ಸಲ್ಲುವದು.

ವಿಳಾಸ:—ಭಾರತಿ ಶೃಂಗಗಿರಿ ಕಂಪೆನಿಯ, ಚಿಕ್ಕಪೇಟೆ, ಬೆಂಗಳೂರು

ಒಳ್ಳೇ ಔಷಧಗಳು.

40

ನಯನವ್ಯಾಧಿಗೆ ಸುಖಾಂಜನವು.—ಹೊಸತಾಗಿ ಅಥವಾ ಬಹು ಕಾಲದಿಂದ ಕಣ್ಣಿನಲ್ಲಿ ಇರುತ್ತಿದ್ದ ಎಲ್ಲ ಪ್ರಕಾರದ ಬಾಧೆಗಳು ಇದರಿಂದ ಬಹು ಬೇಗನೆ ಗುಣಹೊಂದುವವು. ಕಣ್ಣಿನಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರೂ, ಪಿಸರೂ ಬರುತ್ತಿರುವದೂ, ಉರಿ, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣಹೊಂದುತ್ತವೆ. ಕ್ರಯ ೧ ಡಬ್ಬಿಗೆ ೧ ರೂ. ಪೋಸ್ಟ ಖರ್ಚು ಅಣೆ.

ವಾಯುಸಂಹಾರಕತೈಲ.—(ಬಾಹ್ಯಲೇಪನಕ್ಕೆ ಮಾತ್ರ). ಇದನ್ನು ಹಚ್ಚಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ವಗೈರೆ ವಾಯುಗಳ ಬಾಧೆ, ತಲೆನೋವು, ಚಿಕ್ಕ ಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವದು. ಕುಪ್ಪಿಗೆ ೧ ರೂ. ಖರ್ಚು ಅಣೆ ೬

ಅಮೃತರಸ ಶಕ್ತಿ ಸಂಚಾರ.—ಇದರ ಸೇವನದಿಂದಲೇ ಏನೊಂದು ಬಾಧೆ ಇಲ್ಲದೆ ಹೊಸ ಮತ್ತು ಹಳೇ ತರಕ್ಕೆ ಬಿದ್ದ ಜ್ವರಗಡ್ಡೆಗಳು ಕರಗಿ ಹೋಗಿ ಮೈಯಲ್ಲಿ ಶಕ್ತಿಯೂ, ಕಾಂತಿಯೂ, ಆರೋಗ್ಯವೂ ಪ್ರಾಪ್ತವಾಗುವದು. ಕ್ರಯ ಕುಪ್ಪಿಗೆ ರೂ. ೩—೪ ಅಣೆ. ಖರ್ಚು ಅಣೆ ೬.

ಗಜಕರ್ಣದಮಲಮು.—೨ ಯಾ ೩ ಅರ್ಜಿ ಹಚ್ಚುವದರೊಳಗೆ ಎಂಥ ಕಠಿಣವಾದ ಗಜಕರ್ಣ ಯಾ ದದ್ದು ಇದ್ದರೂ ಪೂರ್ಣ ಗುಣಹೊಂದುವದು. ಡಬ್ಬಿಗೆ ೪ ಅಣೆ. ಖರ್ಚು ೧ ರಿಂದ ೬ ಡಬ್ಬಿವರೆಗೆ ಅಣೆ ೬. ವಿ. ಪಿ. ಯಿಂದಲೂ ರವಾನಿಸುವೆವು. ಇನ್ನು ಅನೇಕ ಉತ್ತಮವಾದ ಔಷಧಗಳ ಬಗ್ಗೆ ನಮ್ಮ ಕ್ಯಾಟಲಾಗು ತರಿಸಿ ಓದಿನೋಡಿ.

ರಾಜವೈದ್ಯ, ಮತ್ತು ಕಂಪನಿ, ಬೆಳಗಿ, ಉತ್ತರ ಕನ್ನಡಾ ಜಿಲ್ಲಾ.

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಮಹಾಭಾರತದ ಕನ್ನಡ ಟೀಕು.

ಆದಿಪರ್ವ ಎರಡೇ ಭಾಗ	೩	೦	೦	ಸ್ತ್ರೀಪರ್ವ	೦	೬	೦
ವಿರಾಟಪರ್ವ	೧	೦	೦	ಅನುಶಾಸನಿಕ			
ಉದ್ಯೋಗಪರ್ವ	೨	೦	೦	ಶಲ್ಯಪರ್ವ	೩	೧೨	೦

ಶ್ರೀಚಾಮರಾಜೋಕ್ತಿವಿಲಾಸವೆಂಬ ಕನ್ನಡ ರಾಮಾಯಣ.

ಬಾಲಕಾಂಡ	೧	೦	೦	ಸುಂದರಕಾಂಡ	೧	೦	೦
ಅಯೋಧ್ಯಾಕಾಂಡ	೨	೦	೦	ಯುದ್ಧಕಾಂಡ	೨	೮	೦
ಅರಣ್ಯಕಾಂಡ	೧	೦	೦	ಉತ್ತರಕಾಂಡ	೧	೮	೦
ಕಿಷ್ಕಿಂಧಾಕಾಂಡ	೧	೦	೦				

ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಶ್ರೀಮದ್ಭಾಗವತದ ಕನ್ನಡಟೀಕು.

ಪ್ರಥಮ ದ್ವಿತೀಯ ಸ್ಕಂಧಗಳು	೨	೦	೦	ದಶಮಸ್ಕಂಧ	೨	೮	೦
ತೃತೀಯ ಸ್ಕಂಧ				ಏಕಾದಶ ದ್ವಾದಶ			
ಚತುರ್ಥ ಪಂಚಮ				ಸ್ಕಂಧಗಳು	೧	೧೨	೦
ಸ್ಕಂಧಗಳು	೧	೧೨	೦	ಷಷ್ಠ ಸಪ್ತಮ ಅಷ್ಟಮ ನವಮಸ್ಕಂಧಗಳು	೨	೮	೦

ಈ ಮೇಲೆ ತಿಳಿಸಿರುವ ಪುಸ್ತಕಗಳೆಲ್ಲವೂ ಒಳ್ಳೇ ಗದ್ಯರೂಪ... ಪದ್ಯಗಳು ಇಲ್ಲವೇ ಇಲ್ಲ.

ಈ ಮೇಲೆ ಹೇಳಿದ ಪುಸ್ತಕಗಳು ನಮ್ಮಲ್ಲಿಯೂ ಬೆಂಗಳೂರು ... ... ದೊರೆಯುವವು. ... ವಿ. ಪಿ. ಮೂಲಕ ತರಿಸಿಕೊಳ್ಳಬಹುದು. ... ... ಕಳುಹಿಸಲ್ಪಡುತ್ತ.

ಉತ್ತಮವಾದ ಕಸೀ ಗಿಡಗಳು.

ನಮ್ಮಲ್ಲಿ ಬಹಳ ಉತ್ತಮವಾದ ಕಸೀ ಮಾವಿನ ಗಿಡಗಳು ... ... ಗಿಡಗಳು ಮತ್ತು ... ... ಗಿಡಗಳು ತರತರ ... ...

... ... ಸಾಬ್,

... ...

ವೃತ್ತಾಂತ ಪತ್ರಿಕೆ.

:o:

ಸನ್ ೧೯೦೨ ನೇ ಇಸವಿ ಆಗೋಸ್ಟು ತಾ ೨೧ ನೇ ಗುರುವಾರ.

ಎಡ್ವರ್ಡ್ ಸಾರ್ವಭೌಮರ ಕಿರೀಟಧಾರಣೋತ್ಸವದ ವಿಶೇಷ ಸಮಾಚಾರಗಳು.

ಪ್ರಜೆಗಳೆಲ್ಲರೂ ಎಡ್ವರ್ಡರ ಕಿರೀಟಧಾರಣೆಯ ಮಹೋತ್ಸವದಲ್ಲಿ ಅವರಿಗೆ ಬಹುಮಾನಾರ್ಥವಾಗಿ ಹಣವನ್ನು ಚಂದಾ ಎತ್ತಿ ೧,೧೫,೦೦೦ ಪೌಂಡುಗಳನ್ನು ಕೊಟ್ಟರು. ಮಹಾರಾಜರವರು ಈ ಹಣವನ್ನು ಮಹಾರಾಜರ ಆಸ್ಪತ್ರೆ ಫಂಡೆಂಬ ಒಂದು ನಿಧಿಗೆ ಹಾಕಿದ್ದಾರೆ. ಎಡ್ವರ್ಡರು ಯುವರಾಜರಾಗಿರುವಾಗ್ಯೆ ಲನ್‌ಡನ್ ನಗರದ ಆಸ್ಪತ್ರೆಗಳ ವಿಷಯದಲ್ಲಿ ಕೇವಲ ಹಿತೈಷಿಗಳಾಗಿದ್ದರು. ತಮ್ಮ ಕಿರೀಟಧಾರಣೆಯ ಕಾಲದಲ್ಲಿ ಪ್ರಜೆಗಳು ಬಹುಮಾನಾರ್ಥವಾಗಿ ಕೊಟ್ಟ ಹಣವನ್ನು ನಗರಾಧಿಪತಿಯು ಆಸ್ಪತ್ರೆಗಳಿಗಾಗಿ ವಿನಿಯೋಗಿಸುವ ಉದ್ದೇಶವನ್ನು ಸೂಚಿಸಲು ಎಡ್ವರ್ಡರು ಬಹು ಸಂತೋಷಪಟ್ಟು ತಮಗೆ ಭಗವಂತನು ಜೀವವನ್ನು ಕೊಟ್ಟು ಉಳಿಸಿರುವ ವರೆಗೂ ಲನ್‌ಡನ್ ನಗರದ ಆಸ್ಪತ್ರೆಗಳ ಮೇಲೆ ಬಿದ್ದಿರುವ ಸಾಲವನ್ನು ಹರಿಸುವ ವಿಷಯದಲ್ಲಿ ತಮ್ಮಿಂದಾದಮಟ್ಟಿಗೂ ಪ್ರಯತ್ನವನ್ನಡದೆ ಬಿಡುವದಿಲ್ಲವೆಂದು ಹೇಳಿದರು.

ಕಿರೀಟಧಾರಣೆಯ ಕಾಲದಲ್ಲಿ ವೆಸ್ಟ್‌ಮಿನ್‌ಸ್ಟರ್ ಗೇವಾಲಯಕ್ಕೆ ಹೋಗಿದ್ದ ಇಂಡ್ಯಾ ದೇಶದ ಸೈನಿಕರು ವಾಟರ್‌ಲೂ ಸ್ಟೇಷನನ್ನು ಬಿಟ್ಟು ನಡೆಯುತ್ತಿರುವಲ್ಲಿ ನಗರವಾಸಿಗಳು ಕೋಲಾಹಲ ಧ್ವನಿಯಿಂದ ಆರ್ಭಟಿಸಿದರು.

ಜಯಪುರದ ಮಹಾರಾಜರವರು ಎಡ್ವರ್ಡ್ ಮಹಾರಾಜರವರ ಭೇಟಿಗೆ ಹೋಗಿದ್ದು ೧೮,೦೦೦ ಪೌಂಡು ಬಾಳತಕ್ಕ ಒಂದು ಕತ್ತಿಯನ್ನು ನಜರು ಒಪ್ಪಿಸಿದರೆಂದು ತಿಳಿದು ಬಂದಿದೆ.

ಇಂಡ್ಯಾ ದೇಶದಿಂದ ಕಿರೀಟಧಾರಣೆಗೆ ಹೋಗಿರುವ ಸೈನಿಕರನ್ನೆಲ್ಲಾ ಎಡ್ವರ್ಡ್ ಸಾರ್ವಭೌಮರು ತಮ್ಮ ಮುಂದೆ ಕವಾತು ಮಾಡಿಸಿದರು. ಮಳೆಗಾಳಿಯಾಗಿದ್ದರೂ ಈ ಕಾರ್ಯವು ಉತ್ಸಾಹಕರವಾಗಿ ನಡೆಯಿತು. ಪ್ರಿನ್ಸ್ ಆವ್ ವೇಲ್ಸರು ಸೈನಿಕರಿಗೆಲ್ಲಾ ಜ್ಞಾಪಕಾರ್ಥವಾದ ಬಿರುದಿನ ಬಿಲ್ಲೆಗಳನ್ನು ಹಂಚಿದರು. ಕಡೆಯಲ್ಲಿ ಮಹಾರಾಜರವರು ಸೈನಿಕರಿಗೆಲ್ಲಾ—ನಮ್ಮ ಇಂಡಿಯಾ ರಾಷ್ಟ್ರದ ಸೈನ್ಯಗಳ ಒಂದು ಭಾಗವನ್ನು ಪರೀಕ್ಷಿಸಿ ಸಂತೋಷಪಡುವೆನೆಂಬ ನಿರೀಕ್ಷೆಯು ಕೆಲವು ಕಾಲದ ಹಿಂದೆ ನಮಗಿರಲಿಲ್ಲ. ಆದರೆ ಈಗ ದೈವಾನುಗ್ರಹದಿಂದ ಸ್ವಸ್ಥವಾಗಿ ನಿಮ್ಮನ್ನೆಲ್ಲಾ ನೋಡುವದರಲ್ಲಿ ಬಹಳ ಸಂತೋಷವಾಯಿತು. ನಾನು ದೇಹಲಿಗೆ ಬಂದಿರುವಾಗ್ಯೆ ನಿಮ್ಮಲ್ಲಿ ಕೆಲವರ ಪಟಾಲಮುಗಳನ್ನು ನೋಡಿದ್ದು ಈಗ ನೆನಪಿಗೆ ಬರುತ್ತೆ. ನೀವು ಲನ್‌ಡನ್ ರಾಜಧಾನಿಗೆ ಬಂದದ್ದು ನಮಗೆ ಬಹಳ ಸಂತೋಷ ಎಂಬದಾಗಿ ಹೇಳಿದರು. ತರುವಾಯ ಆ ಸೈನ್ಯದಲ್ಲಿ ಸೇರಿರುವ ಬೇರೆ ಬೇರೆ ಪಟಾಲಮಿನ ಮುಖ್ಯಾಧಿಕಾರಿಗಳನ್ನು ಅವರವರ ಯೋಗ್ಯತಾ ಕ್ರಮವನ್ನನುಸರಿಸಿ ಚಕ್ರವರ್ತಿಯವರು ಸನ್ನಿಧಾನಕ್ಕೆ ಬರಮಾಡಿಕೊಂಡು ಮಾತಾಡಿಸಿದರು.

ಇಂಡ್ಯಾ ದೇಶದಿಂದ ಹೋಗಿರುವ ಪ್ರತಿನಿಧಿಗಳ ಪರವಾಗಿ ಮಹಾರಾಜಾ ಕುಮಾರ ಟಾಗೂರ್ ಯವರು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರ ಮೂಲಕ ಎಡ್ವರ್ಡ್ ಸಾರ್ವಭೌಮರಿಗೆ ಅಭಿನಂದನ ಪತ್ರಿಕೆಯೊಂದನ್ನು ಒಪ್ಪಿಸಿರುತ್ತಾರೆ. ಅವರ ಸಾರಾಂಶವೇನಂದರೆ—ಬ್ರಿಟಿಷ ಚಕ್ರಾಧಿಪತ್ಯಕ್ಕೆಲ್ಲಾ ಸಾರ್ವಭೌಮರಾದ ಎಡ್ವರ್ಡ್ ಮಹಾರಾಜರವರ ಕಿರೀಟಧಾರಣೋತ್ಸವಕ್ಕಾಗಿ ಅಪ್ಪಣೆಯನ್ನು ಪಡೆದು ಬಂದವರಾದ ಇಂಡ್ಯಾ ಪ್ರತಿನಿಧಿಗಳಾದ ನಾವೆಲ್ಲರೂ ಹೃದಯಪೂರ್ವಕವಾದ ರಾಜಭಕ್ತಿಯೊಡನೆ ಸನ್ನಿಧಾನದಲ್ಲಿ ಅರಿಕೆ ಮಾಡುವದೇನಂದರೆ—ಈ ದಿವಸ ನಾವು ವೆಸ್ಟ್‌ಮಿನ್‌ಸ್ಟರ್ ದೇವಾಲಯದಲ್ಲಿ ಕಂಡು ಕೇಳಿದ ವೈಭವಪೂರ್ಣ ಸಂಸ್ಕಾರ ಪದ್ಧತಿಯ ದೆಸೆಯಿಂದ ಬಹು ದೂರದೇಶ ವಾಸಿಗಳಾದ ನಾವೂ ಸಾರ್ವಭೌಮರ ೩೦ ಕೋಟಿ ಪ್ರಜೆಗಳ ಪ್ರತಿನಿಧಿಗಳಾಗಿರುತ್ತೇವೆಂದು ತಿಳಿದು ಸಂಭ್ರಮಿಸಿದೆವು.

ಸಾರ್ವಭೌಮರಿಗೆ ಸಂಭವಿಸಿದ್ದ ರೋಗವನ್ನು ನಿವಾರಿಸಿದ, ಸೌಖ್ಯವನ್ನು ದಯಪಾಲಿಸಿದ ಭಗವಂತನನ್ನು ನಾವು ಹೃದಯಪೂರ್ವಕವಾಗಿ ವಂದಿಸುವದಲ್ಲದೆ, ಅವರು ಈ ದಿನ ಇಂಡ್ಯಾ ಚಕ್ರವರ್ತಿಗಳಾಗಿಯೂ ಅವರ ಆಳ್ವಿಕೆಗೊಳಪಟ್ಟ ಇತರ ದೇಶಗಳ ರಾಜರಾಗಿಯೂ ಅಭಿಷಿಕ್ತರಾದ ದಿವ್ಯವೈಭವದಿಂದೊಡಗೂಡಿದ ಸಂಸ್ಕಾರದ ಗಾಂಭೀರ್ಯವನ್ನೂ ಪ್ರಭೆಯನ್ನೂ ನೋಡಿ ಉಲ್ಲಾಸಿತರಾಗಿ ಸಾರ್ವಭೌಮರಿಗೂ ಅವರ ವಂಶಕ್ಕೂ ನಮ್ಮ ರಾಜಭಕ್ತಿಯನ್ನು ಅರ್ಪಿಸುತ್ತೇವೆ.

ಸಾರ್ವಭೌಮರಲ್ಲಿ ಭಕ್ತಿಯಿಟ್ಟಿರುವ ಪ್ರಜೆಗಳಲ್ಲಿ ನಾವು ಯಾರ ಪ್ರತಿನಿಧಿಗಳಾಗಿ ಬಂದಿರುತ್ತೇವೋ ಆ ಇಂಡ್ಯಾ ದೇಶ ವಾಸಿಗಳಿಗಿಂತಲೂ ಹೆಚ್ಚಾದವರಿಲ್ಲ. ಸಾರ್ವಭೌಮರಿಗೆ ದೀರ್ಘಾಯುಷ್ಯವೂ ಚಿರಕಾಲ ರಾಜ್ಯಭಾರವೂ ಲಭಿಸಲೆಂದು ಪ್ರಾರ್ಥಿಸುತ್ತೇವೆ.

ನಮ್ಮೆಲ್ಲರಿಗೂ ಮಾತೃಶ್ರೀಯವರಾಗಿರುವ ಚಕ್ರವರ್ತಿನಿಯವರಿಗೂ ಭಗವಂತನು ಆಯುರಾರೋಗ್ಯಾಭಿವೃದ್ಧಿಗಳನ್ನು ದಯಪಾಲಿಸಲೆಂದು ವಿಶ್ವಾಸಪೂರ್ವಕವಾಗಿ ಆ ಶುಭದಾಯಕನಾದ ಸ್ವಾಮಿಯನ್ನು ಪ್ರಾರ್ಥಿಸುತ್ತೇವೆ.

ಗ್ವಾಲಿಯರ್, ಕೊಲ್ಹಾಪುರ, ಇದಾರ್, ಬಿಕಾನಿರ್, ಜಯಪುರ ಇವೇ ಮೊದಲಾದ ಸಂಸ್ಥಾನಗಳ ಮಹಾರಾಜರುಗಳು ಈ ತಿಂಗಳ ೨೨—೨೪ ನೇ ತಾರೀಖುಗಳಲ್ಲಿ ವಿಲಾಯತಿಯಿಂದ ಹಿಂತಿರಿಗಿ ಹಿಂದುಸ್ಥಾನವನ್ನು ಕುರಿತು ಪ್ರಯಾಣ ಮಾಡುವವರಾಗಿದಾರೆ. ಸಿಪಾಯಿಗಳ ಮತ್ತು ನಾವೆಯವರ ಸಂಸಾರ ಮಕ್ಕಳ ಜೀವನಕ್ಕಾಗಿ ಚಕ್ರವರ್ತಿನಿಯವರು ಫಂಡನ್ನು ಕೂಡಿಸುತ್ತಿದಾರೆ. ಈ ಫಂಡಿಗೆ ಬಿಕಾನಿರ್ ಸಂಸ್ಥಾನದ ಮಹಾರಾಜರು ೧೦೦ ಪೌಂಡುಗಳನ್ನು ದಾನಮಾಡಿದರು. ಹಿಂದುಸ್ಥಾನದಿಂದ ವಿಲಾಯತಿಗೆ ಹೋಗಿದ್ದ ಒಬ್ಬಾನೊಬ್ಬ ಪ್ರತಿನಿಧಿಯು—ಇನ್ನು ಮೇಲೆ ವಿಲಾಯತಿಯಲ್ಲಿ ರಾಜೋತ್ಸವಗಳಾಗುವಾಗ್ಯೆ ಹಿಂದುಸ್ಥಾನದ ಪ್ರತಿನಿಧಿಗಳೂ ಅವುಗಳಲ್ಲಿ ಸಹಭಾಗಿಗಳಾಗುವಂತೆ ಏರ್ಪಾಡಾಗಬೇಕೆಂದು ಟೈಂಸ್ ಪತ್ರಿಕೆಯಲ್ಲಿ ಬರದಿರುತ್ತಾರೆ.

ಹಿಂದುಸ್ಥಾನದಿಂದ ಕಿರೀಟಧಾರಣೆಯ ಉತ್ಸವಕ್ಕಾಗಿ ವಿಲಾಯತಿಗೆ ಹೋಗಿರುವ ಪ್ರತಿನಿಧಿಗಳ ಪರವಾಗಿ ಮಹಾರಾಜ್ ಕುಮಾರ್ ಪ್ರದ್ಯೋತ ಕುಮಾರ್ ತಗೋರಯವರು ಲಂಡನ್ ಪಟ್ಟಣದ ಲಾರ್ಡ್ ಮೇಯರ್ ಎಂಬ ಪುರಾಧಿಕಾರಿಗೆ ಪ್ರತಿನಿಧಿಗಳ ಕೃತಜ್ಞತಾ ಭಾವವನ್ನೂ ಸಂತೋಷವನ್ನೂ ಪ್ರಕಾಶಪಡಿಸಿ ಒಂದು ಕಾಗದ ಬರೆದಿರುತ್ತಾರೆ. ಅದರಲ್ಲಿ ಕಂಡ ವಿಷಯಗಳೇನಂದರೆ.—ನಾವುಗಳೆಲ್ಲಾ ಲಾರ್ಡ್ ಮೇಯರ್ ಯವರ ಮೂಲಕ ಸಕಲ ಇಂಗ್ಲಿಷ್ ಜನರನ್ನೂ ವಂದಿಸುವೆವು. ಹಿಂದುಸ್ಥಾನದಲ್ಲಿ ಆಗಾಗ್ಗೆ ಪ್ರಾಪ್ತವಾಗುವ ಕ್ಷಾಮ ಕಾಲಗಳಲ್ಲಿ ಕ್ಷಾಮಪೀಡಿತರಾದ ಪ್ರಜೆಗಳಿಗೆ ಇಂಗ್ಲಿಷ್ ಜನರು ಉದಾರಿಗಳಾಗಿ ದ್ರವ್ಯಸಹಾಯ ಮಾಡುತ್ತಾ ಬಂದಿದಾರೆ. ಲಾರ್ಡ್ ಮೇಯರ್, ಮ್ಯಾನ್‌ಷನ್ ಹೌಸ್ ಎಂಬೀ ಹೆಸರುಗಳು ಹಿಂದುಸ್ಥಾನ ಸಕಲ ಪ್ರಜೆಗಳಲ್ಲೂ ಬಹು ರೂಢಿಗೆ ಬಂದಿರುವವು. ಈ ಮಹಾನಗರದಲ್ಲಿ ನಮ್ಮನ್ನೆಲ್ಲಾ ಸಹೋದರ ಪ್ರೀತಿಯಿಂದ ಕಂಡು ಬಹು ಸಂತೋಷದಿಂದ ಸತ್ಕರಿಸಿದಿರಿ. ಮತ್ತು ನಾವು ಎಲ್ಲಿ ಹೋದರೂ ಎಲ್ಲಾ ಸಂದರ್ಭಗಳಲ್ಲಿಯೂ ನೀವುಗಳು ನಮಗೆ ವಿಶೇಷವಾದ ಪ್ರೀತಿ ವಿಶ್ವಾಸ ಸ್ನೇಹಭಾವಗಳನ್ನೇ ತೋರಿಸುತ್ತೀರಿ. ಹಿಂದುಸ್ಥಾನದಿಂದ ಬಂದಿರುವ ಸೈನಿಕರಿಗೆ ನೀವು ಮಾಡಿದ ಆತಿಥ್ಯಕ್ಕಾಗಿಯೂ ನಿಮ್ಮನ್ನು ವಂದಿಸುತ್ತೇವೆ. ನಮ್ಮಗಳ ವಿಷಯದಲ್ಲಿ ನೀವು ತೋರಿಸಿದ ಪ್ರೀತಿ, ಸ್ನೇಹಭಾವ, ಔದಾರ್ಯಗಳನ್ನು ಎಷ್ಟು ವಿವರಿಸಿದರೂ, ಅವುಗಳಗಾಗಿ ನಿಮ್ಮನ್ನು ಎಷ್ಟು ಕೊಂಡಾಡಿದರೂ ಸಾಲದು. ಇಂಗ್ಲಿಷ್ ಪ್ರಜೆಗಳಾದ ನಿಮ್ಮ ಮೇಲೆ ನಮಗಿರುವ ಗುರುಭಾವವೂ ಪ್ರೀತಿ ವಾತ್ಸಲ್ಯಗಳೂ ನಾವು ಪತ್ತರ ಸೇರಿದಬಳಿಕ ಅಲ್ಲಾ ವೃದ್ಧಿ ಹೊಂದುತ್ತಿರುವವು. ನಿಮ್ಮ ಬ್ರಿಟಿಷ್ ಪ್ರಜೆಗಳಿಗೆ ಶ್ರೇಯಸ್ಸುಂಟಾದರಾಗೆಲ್ಲಾ ನಮ್ಮ ದೇಶವೂ ಪ್ರಜೆಗಳೂ ಐಶ್ವರ್ಯ ಸುಖ ಸಂತೋಷಗಳಲ್ಲಿ ಅಭಿವೃದ್ಧಿ ಹೊಂದುತ್ತಾ ಬಂದಾರೆಂಬುವದು ವೃತ್ತಾಂತಕ್ಕೆ ಬಂದಿರುವದರಿಂದ ನಿಮ್ಮ ಏಳಿಗೆಯು ವೃದ್ಧಿಹೊಂದುತ್ತಾ ಬರಲೆಂದು ಪ್ರಾರ್ಥಿಸುತ್ತೇವೆ. ಇಂಗ್ಲಿಷ್ ರಾಜ್ಯವನ್ನೂ ಅದರ ಪ್ರಜೆಗಳನ್ನೂ ಅದರ ದೊರೆಯನ್ನೂ ರಾಣಿಯನ್ನೂ ರಾಜವಂಶೀಕರನ್ನೂ ಮತ್ತು ಸಕಲರನ್ನೂ ಸರ್ವೇಶನು ಆಶೀರ್ವದಿಸಲಿ. ಯಾಕಂದರೆ ಅವರಿಗೆ ಬರತಕ್ಕ ...

ದ ಸಂತೋಷಗಳಲ್ಲಿ ನಾವೂ ಪಾಲುಗಾರರಾಗುತ್ತೇವೆ.

ಇಂಥಾ ವಿಶೇಷಕಾಲದಲ್ಲಿ ನಮ್ಮನ್ನು ಕರಿಸಿಕೊಂಡು ಸತ್ಕಾರ ಮಾಡಿದಕ್ಕಾಗಿ ಬನ್ನೆಯ್ಯಡುಸಲು ನಿಮ್ಮನ್ನು ಈ ಮೂಲಕ ವಂದಿಸಿ ನಮ್ಮ ಕೃತಜ್ಞತೆಯನ್ನು ಪ್ರಕಾಶಪಡಿಸುವೆವು.

ಈ ಪೊಳ್ಳಂಥ ಪತ್ರಿಕೆಯನ್ನು ಲಾರ್ಡ್ ಮೇಯೊ ರವರು ಸ್ವೀಕರಿಸಿ ಅದಕ್ಕೆ ಪ್ರತಿಯಾಗಿ ಉತ್ತರ ಕೊಟ್ಟರು:ದೇನಂದರೆ.—ನಮ್ಮ ಮಹಾರಾಜಾ ಚಕ್ರವರ್ತಿಯವರ ಶ್ರೇಯಃ ಪ್ರಾರ್ಥನೆಯಿಂದಲೂ, ಸತ್ಪ್ರಜಾ ವಾತ್ಸಲ್ಯದಿಂದಲೂ ನೀವುಗಳು ಬರೆದಿರುವ ಅಭಿಪ್ರಾಯಗಳು ನಮ್ಮಲ್ಲಿ ಮನಃಪೂರ್ವಕವಾದ ಸಂತೋಷವನ್ನುಂಟುಮಾಡಿದೆ. ಹಿಂದುಸ್ಥಾನಕ್ಕೂ ಈ ದೇಶಕ್ಕೂ ಪರಸ್ಪರವಾದ ಪ್ರೀತಿ ಸ್ನೇಹಭಾವ ವಾತ್ಸಲ್ಯಗಳು ಎಂದೆಂದಿಗೂ ನೆಲಸಿರುತ್ತವೆಂದು ನಂಬುವೆನು. ಲಂಡನ್ ಪಟ್ಟಣದ ಮತ್ತು ಈ ದೇಶದ ಸಕಲ ಪ್ರಜೆಗಳ ಪರವಾಗಿಯೂ ನಿಮ್ಮೆಲ್ಲರನ್ನೂ ಮನಃಪೂರ್ವಕವಾಗಿ ವಂದಿಸುತ್ತೇನೆ. ನಿಮ್ಮಗಳಿಗೆ ಈ ಸುಖ ಪ್ರಯಾಣವೂ ದೇವರಾಶೀರ್ವಾದವೂ ದೊರಕಲಿ ಎಂದು ಹಾರೈಸುವೆನು.

"ಹಾಗಾದರೆ ಅರಸನು ನೀನು ಹೌದಲ್ಲವೇ?"

ಹೀಗೆ ಕೇಳಿದವನು ಪಾಲೆಸ್ತೀನ್ ದೇಶದ ರೋಮದಾಯ ಸೀಮೆಯ ರೋಮನ್ ಅಧಿಪತಿ. ಇವನು ತನ್ನ ನ್ಯಾಯಾಸನದ ಮುಂದೆ ಅಪರಾಧಿಯಾಗಿ ನಿಂತಿದ್ದ ಯೇಸುವನ್ನು ನೋಡಿ ಹಾಸ್ಯವಾಗಿ ನಿಂದಿಸಿ ಹೀಗೆ ಕೇಳಿದನು. ಯಾಕಂದರೆ ಆ ಸಮಯದಲ್ಲಿ ಯೇಸು ನಿಂತಿದ್ದ ವಿಧವನ್ನು ನೋಡುವಲ್ಲಿ ಯಾರಾದರೂ ಆತನನ್ನು ಅರಸನೆಂದು ಹೇಳುವರೇ? ಎಂದಿಗೂ ಇಲ್ಲ. ಆತನ ತಲೆಯ ಮೇಲೆ ನವರತ್ನ ಖಚಿತವಾದ ಕಿರೀಟವಿತ್ತೇ? ಆತನ ಕೈಯಲ್ಲಿ ಅಧಿಕಾರ ದಂಡವಿತ್ತೇ? ಆತನ ಅಪ್ಪಣೆಯನ್ನು ಶಿರಸ್ಸಾವಹಿಸಿ ನಡೆಯುವ ಸೈನ್ಯದವರಾಗಲಿ, ಆತನ ಪಾದಸೇವೆಯನ್ನು ಮಾಡುವ ಆಳುಗಳಾಗಲಿ ಆತನ ಸುತ್ತ ಮುತ್ತಲೂ ಇರಲಿಲ್ಲ. ಆತನು ಬಡವನೂ, ದಿಕ್ಕಿಲ್ಲದವನೂ, ಹರುಕು ಬಟ್ಟೆಗಳನ್ನು ಹೊದ್ದವನೂ ಆಗಿದ್ದನು. ಇಂಥ ಪುರುಷನನ್ನು ನೋಡಿ ಆ ಪಿಲಾತನೆಂಬ ಅಧಿಪತಿ—ಹಾಗಾದರೆ ನೀನು ಅರಸನು ಹೌದಲ್ಲವೇ? ಎಂದು ಅಪಹಾಸ್ಯ ಮಾಡಿದ್ದಕ್ಕೆ ಯಾರೂ ಆಶ್ಚರ್ಯಪಡಲಾರರು.

ಸುಮಾರು ಎರಡು ವಾರಗಳ ಕೆಳಗೆ ಇಂಡಿಯಾ ಸಾರ್ವಭೌಮರಾದ ಎಡ್ವರ್ಡ್ ಮಹಾರಾಜರಿಗೆ ಲಂಡನ್ ನಗರದ ವೆಸ್ಟ್‌ಮಿನ್ಸ್ಟರ್ ಆಬಿ ಎಂಬ ದೇವಾಲಯದಲ್ಲಿ ಕಿರೀಟಧಾರಣೆಯಾಯಿತಷ್ಟೆ. ಆ ಸಮಯದಲ್ಲಿ ಪ್ರಧಾನ ಗುರುಗಳು ಅವರ ಕೈಯಲ್ಲಿ ಒಂದು ಅಧಿಕಾರದಂಡವನ್ನು ಕೊಟ್ಟರು. ಆ ದಂಡದ ತುದಿಯಲ್ಲಿ ಸಿಕ್ಕಿರುವುದು ಒಂದು ಶಿಲುಬೆಯಿರುವುದು. ಎರಡು ಸಾವಿರ ವರುಷಗಳ ಹಿಂದೆ ಪಿಲಾತನೆಂಬವನಿಂದ ಶಿಲುಬೆಗೆ ಜಡಿಸಲ್ಪಟ್ಟು ಹೀನಾಯಿಸಲ್ಪಟ್ಟ ಆ ಯೇಸುವೇ ರಾಜಾಧಿರಾಜನೆಂದಾಗಿಯೂ ಈ ಭೂಮಂಡಲದಲ್ಲಿ ಅತ್ಯಂತ ವಿಸ್ತಾರವಾದ ಏಕಚ್ಛತ್ರವಾದ ಬ್ರಿಟಿಷ ಚಕ್ರಾಧಿಪತ್ಯದ ಸಾರ್ವಭೌಮರು ಪಿಲಾತನ ಮುಂದೆ ಅಪರಾಧಿಯಾಗಿ ನಿಂತಿದ್ದ ಆ ಯೇಸುವಿಗೆ ಕಿರಿಯರಾದವರೆಂದಾಗಿಯೂ ಆ ಅಧಿಕಾರದಂಡದ ಮೇಲಿರುವ ಶಿಲುಬೆಯು ಸೂಚಿಸುವದಾಗಿದೆ. ಎಡ್ವರ್ಡ್ ಮಹಾರಾಜರ ಕೈಯಲ್ಲಿ ಒಂದು ಗೋಳಾಕಾರವನ್ನೂ ಕೊಟ್ಟರು. ಆ ಆಕಾರದ ಮೇಲೆಯೂ ಒಂದು ಶಿಲುಬೆಯು ಇರುವದು. ಆ ರಾಜಚಿಹ್ನೆಯನ್ನು ಗುರುಗಳು ಎಡ್ವರ್ಡ್ ಮಹಾರಾಜರ ಕೈಯಲ್ಲಿ ಕೊಟ್ಟು, ಆ ಭೂಮಂಡಲವೆಲ್ಲಾ ಯೇಸುವಿನ ಅಧಿಕಾರ ಶಕ್ತಿಗಳಿಗೆ ಒಳಪಟ್ಟದೆಯೆಂಬುವದೇ ಈ ಗೋಳಾಕಾರದ ಮೇಲ್ಗಡೆ ಶಿಲುಬೆಯನ್ನಿಟ್ಟಿರುವದರ ಅಭಿಪ್ರಾಯ ಎಂದು ಹೇಳಿದರು.

ಎರಡು ಸಾವಿರ ವರ್ಷಗಳ ಹಿಂದೆ ಎಲ್ಲರಿಂದಲೂ ತಿರಸ್ಕರಿಸಲ್ಪಟ್ಟು ಅಪಹಾಸ್ಯಕ್ಕೆ ಗುರಿಯಾದ ಆ ಯೇಸುವನ್ನು ಈಗ ಭೂಮಂಡಲದಲ್ಲಿರುವ ಮಹಾ ಬಲಿಷ್ಠರಾದ ಅರಸುಗಳೆಲ್ಲರೂ ರಾಜಾಧಿರಾಜನೆಂದೂ ರಕ್ಷಕನೆಂದೂ ಒಪ್ಪಿ ಪೂಜಿಸುವದು ಆಶ್ಚರ್ಯವೇ ಸರಿ. ಈ ಪ್ರಕಾರ ಬದಲಾವಣೆಯುಂಟಾಗಿರುವದಕ್ಕೆ ಕಾರಣವೇನು? ಯೇಸುಸ್ವಾಮಿಯು ಆ ಪಿಲಾತನಿಗೆ—"ಅರಸನು ನೀನು" ಎಂದು ನೀನು ಹೇಳುವದು ಸರಿಯೇ. ನನ್ನ ರಾಜ್ಯವು ಈ ಲೋಕದ್ದಲ್ಲ, ಈ ಲೋಕದ್ದಾಗಿದ್ದರೆ ನಾನು ಯೆಹೂದ್ಯರ ಕೈಯಲ್ಲಿ ಬೀಳದಂತೆ ನನ್ನ ಪರಿವಾರದವರು ಹೋರಾಡುತ್ತಿದ್ದರು ಎಂದು ಹೇಳಿದನು. ಆತನ ರಾಜ್ಯವು ಭೂಲೋಕದಲ್ಲಿ ಸ್ಥಾಪನೆಯಾಗಿರುವದು ಸೈನ್ಯ ಬಲದಿಂದಲ್ಲ, ಆತನಲ್ಲಿದ್ದ ರಾಜಲಕ್ಷಣಗಳ ಪ್ರಭಾವದಿಂದಲೇ ಎಂದು ತಿಳಿಯತಕ್ಕದ್ದು.

ರಾಜಾಧಿರಾಜ ನೆನಿಸಿಕೊಳ್ಳುವಾತನ ಲಕ್ಷಣಗಳ್ಯಾವವು?

I. ಬುದ್ಧಿಯಿರಬೇಕು.—ಪ್ರಜೆಗಳನ್ನು ಸನ್ಮಾರ್ಗದಲ್ಲಿ ನಡಿಸುವದಕ್ಕೆ ಅರಸನಾದವನಿಗೆ ಇತರರಿಗಿಂತ ಹೆಚ್ಚು ಬುದ್ಧಿಯಿರಬೇಕಷ್ಟೆ. ಸಕಲರ ಬುದ್ಧಿಗಿಂತಲೂ ದೇವರ ಬುದ್ಧಿಯೇ ಹೆಚ್ಚು. ಅಂಥಾ ಬುದ್ಧಿ ಯೇಸುವಿನಲ್ಲಿತ್ತು. ಸತ್ಯವನ್ನರಿಯದೆ ಇತರರು ಕುರುಡರಂತೆ ಪಾಪದ ಮಾರ್ಗದಲ್ಲಿ ತಡವರಿಸುತ್ತಿರುವಲ್ಲಿ ಯೇಸುವಿಗೆ ಆಕಾಶದಲ್ಲಿರುವ ಸೂರ್ಯನನ್ನು ಕಂಡಂತೆ ಸತ್ಯವೆಂಬುವದು ಸ್ಪಷ್ಟವಾಗಿ ಗೊತ್ತಾಗಿತ್ತು. "ನೀವು ಆತನನ್ನು ತಿಳಿಯದೆ ಇದ್ದೀರಿ, ನಾನಂತೂ ಆತನನ್ನು ಬಲ್ಲೆನು" ಎಂದು ಆತನು ಒಂದು ದಿನ ತನ್ನ ಬಳಿಯಲ್ಲಿದ್ದ ಕೆಲವರಿಗೆ ಹೇಳಿದನು. ಇನ್ನೊಂದು ದಿನ ಆತನು—"ಮಗನೇ ಹೊರತು ಇನ್ನಾವನೂ ತಂದೆಯನ್ನು ತಿಳಿದವನಲ್ಲ, ಮತ್ತು ಮಗನು ತಂದೆಯನ್ನು ಯಾರಿಗೆ ಪ್ರಕಟಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೋ ಅವನೂ ಆತನನ್ನು ತಿಳಿದವನಾಗಿದ್ದಾನೆ" ಎಂದು ಹೇಳಿದನು. ಆತನಲ್ಲಿ ಇಂಥ ದಿವ್ಯ ಮಹಿಮೆಯಿದ್ದದರಿಂದಲೇ, ಆತನು ಜನಾಂಗವನ್ನು ನೋಡಿ—ಎಲೈ ಕಷ್ಟಪಡುವವರೇ, ಹೊರೆ ಹೊತ್ತವರೇ, ನನ್ನ ಬಳಿಗೆ ಬನ್ನಿರಿ. ನಾನು ನಿಮಗೆ ವಿಶ್ರಾಂತಿ ಕೊಡುತ್ತೇನೆ ಎಂದು ಕರೆಯುತ್ತಿರುವನು. ಆತನು ಕರೆಯುವದನ್ನು ಕೇಳಿ ಆತನ ಬೋಧನೆಯನ್ನು ಅಂಗೀಕರಿಸಿದವರೆಲ್ಲರೂ ಆತನನ್ನು ಕುರಿತು—ಸ್ವಾಮಿಯೇ, ನೀನೇ ನಿಜವಾಗಿ ರಾಜಾಧಿರಾಜನಾಗಿರುತ್ತೀ. ಮೋಕ್ಷವನ್ನೂ ಆನಂದವನ್ನೂ ಹೊಂದತಕ್ಕ ಮಾರ್ಗವನ್ನು ನೀನೇ ತೋರಿಸುತ್ತೀ ಎಂದು ಅರಿಕೆ ಮಾಡುತ್ತಾರೆ.

II. ಅನ್ಯಾರ್ಥತೆಯಿರಬೇಕು.—ರಾಜಾಧಿರಾಜನೆನಿಸಿಕೊಳ್ಳುವವನು ಇತರರಿಗಿಂತಲೂ ಹೆಚ್ಚಾಗಿ ಜನೋಪಕಾರ ಸೇವೆಯನ್ನು ಮಾಡತಕ್ಕವನಾಗಿರಬೇಕು. "ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ಎಲ್ಲರ ಆಳಾಗಿರಬೇಕು" ಎಂದು ಯೇಸುಸ್ವಾಮಿ ಹೇಳಿದನು. ಈ ಬೋಧನೆಗನುಗುಣವಾಗಿ ವೈಸರಾಯಿ ಕರ್ಜನ್ ಪ್ರಭುಗಳು ನಮ್ಮ ಶ್ರೀಮನ್ಮಹಾರಾಜರನ್ನು ರಾಜ್ಯಾಭಿಷಿಕ್ತರನ್ನಾಗಿ ಮಾಡಿದ ಸಂದರ್ಭದಲ್ಲಿ—"ನಿಮ್ಮ ಸುಖಸೌಖ್ಯಕ್ಕೋಸ್ಕರ ಈ ಸ್ಥಾನದಲ್ಲಿ ನಿಮ್ಮನ್ನು ಇಟ್ಟದೆಯೆಂದು ನೀವು ಯೋಚಿಸಬಾರದು. ಹಾಗೆ ಯೋಚಿಸುವದಕ್ಕಿಂತಲೂ ದೊಡ್ಡ ತಪ್ಪು ಬೇರೆ ಯಾವದೂ ಇಲ್ಲ. ನೀವು ಇತರರ ಪ್ರಯೋಜನಾರ್ಥವಾಗಿದ್ದೀರಿ" ಎಂದು ಹೇಳಿದರು. ತಂದೆಯು ಮಕ್ಕಳ ಸಂರಕ್ಷಣಾರ್ಥವಾಗಿರುವಂತೆಯೇ ಅರಸನು ತನ್ನ ಪ್ರಜೆಗಳ ಕ್ಷೇಮಾರ್ಥವಾಗಿ ಜೀವಿಸತಕ್ಕವನಾಗಿದ್ದಾನೆ. ಯೇಸು ತನ್ನ ಮೇಲನ್ನು ಕೋರುವದು ಬಿಟ್ಟು ಇತರರ ಮೇಲನ್ನು ಚಿಂತಿಸುತ್ತಲೇ ಇದ್ದ ಕಾರಣ ಆತನಲ್ಲಿ ರಾಜಲಕ್ಷಣವಿತ್ತು. ಮಹಾಯಾಜಕನು ಗೆತ್ಸೆಮನೆ ತೋಟದಲ್ಲಿ ದೇವರ ಪ್ರಾರ್ಥನೆ ಮಾಡುತ್ತಿದ್ದ ಯೇಸುವನ್ನು ಹಿಡಿದುಕೊಂಡು ಬರುವದಕ್ಕೋಸ್ಕರ ತನ್ನ ಆಳುಗಳನ್ನು ಕಳುಹಿಸಲು ಆತನು ತಾನು ತಪ್ಪಿಸಿಕೊಳ್ಳುವದು ಹ್ಯಾಗೆಂದು ಯೋಚಿಸದೆ ಶಿಷ್ಯರನ್ನು ತೋರಿಸಿ—ನೀವು ನನ್ನನ್ನೇ ಹುಡುಕುವವರಾದರೆ ಇವರು ಹೋಗಲಿ ಬಿಡಿರಿ ಎಂದು ಹೇಳಿದನು ಮತ್ತು ಶಿಲುಬೆಯನ್ನು ಹೊತ್ತು ಕಷ್ಟಪಡುತ್ತಾ ವಧಸ್ಥಾನಕ್ಕೆ ಹೋಗುತ್ತಿರುವಲ್ಲಿ ಆತನ ಕಷ್ಟವನ್ನು ನೋಡಿ ಅಳುತ್ತಾ ಗೋಳಾಡುವ ಹೆಂಗಸರನ್ನು ಆತನು ನೋಡಿ—ನನಗೋಸ್ಕರ ಅಳಬೇಡಿ, ನಿಮಗೋಸ್ಕರವೂ ನಿಮ್ಮ ಮಕ್ಕಳಿಗೋಸ್ಕರವೂ ಅಳಿರಿ ಎಂದು ಹೇಳಿದನು. ಹೀಗೆ ಆ ಸ್ವಾಮಿಯು ಇತರರಲ್ಲಿಟ್ಟಿದ್ದ ಪ್ರೇಮಾತಿಶಯವನ್ನೂ ತನ್ನ ವಿಷಯದಲ್ಲಿ ತಾಳಿದ ಅಲಕ್ಷ್ಯವನ್ನೂ ನೋಡಿ ಆಶ್ಚರ್ಯಭರಿತರಾಗಿ ಆತನು "ಅರಸನೇ ಹೌದು" ಎಂದು ಅನೇಕರು ಅರಿಕೆ ಮಾಡಿರುವರು.

III. ನೀತಿಯೂ ಧೈರ್ಯವೂ ಇರಬೇಕು.—ರಾಜಾಧಿರಾಜನಾದವನು ಎಲ್ಲರಿಗಿಂತ ನೀತಿವಂತನಾಗಿಯೂ ಸತ್ಯವಂತನಾಗಿಯೂ ಧೈರ್ಯಶಾಲಿಯಾಗಿಯೂ ಇರತಕ್ಕದ್ದು. ಈ ವೃತ್ತಾಂತದಲ್ಲಿ ಸೂಚಿಸಿರುವ ಇಬ್ಬರೊಳಗೆ ಅರಸನನ್ನು ಹೋಲುತ್ತಿದ್ದವರು ಯಾರು? ಪಿಲಾತನೋ, ಯೇಸುವೋ? ಪಿಲಾತನು ದಿವ್ಯವಸ್ತ್ರ ಭೂಷಿತನಾಗಿ ಸಿಂಹಾಸನದ ಮೇಲೆ ಕುಳಿತಿದ್ದನು. ಯೇಸು ನಿರಪರಾಧಿಯೆಂದು ತಿಳಿದಿದ್ದರೂ ಜನರಿಗೆ ಹೆದರಿಕೊಂಡು ಆತನನ್ನು ಮರಣದಂಡನೆಗೆ ಒಪ್ಪಿಸಿಕೊಟ್ಟನು. ಯೇಸು ತನ್ನ ಜೀವಕಾಲವೆಲ್ಲಾ ಸತ್ಯವಂತನಾಗಿ ಪಾಪರಹಿತನಾಗಿ ಜೀವಿಸಿದ್ದನಾದಕಾರಣ ಆ ಕಡೇ ಗಳಿಗೆಯಲ್ಲಿ ಮೌನವಾಗಿದ್ದರೂ ನಿರ್ಭೀತನಾಗಿ ಗಂಭೀರವಾಗಿ ನಿಂತಿದ್ದನು. ಆತನೇ ನಿಜವಾದ ಅರಸನು. ಆತನು ಬಡವನಾಗಿದ್ದರೂ ನಿಕೃಷ್ಟನೆಂದು ಹೀನಯಿಸಲ್ಪಟ್ಟರೂ ಮೋಡಗಳಲ್ಲಿ ಮರೆಯಾಗಿರುವ ಸೂರ್ಯನು ತಿಳಿಯುವಂತೆ ಎಲ್ಲರೂ ಆತನಲ್ಲಿರುವ ರಾಜಲಕ್ಷಣಗಳನ್ನು ಅರಿತು—"ನೀನೇ ನಿತ್ಯನಾದ ಮಹಿಮಾ ರಾಜನು" ಎಂದು ಸ್ತುತಿಸುವವರಾಗಿದ್ದಾರೆ.

ಕರೆಸ್‌ಪಾಂಡೆನ್ಸ್.

ಅರಸೀಕೆರೆ ವಿಷಯಗಳು.

ಅಯ್ಯಾ,

ಆಗಸ್ಟ ೭ ನೇ ತಾರೀಖಿನ ವೃತ್ತಾಂತ ಪತ್ರಿಕೆಯಲ್ಲಿ "ತರ" ಎಂಬ ನಾಮಧೇಯವನ್ನು ಹಾಕಿ ಅರಸೀಕೆರೆಯ ವಿಷಯವಾಗಿ ಬರೆದಿರುವ ವೃತ್ತಾಂತವು ಶುದ್ಧ ಸುಳ್ಳೆಂಬುವದು ಈ ಕೆಳಗೆ ವಿವರಿಸುವ ಅಂಶಗಳಿಂದ ನಿಮ್ಮ ವಾಚಕರಿಗೆ ತೋರದೇ ಇರಲಾರದು.

ಅರಸೀಕೆರೆಯಲ್ಲಿ ಪ್ರಯಾಣಿಕರು ಇಳಿದುಕೊಳ್ಳಲು ರಂಗಾಚಾರ್ರ ಛತ್ರವು ಒಂದೇ ಅಲ್ಲ. ಸರ್ಕಾರಿ ಟ್ರಾವಲರ್ಸ್ ಬಂಗ್ಲೆ, ಮುಸಾಫರ್ ಖಾನೆ ಮತ್ತು ನರಸಿಂಗರಾಯನ ಹಳೇ ಛತ್ರ ಸಹ ಪ್ರಯಾಣಿಕರಿಗೆ ಯಾವಾಗಲೂ ಅನುಕೂಲವಾಗಿರುತ್ತೆ. ರಂಗಾಚಾರ್ರ ಛತ್ರದಲ್ಲಿ ಪ್ರಯಾಣಿಕರು ಇಳಿದುಕೊಳ್ಳಲು ಯಾವ ಅಡ್ಡಿಯೂ ಇರುವದಿಲ್ಲ. ಈ ಛತ್ರದಲ್ಲಿ ಸುಮಾರು ೩೦ ಕೊಠಡಿಗಳು ಇರುವವು. ಆ ಸ್ಥಿತಿಯಿಂದ ಕೊಠಡಿಗಳನ್ನು ಮಾತ್ರ ಬಾಡಿಗೆ ಕೊಡುವ ಪ್ರಯಾಣಿಕರ ಉಪಯೋಗಕ್ಕೋಸ್ಕರ ಇಟ್ಟು ಆ ಬಾಡಿಗೆ ಮೊಬಲಗಿನಿಂದ ಛತ್ರದ ಸಾಕೀಬಾ ಉಸ್ತುವಾರಿಗ್ಯೆ ಉಪಯೋಗಿಸಿಕೊಳ್ಳಲು ಸಹಾಯಕವಾಗಿರುವದೆಂದೂ, ಅಲ್ಲಿ ಹೋಟ್ಲು ಇದ್ದದ್ದೇ ಅದರ ಪೂರ್ವದಂತೆ ಜೂಜಾಡುವವರಿಗೂ ಇತರ ಕೆಟ್ಟ ಹವ್ಯಾಸಗಳಿಗೂ ಈಗಲೂ ಅವಕಾಶವಾದೀತೆಂಬ ಶಂಕೆಯಿಂದ ಹೋಟ್ಲು ಈ ಛತ್ರದಲ್ಲಿ ಇರಕೂಡದೆಂದಾಗಿಯೂ ಡೆಪ್ಯುಟಿ ಕಮಿಷನರು ಅಪ್ಪಣೆ ಮಾಡಿರುವರು. ಇಷ್ಟೆಲ್ಲಾ ವಿಚಾರಮಾಡದೆ ಈ ತಾಲ್ಲೂಕ್ ಅಮಲ್ದಾರ ಪ್ರಜೆಗಳ ಕ್ಷೇಮ ಚಿಂತನೆಯಲ್ಲೇ ನಿರತರಾಗಿರುವ ನಮ್ಮ ಅಮಲ್ದಾರರನ್ನು ದೂಷಿಸುವದರ ಕಾರಣವು ಏನೋ ನಿಮ್ಮ ವಾಚಕರೇ ಊಹಿಸಲಿ.

ಈ ಪುರದ ಛಾವಿ ಎಂಬ ತೋಟವು ಪಾಳಾಗಿ ಹೋಗುವದಕ್ಕೋಸ್ಕರ ತಕ್ಕ ಉಸ್ತುವಾರಿ ಇಟ್ಟೇ ಇದೆಯಿತ್ತೆ. ಈ ತೋಟವು ಎಲ್ಲಾ ಭಾಗದಲ್ಲಿಯೂ ತಕ್ಕಮಟ್ಟಿಗೆ ಸುಚಿಯಾಗಿಯೇ ಇರುವದು. ಹೀಗಿರೆ ಪತ್ರಿಕೆಗೆ ಗಲೀಜಾಗಿರುತ್ತೆಂಬ ವರ್ತಮಾನವು ಸುದಿಕೆಗೆ ಆಧಾರವಾದದ್ದಷ್ಟೇ ಬಿಡುವಂಥ "ತರ" ಎಂಬ ಸಂಕೇತದಾರು ಈ ತೋಟದ ಕಡೆ ಬಂದು ನೋಡಿದ್ದೇ ಇರಲಾರದು.

ಶಿವಮೊಗ್ಗ ಮತ್ತು ಹಾಸನ ಪಕ್ಕದ ಹೋಗುವವರಿಗೆ ಈ ಅರಸೀಕೆರೆ ಮಧ್ಯ ಪ್ರದೇಶವೆಂಬುವದು ಎಲ್ಲರಿಗೂ ಗೊತ್ತೇ ಇದೆ. ಪ್ರಯಾಣಿಕರಾದ ಪಾದ್ಯಗಾರರೇ ಆಗಲಿ ಜಂಗಮರೇ ಆಗಲಿ ಅಥವಾ ಅನಾಥರಾದವರೇ ಆಗಲಿ ಈ ಊರಿಗೆ ಬರಕೂಡದೆಂದು ಅಪ್ಪಣೆಮಾಡಲು ನಮ್ಮ ಅಮಲ್ದಾರರಿಗೂ ಅಥವಾ ಗ್ರಾಮಮುಖ್ಯರಿಗೂ ಅಧಿಕಾರವಿರುವದಿಲ್ಲ. ಹಠಾತ್ತಾಗಿ ಅವೇಳೆಯಲ್ಲಿ ಬಂದು ಶ್ರಮಪಡುತ್ತಿರುವ ಒಬ್ಬಿಬ್ಬರು ಪ್ರಯಾಣಿಕರಿಗೆ ಅನ್ನ ಆಹಾರಾದಿಗಳನ್ನು ಕೊಟ್ಟು ಯಥಾಶಕ್ತಿ ಸಹಾಯಮಾಡುವ ಮಾತ್ರವೇ ಬಡನೌಕರರು ಸಂಗೀತಗಾರರಿಗೋಸ್ಕರ ಬುತ್ತಾನೆಯನ್ನು ಕೊಡುತ್ತಾರೆಂದು ಅನ್ವಯಿಸಿದ ನಿಮ್ಮ "ತರ" ಬಾತ್ಮೀದಾರರ ಸೂಕ್ಷ್ಮಬುದ್ಧಿಯನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ. ಬಡನೌಕರರು ಇದುವರಿವಿಗೂ ಸಂಗೀತ ಮೇಳ ತಾಪತ್ರ ಚಂದಾ ಕೊಟ್ಟಿರುವನಿಲ್ಲ. ಸತ್ಯವಾದಿ.

ಒಳದೇಶದ ವೃತ್ತಾಂತಗಳು.

ಚಿಕ್ಕಮಗಳೂರಿನಲ್ಲಿ ಕಳೆದ ಜುಲೈ ೭ ರಿಂದ ಆಗೀಷ್ಟು ೧೯ ರ ವರೆಗೆ ೨೪೦ ಜನರಿಗೆ ಪ್ಲೇಗ್ ತಗಲಿತು; ೨೦೨ ಮಂದಿ ಮೃತಪಟ್ಟರೆಂದು ಅಲ್ಲಿನ ಬಾತ್ಮೀದಾರರು ಬರೆದಿದಾರೆ.

ಪಟ್ಟಾಭಿಷೇಕಕ್ಕಾಗಿ ರಾಜಧಾನಿಗೆ ಬಂದಿದ್ದ ದಿವಾನರೇ ಮೊದಲಾದ ಅಧಿಕಾರಿಗಳು ಕಳೆದ ಶನಿವಾರ ಭಾನುವಾರ ಬೆಂಗಳೂರು ಮುಂತಾದ ಸ್ಥಳಗಳಿಗೆ ವಾಪಸ್ಸು ಬಂದುಬಿಟ್ಟರು.

ಕಳೆದ ವಾರ ನಮ್ಮ ಮಹಾರಾಜರವರು ದರ್ಬಾರ ನಡಿಸಿ ಆಹ್ವಾನಪತ್ರಿಕೆಗಳನ್ನು ಕೊಟ್ಟು ಕರೆಸಿಕೊಂಡಿದ್ದ ಅತಿಥಿಗಳಿಗೂ ಅಧಿಕಾರಿಗಳಿಗೂ ಶಾಲು ಜೋಡಿ, ಪದಕಗಳ ಅಪ್ಪಣೆಗಳನ್ನು ದಯಪಾಲಿಸಿದರು. ಮಿ॥ ಮೀರ್ ಹುಮಾಯೂನ ಜಾನ್ ಬಹಾದರ ಸಿ. ಎಸ್. ಐ. ರವರಿಗೆ ಕೊಟ್ಟಿದ್ದಲ್ಲದೆ ಬಿರುದಿಗೆ ತಕ್ಕಂತೆ ರತ್ನಖಚಿತವಾದ ಭಂಗಾರದ ಕೈಕಡಗಗಳನ್ನು ಅವರ ಕೈಗಳಿಗೆ ತೊಡಿಸಿದರು.

ಕಳೆದ ೧೦ ನೇ ತಾ॥ ಸೋಮವಾರ ಬೆಳಗ್ಗೆ ನಮ್ಮ ಮಹಾರಾಜರ ವಿದ್ಯಾಗುರುಗಳಾಗಿದ್ದ ಮಿ॥ ಫ್ರೇಸರ್ ರವರು ರೈಲುಹತ್ತಿ ಹೊರಟು ಹೋದರು. ಅವರನ್ನು ಸಾಗಕಳುಹಿಸುವದಕ್ಕಾಗಿ ನಮ್ಮ ಮಹಾರಾಜರವರು, ಯುವರಾಜರು, ದಿವಾನರು, ಕರ್ನಲ್ ರಾಬರ್ಟ್ಸರವರು, ಮಿ॥ ಕೆ. ಶಾನಿಭೋಗರು, ಮಿ॥ ಕ್ಯಾಮಲ್ ಯರ್ಲಿ ಮೊದಲಾದವರೆಲ್ಲಾ ರೈಲ್ವೇ ಸ್ಟೇಷನಿಗೆ ಹೋಗಿದ್ದರು.

ಹಿಂದಿನವಾರ ರಾಜಧಾನಿಯ ಅನಾಥಾಲಯದಲ್ಲಿ ಡಾಕ್ಟರ್ ಶ್ರೀನಿವಾಸರಾಯರು ವ್ಯಾಖ್ಯಾನ ಕೊಟ್ಟು ಬಡಜನರಿಗೆ ಬ್ರಹ್ಮಸಮಾಜದ ಯಥಾರ್ಥ ಸೂಚನೆಯನ್ನು ತಿಳಿಸಿದರು. ಅವರು ಪಾಶ್ಚಿಮಾತ್ಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವದಕ್ಕಾಗಿ ವಿಲಾಯತಿಗೆ ಹೋಗಿಬಂದವರು. ವ್ಯಾಖ್ಯಾನವಾದ ದಿನ ಅವರು ಕಾವೇರಿ ಸ್ನಾನವಾಡಿ ಬಂದು, ಪಂಚಗವ್ಯ ಪ್ರಾಯಶ್ಚಿತ್ತ, ಸರ್ವದಾನ ಪ್ರಾಯಶ್ಚಿತ್ತ, ಪುನರುಪನಯನ, ಬ್ರಾಹ್ಮಣರಿಗೆ ಅರಿಶಿ, ಮೊದಲಾದ ಕರ್ಮಗಳನ್ನು ಆಚರಿಸಿದರು. ಮೈಸೂರಿನಲ್ಲಿ ಬಹು ಕೀರ್ತಿಪಡೆದಿರುವ ವೈದಿಕರುಗಳೇ ಸೇರಿ ಈ ಪ್ರಾಯಶ್ಚಿತ್ತವನ್ನು ಯಥಾವಿಧಿಯಾಗಿ ನಡಿಸಿ, ಅವರ ಸಂಗಡ ಕೂತುಕೊಂಡು ಭೋಜನ ಮಾಡಿದರು. ಮತ್ತು ಅಲ್ಲಿನ ಕೆಲವು ಮಂದಿ ಅಗ್ರಹಾರದ ದೊಡ್ಡಮನುಷ್ಯರೂ ಸೇರಿದ್ದರು. ಅದ್ದರಿಂದ ಡಾಕ್ಟರ್ ಶ್ರೀನಿವಾಸರಾಯರು ಪುನಃ ಬ್ರಾಹ್ಮಣರಾದರು. ಅದರ ಬಗ್ಗೆ ಈ ವೈದಿಕರು ಕೆಲವು ತಿಂಗಳ ಕೆಳಗೆ ಯಾತ್ರೆಮಾಡಿ ಬಂದ ಒಬ್ಬನ ಮಸ್ತಕದ ಮೇಲೆ ಕಾಲಿಟ್ಟು ನಿಂದಿಸಿ ಹೇಳಿ ಮಾತ್ರದವರು ಅವನಿಂದ ಸಭೆಗೆ ದ್ರವ್ಯದಕ್ಷಿಣೆಯನ್ನು ಕೇಳಿದ್ದಲ್ಲದೆ ನಾಲ್ಕಾರು ರೂಪಾಯಿ ದಂಡವನ್ನೂ ತೆಗೆದರು. ಹೀಗಾದರೆ ಸ್ವಲ್ಪದಿನಗಳಲ್ಲಾ ಸಾಂಸಾರಿಕ ವಿಷಯಗಳಲ್ಲಿ ಧಾರಾಳ ಮನಸ್ಸನ್ನು ಪ್ರಕಾಶಪಡಿಸತಕ್ಕ ಪುರುಷರು ಎಷ್ಟೋ ಜನ ಬರುವರು.

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಹೆಚ್ಚಾಗಿದೆ. ಪ್ಲೇಗ್ ತಡೆಯುವದಕ್ಕಾಗಿ ಹಾಸನದಿಂದ ಮಿ॥ ಕೃಷ್ಣಸ್ವಾಮಿ ಮೊದಲಿಯಾರರನ್ನು ಪ್ಲೇಗ್ ಕಮಿಷನರ್ ರವರು ಮೊನ್ನೆ ದಿನ ಅಲ್ಲಿಗೆ ಕರೆಸಿದ್ದಾರೆ. ಪಟ್ಟಾಭಿಷೇಕದ ಸಮಯದಲ್ಲಿ ಮುಂದೆ ಹಾಕ್ಕರಿಂದ ಸರ್ಕಾರಿ ಖರ್ಚಿನಲ್ಲಿ ಜನರಿಗೆ ಅನ್ನ ಕೊಡುವವರೆಲ್ಲ ಹಿಂದೆ ಮನೆಗಳ ಅಲ್ಲಿಗೆ ಹೋಗಿ ಕೆಲ ಜನರನ್ನು ತಪ್ಪಿಸಿದರೆಂದು ಕಳೆದವಾರ ಸರ್ಕಾರಿ ನೌಕರರು ಅಪ್ಪಣೆ ಕೊಟ್ಟರು. "ಇದುವರೆಗೂ ಬಾರಿಯಲ್ಲಿದಂತೆ ರಾಜಧಾನಿ ನಗರದ ಪ್ಲೇಗ್ ಅಲ್ಲೇ ಇರಬೇಕು, ಬೇರೆ ಕಡೆ ಹೋಗಬಾರದು" ಎಂಬದಾಗಿ ಹ.ಕಂ. ಪ್ರಕಟಿಸಿದೆ. ರಾಜಧಾನಿಯಲ್ಲಿ ಪ್ಲೇಗಿನ ಸ್ಥಿತಿಯನ್ನು ಮುಂದಿನ ಪಟ್ಟಿಯಿಂದ ತಿಳಿಯಬಹುದು. ೨೩ ನೆ ಬುಧವಾರದಿಂದ ೩೦ನೆ ಸೋಮವಾರದ ವರೆಗೆ ವಿವರಗಳು:—

ಮೊಹಲ್ಲಾ.	ಪ್ಲೇಗಾಗಿದ್ದು.	ಪ್ಲೇಗುಮರಣ.	ಚೆನ್ನಾದವು.
ಅಗ್ರಹಾರ	೬೩	೫೦	೬೪
ಮಂಡಿ	೪೫	೨೫	೪೨
ದೇವರಾಜ	೪೦	೨೦	೪೦
ಲಷ್ಕರ್	೫	೬	೧೧
ಕೃಷ್ಣರಾಜ	೧೧	೪	೯
ಕೋಟೆ	೩	೨	೩
ನಜರಬಾದ್	೯	೪	೯
ಪ್ಲೇಗ್ ಕ್ಯಾಂಪ್	೫	೧೨	೭
ಒಟ್ಟು	೧೭೬	೧೨೨	೧೮೫

ಮೈಸೂರು ಸಂಸ್ಥಾನವು.

ಹೊಸ ಗೌವರ್ನ್ಮೆಂಟಿನ ಕ್ರಮಗಳು.

೧೯೦೨ನೆ ಇಸವಿ ಆಗೀಸ್ಟು ೮ರಲ್ಲಿ ಮಹಾರಾಜಾ ಶ್ರೀ ಕೃಷ್ಣರಾಜ ಒಡೆಯರವರು ಮೈಸೂರು ಸಂಸ್ಥಾನದ ರಾಜ್ಯಭಾರವನ್ನು ವಹಿಸಿದ್ದಾರಷ್ಟೆ. ಈಗ ಸರ್ಕಾರಿ ಕೆಲಸಗಳು ನಡೆಯತಕ್ಕ ಕ್ರಮ ಹ್ಯಾಗೆಂಬುವದನ್ನು ತಿಳಿಸುವದಕ್ಕಾಗಿ ಶ್ರೀಮನ್ಮಹಾರಾಜರವರು ಒಂದು ವಿಶೇಷ ಪತ್ರಿಕೆಯನ್ನು ಪ್ರಕಟಿಸುವಂತೆ ಹುಕುಂ ಕೊಟ್ಟಿದ್ದಾರೆ. ಈ ವಿಶೇಷ ಪತ್ರಿಕೆಯಲ್ಲಿ ಕಂಡ ಮುಖ್ಯ ಸಂಗತಿಗಳನ್ನು ಇಲ್ಲಿ ಸಂಗ್ರಹಿಸುತ್ತೇವೆ.

"ಮೈಸೂರು ಮಹಾರಾಜರ ಕೌನ್ಸಿಲ್" ಎಂಬುದೊಂದು ಮಂತ್ರಾಲೋಚನಾ ಸಭೆಯು ಏರ್ಪಾಡಾಗಿದೆ. ಅದರಲ್ಲಿ ದಿವಾನ್‌ರೂ ಇಬ್ಬರು ಮೆಂಬರುಗಳೂ ಇರುತ್ತಾರೆ. ಇವರು ರಾಜ್ಯಭಾರದ ಮುಖ್ಯ ವಿಷಯಗಳನ್ನು ಜರಾಯಿಸುವದರಲ್ಲಿ ಶ್ರೀಮನ್‌ಮಹಾರಾಜರಿಗೆ ಸಲಹೆ ಕೊಡತಕ್ಕದ್ದು. ಈ ಮಂತ್ರಾಲೋಚನಾ ಸಂಘದಲ್ಲಿ ಕಾರ್ಯಗಳು ನಡೆಯುವದು ಹ್ಯಾಗೆಂದರೆ.—

ದಿವಾನ್‌ರು ನೋಡತಕ್ಕ ಖಾತೆಗಳು.—ರಾಜಕೀಯ ವಿಷಯ, ಮುಜರಾಯಿ ಜಮಾ ಖರ್ಚು, ಭೂಗರ್ಭಶಾಸ್ತ್ರದ ಇಲಾಖೆ, ಸರ್ವೆ ಇಲಾಖೆ, ಗಣಿಗಾರಿಕೆ, ವ್ಯವಸಾಯ ಮತ್ತು ರೈಲ್ವೆಗಳು, ಮಿಲಿಟರಿ (ಸೈನ್ಯ), ಅಮೃತಮಹಲು, ಮುಜರಾಯಿ, ಪೋಲೀಸ್.

ಮೊದಲನೇ ಕೌನ್ಸಿಲರು ನೋಡತಕ್ಕ ಖಾತೆಗಳು.—ಜಮಾ ಕಂದಾಯ, ಎಕ್ಸೈಜು, ಸಾಯರ್, ಮುಹತರ್ಫಾ, ಇನಾಮು, ಸರ್ವೆ ಸೆಟ್ಲ್ಮೆಂಟ್, ವ್ಯವಸಾಯದ ಬ್ಯಾಂಕುಗಳು, ಮುಂತಾದವು.

ಎರಡನೇ ಕೌನ್ಸಿಲರು ನೋಡತಕ್ಕ ಖಾತೆಗಳು.—ಫಾರೆಸ್ಟ್, ಪಬ್ಲಿಕ್ ವರ್ಕ್ಸ್, ವಿದ್ಯಾಭ್ಯಾಸ, ನ್ಯಾಯ ನಿಬಂಧನೆ, ಕೋರ್ಟುಗಳು, ವೈದ್ಯ, ಜೈಲು, ರೆಜಿಸ್ಟ್ರೇಷನ್, ಪೆನ್‌ಷನ್, ಸ್ಟಾಂಪು, ಲೋಕಲ್ ಮತ್ತು ಮುನಿಸಿಪಲ್ ಫಂಡುಗಳು, ಒಸಗೆ ಮರಣ ಧಾರಣೆವಾರ್ತೆ ಇನ್ನು ಕೆಲವು ಚಿಲ್ಲರೆ ಖಾತೆಗಳು.

ಮುಂದೆ ಹೇಳುವ ವಿಷಯಗಳನ್ನು ದಿವಾನ್‌ರೂ, ಕೌನ್ಸಿಲ್ ಮೆಂಬರುಗಳೂ ಚರ್ಚಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಬರೆದು ಶ್ರೀಮನ್ ಮಹಾರಾಜರವರ ಹುಕುಮಿಗೆ ಕಳುಹಿಸಿಕೊಡತಕ್ಕದ್ದು. (೧) ಹೊಸ ಕಂದಾಯ ಶಿಸ್ತುಗಳನ್ನು ಹಾಕುವದು, ಹಾಲಿ ಇರತಕ್ಕವುಗಳನ್ನು ವಜಾ ಮಾಡುವದು. (೨) ಹೊಸ ನ್ಯಾಯ ನಿಬಂಧನೆಗಳು. (೩) ಎಲ್ಲಾ ಇಲಾಖೆಗಳ ಜಮಾ ಖರ್ಚಿನ ಅಂದಾಜು ಪಟ್ಟಿಗಳು. (೪) ಎಲ್ಲಾ ಇಲಾಖೆಗಳ ವಾರ್ಷಿಕ ರಿಪೋರ್ಟುಗಳು. (೫) ಅಸಿಸ್ಟೆಂಟ್ ಕಮಿಷನರ್, ಸಬ್‌ಜಡ್ಜ್, ಪೊಲೀಸ್ ಅ: ಸೂಪರಿಂಟೆಂಡೆಂಟ್, ಅ: ಮತ್ತು ಸಬ್ ಅ: ಸರ್ಜನ್, ಅ: ಮತ್ತು ಸಬ್ ಅ: ಫಾರೆಸ್ಟ್ ಕನ್‌ಸರ್ವೇಟರ್, ಅ: ಮತ್ತು ಸಬ್ ಅ: ಇಂಜನಿಯರ್, ಮುಹತಮ್ಮತ್ ಅಕೌಂಟ್ ಅ: ಎಕ್ಸಾಮಿನರ್, ಎಕ್ಸೈಜ್ ಅಸಿಸ್ಟೆಂಟ್, ಅ: ಜಿಯಾಲಜಿಸ್ಟ್, ಅ: ಕಂಟ್ರೋಲರ್, ರೆವಿನ್ಯೂ ಸರ್ವೆ ಅ: ಸೂಪರಿಂಟೆಂಡೆಂಟ್, ವಿದ್ಯಾಭ್ಯಾಸದ ಇಲಾಖೆ ಫಸ್ಟ್ ಕ್ಲಾಸ್ ಸಿ. ಶಾಲೆಯ ಉಪಾಧ್ಯಾಯರು, ಗೌವರ್ನ್ಮೆಂಟ್ ಸೆಕ್ರೆಟರಿಗಳು, ಟೌನ್ ಮ್ಯಾಜಿಸ್ಟ್ರೇಟ್ ಗೌವರ್ನ್ಮೆಂಟ್ ಅಡ್ವೊಕೇಟ್, ಪಬ್ಲಿಕ್ ಪ್ರಾಸಿಕ್ಯೂಟರ್, ಸೆಂಟ್ರಲ್ ಜೈಲ್ ಗೌವರ್ನ್ಮೆಂಟ್ ಪ್ರೆಸ್ ಮೊದಲಾದ ಇಲಾಖಾ ಸೂಪರಿಂಟೆಂಡೆಂಟ್, ಮೈಸೂರು ಬೆಂಗಳೂರು ಮ್ಯುನಿಸಿಪಲ್ ವೈಸ್ ಪ್ರೆಸಿಡೆಂಟ್, ಮುನ್‌ಸಿಫ್, ಅಮಲ್ದಾರ್, ಡಿಪ್ಟಿ ಅಮಲ್ದಾರ್—ಈ ಉದ್ಯೋಗಸ್ಥರ ಮತ್ತು ಇವರಿಗಿಂತ ಮೇಲ್ಪಟ್ಟ ಎಲ್ಲಾ ಉದ್ಯೋಗಸ್ಥರ ನೇಮಕ, ವಜಾ ಮಾಡುವದು, ಬಡ್ತಿ, ಕೆಲಸಕ್ಕೆ ಮೊದಲಾದದ್ದು. (೬) ಶಿಕ್ಷೆಗಳನ್ನು ಮಾಫ್ ಮಾಡುವದು. (೭) ಸೈನ್ಯದ ಏರ್ಪಾಡು ಇವೇ ಮೊದಲಾದ ವಿಷಯಗಳನ್ನೂ ಮಹಾರಾಜರು ಅಪೇಕ್ಷಿಸುವ ಇತರ ಎಲ್ಲಾ ವಿಷಯಗಳನ್ನೂ ಅವರ ತೀರ್ಮಾನಕ್ಕೆ ಒಪ್ಪಿಸತಕ್ಕದ್ದು.

ಯಾವ ವಿಷಯವಾದರೂ ಆತುರವಾಗಿ ಆಗಬೇಕಾಗಿದ್ದಲ್ಲಿ ದಿವಾನ್‌ರೇ ಕೌನ್ಸಿಲ್ ಮೆಂಬರ ತೀರ್ಮಾನವನ್ನು ನಿರೀಕ್ಷಿಸದೆ ತಾವೇ ಹುಕುಂ ಕೊಟ್ಟು ಕೆಲಸನಡಿಸಿ, ಹೀಗೆ ನಡಿಸಿದೆ ಎಂದವರಾಗಿ ಮಹಾರಾಜರಿಗೆ ತಿಳಿಸಬಹುದು. ಪ್ರತಿ ಒಂದು ಇಲಾಖೆಯ ಸೆಕ್ರೆಟರಿಯೂ ದಿವಾನ್‌ರಿಗೆ ಜವಾಬ್ದಾರರಾಗಿರಬೇಕು. ಕೌನ್ಸಿಲ್‌ನಲ್ಲಿ ದಿವಾನ್‌ರೇ ಪ್ರೆಸಿಡೆಂಟಾಗಿ ಸಕಲ ಕಾರ್ಯಗಳನ್ನು ನಡಸತಕ್ಕದ್ದು. ದಿವಾನ್‌ರೂ ಕೌನ್ಸಿಲ್ ಮೆಂಬರುಗಳೂ ಒಂದು ಪುಸ್ತಕದಲ್ಲಿ ಪ್ರತಿವಾರವೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಬರೆದಿಡಬೇಕು. ಕೌನ್ಸಿಲ್ ಮೀಟಿಂಗು ವಾರಕ್ಕೊಂದಾವರ್ತಿಯೋ ಎರಡಾವರ್ತಿಯೋ ಗೊತ್ತಾಗಿ ನಡೆಯಬೇಕು. ಮತ್ತು ಅವಶ್ಯಬಿದ್ದಾಗ ಮಹಾರಾಜರಾಗಲಿ ದಿವಾನ್‌ರಾಗಲಿ ಕೌನ್ಸಿಲ್ ಮೀಟಿಂಗ್ ಕರೆಯಬಹುದು.

ಮಿ॥ ಪಿ. ಎನ್. ಮಾಧವರಾವ್, ಬಿ. ಎ. ಯವರು ರೆವಿನ್ಯೂ ಕಮಿಷನರ್‌ರಾಗಿ ನೇಮಿಸಲ್ಪಟ್ಟಿದ್ದಾರೆ.

ಮಿ॥ ಪಿ. ಎನ್. ಕೃಷ್ಣಮೂರ್ತಿ, ಸಿ. ಐ. ಇ. ಯವರೂ, ಮಿ॥ ಸಿ. ಶ್ರೀನಿವಾಸಯ್ಯಂಗಾರ‍್ಯರೂ ಮೊದಲನೇ ಮತ್ತು ಎರಡನೇ ಕೌನ್ಸಿಲರಾಗಿ ನೇಮಿಸಲ್ಪಟ್ಟಿದ್ದಾರೆ. ಇವರು ೩ ವರುಷಗಳ ಪರ್ಯಂತರ ಅಥವಾ ಮಹಾರಾಜರು ಅಪೇಕ್ಷಿಸುವವರೆಗೆ ಅಧಿಕಾರದಲ್ಲಿರತಕ್ಕದ್ದು.

ಶ್ರೀಮನ್ ಮಹಾರಾಜರವರಿಗೆ ಮಿ॥ ಇ. ಮೆಕಾನಕಿಯವರು ಪ್ರೈವೇಟ್ ಸೆಕ್ರೆಟರಿಯಾಗಿಯೂ, ಮಿ॥ ಪಿ. ರಾಘವೇಂದ್ರರಾಯರು ಅಸಿಸ್ಟೆಂಟ್ ಪ್ರೈವೇಟ್ ಸೆಕ್ರೆಟರಿಯಾಗಿಯೂ ನೇಮಿಸಲ್ಪಟ್ಟಿದ್ದಾರೆ.

ರಾವ್ ಬಹದೂರ್ ಮಿ॥ ಟಿ. ಮಾದಪ್ಪನವರು ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರಾಗಿರತಕ್ಕದ್ದು.

ಯಾವ ವಿಷಯವಾದರೂ ಕೌನ್ಸಿಲ್‌ನಲ್ಲಿ ಚರ್ಚೆಯಾಗುವಾಗ್ಯೆ ಇಬ್ಬರು ಮೆಂಬರುಗಳು ವಿರೋಧಾಭಿಪ್ರಾಯಗಳನ್ನು ಕೊಡುವ ಸಂದರ್ಭದಲ್ಲಿ ದಿವಾನ್‌ರವರು ಅವರೀರ್ವರ ಪೈಕಿ ಯಾವ ಅಭಿಪ್ರಾಯ ವನ್ನು ಅನುಮೋದಿಸುತ್ತಾರೋ ಆ ರೀತಿಯಾಗಿ ಗೌವರ್ನ್ಮೆಂಟ್ ಹುಕುಂ ಜಾರಾವಣೆಯಾಗಬೇಕು. ಆದರೆ ಕೆಳ ದರ್ಜೆಯ ಅಧಿಕಾರಿಗಳು ಕೊಟ್ಟ ಹುಕುಮನ್ನು ಕೌನ್ಸಿಲರುಗಳು ಬದಲಾಯಿಸುವವರಾದರೆ, ಒದಲಾವಣೆ ಮಾಡಬೇಕಾದರೂ ಅಂಥಾ ಸಂದರ್ಭದಲ್ಲಿ ಅಪೀಲ್ (ಕಕ್ಷಿಗಾರರು)ಗೆ ತಿಳಿಸಿ ಅವರನ್ನು ಹಾಜರು ಪಡಿಸಿಕೊಳ್ಳಬೇಕು. ಕಕ್ಷಿಗಾರರು ಖುದ್ದಾಗಿ ಹೋಗಿ ತಮ್ಮ ಅಹವಾಲನ್ನು ಹೇಳಿಕೊಳ್ಳಬಹುದು. ಒಂದು ವೇಳೆ ಕಕ್ಷಿಗಾರರು ಹೆಂಗಸಾಗಿದ್ದಲ್ಲಿ ಅಥವಾ ಪಾರ್ಟಿಯು ಮೈನರಾಗಿದ್ದರೆ ಅವರ ಅಥವಾ ಮೈನರ ಹಿತಚಿಂತಕರಾಗಲಿ ಗಾರ್ಡಿಯನ್ನಾಗಲಿ ಹಾಜರಾಗಿ ವಿಷಯವನ್ನು ತಿಳಿಸಬಹುದು.

ರೆವಿನ್ಯೂ ಕಮೀಷನರ ಅಧಿಕಾರಗಳು.—ತಾಲ್ಲೂಕುಗಳ ಛಾರ್ಜ್ ವಹಿಸಿರುವ ಅಸಿಸ್ಟೆಂಟ್ ಕಮಿಷನರು ರೆವಿನ್ಯೂ ಬಾಬಿನಲ್ಲಿ ಕೊಡುವ ಹುಕುಂ ಮೇಲೆ ಅಪೀಲ್ ವಿಚಾರಿಸುವದು. ಪಟೇಲ ಶಾನುಭೋಗ ಜಿಲ್ಲೆಯ ಗ್ರಾಮಗಳಿಗೆ ಮುಕ್ಕಂ ಪಡೆಯುವ ಪಟೇಲ ಶಾನುಭೋಗರುಗಳನ್ನು ನೇಮಿಸುವಂತೆ ಡೆಪ್ಯುಟಿಕಮಿಷನ್‌ರಿಗೆ ಹುಕುಂ ಕೊಡುವದು ಅಲ್ಲದೆ, ತಾಲೂಕಿನ ಮೇಲ್ಪಟ್ಟ ನೌಕರಿಗಳಿಗೂ, ತಾಲೂಕು ದರ್ಜೆಯವರಿಗೂ ಜನರನ್ನು ನೇಮಿಸುವದು. ಹೀಗೆ ನೇಮಿಸಲ್ಪಟ್ಟವರ ಒಡಲ ಬದಲಿ, ತರಫ್ ಮುಂತಾದದನ್ನು ಮಾಡುವದು. ಗ್ರಾಮಗಳಿಗೆ ಹುಲ್ಲು ಬನ್ನಿ ಮುಂತಾದವನ್ನು ಬಿಟ್ಟುಕೊಡುವಂತೆ ವಿಧಿಸುವದು ಮತ್ತು ವಜಾ ಮಾಡುವದು. ಸರ್ವೆ ನಂಬರುಗಳನ್ನು ಕಮ್ಮಿ ಜಾಸ್ತಿ ಮಾಡುವದು. ಕಂದಾಯದ ವಸೂಲಿ, ನೋಟೀಸ್ ಫೀ, ಜಫ್ತಿ, ಹರಾಜು ಮುಂತಾದ ಬಾಬುಗಳ ಕ್ರಮಗಳನ್ನು ವಿಧಾಯಕ ಮಾಡುವದು. ಇವೇ ಮೊದಲಾದ ಅಧಿಕಾರಗಳೆಲ್ಲಾ ರೆವಿನ್ಯೂ ಕಮಿಷನ್‌ರಿಗೆ ವಹಿಸಿರುತ್ತೆ.

ಮುಂದೆ ಹೇಳುವ ವಿಷಯಗಳನ್ನು ಇಬ್ಬರು ಕೌನ್ಸಿಲ್ ಮೆಂಬರುಗಳು ಹಿಡಿದು ತನಿಖೆ ಮಾಡಿ ತೀರ್ಮಾನಿಸತಕ್ಕದ್ದು.—(೧) ಗವರನ್ಮೆಂಟಿನಿಂದ ಮೊಕರರ್ ಮಾಡಲ್ಪಟ್ಟ ಅಥವಾ ಮುಂಜೂರಾತಿಪಡಿಸಲ್ಪಟ್ಟ ವಂಶಪಾರಂಪರ್ಯದ ಯಾರಾದರು ಆಫೀಸರ ಅಥವಾ ಯಾರಾದರೂ ಇತರಗ್ರಾಮ ಆಫೀಸರ ಯಾ ನೌಕರನ ಉದ್ಯೋಗಕ್ಕೆ ಸಂಬಂಧಿಸಿದ ಯಾವದಾದರೂ ಸ್ವತ್ತನ್ನು ಕುರಿತು ಗವರನ್‌ಮೆಂಟಿನವರಮೇಲೆ ದಾವೆಗಳು, ಅಥವಾ ಅಂಥಾ ಯಾರಾದರೂ ಆಫೀಸರ ಯಾ ನೌಕರನ ಕೆಲಸಗಳನ್ನು ನಿರ್ವಹಿಸಲಿಕ್ಕೆ ಅಥವಾ ಅಂಥಾ ಉದ್ಯೋಗ ಅಥವಾ ನೌಕರಿಯ ದೆಸೆಯಿಂದ ವಿನಾಯಿತಿಯಿಂದ ಉಂಟುಮಾಡಲ್ಪಟ್ಟ ಯಾವದಾದರೂ ಲುಕ್ಸಾನ್ ವಿಷಯದಲ್ಲಿ ತರಲ್ಪಡುವ ದಾವೆಗಳು, ಅಥವಾ ಗವರನ್‌ಮೆಂಟಿನಿಂದಾಗಲಿ, ಆ ಬಗ್ಯೆ ಕ್ರಮಪ್ರಕಾರ ಅಧಿಕಾರ ಕೊಡಲ್ಪಟ್ಟ ಯಾರಾದರೂ ಆಫೀಸರಿಂದ ಕೊಡಲ್ಪಡತಕ್ಕ ದಾವೆ, ಅಂಥಾ ಉದ್ಯೋಗ ಅಥವಾ ನೌಕರಿ ಅಥವಾ ಅಂಥಾ ಆಫೀಸರ್ ಯಾ ನೌಕರನಿಗೆ ಸಂಬಂಧಿಸಿದ ಯಾವ ಹುಕುಮನ್ನಾಗಲಿ ವಜಾಮಾಡಿ ಅಥವಾ ತಪ್ಪಿಸಲಿಕ್ಕೆ ತರಲ್ಪಟ್ಟ ವ್ಯಾಜ್ಯಗಳು, ಅಥವಾ (೨) ಜಮಾನ್ ಕಂದಾಯದ ವಸೂಲಾತಿ ಬಗ್ಯೆ, ಅಥವಾ ಗವರನ್‌ಮೆಂಟಿನಿಂದಾಗಲಿ ಆ ಬಗ್ಯೆ ಕ್ರಮವಾಗಿ ಅಧಿಕಾರ ಕೊಡಲ್ಪಟ್ಟ ಯಾವ ಆಫೀಸರಿಂದಾಗಲಿ, ವೇಲ್ಪಟ್ಟ ಹಿಡುವಳಿದಾರರಿಗೆ ಕಮ್ಮಿ ಹಿಡುವಳಿದಾರರಿಂದ ಬರಬೇಕಾದ ಅವರುಗಳ ಬಾಕಿಗಳನ್ನು ವಸೂಲ್ಮಾಡುವದಕ್ಕೆ, ಕುಮ್ಮಕ್ ಮಾಡುವಬಗ್ಯೆ ಯಾವದಾದರೂ ನಡವಳಿಕೆಗಳಿಗೆ ಸಂಬಂಧಿಸಿದ ಅಥವಾ ಅವುಗಳಿಂದ ಉಂಟಾಗುವ ದಾವೆಗಳು, ಅಥವಾ ವಿಗ್ರಹ ಹಿಡಿತದ ಅಕ್ರಮ ಗಲ್ಲತ್ ಅಥವಾ ಮತ್ಯಾವದಾದರೂ ಇತರ ಕಾರಣಕ್ಕಾಗಿ ಜಮಾನ್ ಕಂದಾಯದ ಬಾಕಿಗಳಿಗಾಗಿ ನಡಿಸಲ್ಪಡುವ ವಿಕ್ರಯಗಳನ್ನು ತಳ್ಳಿಹಾಕುವಬಗ್ಯೆ ದಾವೆಗಳು. (೩) ಗವರನ್‌ಮೆಂಟಿನವರಮೇಲೆ ದಾವೆಗಳು.—ಜಮಾನ್ ಕಂದಾಯಕ್ಕೆ ಗುರಿಯಾಗಿರುವದಾಗಲಿ, ಅಥವಾ ವೇಲ್ಪಟ್ಟ ಹಿಡುವಳಿದಾರನಂತೆ, ಕಮ್ಮಿಹಿಡುವಳಿದಾರ ಅನುಭವದಾರ ಅಥವಾ ಹಿತ್ತಿಲದಾರನಂತೆ ರೆವಿನ್ಯೂ ಸರ್ವೆ ಅಥವಾ ಸೆಟಲ್‌ಮೆಂಟ್ ರಿಕಾರ್ಡುಗಳಲ್ಲಿಯಾಗಲಿ ಗ್ರಾಮದ ಕಾಗದಪತ್ರಗಳಲ್ಲಿಯಾಗಲಿ ದಾಖಲಾಗ್ಮಾಡಲಿಕ್ಕೆ, ಅಥವಾ ರೆವಿನ್ಯೂ ಸರ್ವೆ ಅಥವಾ ಸೆಟಲ್‌ಮೆಂಟ್‌ನ ಯಾವ ರಿಕಾರ್ಡಿನಲ್ಲಾಗಲಿ ಯಾವದಾದರು ಖಿತಾಬಿತಿ ಮಾಡಲ್ಪಡಲಿಕ್ಕೆ, ಅಥವಾ ಅಂಥಾ ಯಾವ ಖಿತಾಬಿತಿಯನ್ನಾಗಲಿ ವಿಡುವದಕ್ಕೆ ಅಥವಾ ತಿದ್ದು ಪಾಡುಮಾಡಲಿಕ್ಕೆ. (೪) ೧೮೭೦ನೇ ಇಸವಿಯ ೪ನೇ ಮುಚ್ಚಳಿಕೆ ಶಾಸನಕ್ಕನುಸರಿಸಿ ಅಥವಾ ಈ ರೆಗ್ಯುಲೇಷನ್ ಸಂಕೆ ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರೂ ಇತರ ಕಾನೂನಿನ್‌ಮೇರಿಗೆ ಯಾವದಾದರೂ ಎಸ್ಟೇಟಿನ ವಿಭಾಗದಲ್ಲಿ ಜಮಾನ್ ಹಂಚಿಕೆ ಅಥವಾ ಜಮಾನ ಕಂದಾಯದ ನಿರ್ಣಯ; (೫) ಜಮಾನ್ ಕಂದಾಯ ಪೂರಾ ಆಗಲಿ, ಕೆಲವು ಮಟ್ಟಿಗಾಗಲಿ, ಕೊಡಬೇಕಾದ್ದಿಲ್ಲದೆ ಜಮಾನನ್ನು ವಹಿಸಲಿಕ್ಕೆ ಗವರನ್‌ಮೆಂಟಿನ ಮೇಲೆ ದಾವೆಗಳು, ಅಥವಾ ಜಮಾನ್ ಕಂದಾಯದಮೇಲೆ ಹಾಕಲ್ಪಟ್ಟ ಅಥವಾ ಅದರ ದೆಸೆಯಿಂದ ಕೊಡಲ್ಪಡತಕ್ಕ ಮೊಬಲಗುಗಳನ್ನು ಪಡೆಯಲಿಕ್ಕೆ, ಅಥವಾ ತತ್ಕಾಲದಲ್ಲಿ ಜಾರೀ ಇರುವ ಯಾವದಾದರು ಕಾನೂನಿನ ನಿಬಂಧನೆಗಳನ್ನನುಸರಿಸಿ ಗವರನ್‌ಮೆಂಟಿನಿಂದ ನಿಯಮಿಸಲ್ಪಟ್ಟ ಯಾವದಾದರು ಶಿಸ್ತಿಗೆ ಅಥವಾ ದರವನ್ನು ವಜಾ ಮಾಡಲಿಕ್ಕೆ ಅಥವಾ ಗವರ್ನ್‌ಮೆಂಟಿಗೆ ಸೇರಿದ ಬಂಜರ್ ಯಾ ಖಾರೀ ಜಮಾನಿನ ಅನುಭವವನ್ನು ಕುರಿತು.

ಪಟ್ಟಾಭಿಷೇಕದ ಉತ್ಸವಗಳು.

ಚಿಕ್ಕಮಗಳೂರು.

ಶ್ರೀಮನ್ ಮಹಾರಾಜರವರ ಪಟ್ಟಾಭಿಷೇಕದ ದಿವಸ ಎಲ್ಲಾ ದೇವಾಲಯಗಳಲ್ಲೂ ಪ್ರಾರ್ಥನೆಗಳು ನಡೆದವು. ಸರ್ವರೂ ಶ್ರೀಮನ್ ಮಹಾರಾಜರವರಿಗೆ ಆದ ಪಟ್ಟಾಭಿಷೇಕ ಮಹೋತ್ಸವದ ಸಂಭ್ರಮದಲ್ಲಿ ಹೆಚ್ಚಾಗಿ ತಮ್ಮ ಆನಂದವನ್ನು ತೋರ್ಪಡಿಸಲಿಕ್ಕೆ ಪ್ಲೇಗ್ ದೆಸೆಯಿಂದ ಅಡ್ಡಿಯಾಯಿತು. ಆದಾಗ್ಯೂ ಪ್ರತಿ ಒಬ್ಬರೂ ತಮ್ಮಿಂದಾದ ಮಟ್ಟಿಗೂ ಸಂತೋಷಪಟ್ಟರು. ಎಲ್ಲಾ ಮತದವರಿಗೆ ದಾನ ಧರ್ಮಗಳು ಸಿಕ್ಕಿದವು. ಶ್ರೀಮನ್ ಮಹಾರಾಜರವರನ್ನು ಹರಸಿದರು.

ಹಾಸನ.

ಮಹಾರಾಜರವರ ಪಟ್ಟಾಭಿಷೇಕೋತ್ಸವದ ಏರ್ಪಾಡುಗಳು ಈ ಊರಲ್ಲಿ ಕಳ್ಳಮಟ್ಟಿಗೆ ಸಮರ್ಪಕವಾಗಿಯೇ ನಡೆದವು. ಆ ಶುಕ್ರವಾರ ಬೆಳಿಗ್ಗೆ ಎಲ್ಲಿನೋಡಿದರೂ ಎಲೆ ಪುಷ್ಪಾದಿಗಳಿಂದಲಂಕೃತವಾದ ತೋರಣಗಳು, ಸರ್ಕಾರಿ ಕಟ್ಟಡ, ಸರಕಾರಿ ಮುದ್ದೇದಾರರ ಬಂಗ್ಲೆಗಳಲ್ಲಿ ಕಾಣುತ್ತಿದ್ದವು. ಬೆಳಿಗ್ಗೆ ಇಲ್ಲಿನ ಕೃಷ್ಣ ಮಂಡಲಿಯವರು ಸುಮಾರು ಇನ್ನೂರು ಜನಗಳ ವರಗಡಿ ವಿಷ್ಣು ದೇವಸ್ಥಾನದಲ್ಲಿ ಸೇರಿ ಮಹಾರಾಜರವರ ಆಯುರಾರೋಗ್ಯದ ಭಗವಂತನನ್ನು ಪ್ರಾರ್ಥಿಸಿದರು. ಊರಿನಲ್ಲಿರುವ ಗೌವರ್ನ್ಮೆಂಟ್ ಮತ್ತು ಮಿಷನ್ ಸ್ಕೂಲುಗಳ ಬಾಲಕ ಬಾಲಿಕೆಯರುಗಳಿಗೆ ಪ್ರಶಸ್ತತರವಾದ ತಿಂಡಿ ಪದಾರ್ಥಗಳು ಹಂಚಲ್ಪಟ್ಟವು. ಮಧ್ಯಾಹ್ನದ ವೇಳೆ ಬೋರ್ಡಿಂಗ್ ಸ್ಕೂಲ್ ಮೈದಾನದಲ್ಲಿ ವಿನೋದವಾದ ಆಟಪಾಟಗಳು ನಡೆದವು. ಇವುಗಳಲ್ಲಿ ಗೆದ್ದವರಿಗೆ ಅವರವರ ಯೋಗ್ಯತಾನುಸಾರ ಬಹುಮಾನಗಳು ಕೊಡಲ್ಪಟ್ಟವು. ಇಲ್ಲಿನ ಛಾವಣಿ ಹುದ್ದೆದಾರರೆಲ್ಲ ಮೈಸೂರಿಗೆ ದಯಮಾಡಿದ್ದರಿಂದ ಈ ಕಮಿಷನರ್ ಮಿ॥ ವೆಂಕಟರಮಣಯ್ಯನವರೂ, ಆಕ್ಟಿಂಗ್ ಅಮಲ್ದಾರರವರೂ ಮುದ್ದು ನಿಂತು ಎಲ್ಲಾ ಕಾರ್ಯಗಳನ್ನು ಜಗನಾಡಿಸಿದರು. ಅದೇ ದಿನ ರಾತ್ರಿ ಎಲ್ಲಾ ಪಬ್ಲಿಕ್ ಕಟ್ಟಡಗಳ ಮೇಲೆ ನೇತ್ರಾನಂದಕರವಾದ ದೀಪಗಳು ಬೆಳಗುತ್ತಿದ್ದವು. ಮಾರನೇ ದಿನ ಆದರೆ ಶನಿವಾರ ಇಲ್ಲಿನ ಬಿಳಿ ಪಾಳೆ ಆಟದವರು ಸೇರಿ ಕ್ರಿಕೆಟ್ ಮತ್ತು ಫುಟ್‌ಬಾಲ್ ಎಂಬ ಆಟಗಳನ್ನು ಆಡುವದಾಗಿಯೂ ಅದರಲ್ಲಿ ಜಯವನ್ನು ಹೊಂದಿದವರಿಗೆ ಇನಾಮುಗಳು ದೊರಕುವದಾಗಿಯೂ ಏರ್ಪಾಡಾಗಿದೆ. ಜಗತ್ಕರ್ತನು ನಮ್ಮ ಮಹಾರಾಜರವರಿಗೆ ಆಯುರಾರೋಗ್ಯ ಭಾಗ್ಯಾದಿಗಳನ್ನು ದಯಪಾಲಿಸಿ, ಈ ದೇಶವನ್ನು ಅತ್ಯುನ್ನತ ಸ್ಥಿತಿಗೆ ತರಲೆಂಬುವದೇ ಎಲ್ಲರ ಪ್ರಾರ್ಥನೆಯಾಗಿದೆ.

ಹೊಳೆ ನರಸೀಪುರ.

ತಾರೀಖು ೮ನೇ ಶುಕ್ರವಾರದವಸ ಪ್ರಾತಃಕಾಲ ೮ ಘಂಟೆಗೆ ಈ ಸ್ಥಳದಲ್ಲಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿಗೂ ಚತುರ್ಭುಜ ಕಟ್ಟೆ ಭವಾನೀಸ್ವಾಮಿಗೂ ಮತ್ತು ಈಶ್ವರಸ್ವಾಮಿಗೂ ಅಭಿಷೇಕವು ನಡೆದನಂತರ ಸಮಸ್ತ ಮಹಾ ಜನಗಳೂ ತಾಲ್ಲೂಕು ಕಛೇರಿಗೆ ಬಂದು ಅಲ್ಲಿ ಅಲಂಕೃತವಾದ ಚಿತ್ರಫಲಕದಲ್ಲಿದ್ದ ಮಹಾರಾಜರವರಲ್ಲಿಯೇ ಪ್ರತ್ಯಕ್ಷ ಮಹಾರಾಜರಂತೆ ಸನ್ಮಾನಿಸಲ್ಪಡುವ ಅದರ ವರವಶರಾಗಿ ಆಶೀರ್ವದಿಸಿದರು. ಆ ವೇಳೆಯಲ್ಲಿ ಮಿ॥ ಬಿರಸ್ತೇದಾರ್ ಮಹಲಿಂಗಣ್ಣನವರು ಶ್ರೀಮನ್ಮಹಾರಾಜರವರ ಜಯವಾದಗಳನ್ನು ಓದಿದರು. ಇವಾದನಂತರದಲ್ಲಿ ರಾಜಾಲ್ಯದ್ಧರಿಂದವೂ ಜನ ಶಿವಾಲಯಗಳ ಸುದ್ದಿ ಉಳಿ, ಜ್ಯಾಂಸು ವಾದ್ಯವೂ, ತಿಗ ಗುಂಡುಗಳೂ ಮಂತ್ಯದಾರ್ಥವಾಗಿ ಆದವು. ಇವಾದನಂತರ ಸಾಹಿತ್ಯ ವಿದ್ವಾನ್ ಮಿ॥ ಛತ್ರೀಸೇನಾ ಚಾರ್ಯರು ಕೆಲವು ಶ್ಲೋಕಗಳನ್ನು ಕವನಮಾಡಿಕೊಂಡು ಒಂದು ಸಭೆಯಲ್ಲಿ ಹೇಳಿದರು. ಅನಂತರ ಮಿ॥ ಆವಧ್ಯಾಶಾಸ್ತ್ರಿಗಳು ಸಂಗೀತದಿಂದ ಸಭೆಯನ್ನು ಸಂತೋಷಸಮುದ್ರದಲ್ಲಿ ಮುಳುಗಿಸಿದರು. ಇದಾದ ಮೇಲೆ ತಾಂಬೂಲ ವಿತರಣವಾಯಿತು. ಬಳಿಕ ಸಮಸ್ತ ಮಹಾಜನಗಳೂ ತಮ್ಮ ತಮ್ಮ ಮನೆಗೆ ದಯಮಾಡಿಸಿದರು. ಮಧ್ಯಾಹ್ನ ೩ ಘಂಟೆಗೆ ಪುನಃ ಸಮಸ್ತ ಮಹಾ ಜನಗಳೂ ಈ ಸ್ಥಳದ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನಲ್ಲಿ ಸೇರಿ ಸಮಸ್ತರಾದ ವಿದ್ಯಾರ್ಥಿಗಳಿಂದಲೂ ಆಟಗಳನ್ನು ಆಡಿಸಿ ಗೆದ್ದವರಿಗೂ ಮತ್ತೂ ಬಾಲಿಕೆಯರ ಮಧುರವಾದ ಗಾನ ಮಾಡಿಸಿ ನಾನಾ ವಿಧವಾದ ಬಹುಮಾನಗಳಿಂದಲೂ ಹಂಚಿಗೆಯಿಂದಲೂ ಸರ್ವರ ಸಂತೋಷಪಡಿಸಿ ಅನಂತರ ಸರ್ವರೂ ದೇವಸ್ಥಾನಗಳಿಗೆ ಹೋಗಿ ಅಲ್ಲಿ ಪ್ರತಿ ದೇವರುಗಳಿಗೂ ಮತ್ತು ಶ್ರೀಮನ್ಮಹಾರಾಜರವರಿಗೂ ಸಹ ಎಲ್ಲಾ ಕಡೆಗಳಲ್ಲಿಯೂ ಮೆರವಣಿಗೆ ಉತ್ಸವವನ್ನು ಜಳಸಿ ದೇವಸ್ಥಾನಕ್ಕೆ ವಾಪಸು ಬಂದನಂತರ ಉಳಿದ ಉತ್ಸವಗಳನ್ನು ಅಲ್ಲಿ ಸಾಂಗವಾಗಿಸಿ ಅವರವರ ಮನೆಗೆ ಸರ್ವರೂ ದಯಮಾಡಿದರು.

ಕುಣಿಗಲ್.

೮ನೆ ತಾರೀಖು ಶುಕ್ರವಾರ ನಮ್ಮ ಮಹಾರಾಜರ ಪಟ್ಟಾಭಿಷೇಕೋತ್ಸವ ದಿನವಾದ್ದರಿಂದ ಊರೆಲ್ಲಾ ಬಹು ರಮಣೀಯವಾಗಿ ಅಲಂಕರಿಸಲ್ಪಟ್ಟದ್ದು ಮಾತ್ರವಲ್ಲದೆ ಆ ದಿನ ೧೨ ಘಂಟೆಯಿಂದ ಪೂರ್ಣಯ್ಯನವರ ಛತ್ರದಲ್ಲಿ ಊಟಮಾಡತಕ್ಕ ಸಕಲ ಜನರಿಗೂ ಸಂತರ್ಪಣೆ ನಡಿಸಲ್ಪಟ್ಟಿತು. ಕೆಲವು ಬಡವರಿಗೆ ಬಟ್ಟೆಗಳು ಕೊಡಲ್ಪಟ್ಟವು. ಈ ಕೆಲಸಕ್ಕೆ ಆಸ್ಪತ್ರೆ ಆ. ಮಿ॥ ವಾಸುದೇವಮೂರ್ತಿಯವರು ನೇಮಿಸಲ್ಪಟ್ಟಿದ್ದರು. ೪ ಘಂಟೆಯಿಂದ ೬ ಘಂಟೆವರೆಗೆ ಇಲ್ಲಿನ ಆ. ಕೆ. ಮಿ॥ ಗೋಪಾಲ ಅಯ್ಯಂಗಾರರೂ, ಅಮಲ್ದಾರರೂ, ಆಸ್ಪತ್ರೆ ಹಿಂಭಾಗದ ಮೈದಾನದಲ್ಲಿ ಒಂದು ಡೇರೆಯನ್ನು ಹಾಕಿಸಿ, ಅದರಲ್ಲಿ ಎಲ್ಲಾ ಸ್ಥಾನಿಕರುಗಳನ್ನೂ ದೊಡ್ಡಮನುಷ್ಯರ ಮತ್ತು ಶೆಟ್ಟಿ ಮುಂತಾದ ಮುಖ್ಯರೂ, ಅವರ ಹೆಂಗಸರೂ, ಸಹ ಬರುವಂತೆ ಅನುಕೂಲಪಡಿಸಿ ವಿವಿಧ ಆಟದ ಮುಂತಾದವನ್ನು ಹಂಚಿದರು, ಆ ಡೇರೆಯ ಮುಂ

...ಗದಲ್ಲಿ ಜನರ ನೋಟಕ್ಕೆ ಯೋಗ್ಯವಾದ ಅನೇಕ ತಮಾಷೆ ಆಟಗಳು ಆಡಲ್ಪಟ್ಟವು. ಒಂದು ಕಡೆ ದೊಂಬರ ಆಟವೂ, ಇನ್ನೊಂದು ಕಡೆ ...ಗಳ ಕುಣಿತವೂ, ಮತ್ತೊಂದು ಸರಿಗಳನ್ನು ಹಿಡಿಯುವ ರೀತಿಯೂ ತೋರಿಸಲ್ಪಟ್ಟವು. ಸ್ಕೂಲ್ ಹುಡುಗರಲ್ಲಿ ಕೆಲವರನ್ನು ಓಡಿಸಿದರು. ಇನ್ನು ಕೆಲವರನ್ನು ಕಣ್ಣು ಕಟ್ಟಿ ಬಿಟ್ಟರು. ಈ ಆಟಗಳಲ್ಲಿ ಯಾರು ಗೆದ್ದರೋ ಅವರಿಗೆ ಇನಾಮುಗಳನ್ನು ಕೊಟ್ಟರು. ನೋಡಲು ಈ ತಮಾಷೆಗಳೆಲ್ಲಾ ಸೇರಿದ ಸ್ಥಾನಗಳನ್ನು ಶೃಂಗರಿಸಿದ್ದರು. ೬ ಘಂಟೆಯಿಂದ ೧೧ ಘಂಟೆ ವರೆಗೆ ದೀಪಗಳು ಮತ್ತು ಬಾಣ ಬಿರುಸುಗಳ ಪ್ರದರ್ಶನವಾಯಿತು. ಈ ದಿನದಲ್ಲಿ ಪ್ರತಿಯೊಂದು ಮನೆ ಮತ್ತು ಅಂಗಡಿಯ ಮುಂದೆ ದೀಪಗಳು ಇಡಲ್ಪಟ್ಟವು. ಇದೇ ದಿನ ವೀರಶೈವ ಮತಸ್ಥಾಪನಾಚಾರ್ಯ ರೇಣುಕರ ಮಠದಲ್ಲಿ ಬೆಳಿಗ್ಗೆ ೬ ಘಂಟೆಯಿಂದ ೧೧ ಘಂಟೆವರೆಗೆ ಮಹಾನ್ಯಾಸ ಪೂರ್ವಕವಾಗಿ ಅಭಿಷೇಕವೂ, ಕೆಲವು ಜನರಿಗೆ ಸಂತರ್ಪಣೆಯೂ, ಸಾಯಂಕಾಲ ದೀಪೋತ್ಸವವೂ ನಡೆದು ಬಹಳ ವಿನೋದವಾಗಿ ಆ ದೇವಸ್ಥಾನದ ಧರ್ಮಾಧಿಕಾರಿಯಾದ ಪಿ. ರುದ್ರಪ್ಪನವರಿಂದ ನಡೆಸಲ್ಪಟ್ಟಿತೆಂದು ಕೇಳುತ್ತೇನೆ.

ದೇವಲಾಪುರ.

ಈ ತಿಂಗಳು ೭ನೇ ತಾರೀಖು ಮಧ್ಯಾಹ್ನ ನಮ್ಮ ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ಪಟ್ಟಾಭಿಷೇಕ ಮಹೋತ್ಸವದ ಸಂತೋಷಾನುಭವಕ್ಕಾಗಿ, ಈ ಊರು ಅಮಲ್ದಾರರವರು, ಮುನಿಸಿಪಾಲ್ ಮೆಂಬರುಗಳೇ ಮೊದಲಾದ ಅನೇಕ ದೊಡ್ಡ ಮನುಷ್ಯರೂ ಸೇರಿ, ತಾಲ್ಲೂಕು ಕಛೇರಿಯಲ್ಲಿ ಸಭೆ ಸೇರಿ, ವೀಣೆ, ಪಿಟೀಲು, ಮೃದಂಗದ ಗಾನ, ಮುಂತಾದವುಗಳಿಂದಲೂ, ನಂತರ ನಮ್ಮ ಅಮಲ್ದಾರರವರು ಮಾಡಿದ ಉಪನ್ಯಾಸದಿಂದಲೂ ಅತ್ಯಾನಂದವನ್ನನುಭವಿಸಿ, ಎಲ್ಲರೂ ಗಂಧ ಪುಷ್ಪಾದಿಗಳನ್ನು ಸ್ವೀಕರಿಸಿ, ನಂತರ ಚದುರಿದರು. ಪುನಃ ರಾತ್ರಿ ಸುಮಾರು ಆಟಗಳನ್ನು ನೋಡಿ, ಉಡುಗೊರೆಗಳು ಮುಂತಾದ ವಿಧವಾದ ಕಾರ್ಯಕ್ರಮಗಳಿಂದ ಊರುವರೆಲ್ಲರಿಗೂ ನ ನಂತರ ಎಲ್ಲರೂ ಎ. ವಿ. ನವರಲ್ಲಿಗೆ ದಯಮಾಡಿ, ಅಲ್ಲಿ ಅಣಿಪಡಿಸಿದ್ದ ವಸ್ತ್ರಗಳನ್ನೂ, ಉಭಯ ಭಾಷಾ ಪಂಡಿತರಾಗಿಯೂ, ಇದರ ಮೆ. ಪಿ. ವಿದ್ವಾಂಸರು ಸಮ್ಮುಖದಲ್ಲಿ, ಈ ನಮ್ಮ ದೇಶದ ಧೀರರು, ಪುಣ್ಯಶಾಲಿಗಳು, ಪರಾಕ್ರಮ ಮತ್ತು ಅನೇಕ ಸದ್ಗುಣಗಳಿಂದ ಕೂಡಿದವರಾದ ಮಹಾರಾಜರವರ ಪ್ರಜೆಗಳಾಗಿರುವ ನಾವು ಬಹಳ ಭಾಗ್ಯಶಾಲಿಗಳೆಂದು, ನಾವೆಲ್ಲರೂ ನಮ್ಮ ಶ್ರೀಮನ್ಮಹಾರಾಜರವರ ಕ್ಷೇಮವನ್ನೇ ಕೋರಬೇಕೆಂದೂ, ಮಹಾರಾಜರವರ ಶ್ರೇಯಸ್ಸನ್ನು ಪ್ರಾರ್ಥಿಸುತ್ತ, ಈ ನಮ್ಮ ಊರಿನ ಜನರ ಆನಂದಕ್ಕಾಗಿ ಕೆಲವು ಸಂಸ್ಕೃತ ಶ್ಲೋಕಗಳನ್ನು ಪಠಿಸಿ, ಅತ್ಯಾನಂದವನ್ನುಂಟುಮಾಡಿದರು. ನಂತರ ಅಲ್ಲಿನ ಜಾತಿಕ ರೀತಿ ಪಿ. ನಂಜುಂಡಯ್ಯನವರ ಮನೆಗೆ ಹೋಗಿ ಅಲ್ಲಿನ ಉಪನ್ಯಾಸವು ಮುಗಿದ ನಂತರ ಶ್ರೀಮನ್ಮಹಾರಾಜರವರ ಶ್ರೇಯಸ್ಸಿಗಾಗಿ ಪ್ರಾರ್ಥನೆ ಮಾಡಿದರು. ಉಪನ್ಯಾಸಗಳು, ಸಂಗೀತವೂ, ತಾಂಬೂಲಗಳು ಮುಂತಾದವುಗಳಿಂದಲೂ, ಮತ್ತು ದಾನಧರ್ಮವನ್ನು ಮಾಡಿದರು. ವಿಧಾಯಕ ಮಾಡಿ ಊರಿನವರೆಲ್ಲರನ್ನು ಸಂತೋಷಪಡಿಸಿದರು. ಶ್ರೀ ಸೌಮ್ಯಕೇಶವ ಸ್ವಾಮಿಯವರ ದೇವಸ್ಥಾನಕ್ಕೆ ಎಲ್ಲರೂ ದಯಮಾಡಿಸಿದರು. ನಂತರ ಆ ವಿಗ್ರಹ ಮುಂದೆ ಶ್ರೀ ಚಾಮರಾಜೇಂದ್ರ ಉತ್ಸವವು ನಡೆಯಿತು. ಈ ಸಭೆಯಲ್ಲಿ ನಮ್ಮ ಅಮಲ್ದಾರರೂ, ಮುನ್ಸೀಫರೂ, ತಾಲ್ಲೂಕು ಶೇಖದಾರರೂ, ವಕೀಲರು ಮುಂತಾದ ಅನೇಕ ಪ್ರಮುಖರು ಇದ್ದರು. ಈ ಉತ್ಸವವು ಈ ಊರಿನಲ್ಲಿಯೇ ನಡೆಯುತ್ತಿರುವ ಮೊದಲನೆಯದು. ಎಲ್ಲರೂ ಅತ್ಯಾನಂದದಿಂದ ಸಂತೋಷಿಸುತ್ತಿದ್ದರು.

ವನಗೊಗ್ಗ.

ಈ ಪಟ್ಟಣವು ರಾಜಭಕ್ತಿಯಿಂದ ಪರಿಪೂರ್ಣವಾಗಿದ್ದರೂ ರಾಜಭಕ್ತಿ ಸೂಚನೆಗಾಗಿ ನಮ್ಮ ಮಹಾರಾಜರ ಪಟ್ಟಾಭಿಷೇಕ ಮಹೋತ್ಸವ, ಚಕ್ರವರ್ತಿಯವರಾದ ಏಳನೆ ಎಡ್ವರ್ಡ್ ಅವರ ಕಿರೀಟಧಾರಣೆಯ ಮಹೋತ್ಸವ ಈ ಎರಡು ಮಹಾ ಆನಂದಕರವಾಗಿತ್ತು. ಟರ್ಕಿಯ ಶಿರಸ್ತೇದಾರರಲ್ಲಿ ಒಬ್ಬರಾದ ನಮ್ಮ ಪೊಲೀಸ್ ಇನ್ಸ್‌ಪೆಕ್ಟರ್ ರವರೂ ಊರಿನ ಪ್ರಮುಖರೂ ಮುಖ್ಯಸ್ಥರಾಗಿ ದಯಮಾಡಿಸಿದ್ದರು. ಈ ಸಂತೋಷಕರವಾದ ಇನ್ನೂ ಅಧಿಕ್ಯವನ್ನು ಹೊಂದುವ ಹಾಗೆ ಪಟ್ಟಾಭಿಷೇಕದ ದಿನ ಇಲ್ಲಿನ ಪ್ರೈಮರಿಯಲ್ಲಿದ್ದ ಕೆಲವು ಕೈದಿಗಳನ್ನು ಬಿಡುಗಡೆ ಮಾಡಿದರು. ಮತ್ತು ಎಲ್ಲಾ ದೇವಸ್ಥಾನ ಮಸೀದಿಗಳಲ್ಲಿ ಆ ದಿನ ಪೂಜೆಯೂ ಪ್ರಾರ್ಥನೆಯೂ ನಡೆಯಬೇಕೆಂದು ತಕ್ಕ ಸಹಾಯವನ್ನು ಒದಗಿಸಿ ಕೊಟ್ಟರು. ಇದಲ್ಲದೆ ಸುಮಾರು ೧,೨೦೦ ಜನಗಳಿಗೆ ಆ ದಿನ ಸಂತರ್ಪಣೆಯಾಯಿತು. ಸಾಯಂಕಾಲ ತಾಲ್ಲೂಕ್ ಕಚೇರಿಯಲ್ಲಿ ನಡೆದ ದರ್ಬಾರಿನಲ್ಲಿ ನಮ್ಮ ಸಬ್ ಡಿವಿಷನ್ ಆಫೀಸರಾದ ಮಿ| ನರಸಿಂಹಮೂರ್ತಿ ಅಯ್ಯಂಗಾರ್ಯರವರು ಅಗ್ರಾಸನವನ್ನು ಅಲಂಕರಿಸಿದ್ದರು. ಊರಿನ ಮುಖ್ಯ ಮುಖ್ಯ ಜನಗಳೆಲ್ಲರೂ ಸೇರಿ ಇದನ್ನು ನೋಡಿದನಂತರ ಊರಿನ ಎಲ್ಲಾ ದೇವಾಲಯಗಳಲ್ಲಿ ಪ್ರಾರ್ಥನೆಯೂ ದೇವತಾ ಮೆರವಣಿಗೆಯೂ ವಿಜೃಂಭಣೆಯಿಂದ ನಡೆದವು. ಮರುದಿನ ಏನ ಬಾಣ ಮತ್ತು ಮದ್ದುಗುಂಡುಗಳು ಹಾರಿಸಲ್ಪಟ್ಟವು. ರಾತ್ರಿಯಲ್ಲಿ ನಡೆದವು. ಈ ಪಟ್ಟಣದ ಮುಂದಿನ ಕ್ಷೇಮಾಭಿವೃದ್ಧಿಯನ್ನು ವಿದ್ಯಾಭಿವೃದ್ಧಿಯನ್ನು ಉಂಟುಮಾಡಬೇಕೆಂದು ಶ್ರೀಮನ್ಮಹಾರಾಜರು ಈ ಊರಿನ ಜನಗಳ ಮೇಲೆ ದಯವಿಟ್ಟು ಅತ್ಯಂತ ಸುಂದರವಾದ ಅವರ ಛಾಯಾಚಿತ್ರವನ್ನು ಮ್ಯುನಿಸಿಪಾಲಿಟಿಯಲ್ಲಿ ಇಟ್ಟಿದ್ದರು. ಸಬ್ ಡಿವಿಷನ್ ಆಫೀಸರು ಈ ದರ್ಬಾರಿನಲ್ಲಿ ಪ್ರತ್ಯಕ್ಷವಾಗಿ ಹಾರ್ಮೋನಿಯಂ ಬಾರಿಸಲ್ಪಟ್ಟು ಕೆಲವು ನಟರನ್ನು ನೆಟ್ಟು ನಂತರ ಸಾಯಂಕಾಲ ನಾಲ್ಕು ಘಂಟೆಗೆ ಪುನಃ ದರ್ಬಾರಿನ ಅಗ್ರಾಸನವನ್ನು ವಹಿಸಿದರು. ಆಗ್ಯೆ ಊರಿನ ಜನಗಳು ಸುಮಾರು ೩,೦೦೦ ಜನರಿಗೂ ಕಡಿಮೆ ಬಂದಿದ್ದರು. ಅಗ್ರಾಸನಾಧಿಪತಿಗಳು ಆ ಮಹಾ ಸಭೆಯ ಉದ್ದೇಶಗಳು ನಮ್ಮ ಮಹಾರಾಜ ಶ್ರೀಕೃಷ್ಣರಾಜ ಒಡೆಯರ ಪಟ್ಟಾಭಿಷೇಕವನ್ನು ವಿಶಾಲವಾಗಿ ಚಕ್ರವರ್ತಿಯವರ ಕಿರೀಟಧಾರಣೆಯನ್ನು ವಿಜೃಂಭಿಸುವುದೆಂದು ಹೇಳಿದರು. ಸಿಪಾಯಿಗಳು ಸುರಟ್ ಮಾಡಿದನಂತರ ಬಾಲಕರಿಗೆ ಸಿಹಿ ಹಂಚುವುದು, ಹಾಡುವುದು, ನೆಗೆಯುವುದು ಮುಂತಾದ ಆಟಗಳು ನಡೆದವು. ಆ ಮೇಲೆ ಮ್ಯುನಿಸಿಪಾಲಿಟಿ ವಸ್ತ್ರ ಪ್ರದಾನದಿಂದ ಅತ್ಯಂತ ಸಾಹಸವುಳ್ಳ ವಿನೋದವಾದ ಆಟಗಳನ್ನು ಆಡಿದರು. ಇದಾದ ಮೇಲೆ ಒಬ್ಬ ಶಿವಪೂಜೆಗಾಗಿ ಬಿಟ್ಟಿದ್ದ ಹಸುವನ್ನು ಹಿಡಿಯುವ ಒಂದು ಆಟವನ್ನು ಚಿಕ್ಕವರೊಡನೆ ಕಟ್ಟಿ ಮಾಡಿದರು. ಅನಂತರ ಕುದುರೆ ಸ್ಪರ್ಧೆಯವರು ಕವಾಯತನ್ನು ನಡೆಸಿದರು. ಈ ಆಟಗಳಲ್ಲಾ ಆದಮೇಲೆ ಇದುಗಳಲ್ಲಿ ಗೆದ್ದ ಬಾಲಕರಿಗೆ ತಕ್ಕ ಇನಾಮುಗಳು ಕೊಡಲ್ಪಟ್ಟವು. ನಂತರ ಸಭಿಕರು ತಾಂಬೂಲವನ್ನು ಕೈಕೊಂಡು ಎಡ್ವರ್ಡ್ ಚಕ್ರವರ್ತಿಯವರ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರವರ ಚಿರಕಾಲ ಬಾಳಲಿ ಎಂದು ಹರ್ಷತಾಡನ, ಜಯಘೋಷಗಳನ್ನು ಮಾಡಿದನಂತರ ಸಭೆ ವಿಸರ್ಜಿಸಲ್ಪಟ್ಟಿತು. ಅಲ್ಲದೆ ಪಟ್ಟಣದ ಸುಬೇದಾರರಾದ ಮಿ| ಹನುಮಂತರಾವ್ ಮೊದಲಾದವರು ತಮ್ಮ ಸಿಪಾಯಿಗಳಿಗೆ ಸ್ವಂತ ಖರ್ಚಿನಿಂದ ಆಟಗಳನ್ನಾಡಿಸಿದರು.

ದಾವಣಗೆರೆ.

ಈ ವಾರದಲ್ಲಿ ಪಟ್ಟಾಭಿಷೇಕದ ಸಡಗರವೇ ಸಡಗರ. ಎಲ್ಲಿ ನೋಡಿದರೂ ಜನಗಳ ಕೋಲಾಹಲ ವಾದ್ಯಘೋಷ. ಮನೆಮನೆಗಳಲ್ಲಿ ಬೆಳಗು ಹತ್ತಿ ಹಾರ ತೋರಣ ಹಾಕಿ ತೆಗೆದು ಇದೊಂದು ದೊಡ್ಡ ಹಬ್ಬಕ್ಕಿಂತಲೂ ಅಧಿಕೋತ್ಸಾಹದಿಂದ ಪ್ರಜೆಗಳೆಲ್ಲರೂ ಆನಂದಿಸಿದರು. ೭ನೇ ತಾರೀಖು ಪ್ರಾತಃಕಾಲ ದೇವಸ್ಥಾನಗಳಿಂದಲೂ ಗುರು ಮಠಗಳಿಂದಲೂ ಮಸೀದಿಗಳಿಂದಲೂ ಭಜನೆಯ ಮೆರವಣಿಗೆಯಿಂದ ಟ್ರಾವೆಲರ್ಸ್ ಬಂಗಲೆಯ ಮುಂಭಾಗದಲ್ಲಿ ನಿರ್ಮಿಸಿದ್ದ ರಮಣೀಯವಾದ ಚಪ್ಪರದಲ್ಲಿ ಪ್ರಜೆಗಳೆಲ್ಲರೂ ಸಭೆ ಸೇರಿದರು. ಹತ್ತು ಗಂಟೆಗೆ ಸರಿಯಾಗಿ ಅಮಲ್ದಾರ್ ಮಿ|| ಸಿ. ಕೃಷ್ಣರಾಯರವರು ಸಭೆ ಸೇರಿರುವ ಉದ್ದೇಶವನ್ನು ತಿಳಿಸುತ್ತಾ ಶ್ರೀಮನ್ಮಹಾರಾಜ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ಛಾಯಾಚಿತ್ರಕ್ಕೆ ಪುಷ್ಪಮಾಲಿಕೆಯನ್ನು ಸಮರ್ಪಿಸಿದರು. ಒಡನೆಯೇ ಎಲ್ಲರೂ ಜಯಘೋಷ ಮಾಡಿದರು. ಗೌರವಾರ್ಥವಾಗಿ ೨೧ ತೋಪುಗಳು ಹಾರಿಸಲ್ಪಟ್ಟವು. ಬಾರ್ ಸಿಪಾಯಿಗಳೂ ಪೊಲೀಸರೂ ರಾಯಲ್ ಸೆಲ್ಯೂಟನ್ನು ಗೈದರು. ರಾಜರವರಿಗೆ ಸಮರ್ಪಿಸಬೇಕಾದ ಎಲ್ಲಾ ಗೌರವಗಳಾದನಂತರ ಮಿ| ಇಬ್ರಾಹಿಂ ಉರ್ದು ಪಂಡಿತರು ಬಿ. ವಿಶ್ವೇಶ್ವರಯ್ಯನವರೂ, ಸುಸ್ವರದ ಪಾದ್ರಿಗಳೂ, ಪಂಡಿತರಾದ ಮಿ| ಹೆಚ್. ಧೀಮಾರಾಯರವರೂ, ಮಿ| ರಾಮಣ್ಣನವರೂ, ವಿಶ್ವೇಶ್ವರಯ್ಯನವರೂ, ಇಂಗ್ಲಿಷು, ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ಮಹಾರಾಜರ ರಾಜಭಕ್ತಿ ಪುರಸ್ಸರವಾದ ಕವನಗಳನ್ನೂ ಬರೆದ ಲೇಖನಗಳನ್ನೂ ಓದಿದರು. ಅನಂತರ ಪ್ರಜೆಗಳೆಲ್ಲರೂ ತಮ್ಮ ವಿನಯಪೂರ್ವಕವಾದ ವಂದನೆಗಳನ್ನು ಮಹಾರಾಜರವರಿಗೆ ಸಮರ್ಪಣೆ ಮಾಡಬೇಕೆಂದು ಟೆಲಿಗ್ರಾಮನ್ನು ಪ್ರೈವೇಟ್ ಸೆಕ್ರೆಟರಿಯವರಿಗೆ ಕಳುಹಿಸಿದರು. ಕೂಡಿದ್ದ ಸಭಿಕರಿಗೆಲ್ಲಾ ಗಂಧಪುಷ್ಪ ತಾಂಬೂಲಗಳಿಂದ ಉಪಚಾರವಾಗಿ ಸಂತೋಷವಾದ ಜಯಧ್ವನಿಯೊಡನೆ ಸಭೆಯು ವಿಸರ್ಜನವಾಯಿತು. ಮಧ್ಯಾಹ್ನ ಶ್ರೀ ಮಿ| ನಾರಾಯಣರಾವ್ ಪ್ರತಿಷ್ಠಿತರವರು ಮಹಾರಾಜರವರ ಪಟ್ಟಾಭಿಷೇಕ ಮಹೋತ್ಸವದ ಜ್ಞಾಪಕಾರ್ಥ ನೂತನವಾಗಿ ಕಟ್ಟಿಸಿದ ಕೊಠಡಿಯ ಆರಂಭೋತ್ಸವವನ್ನು ನಡೆಸಿದರು. ಘಂಟೆಗೆ ಸಭೆ ಸೇರಿದಾಗ ಸಭಾಮಂಟಪವು ಬಹು ವಿಚಿತ್ರವಾಗಿ ಅಲಂಕರಿಸಲ್ಪಟ್ಟಿತ್ತು. ಮಿ| ರಾಮಣ್ಣನವರೂ, ವಿಶ್ವೇಶ್ವರಯ್ಯನವರೂ, ಚನ್ನಪ್ಪನವರೂ ರಾಜಭಕ್ತಿ ಪ್ರದರ್ಶನದ ಸ್ವಭಾವವಾದ ಪವಿತ್ರ ರಾಜಭಕ್ತಿ ವಿಚಾರದಲ್ಲಿ ಉಪನ್ಯಾಸಗಳಿತ್ತರು. ನೆರೆದ ಸಭಿಕರೆಲ್ಲರೂ ಉಪಚರಿತರಾಗಿ ಪೂರ್ಣಭಾವದಿಂದ ವಿಸರ್ಜನವಾದ ಪ್ರಕಾರದ ಸತ್ಕಾರದ ಪಾತ್ರರಾದರು. ಬಾಲಕರ ವಿಧ ವಿಧ ಆಟಗಳು ನೋಟಕರಿಗೆ ಆನಂದವನ್ನುಂಟುಮಾಡಿದವು. ಅಮಲ್ದಾರರವರು ಗ್ರಾಮವಾಸಿಗಳಿಂದ ಕರೆಯಿಸಿದ್ದ ಗಾಣಿಗರೂ, ಕೇಡಿಗಾರರೂ, ದೊಂಬರೂ ತಮ್ಮ ಕಲೆ ಪ್ರದರ್ಶಿಸಿದ್ದನ್ನು ತೋರಿಸಿದರು. ಬಾಲಕರಿಗೆಲ್ಲಾ ಮಿಠಾಯಿ ಹಂಚಲ್ಪಟ್ಟಿತು. ರಾತ್ರಿ ಅಮಲ್ದಾರರು ಗ್ರಾಮದ ದೊಡ್ಡ ಮನುಷ್ಯರೊಡನೆ ದೀಪಲಕ್ಷ್ಮೀ ಪ್ರತಿ ದೇವಸ್ಥಾನಕ್ಕೂ ಹೋಗಿ ಛಾಯಾಚಿತ್ರವನ್ನು ಸಮರ್ಪಿಸಿದರು. ರಾತ್ರಿ ಅಮಲ್ದಾರರವರ ಗೃಹದಲ್ಲಿಯೇ ಪಂಡಿತರ ಶಾಸ್ತ್ರ ಸಭೆ ನಡೆಯಿತು. ನಂತರ ದ್ವೈತ ಪ್ರಯೋಗವೂ ಮೆರವಣಿಗೆಯೂ ನಡೆದು ರಾತ್ರಿ ಎಲ್ಲರೂ ತಮ್ಮ ಗೃಹಗಳಿಗೆ ಹೋದರು. ಈ ರೀತಿಯಲ್ಲಿ ಪ್ರಜೆಗಳೆಲ್ಲರೂ ಆ ದಿನವೆಲ್ಲಾ ಸಂತೋಷದಿಂದ ಕಳೆದು ಆನಂದಾಬ್ಧಿಯಲ್ಲಿ ಮುಳುಗಿದ್ದರು.

ಸಿಕ್ಕೆ.

ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರ್ ಬಹದ್ದೂರವರ ಪಟ್ಟಾಭಿಷೇಕ ಮಹೋತ್ಸವದ ದಿನ ಇಲ್ಲಿ ಸಾಯಂಕಾಲ ಕಾರ್ಯಗಳೆಲ್ಲಾ ನಮ್ಮ ಅಮಲ್ದಾರರ ಗೃಹದ ಮುಂದೆ ಚಪ್ಪರದಲ್ಲಿ ಅವರ ಸವಾರಿ ದಿನಂತೆ ತಾಲ್ಲೂಕ ಶಿರಸ್ತೇದಾರರು ಸಭೆ ಸಮರ್ಪಕವಾಗಿ ನೆರವೇರಿಸಿದರು. ತಾಲ್ಲೂಕ ಸೇರಿ ಬಾಗಿನ್ನು ಬೆಳಿಗ್ಗೆ ಸುಮಾರು ೧೧ ಗಂಟೆಯಲ್ಲಿ ಕದಳೀಸ್ತಂಭಗಳಿಂದಲೂ, ಬಾಳೆ ಫಲಗಳಿಂದಲೂ, ತೋರಣಗಳಿಂದಲೂ, ಪುಷ್ಪಗಳಿಂದಲೂ, ಮಹಾರಾಜರವರ ಚಿತ್ರ ವಿಚಿತ್ರ ವಸ್ತ್ರಗಳಿಂದಲೂ, ಅಲಂಕಾರ ಮಾಡಲಾದ ತಾಲ್ಲೂಕ್ ಕಛೇರಿಯಲ್ಲಿ ಮಿ| ಗಳಾದ ಶಿರಸ್ತೇದಾರರೂ, ಶಾನುಭೋಗರು ದಫೇದಾರರೂ, ಮುನ್ಸಿಫ್ ಕೋರ್ಟಿನವರೂ, ಎಲ್ಲಾ ಉಪಾಧ್ಯಾಯರೂ, ಮ್ಯುನಿಸಿಪಲ್ ಮೆಂಬರುಗಳೂ, ಸಾಹುಕಾರರೂ, ಜನರೂ, ಬಾಲಕರೂ, ಇನ್ನೂ ಅನೇಕರೂ ನೆರೆದಿದ್ದ ಬಳಿಗೆ ಬಂದಿದ್ದರು. ಆಗ ಸಿಪಾಯಿಗಳೂ, ಪೊಲೀಸಿನವರೂ ಯಥೋಚಿತವಾಗಿ ವಂದಿಸಿದರು. ಮಹಾರಾಜರವರ ಚಿತ್ರಪಟಗಳ ಎದುರಿನಲ್ಲಿ ನಿಂತು ಮಹೋತ್ಸವ ಪ್ರಕಾರವಾಗಿ ಸೆಲ್ಯೂಟ್ ಮಾಡಿದರು. ನಂತರ ಶಿರಸ್ತೇದಾರರು ಎದ್ದು ನಿಂತು ಮಹಾರಾಜರಿಗೆ ಗಂಧಹಾರಗಳನ್ನು ಹಾಕಿ ಮಹಾರಾಜರವರ ಪಟ್ಟಾಭಿಷೇಕವನ್ನು ಕುರಿತು ಸಭೆಗೆ ಮನದಟ್ಟಾಗುವರೀತಿಯಲ್ಲಿ ಅತ್ಯಂತ ಹರ್ಷದಿಂದ ತಿಳಿಸಿದರು. ಕೂಡಲೆ ಕ್ರಮಪ್ರಕಾರ ಹಾರಿಸಲ್ಪಡುವ ೨೧ ತೋಪುಗಳು ಹಾರಿದವು. ಬಾಲಿಕೆಯರು ಮಂಗಳ ಗಾನವೂ ವಾದ್ಯಗಳೊಂದಿಗೆ ನಡೆಯಿತು. ಸಭಾ ಮಂಡಲಿಯು ಆದರದಿಂದ ನಮ್ಮ ಶ್ರೀಮನ್ಮಹಾರಾಜರವರಿಗೆ ದೀರ್ಘಾಯುಷ್ಯವನ್ನು ಕೋರಿ ಜಯಘೋಷದಿಂದ ಪುಷ್ಪವೃಷ್ಟಿ ಮಾಡಿದರು. ಅಲ್ಲಿ ನೆರೆದಿದ್ದ ಗೃಹಸ್ಥರೆಲ್ಲರೂ ಹಸ್ತತಾಡನದಿಂದ ಸಂತೋಷಿಸುತ್ತಿದ್ದರು. ನಂತರ ಸಂಗೀತ ಗಾನವನ್ನು ವಾದ್ಯ ಸಹಿತವಾಗಿ ನಡೆಸಿ ಸಭಿಕರೆಲ್ಲರೂ ಆನಂದಪಡಿಸಿದರು. ಬಾಲಕರಿಗೆ ಹಂಚಲು ತಂದಿದ್ದ ಪುಷ್ಪಗಳನ್ನು ಹಂಚಲಾಯಿತು. ೩ ಘಂಟೆಯಿಂದ ಸಭಾ ಒಟ್ಟಾಯಿತು. ಕ್ರಿಕೆಟ್ ಮ್ಯಾಚ್ ಉಪಾಧ್ಯಾಯರ ತರ್ಫಿ ನಡೆಸಿದರು. ಒಂದು ಕಡೆ ವಿದ್ಯಾರ್ಥಿಗಳು ಬಾಲಕರು, ಹೀಗಾಗಿ ಆಟವಾಡಲು ವಿದ್ಯಾರ್ಥಿಗಳಿಗೆ ಅವಕಾಶ. ಆಗ ಮಹನೀಯರು ಪ್ರತಿಷ್ಠಿತರು ಸಭೆಗಳಿಗೆ ಹೋಗಿ ನೀಡಿಸಿದರು. ಇದರ ದೇಶೀಯ ಆಟಗಳು ಜರುಗಿದವು. ಇವುಗಳಲ್ಲಿ ಗೆದ್ದವರಿಗೆ ಅನೇಕ ಬಹುಮಾನಗಳು ಕೊಡಲ್ಪಟ್ಟವು. ಸಾಯಂಕಾಲ ಊರಿನ ಸಕಲ ಜನರು ಸೇರಿ ಮಹಾರಾಜರ ಛಾಯಾಚಿತ್ರವನ್ನು ಮೆರವಣಿಗೆ ಮಾಡಿದರು. ಬೆಳಿಗ್ಗೆ ದೇವಾಲಯಗಳಲ್ಲಿಯೂ ಪೂಜೆ ಮಾಡಿ ಪ್ರಾರ್ಥನೆಗಳು ನಡೆದವು. ರಾತ್ರಿ ಸಿಡಿಮದ್ದುಗಳು ಸುಡಲ್ಪಟ್ಟವು. ಎಲ್ಲ ಪಟ್ಟಣಗಳನ್ನು ಗೆದ್ದವರಿಗೆ ಬಹುಮಾನ ಕೊಡಲು ಸಾಯಂಕಾಲದ ದರ್ಬಾರಿನಲ್ಲಿ ಸುಮಾರು ೨೦೦ ಜನ ವಿದ್ಯಾರ್ಥಿಗಳು ಹಾಜರಿದ್ದರು. ೮ನೇ ತಾರೀಖು ಬೆಳಿಗ್ಗೆ ವಿದ್ಯಾಪ್ರದಾನ ಕಛೇರಿಯಲ್ಲಿ ಎಲ್ಲರೂ ಸೇರಿ ಬಹುಮಾನಗಳನ್ನು ಕೊಡಲು ಏರ್ಪಾಟಾಗಿತ್ತು. ಆ ದಿವಸ ಚಕ್ರವರ್ತಿಯವರ ಕಿರೀಟಧಾರಣೆಯ ಮಹೋತ್ಸವ ಆದುದರಿಂದ ಮಹಾರಾಜರ ಪ್ರತಿನಿಧಿ ಸಭೆ ನಡೆಯಿತು. ವಿದ್ಯಾರ್ಥಿಗಳ ವಿಷಯದಲ್ಲಿ ಮಹಾರಾಜರವರಿಗೆ ಇರುವ ಆಸಕ್ತಿ ಕುರಿತು ಶ್ರೀ ಗಿರಿಯಪ್ಪನವರೂ, ಶ್ರೀ ಚನ್ನಬಸವಪ್ಪನವರೂ, ರಘುನಾಥಯ್ಯಂಗಾರರೂ, ಭೀಮರಾಯರೂ, ಕೃಷ್ಣರಾಯರೂ ಉಪನ್ಯಾಸ ಮಾಡಿ ನಂತರ ಎಲ್ಲಾ ಬಹುಮಾನಗಳನ್ನು ಕೊಟ್ಟು ಗಂಧ ಪುಷ್ಪ ತಾಂಬೂಲಗಳಿಂದ ಸಭಾ ವಿಸರ್ಜನವಾಯಿತು. ಪ್ರಜೆಗಳೆಲ್ಲಾ ಸೇರಿ ಬಹಳ ವಿನಯದಿಂದ ಬಹಳ ಹೃತ್ಪೂರ್ವಕವಾಗಿ ರಾಜಭಕ್ತಿಯನ್ನು ವಿಶದಪಡಿಸುತ್ತಿದ್ದುದಕ್ಕೆ ಸಂದೇಹವಿಲ್ಲ.

ಅರಕಲಗೂಡು.

ಈ ತಿಂಗಳು ೭ನೇ ತಾರೀಖು ಬೆಳಿಗ್ಗೆ ೭ ಘಂಟೆ ಸಮಯದಲ್ಲಿ ಇಲ್ಲಿನ ಸ್ಕೂಲ್ ಬಂಗಲೆಯಲ್ಲಿ ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕಕ್ಕಾಗಿ ತಾಲೂಕಿನ ಅಧಿಕಾರಿಗಳು ಮತ್ತು ಸಕಲ ಜನರೂ ಸೇರಿದರು. ನಂತರ ಬೀದಿ ಬೀದಿಗಳಲ್ಲಿ, ಪೊಲೀಸ್ ಸಿಪಾಯಿಗಳ ಕವಾಯಿತು ನಡೆಯಿತು. ಪ್ರತಿಯೊಬ್ಬ ಅಧಿಕಾರಿಗಳೂ ಹಾಜರಿದ್ದರು. ಶ್ರೀಮನ್ಮಹಾರಾಜರವರ ಪಟ್ಟಾಭಿಷೇಕ ಸಂತೋಷಾರ್ಥವಾಗಿ ಜನರೆಲ್ಲರೂ ಸೇರಿದ್ದರು. ನಾವುಗಳು ಪತ್ರಿಕೆಗಳ ಮೂಲಕ ಕೇಳಿದಂತೆ ಎಲ್ಲ ವಿಧವಾದ ಲೋಪಗಳಿಲ್ಲದಂತೆ ಸಮಾರಂಭ ಪೂರೈಸಿತು. ಅನಂತರ ಸ್ಕೂಲಿನ ಮಕ್ಕಳಿಗೂ ಸಿಹಿ ಹಂಚಲಾಯಿತು. ಅನಂತರ ನಮ್ಮ ಅಮಲ್ದಾರರು ಮಹಾರಾಜರವರ ಪಟ್ಟಾಭಿಷೇಕ ಸಂತೋಷವನ್ನು ಕೊಂಡಾಡಿ, ತಮ್ಮಗಳ ಭಾವನೆಗಳನ್ನು ಸಭಿಕರ ಸಂತೋಷಾರ್ಥವಾಗಿ ಉಪನ್ಯಾಸವನ್ನು ಮಾಡಿ ಆನಂದಪಡಿಸಿದರು. ಸ್ಕೂಲ್ ವಿದ್ಯಾರ್ಥಿ, ವಿದ್ಯಾರ್ಥಿನಿಯರುಗಳು ಮತ್ತು ಅಲ್ಲಿನ ನಾಗರಿಕರುಗಳೂ ತಮ್ಮಗಳ ಆನಂದ ಗಾನದಿಂದ ಸಭೆಯವರನ್ನು ಆನಂದಪಡಿಸಿದರು. ಅನಂತರ ತಾಲ್ಲೂಕಿನ ಅಧಿಕಾರಿಗಳು ಸಭೆಯವರಿಗೆಲ್ಲಾ ತಾಂಬೂಲ ಫಲ ಪುಷ್ಪಗಳನ್ನು ಕೊಟ್ಟರು. ಸ್ಕೂಲ್ ಬಾಲಕರಿಗೆ ಸಿಹಿ ಫಲಗಳನ್ನು ಹಂಚಿ ಮೇಲೆ ನಮ್ಮ ಎಲ್ಲಾ ನೀಲಕರೂ ಮಹಾರಾಜರವರಿಗೆ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯುಂಟಾಗಲೆಂದು ಸ್ತುತಿಸಿ ಜಯವನ್ನು ಪ್ರಾರ್ಥಿಸಿದರು. ಅನಂತರ ಬಹಳ ಸಂತೋಷದಿಂದ ಸಭೆಯು ವಿಸರ್ಜನವಾಯಿತು. ಆ ದಿವಸ ಸಾಯಂಕಾಲದಲ್ಲಿ ಈ ಊರಿನ ಮತ್ತು ಪ್ರಸರಗಳಲ್ಲಿರುವ ದೇವಾಲಯಗಳಲ್ಲಿ ಉತ್ಸವಾದಿಗಳು ಬಹಳ ವಿಜೃಂಭಣೆಯಿಂದ ನಡೆದವು. ಇಲ್ಲಿನ ಜನರ ಉತ್ಸವಾದಿಗಳಲ್ಲಾ ಬಹಳ ಆನಂದಕರವಾಗಿದ್ದುವು.

ಚಿಕ್ಕಬಳ್ಳಾಪುರ

ಶ್ರೀಮನ್ ಮಹಾರಾಜರವರ ಪಟ್ಟಾಭಿಷೇಕದ ಜ್ಞಾಪಕಾರ್ಥವಾಗಿ [illegible]

ಚನ್ನಪಟ್ಟಣ

[illegible]

ದೊಡ್ಡಬಳ್ಳಾಪುರ

[illegible]

ನಂದಿಗಿರಿ

[illegible]

[illegible] ಸಂತರ್ಪಣೆಯು ವಿಶೇಷ ರೀತಿಯಲ್ಲಿ ನಡೆಸಲ್ಪಟ್ಟಿತು. [illegible] ರ್ಥಿಗಳ ಆಟಪಾಟ ನಡೆಯಿತು ಗೆದ್ದವರು ಬಹುಮಾನ ತೊಂಡಿದರು ಸಾಯಂಕಾಲ ೬೧ ಗಂಟೆಗೆ ಸಂತೋಷದಿಂದ ಸಭೆ ಬರ್ಖಾಸ್ತು ಆಯಿತು. ಹೀಗೆ ಉಭಯ ದಿನಗಳಲ್ಲಿಯೂ ಸಮಸ್ತ ಪ್ರಜೆಗಳೂ ಹರ್ಷಭರಿತರಾಗಿದ್ದರು.

ತಾಲ್ಲೂಕು ವರ್ತಮಾನಗಳು.

ಚನ್ನಪಟ್ಟಣ.—ಮಂಗಳವಾರ ಪೇಟೆಯಲ್ಲಿ ಈಗ ತಿಂಗಳಲ್ಲಿ ಒಬ್ಬ ಕುರುಬರವನು ತೀರಿಹೋದನು. ಆ ಗ್ರಾಮದ [illegible] ನು ಅದೇ ತಿಂಗಳು ೮ ನೇ ತಾರೀಖಿನಲ್ಲಿ ಅವನು ಸತ್ತಹಾಗೆ ಜನನ ಮರಣದ ಪುಸ್ತಕದಲ್ಲಿ ದಾಖಲೆ ಮಾಡಿರುತ್ತಾನೆ. ಅದೇ ಕುರುಬನು ಮೊದಲಿನ ತಿಂಗಳು ೧೬ನೇ ತಾರೀಖಿನಲ್ಲಿ ಬಿಡದಿ ತೆರದುಕೊಂಡ ಹಾಗೆ ಈ ಊರು ಪುಸ್ತಕದಲ್ಲಿ ನಮೂದಿರುತ್ತೆ. ಯಾವುದು ನಿಶ್ಚಯವೋ ಗೊತ್ತಾಗಲೇಕು. ಇಲ್ಲಿ ಸ್ವಲ್ಪ ಮಳೆ ಹುಯ್ದು ಭೂಮಿ ತಣ್ಣಗಾಗಿದೆ. ಈ ತಾಲ್ಲೂಕಿನ ಗ್ರಾಮಗಳಲ್ಲಿ ಸ್ವಲ್ಪ ಪ್ಲೇಗ್ ಇದೆ. ಹೋದವರುಷ ಸ್ಥಳದ ಮುನಿಸಿಪಾಲಿಟಿಯವರ ಜಾಗರೂಕತೆಯಿಂದಲೇ ಇಲ್ಲಿಗೆ ಪ್ಲೇಗ್ ಬಂತು! ಪುನಃ ಹಾಗೇ ಆದೀತೇ! ಪ್ಲೇಗ್ ಕೆಲವು ಹಳ್ಳಿಗಳಲ್ಲಿ ಪ್ರಾರಂಭವಾಗಿದೆ. ಭೈರಾಪಟ್ಟಣದಲ್ಲಿ ೩–೪ ಜನ ಸತ್ತರು ಚನ್ನನಕೆರೆಯಲ್ಲಿ ಕೆಲವರು ಸತ್ತರು ನೀಲಸಂದ್ರದಲ್ಲಿ ಕೆಲವರು ಸತ್ತರು. ಜನರು ಊರು ಬಿಡುತ್ತಾ ಇದ್ದಾರೆ. ಇಲ್ಲಿ ಮಳೆ ಇಲ್ಲ. ಬಿತ್ತಿದ ಹೊಲಗಳು ಒಣಗುತ್ತಾ ಇವೆ. ಇಲ್ಲಿನ ನೀರಿಗೆ ಆಧಾರವಾಗಿದ್ದ ಕುನ್ನೂರು ಕಟ್ಟೆಯಲ್ಲಿ ನೀರು ಇಲ್ಲ ಜನರಿಗೆ ಬಹು ಕಷ್ಟ ಒಂತು. ಸರ್ಕಾರದವರು ಯಾವ ರೀತಿ ನೀರು ಒದಗಿಸಿಕೊಡುತ್ತಾರೋ ತಿಳಿಯದು. ನೀರು ಇಲ್ಲದ ಈ ಸಮಯದಲ್ಲಿ ಸರ್ಕಾರದವರು ಕಾರಂಜಿ ಕೊಳಾಯಿಗಳನ್ನು ಕಟ್ಟಿಸಿದ್ದರೆ ಒಳ್ಳೇದು, ರತ್ನಗರ ಬಚ್ಚು ಹೆಂಗಸು ಏನೋ ಕಾರಣದಿಂದ ನೇಣು ಹಾಕಿಕೊಂಡಳೆಂದು ಜನರು ಹೇಳುತ್ತಾರೆ.

ಚಿತ್ರದುರ್ಗ.—ಈ ಕಡೆಗೂ ಮಳೆ ಇಲ್ಲ ಬೇಸಿಗೆಯಂತೆ ಬಿಸಿಲು ಕಾಯುತ್ತಿರುವುದು. ನೀರಿನ ತೊಂದರೆಯನ್ನು ಎಷ್ಟು ಹೇಳಿದರೂ ಕಡಿಮೆ. ಊರೊಳಗೆ ಮೂರು ನಾಲ್ಕು ಹಳ್ಳಿಗಳಿಗೆ ಮಾತ್ರ ಅರ್ಧ ಗಂಟೆ ಮುಕ್ಕಾಲು ಗಂಟೆ ಹೊತ್ತು ನೀರು ಬಿಡುವರು. ಈ ಕಾಲದಲ್ಲಿ ನಲ್ಲಿಯ ಮುಂದೆ ನಡೆಯುವ ಪೈಪೋಟಿ ಜಗಳ ಮೊದಲಾದವುಗಳನ್ನ ಹೇಳಲಸಾಧ್ಯ. ಬಲಾಢ್ಯರಾದವರು ನುಗ್ಗಿ ತಮಗೆ ಸಾಕಾದಷ್ಟು ನೀರನ್ನು ಹಿಡಿದುಕೊಳ್ಳುವರು; ಬಡವರನ್ನು ಕೇಳುವವರೇ ಇಲ್ಲ [illegible] ಏನಾದರೋ ಇಲ್ಲವೋ ಎನ್ನುವಷ್ಟರಲ್ಲಿ ಫಿಟ್ಟರ್ ನಲ್ಲಿಯನ್ನು ಬಂದುಮಾಡಿ ಹೊರಡುವರು. ಫಿಟ್ಟರ್ ಬರುವುದಕ್ಕೆ ಮೊದಲೇ ನಲ್ಲಿ ಬಳಿ ಕೊಡಗಳನ್ನಿಟ್ಟುಕೊಂಡು ಕಾದಿದ್ದಾಗ್ಯೂ ನೀರು ಸಿಕ್ಕದೆ ಬರಿ ಕೊಡಗಳನ್ನು ವಾಪಸ್ ತೆಗೆದುಕೊಂಡು ಹೋಗುವವರ ಗೋಳನ್ನು ಏನೆಂದು ಹೇಳಲಿ! ಅಂಥವರನ್ನು ನೋಡಿ ಯಾವೂ ಮರುಗದೆ ಇರಲಾರರು. ಭಗವಂತನೇ ಇಲ್ಲಿನ ಜನರ ಕಷ್ಟವನ್ನು ನೀಗಿಸಬೇಕಲ್ಲದೆ ಮತ್ಯಾರಿಂದಲೂ ಸಾಧ್ಯವಲ್ಲವು. ಸದ್ಯಕ್ಕೆ ಸಂತೇಪೇಟೆ ಚಿಕ್ಕವೀರಪ್ಪನವರು ಹೊಸದಾಗಿ ತೋಡಿಸುವ ಭಾವಿಯಿಂದ ಈ ಊರಿನವರಿಗೆ ಬಹಳ ಪ್ರಯೋಜನವಾಯಿತೆಂದು ಹೇಳಬೇಕಾಗಿದೆ. ಆ ಭಾವಿಯಲ್ಲೂ ಎರಡು ಮೂರು ಸರ್ತಿ ನೀರು ಬತ್ತಿಹೋಯಿತು. ಬತ್ತಿದಹಾಗೆಲ್ಲಾ ಸದರಿ ವೀರಪ್ಪನವರು ಭಾವಿಯನ್ನು ಆಳವಾಗಿ ತೋಡಿಸುತ್ತಾ ಬಂದಿರುವುದರಿಂದ ಹೋದವರಿಗೆಲ್ಲಾ ಅನುಕೂಲವಾಗಿ ನೀರು ಸಿಕ್ಕುತ್ತಾ ಬಂದಿರುವುದು. [illegible]

[illegible]

ಇಂಡಿಯಾ ದೇಶದ ವೃತ್ತಾಂತಗಳು.

[illegible]

ವಿದೇಶ ವರ್ತಮಾನಗಳು.

[illegible]

ಬರ್ಮ ದೇಶವೂ—ಬರ್ಮಿಯರೂ.

ಈ ಹೊಸ ಪುಸ್ತಕದಲ್ಲಿ ಬರ್ಮ ದೇಶವನ್ನೂ ಅಲ್ಲಿನ ಜನರ ಪ್ರವೃತ್ತಿಗಳನ್ನೂ ಬಹು ಸುಲಭವಾಗಿ ವರ್ಣಿಸಿದೆ. ಪುಸ್ತಕದ ತುಂಬಾ ಚಿತ್ರಗಳಿರುವವು. ಒಳ್ಳೇ ಕಾಗದ, ನೇತ್ರಾನಂದಕರವಾಗಿ ಅಚ್ಚು ಹಾಕಿದೆ.

ಕ್ರಯ ೩॥ ಆಣೆ, ಹಾಸಲು ಬೇರೆ.

ವಿಳಾಸ:—ಮಿಷನ್ ಬುಕ್ ಡಿಪೋ, ಮೈಸೂರು;

ಅಥವಾ

ಮಿಷನ್ ಬುಕ್ ಡಿಪೋ, ಬೆಂಗಳೂರು.

ಪುಸ್ತಕವ್ಯಾಪಾರ.

ಕೇಶಿರಾಜ ಕವಿಯ ಶಬ್ದಮಣಿದರ್ಪಣ	೧—೮—೦
ನಾಗವರ್ಮನಛಂದಸ್ಸು	೧—೦—೦
ಇಂಗ್ಲಿಷ್—ಕನ್ನಡ ಸಂಭಾಷಣಾವಾಕ್ಯಗಳು	೦—೧೦—೦
ಮುದ್ರಾಮಂಜೂಷ	೧—೮—೦
ವಿರಾಟಪರ್ವ	೦—೩—೦
ಶಾಕುಂತಳನಾಟಕ	೦—೧೨—೦
ದಮಯಂತಿ ಸ್ವಯಂವರ	೦—೧೨—೦
ಪಂಚತಂತ್ರ	೦—೮—೦
ಪಾಕಶಾಸ್ತ್ರ	೧—೦—೦
ಕಥಾಸಂಗ್ರಹ ೧—೩ ಭಾಗಗಳು	೧—೦—೦
ಕಥಾಸಂಗ್ರಹ ೪—೬ ಭಾಗಗಳು	೧—೦—೦
ಪತ್ರ ರತ್ನಾಕರ } ಅರ್ಜಿ ಬರಿಯುವ ಕ್ರಮ	೦—೮—೦
ಲೇಖ್ಯತತ್ವ ಪ್ರಕಾಶಿಕೆ } ವನ್ನು ತೋರಿಸುವವು	೦—೧೨—೦
ಗೀತಮಂದಾರ	೦—೩—೦
ನಾಟಕಕಥಾವಲ್ಲರಿ	೦—೮—೦
ಪಡೆಯ ಸೂತ್ರಗಳು	೦—೨—೦
ಕೊಲಂಬಸನ ಚರಿತ್ರೆ	೦—೧—೦

ಮೇಲ್ಕಂಡ ಪುಸ್ತಕಗಳನ್ನು ವಿ. ಪಿ. ಪಿ. ಮೂಲಕವಾಗಲಿ ಅಥವಾ ಹಣವನ್ನು ಮುಂಗಡವಾಗಿ ಕೊಡೋಣದ್ದರಿಂದಾಗಲಿ ಪಡೆಯಬಹುದು.

ವಿಳಾಸ:—ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು

ಹೋಮೋಸಿಯಾ.

ಪ್ರಥಮ ಉಪಚಾರ. ಹಾಗಲುತ್ತಲೇ ನೋವು ವಾಸಿ ಯಾಗುತ್ತೆ.

ಈ ಔಷಧಿಯು ಸುಟ್ಟ, ಬರಮನೆ, ಕಾಣಾಗಳ, ಅಸ್ವಸ್ಥ ನ್ಯೂರಲ್ಜಿಯಾ ... ವಿದ್ಯುತ್ತು, ಕೊರ್ಟುರ್, ಕಥೇರಿ, ಮುಂತಾದ ಸ್ಥಳಗಳಲ್ಲಿ ... ಇದಕ್ಕೆ ಸಮಾನವಾದ ಔಷಧಿ ... ಬಹಳ ಪ್ರಸಿದ್ಧವಾಗಿದೆ.

ಈ ತೈಲವು ... ಬೇಸಗಾತಿಗಳಿಗೆ ಸ್ವಹಸ್ತಾಗಿ ಸಿಕ್ಕಿದ ಔಷಧಿ ... ಇದನ್ನು ಉಪಯೋಗಿಸಿದ ದೊಡ್ಡಮನುಷ್ಯರು, ... ಅದರ ಗುಣವನ್ನು ಹೊಗಳಿ ... ಕೊಟ್ಟಿದ್ದಾರೆ. ನೋವು, ಕಂಡಕಡೆ ಇದನ್ನು ... ಹಚ್ಚಿದ ಕೂಡಲೇ ವಾಸಿಯಾಗುವದು.

ಈ ತೈಲವು ಅರೆ ತಲೆನೋವು, ಸೊಂಟನೋವು, ... ಗಾಯಗಳು, ... ಕೀಲು ... ಗುಳ್ಳೆಗಳು, ಹಲ್ಲುನೋವು, ... ಗಂಟುಗಳು, ... ಗಳು, ... ಕಡಿದದ್ದು ಬಿಟ್ಟುಬಿಡುವದು. ಬೆಂಕಿಯಲ್ಲಿ ಸುಟ್ಟು ... ಕತ್ತಿ ಗಾಯ—ಇವೇ ಮೊದಲಾದ ನಾನಾ ... ಹುಟ್ಟಿದ ... ಹಚ್ಚಿಕೊಂಡು ... ಕೊಡಲೇ ವಾಸಿಯಾಗುವದು.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ. ೨-೮ ಆ.; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪಾಲು ಖರ್ಚು ಮಾಫಿ ಮಾಡಲಾಗುತ್ತೆ.

ಹೋಮೋಸಿಯಾ ಯುಂಬ್ರೊಕೇಷನ್.

ಈ ತೈಲವು ಹಳೇ ನೋವುಗಳಿಗೆ ಉಪಯೋಗಿಸತಕ್ಕದ್ದು ... ಇದನ್ನು ಹಚ್ಚಬೇಕು. ಇದರಲ್ಲಿ ... ಗುಣಗಳು ... ತೀಕ್ಷ್ಣವಾಗಿ ಇರುತ್ತವೆ. ಅದ ... ಇದರಲ್ಲಿ ... ಗುಣಗಳುಳ್ಳ ಹೊಸಭಾಗವಿರುತ್ತೆ. ಇದನ್ನು ... ಬಹು ಬೇಗನೆ ಸೇದಿಕೊಳ್ಳುವುದು. ಡಬ್ಬಾಗಳಲ್ಲಿ ತುಂಬಿದ ಆಣೆಗೂ, ೧ ರೂ. ಗೂ ಒಂದರಂತೆ ಬೆಲೆಗೆ ಮಾರಲ್ಪಡುವದು. ೧೨ ಡಬ್ಬಿ ತರಿಸಿಕೊಂಡರೆ ಟಪಾಲ್ ಖರ್ಚು ಮಾಫಿ. ಎಲ್ಲಾ ಊರುಗಳಲ್ಲಿಯೂ ದೊರೆಯುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಳ್ಳ ನೋಟೀಸ್‌ಗಳನ್ನು ಅಪೇಕ್ಷಿಸಿದವರಿಗೆ ಕಳುಹಿಸುವೆವು.

ವಿಳಾಸ:—ಹೋಮೋಸಿಯಾ ಕಂಪೆನಿ, ೩೩ ಸೆಕೆಂಡ್ ಲೈನ್ ಬೀಚ್, ಮದ್ರಾಸ್.

ಸೂರ್ಯೋದಯ ಪ್ರಕಾಶಿಕಾ.

4

ಇಂದಾ ಈಗ ಬಹಳ ಅನುಕೂಲವಾಗಿದೆ. ವರ್ಷ ೧ಕ್ಕೆ ಒಂದೇ ರೂಪಾಯಿ ... ಟಪಾಲ್ ಹಾಸಲ್ ೧೩ ಆಣೆ ಮಾತ್ರ ಕೊಡಬೇಕು. ಇಂದಿನವರೆಗೆ ಒಂದು ಪುಸ್ತಕವು ಬೇರೆ ಬಹುಮಾನವಾಗಿ ಕೊಡಲ್ಪಡುವದು.

ವಿಳಾಸ.— ಬಿ. ನರಸಿಂಗರಾವ್, ಎಡಿಟರ್, ಬೆಂಗಳೂರು.

ಹೊಸಪುಸ್ತಕವು! ಹೊಸಪುಸ್ತಕವು!! ಹೊಸಪುಸ್ತಕವು!!!

ಬೋಅರ ಮಹಾಯುದ್ಧ.

ಡಾಕ್ಟರ್ ಕೋನನ್‌ಡಾಯಲ್ ವಿದ್ಯಾ ನಿಪುಣನು ಇಂಗ್ಲಿಷಿನಲ್ಲಿ ಬರೆದಿರುವ ಪುಸ್ತಕದ ಆಧಾರದ ಮೇಲೆ ರಚಿಸಲ್ಪಟ್ಟಿದೆ. ಇದನ್ನು ಓದಿದರೆ ಬೋಅರ ಯುದ್ಧದ ಕಾರಣಗಳು, ಯುದ್ಧ ನಡೆದ ರೀತಿ, ಫಲಿತಾಂಶಗಳು ಇವೇ ಮುಂತಾದ ಅನೇಕ ಸಂಗತಿಗಳೆಲ್ಲಾ ವಿಶದವಾಗಿ ತಿಳಿದು ಬರುವವು.

ಇದರಲ್ಲಿ ಅಡಗಿರುವ ಅಧ್ಯಾಯಗಳನ್ನು ಸ್ವಲ್ಪ ನೋಡಿ:—(೧) ಬೋಅರರು. (೨) ಯುದ್ಧಕ್ಕೆ ಕಾರಣ. (೩) ಬ್ರಿಟಿಷರಿಗೂ ಬೋಅರರಿಗೂ ನಡೆದ ಸಂಘಗಳು. (೪) ಸಮಾಧಾನದ ವಿಷಯವಾಗಿ ನಡೆದ ಸಂಧಾನಗಳು. (೫) ಬ್ರಿಟಿಷರಮೇಲೆ ಆರೋಪಿಸಲ್ಪಡುವ ಕೆಲವು ದೋಷಗಳು. (೬) ಬೋಅರ ಸಿಪಾಯಿಗಳ ಮೇಲೆ ಯಾವ ತಪ್ಪೂ ಹೊರುವದಿಲ್ಲವೋ?

ಇದರ ಕ್ರಯ ಎರಡು ಆಣೆ ಮಾತ್ರ.

ಪುಸ್ತಕದ ನಾಜೋಕಾದ ಪ್ರಿಂಟಿಗೂ, ಬೈಂಡಿಗೂ ವಿಶೇಷವಾಗಿ ಅದರಲ್ಲಿ ಅಡಗಿರುವ ಸಂಗತಿಗಳಿಗೂ ನಾಲ್ಕಾಣೆ ಕೊಟ್ಟರೂ ಸಾಲದು. ಜಾಗ್ರತೆ ನೋಡಿ!! ಪುಸ್ತಕವು ಮುಗಿದು ಹೋದೀತು!!! ವಿ. ಪಿ. ಪಿ. ಕಳಿಸಿದರೆ ಪುಸ್ತಕದ ಕ್ರಯ ಪೋಸ್ಟೇಜು ಸಹಿತ ನಾಲ್ಕಾಣೆ ಆದೀತು.

ಪುಸ್ತಕ ವ್ಯಾಪಾರಸ್ಥರು ಜಟ್ಟಾಗಿ ಪ್ರತಿಗಳನ್ನು ತರಿಸಿಕೊಂಡರೆ ವಿಶೇಷವಾದ ಡಿಸ್ಕೌಂಟು ದೊರೆಯುವದು.

ಮ್ಯಾನೇಜರ್, ಮಿಷನ್ ಬುಕ್ ಡಿಪೋ ಮೈಸೂರು.	ಅಥವಾ	ಮ್ಯಾನೇಜರ್, ಮಿಷನ್ ಬುಕ್‌ಡಿಪೋ ಬೆಂಗಳೂರು.

ಜ್ವರಹರಿ.

3



ಇದು—ಸಾಧಾರಣ ಜ್ವರ ಚಳೀಜ್ವರ, ಮೊರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ... ಎಂಬ ಸಕಲ ವಿಧವಾದ ಜ್ವರಗಳನ್ನೂ ಬಹು ಬೇಗನೆ ವಾಸಿಮಾಡುವದು. ಜ್ವರಹರಿಯನ್ನು ಸೇವಿಸುತ್ತಾ ... ಶಾರೀರಪುಷ್ಟಿಯನ್ನೂ ಕೊಡುವದು. ಪ್ರಯಾಣ ಮಾಡತಕ್ಕವರು ಈ ಔಷಧವನ್ನು ಅವಶ್ಯವಾಗಿ ಜತ್ತರ ಇಟ್ಟುಕೊಂಡಿರಬೇಕು. ಇದು ದೇಹವನ್ನು ಬಹಳ ಒಳ್ಳೇ ಕ್ರಮವಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬಲ್ಲದು. ಇದನ್ನು ಉಪಯೋಗಿಸಿದವರ ಕಾಗದಗಳನ್ನು ಅಪೇಕ್ಷಿಸಿದವರಿಗೆ ಕಳುಹಿಸುತ್ತೇವೆ. ಸಣ್ಣ ಮತ್ತು ದೊಡ್ಡ ಸೀಸೆಗಳಲ್ಲಿ ಮಾರಿ ಬಿಡಲಾಗುವದು.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧॥ ರೂ., ... ರೂ., ೧೧ ರೂ. ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಬಿಡಲಾಗುವದು.

ಓಮುಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ಕಳೆಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ಮಹೌಷಧವಾಗಿ ಪರಿಣಮಿಸಿ, ಕೂಡಲೇ ಗುಣಕೊಡುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡೆ ಗುಣಪಡಿಸುತ್ತದೆ. ಕ್ರಯದ ದರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಅಪರ ಅಸಿಸ್ಟೆಂಟ್ ಸರ್ಜನ್ ಗಣಪತಿಯವರು—ಹನ್ನೆರಡು ಓಮುಂ ಕರ್ಪೂರವನ್ನು ನಾನೂ ನನ್ನ ಪಾಲೇದಾರರೂ ಮ್ಯಾಕ್ಸಿ ... ಆಸ್ಪತ್ರೆಯಲ್ಲಿ ಅನೇಕ ಮನುಷ್ಯರಿಗೆ ... ಕಾಲರಾ, ಅತಿಸಾರಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ. ಕೊಟ್ಟಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧಿ ಎಂತ ಬರೆದಿದ್ದಾರೆ.

ಈ ನಾಲ್ಕು ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ದೊಡ್ಡ ಊರುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇಲ್ಲದಿದ್ದ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ:—ಹೆನ್ರಿ ... ಹೋಮಿಯೋಪತಿ ಔಷಧಗಳ ಕಂಪೆನಿ ಸೆಕೆಂಡ್ ಲೈನ್ ಬೀಚ್, ಮದ್ರಾಸ್.

ವಿವಿಧ ಪುಸ್ತಕಗಳು.

ಶ್ರೀ ಮಿಸಗರ್ವಣನೆ	೦—೧
ದೇವರೆಂಬ ನನ್ನ ಮನೆ	೦—೧
ಪ್ರಬೋಧ ಚಂದ್ರಿಕೆ. (ಪೂರ್ವದ ಪೈಸಿರಾಯಿಗಳೊಬ್ಬರು ಬರೆದ ಪುಸ್ತಕದ ಭಾಷಾಂತರ)	೦—೨
ವೇದಗಳ ಕಾಲದಲ್ಲಿ ಹಿಂದೂ ದೇಶವಿದ್ದ ಸ್ಥಿತಿ	೦—೧
ಹಿಮವತ್ಪ್ರದೇಶಗಳು (ಗ್ರೀನ್‌ಲ್ಯಾಂಡ್ ದೇಶದ ವರ್ಣನೆ)	೦—೨
ದಕ್ಷಿಣ ಆಫ್ರಿಕವೂ ಅದರ ನಿವಾಸಿಗಳೂ	೦—೩
ಚೀನಾ ದೇಶವೂ ಅದರ ಜನರೂ	೦—೨

ಪುಸ್ತಕಗಳು ದೊರೆಯುವ ಸ್ಥಳಗಳು:—

ಮೈಸೂರು:—ಮಿಷನ್ ಬುಕ್ ಡಿಪೋ.

ಬೆಂಗಳೂರು:—ಟ್ರಾಕ್ಟ್ ಬುಕ್ ಡಿಪೋ.

ಮಂಗಳೂರು:—ಬಾಸೆಲ್ ಮಿಷನ್ ಬುಕ್ ಡಿಪೋ.

ಶಾಲೀವಾಹನ ಶಕ ೧೮೨೪ ನೇ ಶುಭಕೃತುನಾಮ ಸಂವತ್ಸರ ಶ್ರಾವಣ ಶುದ್ಧ ಏಕಾದಶಿ ಗುರುವಾರದಿಂದ ಶ್ರಾವಣ ಬಹುಳ ... ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೨ ನೇ ಇಸವಿ ಆಗಸ್ಟ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ	[illegible]
21	ಗುರು	ಬಿದಿಗೆ	12-38	ಪೂಭಾ	31-44	[illegible]
22	ಶುಕ್ರ	ತದಿಗೆ	11-10	ಉಭಾ	31 31	[illegible]
23	ಶನಿವಾರ*	ಚೌತಿ	8-18	ರೇ	33 23	[illegible]
24	ರವಿವಾರ	ಪಂಚಮಿ	4-30	ಅ	31 8	[illegible]
25	ಚಂದ್ರ§	ಸಪ್ತಮಿ	0-12	ಭರಣಿ	55-1	[illegible]
26	ಮಂಗಳ†	ಅಷ್ಟಮಿ	49-9	ಕೃ	50-20	[illegible]
27	ಬುಧ¶	ನವಮಿ	43-0	ರೋ	20 28	[illegible]

* ಶ್ರಾವಣ ಶನಿವಾರ. § ಪ್ರಸನ್ನ ಕೃಷ್ಣಸ್ವಾಮಿರಥ.
† ಶ್ರೀಕೃಷ್ಣ ಜನ್ಮಾಷ್ಟಮಿ.
¶ ಶ್ರೀಕೃಷ್ಣಜಯಂತಿ.

ಪೇಟೆ ಧಾರಣೆ.

ಜಿನಸು.		ಮೈಸೂರು	ಬೆಂಗಳೂರು
ಸಣ್ಣ ಅಕ್ಕಿ ಪಲ್ಲಕ್ಕೆ	ರೂ.	೧೧-೦-೦	೧೧-೪
ಕೆಂಬೂತಿ ಅಕ್ಕಿ ಅಷ್ಟೆ		೧೦-೧-೦-೦	೧೦-೪
ಬಿಳೀ ದಾಯಂ		೧೦-೪-೦	೧೧-
ಜಾವಾಳಿ ಅಕ್ಕಿ		೧೦ ೪ ೦	೧೩-೧
ಸಣ್ಣ ಅವರೆ		೧೩-೦ ೦	೧೩-೧
ಬಿಳೀ ದಾಯಂ		೧೨ ೪-೦	೧೦-೧
ತೊಗರೀ ಬೇಳೆ ಪಲ್ಲಕ್ಕೆ		೧೦-೪ ೦	[illegible]
ಬಿಳೀ ದಾಯಂ		೧೧ ೮ ೦	೧೦-
ಕೈಗ ರಾಗಿ ಪಲ್ಲಕ್ಕೆ		೪-೪-೦	೬-೧
ಕಡಲೆ		೪-೦-೦	೪-೩
ಜೋಳ		೪-೨-೦	೩-
... ಪಲ್ಲಕ್ಕೆ		೫-೦-೦	೩-೧
ಬಿಳೀ ಅವರೆ		೫ ೧೨ ೦	೩-
ಹೆಸರು		೩-೦-೦	೪-
ಉದ್ದು		೪-೪-೦	೯-೪
ಕಡಲೆ		೯-೪-೩	೯-೪
ಎಳ್ಳು		೧೩-೪-೦	೧೧-೧
ಹುರುಳಿ		೪-೪-೦	೫-
ಹರಳು ... ನೇಗಿಲ		೩-೪-೦	೩-೦
... ಮೂಟೆ ೧ಕ್ಕೆ		೯-೨-೦	೧-
...		೨-೩-೦	೧-೧
ದಾಯಂ ಕರಡ		೨-೨-೦	೨-
ಬೆಲ್ಲ ಬಿಳುಪು ಅಚ್ಚು		೪-೪-೦	೫ ೧-
ಒಳ್ಳೆ ... ಮೂಟೆ ೧ಕ್ಕೆ		೬-೪-೦	೪-
ಸಕ್ಕರೆ		೬-೩-೦	೬-
ಕೊಬ್ಬರಿ ... ೧ಕ್ಕೆ		೬-೪-೦	೨-೧
...		೯-೪-೦	೯-
ಮುಣಸೇ ಹಣ್ಣು		೦-೧೨-೦	೦ ೧
... ಹುಣಸೆಹಣ್ಣು		೦-೪-೦	೦-೧
ಉಪ್ಪು		೧೨-೪-೦	೧೧-೧
... ೧ಕ್ಕೆ		೪-೪-೦	೬-
ತೆಂಗಿನಕಾಯಿ ೧೦೦ ಕ್ಕೆ		೪-೪-೦	೬-
... ಕಾಯಿ ... ೧ಕ್ಕೆ		೧-೪-೦	೩-
... ಕಾಯಿ ... ೧ಕ್ಕೆ		೦-೧೨-೦	..
... (...) ...		೧೫-೬-೦	೧೫-
,, ,, ...		೧೫-೪-೦	೧೫-
,, ,, ... ೧ಕ್ಕೆ		೨-೦-೦	೨-
... ೧೦೦ ಕ್ಕೆ		೨-೦-೦	೨೫-

Printed and Published by the Rev. E. W. Thompson, the Proprietor and Manager, Wesleyan Mission Press, Mysore 21/8/1902.

ವೃತ್ತಾಂತ ಪತ್ರಿಕೆ.

REGISTERED

ಕ್ರಯ ೧ ಪ ಡ್ಡು ಕ್ರಯ ೧ ಪ ಡ್ಡು

—:0:—

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೩. ಮೈಸೂರು—ಸನ್ ೧೯೦೨ ನೇ ಇಸವಿ ಅಗೀಷ್ಟು ತಾರೀಖು ೨೮ ನೇ ಗುರುವಾರ. ಸಂಚಿಕೆ ೧೭

ಹೊಸ ಪ್ರಸ್ತಕಗಳು ಈಗ ತಾನೆ ಪ್ರಕಟವಾಗಿದೆ!!

ಬರ್ಮ ದೇಶವೂ—ಬರ್ಮ್ಯುರೂ.

ಈ ಹೊಸ ಪುಸ್ತಕದಲ್ಲಿ ಬರ್ಮ ದೇಶವನ್ನೂ ಅಲ್ಲಿನ ಜನರ ಪ್ರೋತ್ಸ್ಯಗಳನ್ನೂ ಬಹು ಸುಲಭವಾಗಿ ವಿವರಿಸಿದೆ. ಪುಸ್ತಕದ ತುಂಬಾ ಚಿತ್ರಗಳುಂಟು. ಒಳ್ಳೇ ಕಾಗದ, ನೇತ್ರಾನಂದಕರವಾಗಿ ಅಚ್ಚು ಹಾಕಿದೆ.

ಬರ್ಮಾ ದೇಶದ ನಾಟ್ಯಗಾತಿಯರು.

೪೦ ಚಿತ್ರಗಳು, ಬಹಳ ಬೆಲೆ.

ಕ್ರಯ ೫ ಪೈ ಮಾತ್ರ.

೧. ಹಿಂದೂ ನಾದ ಸೀರಿನ ಬೆಳೆ—ಸೀರಿನ ಉಪಯೋಗ, ಅದನ್ನು ಕುಡಿ ಮಾಡಿಕೊಳ್ಳುವ ವ್ಯಾಗ ಮುಂತಾದ ವಿಷಯಗಳನ್ನು ಒರೆದಿದೆ.

೨. ... ಮುಂತಾದ ಅವತಾರಗಳಿಗೆ ... ವಿವರವಾಗಿ ತಿಳಿಸಲ್ಪಟ್ಟಿದೆ.

೩. ವೇದಗಳನ್ನು ಬರೆದವರು ಯಾರು? ಹಿಂದೂ ವೇದಶಾಸ್ತ್ರಗಳ ಉದ್ಧರಿಸಿದ ಸಂಸ್ಕೃತ ... ಅರ್ಥಸಮೇತ ಮುದ್ರಿಸಿದೆ.

೪. ಹಿಂದೂ ದೇಶದ ಜನಸಂಖ್ಯೆ ಕಾರಣಗಳು.

೫. ... ವ್ಯಾಧಿಗಳು:—ಇವುಗಳಿಗೆ ಕಾರಣಗಳೇನು? ಇವನ್ನು ತಪ್ಪಿಸಿಕೊಳ್ಳುವದು ಹ್ಯಾಗೆ? ಈ ರೋಗಗಳು ತಗಲಿದರೆ ಯಾವ ಚಿಕಿತ್ಸೆ ಮಾಡಬೇಕು? ಇದೆಲ್ಲಾ ಹೇಳಿದೆ.

ಮೇಲ್ಕಂಡ ಪುಸ್ತಕಗಳು ದೊರೆಯುವ ಸ್ಥಳ:—

ಮಿಷನ್ ಬುಕ್ ಡಿಪೋ, ಮೈಸೂರು;

ಅಥವಾ

ಮಿಷನ್ ಬುಕ್ ಡಿಪೋ, ಬೆಂಗಳೂರು ಪೇಟೆ

ಪ್ರಸಿದ್ಧ ಪತ್ರಿಕೆ.

ವೀರಶೈವ ಮತಕೃತ್ಯಂಕೋಪಯುಕ್ತವಾದ ಗರ್ಭಾಧಾನ, ಪುಂಸವನ, ಸೀಮಂತ ಜಾತಕರ್ಮ, ನಾಮಕರಣ, ಅನ್ನಪ್ರಾಶನ, ಉಪನಿಷ್ಕ್ರಮಣ, ಚೌಲ, ಪುತ್ರಸ್ವೀಕಾರ, ನವಗ್ರಹಪೂಜಾ—ಇಷ್ಟು ವಿಧಗಳನ್ನು ಒಂದೇ ಪುಸ್ತಕದಲ್ಲಿ ಸೇರಿಸಿ ಪ್ರಿಂಟು ಮಾಡಿದೆ. ಈ ವಿಧಿಗಳಲ್ಲಿ ಯಾವ ವಿಧಿಯನ್ನು ಮಾಡಿಸಬೇಕಾದರೂ ಮಂತ್ರವಿಷಯದಲ್ಲಿ ಬೇರೆ ಪುಸ್ತಕವನ್ನು ನೋಡಬೇಕೆಂಬ ಚಿಂತೆ ತಂತ್ರವಿಷಯದಲ್ಲಿಯೂ ಬೇರೆ ಪುಸ್ತಕವನ್ನು ನೋಡಬೇಕೆಂಬ ಬಯಕೆಯೂ ಬಾರದಂತೆ ಮಾಡುವದಲ್ಲದೆ ಈ ಗರ್ಭಾಧಾನಾದಿ ವಿಧಿ ಪುಸ್ತಕ ೧ಕ್ಕೆ ಕ್ರಯ ೧೦ ಆಣೆ. ಟಪಾಲು ಚಾರ್ಜು ೧ ಆಣೆ. ಬೇಕಾದವರು ವಿ. ಪಿ. ಮೂಲಕ ಕೆಳಗಿನ ವಿಳಾಸದವರಿಗೆ ಬರೆದು ತರಿಸಿಕೊಳ್ಳಬಹುದು. ಪುರೋಹಿತರಿಗೆ ಮುಖ್ಯ ಪ್ರಯೋಜನಕಾರಿಯಾಗಿದೆ.

ವಿಳಾಸ.—ಬೆಂಗಳೂರು ದೊಡ್ಡ ಪೇಟೆ ಅಡಿಕೆ ಅಂಗಡಿ ಕೆಂಗೇರಿ

MELLIN'S FOOD.

ಮೆಲ್ಲಿನ್ ಯವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

21

೧. ಮೆಲ್ಲಿನರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನರು ಮಾಡಿರುವ ಆಹಾರವು ದೇಹದ ನರಗಳೂ ಮಿದುಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯವಾಗಿದೆ.

೪. ಮೆಲ್ಲಿನರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಿಕ ಮಾನಸಿಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಬದಲಾಗದೆ ... ಕೆಡುವದಿಲ್ಲ.

೭. ಮೆಲ್ಲಿನರು ಮಾಡಿರುವ ಆಹಾರವು ಎಷ್ಟು ಎಳೇ ಕೂಸಿಗಾದರೂ ಯಾವ ವೇಳೆಯಲ್ಲಾದರೂ ಕೊಡಲು ಯೋಗ್ಯವಾದದ್ದಾಗಿದೆ.

೮. ಮೆಲ್ಲಿನರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಹಸು ಹಾಲಿನೊಡನೆ ಸೇರಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೂಸಿನ ಬೆಳವಣಿಗೆಗೆ ಅನುಕೂಲವಾದದ್ದಾಗುತ್ತದೆ.

೯. ಮೆಲ್ಲಿನರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ಧಾನ್ಯವು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಕೂಸಿನ ದೇಹದ ಬಲಿಷ್ಠವಾಗುತ್ತದೆ.

೧೦. ಮೆಲ್ಲಿನರು ಮಾಡಿರುವ ಆಹಾರವು ಕೂಸುಗಳಿಗೆ ಹಿಡುವ ಬಾಕಿದ ಕಾಲದಲ್ಲಿಯೂ ಕ್ಷೀಣದಲ್ಲಿ ಬರುವ ವಿಕಾರದ ರೋಗಗಳು ಮುಂತಾದವನ್ನು ತಪ್ಪಿಸುತ್ತದೆ.

೧೧. ಮೆಲ್ಲಿನರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನರು ಮಾಡಿರುವ ಆಹಾರದಲ್ಲಿ ಗುರುಪದಾರ್ಥವಾದ ವಸ್ತು ಸೇರಿರುವದಿಲ್ಲ. ತಾಯಿ ಹಾಲಿನಲ್ಲಿರುವ ಪದಾರ್ಥವೊಂದೆ ಇದರಲ್ಲಿ ಕೂಡಿದೆ.

೧೩. ಮೆಲ್ಲಿನರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನ ಕೋಶಕ್ಕೆ ದಕ್ಕತಕ್ಕದ್ದಾಗಿದೆ.

೧೪. ಮೆಲ್ಲಿನರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ದೃಢಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಒಂದು ಮಟ್ಟಿಗೆ ಕಡಮೆ ಮಾಡುತ್ತದೆ.

೧೫. ಮೆಲ್ಲಿನರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಉಪಕಾರಿಯಾಗುತ್ತದೆ. ಹಾಲು ಕೊಡುವ ಗುಣವು ಇದರಲ್ಲಿ ಸಂಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜೆಂಟರುಗಳಲ್ಲಿ ಪಡೆಯಬಹುದು, ಬೆಂಗಳೂರು ಮೈಸೂರು ಮುಂತಾದ ಪಟ್ಟಣಗಳಲ್ಲಿರುವ ವ್ಯಾಪಾರಿಗಳಿಗೂ ಬರೆದು ತರಿಸಿಕೊಳ್ಳಬಹುದು :—

ಮಿಷನ್ :—ಮೆ|| ಕಾಮತು ದಿನಕಾರ ಬ್ರದರ್ಸ್.

ಬೊಂಬಾಯಿ :—ಮೆ|| ಲೇಡಿಂ ಆದೇಕಾರೆಂದಿ ಕಂಪೆನಿ.

ಕಲ್ಕತ್ತ :—ಮೆ|| ಮೆಕ್ಕನಜೆ ಲಯಲ್ ಕಂಪೆನಿ.

ಕಲ್ಕತ್ತ :—ಮೆ|| ಹಾರ್ ವಿಲ್ಸನ್ ಕಂಪೆನಿ.

ಕರಾಚಿ :—ಮೆ|| ಎಚ್. ಜೆ. ರುಸ್ತುಂಜಿ ಕಂಪೆನಿ.

ಮದ್ರಾಸು :—ಮೆ|| ಓಕ್ ಕಂಪೆನಿ.

ರಂಗೂನು :—ರೋಸಿ ಪ್ಯಾಕ್ ಕಂಪೆನಿ.

ಮಹಿಳಾಸಖೀ ಚಿತ್ರಪುಸ್ತಕ.

ಈ ಅಪೂರ್ವವಾದ ಪುಸ್ತಕವನ್ನು ಕಳೆದ ನಾಲ್ಕು ವಾರಗಳಲ್ಲೇ ಗ್ರಾಹಕರು ಖರೀದಿಮಾಡಿದ್ದರಿಂದ ಕೆಲವು ಮಾತ್ರ ಉಳಿದಿವೆ. ಇದನ್ನು ಕೊಂಡುಕೊಂಡ ಯೂರೋಪಿಯನ್ ಸರದಾರರೂ ನೇಟಿವ್ ದೊಡ್ಡ ಮನುಷ್ಯರೂ ಗ್ರಾಮಸ್ಥರೂ ಚಿತ್ರಗಳು ಸುಂದರವಾಗಿವೆ ಎಂದೂ ಕ್ರಯವು ಬಹು ಸುಲಭವೆಂದೂ ಹೇಳುತ್ತಿದ್ದಾರೆ.

ಇಂಥ ಸುಂದರವಾದ ಪುಸ್ತಕವನ್ನು ಪಡೆಯಬೇಕೆಂಬುವರು ಕೆಳಗಿನ ವಿಳಾಸಕ್ಕೆ ತಡವಿಲ್ಲದೆ ಬರೆಯಬೇಕು.

ಕ್ರಯ ಪ್ರತಿ ೧ಕ್ಕೆ	೦—೮—೦
ಟಪಾಲು	೦—೧—೦
ಮಹಿಳಾಸಖೀ ಚಂದಾದಾರರುಗಳಿಗೆ ಪ್ರತಿ ೧ಕ್ಕೆ	೦—೪—೦
ಟಪಾಲು	೦—೧—೦
ಮಹಿಳಾಸಖೀ ಚಂದಾ ವರುಷ ೧ಕ್ಕೆ	೦—೧೪—೦

ಮೇಲ್ಕಂಡ ಪುಸ್ತಕಗಳು ದೊರೆಯುವ ಸ್ಥಳ:—

ಮೈಸೂರು:—ಮಿಷನ್ ಬುಕ್ ಡಿಪೋ, ಮ್ಯಾನೇಜರ್. ಅಥವಾ

ಬೆಂಗಳೂರು:—ಮಿಷನ್ ಬುಕ್ ಡಿಪೋ, ಮ್ಯಾನೇಜರ್.

ಒಳ್ಳೇ ಔಷಧಗಳು.

41

ನಯನಪ್ರಾದಿಗೆ ಸುಖಾಂಜನವು.—ಹೊಸದಾಗಿ ಅಥವಾ ಬಹು ಕಾಲದಿಂದ ಕಣ್ಣಿನಲ್ಲಿ ಇರುತ್ತಿದ್ದ ಎಲ್ಲ ಪ್ರಕಾರವಾದ ಜಾಡ್ಯಗಳು ಇದರಿಂದ ಬಹು ಬೇಗನೆ ಗುಣವಾಗುವವು. ಕಣ್ಣಿನಲ್ಲಿ ಕಂಬನಿಯಿಳಿ, ಕಣ್ಣಿನ ರೆಪ್ಪೆ, ಪಿರದು ಬರುತ್ತಿರುವದು, ಉರಿ, ಬೆಳಕಿಗೆ ನೋಡಲಿಕ್ಕೆ ಆಗದೆ ಇರುವದು, ದೃಷ್ಟಿ ಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣಹೊಂದುತ್ತವೆ. ಕ್ರಯ ೧ ಡಬ್ಬಿಗೆ ೧ ರೂ. ಪೋಸ್ಟ ಖರ್ಚು ಅಣೆ.

ವಾಯುಸಂಹಾರಕತೈಲ.—(ಬಾಹ್ಯಲೇಪನಕ್ಕೆ ಮಾತ್ರ). ಇದನ್ನು ಲೇಪಿಸಿದ ಈ ನಿಮಿಷದೊಳಗೆ ಸಂಧಿವಾತ, ಕಟಿವಾತ, ಮತ್ತು ಇತರ ವಾಯುಗಳ ಬಾಧೆ, ತಲೆನೋವು, ಚಳಿ, ಹುಡಿಗಳ ಉಬ್ಬಸ, ಕೆಮ್ಮು ಇವು ಗುಣಹೊಂದುವವು. ಕುಪ್ಪಿಗೆ ೧ ರೂ. ಖರ್ಚು ಆಣೆ ೬.

ಅಮೃತರಸ ಆನೆ ಸಂಬರ.—ಇದರ ಲೇಪನದಿಂದಲೆ ವಿನೋದಿಯಾದ ತಿಳ್ಳದೆ ಹೊಸ ಮತ್ತು ಹಳೇ ಸರಕ್ಕೆ, ಪದ್ಮ ಜ್ವರಗಡ್ಡೆಗಳು ಕರಗಿಹೋಗಿ ಮೈಯಲ್ಲಿ ಶಕ್ತಿಯೂ, ಕಾಂತಿಯೂ, ಆರೋಗ್ಯವೂ ಪ್ರಾಪ್ತವಾಗುವದು. ಇದು ಕುಪ್ಪಿಗೆ ರೂ. ೨-೪ ಆಣೆ. ಖರ್ಚು ಆಣೆ ೬.

ಗಜಕರ್ಣಾದಿ ಮಲಾಮು.—೨ ಯಾ ೩ ಅವಿರ ಹಚ್ಚುವದರೊಳಗೆ ಎಂಥ ಕಠಿಣವಾದ ಗಜಕರ್ಣ ಯಾ ದದ್ದು ಇದ್ದರೂ ಗುಣಹೊಂದುವವು. ಡಬ್ಬಿಗೆ ೮ ಆಣೆ. ಖರ್ಚು ೧ ರಿಂದ ೬ ಡಬ್ಬಿಗಳಿಗೆ ಆ ೬. ವಿ. ಪಿ. ಯಿಂದಲೂ ಕಳುಹಿಸಲ್ಪಡುವವು. ... ಶುದ್ಧವಾದ ಔಷಧಗಳ ಬಗ್ಗೆ ನಮ್ಮ ... ವೈದ್ಯ ಮತ್ತು ಸಂಪಾ... ಅತ್ತರ ಕನ್ನಡಾ ಜಿಲ್ಲಾ.

ವೃತ್ತಾಂತ ಪತ್ರಿಕೆ.

೧೯೦೨ನೇ ಇಸವಿ ಆಗೀಷ್ಟು ತಾ|| ೨೮ನೇ ಗುರುವಾರ.

ಮೈಸೂರಿನ ಹೊಸ ರಾಜ್ಯಭಾರವು.

ಕಳೆದ ಎರಡು ವಾರಗಳಲ್ಲೂ ಶ್ರೀಮನ್ ಮಹಾರಾಜರವರ ಪಟ್ಟಾಭಿಷೇಕೋತ್ಸವದ ಸಮಾಚಾರಗಳೂ, ಚಕ್ರವರ್ತಿಯವರ ಕಿರೀಟಧಾರಣೆಯ ಉತ್ಸವದ ಸಮಾಚಾರಗಳೂ, ಪ್ರಕಟಿಸುವದರಲ್ಲೇ ನಮ್ಮ ಪತ್ರಿಕೆಯೆಲ್ಲಾ ತುಂಬಿಹೋಗುತ್ತಿತ್ತು. ಬಾತ್ಮೀದಾರರ ಕಾಗದಗಳನ್ನೂ ತಾಲ್ಲೂಕು ವರ್ತಮಾನಗಳನ್ನೂ ಪ್ರಕಟಿಸಲು ಅವಕಾಶವೇ ಇಲ್ಲದೆ ತಗೆದಿಡಬೇಕಾಯಿತು. ಈಗಲಾದರೋ ಈ ಗಲಾಟೆಯು ತಕ್ಕಮಟ್ಟಿಗೆ ಕಡಿಮೆಯಾಗಿದೆ. ಕಳೆದ ತಿಂಗಳಲ್ಲಿ ನಡೆದ ಕಾರ್ಯಗಳನ್ನೂ ಇನ್ನು ಮುಂದೆ ನಡೆಯತಕ್ಕ ಕಾರ್ಯಗಳನ್ನೂ ಕುರಿತು ಸಮಾಧಾನವಾಗಿ ಯೋಚಿಸಲು ವಿರಾಮ ದೊರೆತಿರುವದು. ಪಟ್ಟಾಭಿಷೇಕೋತ್ಸವಕ್ಕೆ ಮಾಡಿದ್ದ ಏರ್ಪಾಡುಗಳೆಲ್ಲಾ ಸ್ವಲ್ಪ ಹೆಚ್ಚು ಕಡಿಮೆ ತೃಪ್ತಿಕರವಾಗಿಯೇ ಇದ್ದವೆಂದು ಹೇಳಬಹುದಾಗಿದೆ.

ಇದೇ ಆಗೀಷ್ಟು ೮ನೇ ತಾರೀಖಿನ ದಿನ ನಡೆದ ಗಾಂಭೀರ್ಯಯುಕ್ತವಾದ ಆ ಮಹಾ ಪಟ್ಟಾಭಿಷೇಕೋತ್ಸವವು ಸಕಲ ಪ್ರಜೆಗಳಿಗೂ ಹೃದಯಂಗಮವಾದದ್ದಾಗಿತ್ತು. ಅದನ್ನು ಅಷ್ಟು ಚನ್ನಾಗಿ ನಡಿಸಿದ್ದರಲ್ಲಿ ದಿವಾನ್‌ರೂ, ಇತರ ಉದ್ಯೋಗಸ್ಥರೂ ತುಂಬಾ ಶ್ರಮಪಟ್ಟಿದ್ದಾರೆನ್ನುವದಕ್ಕೆ ಸಂಶಯವಿಲ್ಲ. ಇದಕ್ಕಾಗಿ ಅವರನ್ನು ಸಕಲರೂ ಕೊಂಡಾಡತಕ್ಕದ್ದಾಗಿದೆ.

ಈ ಸಂಸ್ಥಾನದ ಹೊಸ ಆಳಿಕೆಯ ಕ್ರಮಗಳನ್ನೂ ಶ್ರೀಮನ್ ಮಹಾರಾಜರವರು ಕೌನ್‌ಸಿಲ್ ಮೆಂಬರುಗಳಿಗೆ ತಿಳಿಸಿದ ಸ್ತೋತ್ರಾರ್ಹವಾದ ವಾಕ್ಯಗಳನ್ನೂ ಇನ್ನೊಂದು ಕಡೆ ಪ್ರಕಟಿಸಿರುತ್ತೇವೆ. ಈ ಸಂಸ್ಥಾನದಲ್ಲಿ ಹೊಸತರಹಾ ರಾಜ್ಯಭಾರ ಕ್ರಮಗಳು ಈಗಿನಿಂದ ಪ್ರಾರಂಭವಾಗಿವೆ ಎಂತಲೂ, ಕೌನ್‌ಸೆಲರುಗಳು ಪ್ರಜಾ ರಂಜನೆಯನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಪರಸ್ಪರ ಹೊಂದಿಕೆಯಿಂದ ರಾಜಕೀಯ ಕಾರ್ಯಗಳನ್ನು ನೆರವೇರಿಸುತ್ತಾ ಬರಬೇಕೆಂತಲೂ ಶ್ರೀಮನ್ ಮಹಾರಾಜರವರು ಮೆಂಬರುಗಳಿಗೆ ಅಪ್ಪಣೆ ಕೊಡಿಸಿರುತ್ತಾರೆ. ಈ ಸಂಸ್ಥಾನದಲ್ಲಿ ಕ್ರಮಪಡಿಸಬೇಕಾಗಿರುವ ಬಾಬುಗಳ ಪೈಕಿ ರೆವಿನ್ಯೂ ಬಾಬೇ ಪ್ರಧಾನವಾಗಿರುವದೆಂದು ಕಂಡುಬರುತ್ತೆ: ಈ ಉದ್ದೇಶದಿಂದಲೇ ಪ್ರತ್ಯೇಕವಾಗಿ ರೆವಿನ್ಯೂ ಕಮಿಷನ್‌ರನ್ನು ನೇಮಿಸಿರುತ್ತಾರೆ. ಇವರು ಬೊಂಬಾಯಿನ ರೆವಿನ್ಯೂ ಬಾಬನ್ನು ಚನ್ನಾಗಿ ಕಲಿತುಕೊಂಡು ಬಂದಿರುವರು. ಅದಕ್ಕೂ ಮೈಸೂರಿನ ರೆವಿನ್ಯೂ ಬಾಬಿಗೂ ಇರತಕ್ಕ ವ್ಯತ್ಯಾಸಗಳನ್ನು ಕಂಡು ಹಿಡಿದು ರೈತಪ್ಪಿಗೂ ಪ್ರಜಾ ಹಿತಗಳಿಗೂ ಅನುಕೂಲವಾಗಿರುವಂತೆ ಬದಲಾವಣೆಗಳನ್ನು ಮಾಡಿಯಾರೆಂದು ನಿರೀಕ್ಷಿಸಲ್ಪಟ್ಟಿದೆ.

ಅಂತು ಶ್ರೀಮನ್ ಮಹಾರಾಜಾ ಗೌವರ್ನ್‌ಮೆಂಟಿನವರು ಬಹು ಶ್ರೇಷ್ಠವಾದ ಉದ್ದೇಶಗಳನ್ನಿಟ್ಟುಕೊಂಡು ರಾಜ್ಯಭಾರವನ್ನು ಪ್ರಾರಂಭಿಸಿರುತ್ತಾರೆ. ಅವರು ಆ ಉದ್ದೇಶಗಳಂತೆಯೇ ಕಾರ್ಯಗಳನ್ನು ನಡಿಸುತ್ತಾ ಬಂದಾರೆಂತಲೂ, ಅದರಿಂದ ಈ ಸಂಸ್ಥಾನವು ಸಕಲ ವಿಷಯಗಳಲ್ಲೂ ಅಧಿಕಾಧಿಕವಾಗಿ ಅಭಿವೃದ್ಧಿ ಹೊಂದೀತೆಂತಲೂ ಬಹಳ ಕುತೂಹಲಯುಕ್ತರಾಗಿ ಹಾರೈಸುತ್ತೇವೆ.

ರೇಲ್ವೆ ಅನಾಹುತ.

ಈ ತಿಂಗಳ ೨೩ನೇ ತಾರೀಖಿನಲ್ಲಿ ಬೆಂಗಳೂರಿನಿಂದ ಗುಂಟಕಲ್ಲು ಮಾರ್ಗವಾಗಿ ರಾತ್ರಿ ೯ ಘಂಟೆಗೆ ಹೊರಟ ಮೈಲ್ ಗಾಡಿಯು ಪೆನುಕೊಂಡೆಗೂ ಗೊಲ್ಲಪಲ್ಲಿಗೂ ನಡುವೆ ಬೆಂಗಳೂರಿನಿಂದ ಸುಮಾರು ೧೦ ಮೈಲುಗಳ ದೂರದಲ್ಲಿ ವೇಗವಾಗಿ ಹೋಗುತ್ತಿತ್ತು. ಆ ಭಾಗದ ಇಳುಕಲಾದ್ದರಿಂದ ರೈಲು ಗಾಡಿಗಳಲ್ಲಿ ಕೆಲವು ಹಿಂದೂ ಗಾಡಿಗಳೂ ಬಿಚ್ಚಿಕೊಂಡು ಮುಂದೆ ಓಡುತ್ತಿದ್ದವು. ರೈಲಿನ ಗೇಟ್ ಕೀಪರು ಇದನ್ನು ನೋಡಿ ಅಪಾಯಸೂಚಕ ಧ್ವಜವನ್ನೆತ್ತಲು ಇಂಜಿನ್ ಡ್ರೈವರು ಗಾಡಿಯ ವೇಗವನ್ನು ಕಡಿಮೆ ಮಾಡಿದನು. ಆಗ ಹಿಂದಿನ ಗಾಡಿಗಳು ಅತ್ಯಂತ ವೇಗದಿಂದ ಬಂದು ಮುಂದಿನ ಗಾಡಿಗಳಿಗೆ ತಾಗಿ ಜಖ್ಖಮುಮಾಡಿದವು. ಆರು ಜನರು ಸತ್ತುಹೋದರು. ೧೭ ಜನರಿಗೆ ಬಹಳ ಗಾಯವಾಯಿತು. ಇನ್ನೂ ೫ ಮಂದಿ ಅಲ್ಪಸ್ವಲ್ಪ ಗಾಯವಾಗಿದೆ. ಗಾಡಿಗಳಲ್ಲಿ ಅನೇಕ ಮಂದಿ ಗೋಷಾ ಸ್ತ್ರೀಯರು ಇದ್ದರಂತೆ. ಇವರ ಸಾಮಾನುಗಳಾದ ಪಾಟಿ ಪೆಟ್ಟಿಗೆಗಳಿಗೆ ಬಹಳ ಗಾಯವಾಗಿದೆ. ಟ್ರೇನಿನಲ್ಲಿ ಕೆಲವು ಯೂರೋಪಿಯನರಿದ್ದರು. ಅವರಲ್ಲಿ ಯಾರಿಗೂ ಅಪಾಯವಾಗಲಿಲ್ಲ. ಅಸಿಸ್ಟೆಂಟ್ ಗಾರ್ಡ್‌ಗೆ ಗಾಯವಾಗಿದೆ. ಚೀಫ್ ಗಾರ್ಡ್ ದೈವವಶಾತ್ ತಪ್ಪಿಸಿಕೊಂಡರು. ಈ ಸುದ್ದಿಯು ಬೆಂಗಳೂರನ್ನು ಮುಟ್ಟಿದ ಒಂದು ಗಂಟೆಯೊಳಗಾಗಿ ಎಕ್ಸ್‌ರೇಗಳ ಆಸ್ಪತ್ರೆಯ ಕರ್ನಲ್ ಸ್ಮಿತ್ ಸಾಹೇಬರವರೂ, ಮೈಸೂರು ತೀನ್ ಬವರೂ ಕೆಲವು ಮಂದಿ ಸಹಾಯಕರನ್ನು ಕರಕೊಂಡು ಸಹಾಯಾರ್ಥವಾಗಿ ಹೋದರು. ಇವರಿಂದ ಮೇಲೆ ಇನ್ನೊಂದು ಟ್ರೇನಿನಲ್ಲಿ ಡಿಸ್ಟ್ರಿಕ್ಟ್ ಸೂಪ್ರೆಂಟು ಹಾಗೂ ಸಾಹೇಬರು ಮೊದಲಾದ ರೈಲ್ವೆ ಅಧಿಕಾರಿಗಳೂ ಹೋದರು. ಆ ಪ್ರಾಂತ್ಯದಲ್ಲಿ ಪ್ರಬಲವಾದ ಮಳೆಯಾಗಿದ್ದದರಿಂದ ಸಹಾಯಕಾರ್ಯವು ನಿಧಾನವಾಗುವದೆಂದು ಗೊತ್ತಾಗಿದೆ. ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ಲವರೂ ಅನಾಹುತ ನಡೆದ ಸ್ಥಳಕ್ಕೆ ಹೋಗಿರುತ್ತಾರೆ.

೨ನೇ ತರಗತಿಯ ಒಂದು ಗಾಡಿಯಲ್ಲಿ ಒಬ್ಬ ಆಳನು ತನ್ನ ಸಂಸಾರಸಹಿತ ಪ್ರಯಾಣ ಮಾಡುತ್ತಿದ್ದನು. ಈ ಗಾಡಿಗೆ ೩ನೆ ತರಗತಿಯ ಒಂದು ಗಾಡಿ ಬಂದು ಬಡಿದದ್ದರಿಂದ ಎರಡೂ ಪೂರಾ ನಾಶವಾಗಿ ಸಿಕ್ಕಿದವು. ಎರಡು ಕಂದುಗೆಗಳದ್ದ ಗಾಡಿಯೊಂದು ಒಡೆದು. ಕಂದುಗೆಗಳನ್ನು ಹೊರಕ್ಕೆ ತೆಗೆಯುವದು ತುಂಬಾ ಪ್ರಯಾಸವಾಯಿತು. ೨ನೆ ತರಗತಿಯ ಇನ್ನೊಂದು ಗಾಡಿಯಲ್ಲಿ ಇಬ್ಬರು ಯುರೋಪಿಯನರೂ, ಗೋವಿಂದನೆಂಬ ಅಮಲ್ದಾರ್ ವಿ. ಮಹೇಶ್ವರನವರೂ ಇದ್ದರು. ದೈವಕಾತ್ತು ಅವರೀರ್ವರಿಗೂ ಏನೂ ಆಗಲಿಲ್ಲ. ಈ ಮೂವರೂ ಬಹಳ ಸಾಹಸವಾಡಿ, ಗಾಯಪಟ್ಟವರಿಗೆ ಶೈತ್ಯೋಪಚಾರ ಮಾಡುತ್ತಿದ್ದರು. ಮಿ|| ಡೇವಿಡ್ ಎಂಬೊಬ್ಬ ಡಾಕ್ಟರು ಕೂಡ ಗಾಯಪಟ್ಟವರನ್ನು ಉಪಚರಿಸಿದರು. ಸ್ವಲ್ಪ ಸಮಯದಲ್ಲಿ ಆಸ್ಪತ್ರೆ ಜನರು ನೋಡುತಿದ್ದಂತೆ ಹೊರಟು ಒಬ್ಬರಾದರೂ ಬಂದು ಸಹಾಯ ಮಾಡದೆ ಹೋದರು. ಎರಡಾವರ್ತಿ ಬೆಂಗಳೂರಿನ ಗಾಡಿಗಳು ಬಂದು ಗಾಯಪಟ್ಟವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ತೆಗೆದುಕೊಂಡು ಹೋಯಿತು. ಈಚೆಗೆ ಆಸ್ಪತ್ರೆಯಲ್ಲಿ ಇನ್ನಿಬ್ಬರು ಸತ್ತರೆಂದು ತಿಳಿಯುವದು.

ದೇಶಾಂತರದ ವಿಶೇಷ ಸಮಾಚಾರಗಳು.

ಪರ್ಷಿಯಾ ದೇಶದ ಷಾರವರು ಇಂಗ್ಲೆಂಡಿಗೆ ಹೋಗಿದ್ದಾರೆ. ದೇಹಾರೋಗ್ಯಕ್ಕಾಗಿ ಸಮುದ್ರಯಾನ ಮಾಡುತ್ತಿರುವ ಜರ್ಮನ್ ಚಕ್ರವರ್ತಿಯವರು ಈ ತಿಂಗಳ ೨೦ ನೇ ತಾರೀಖಿನಲ್ಲಿ ಪೋರ್ಟ್ಸ್‌ಮತ್ ನಗರದಲ್ಲಿ ಹಡಗು ಬಿಟ್ಟಿಳಿದು ಒಂದು ಷಾರವರನ್ನು ಸಂಧಿಸಿ ತಮ್ಮ ಸ್ವಂತ ಹಡಗಿಗೆ ಕರೆದುಕೊಂಡು ಹೋಗಿ ಸತ್ಕರಿಸಿದರು. ಇವರ ಮರ್ಯಾದಾರ್ಥವಾಗಿ ನವ ಇದ್ದ ರೇವಿನಲ್ಲಿದ್ದ ಹಡಗುಗಳಿಂದ ತೋಪುಗಳು ಹಾರಿಸಲ್ಪಟ್ಟವು. ಇಂಡೋ ಯುರೋಪಿಯನ್ ಟೆಲಿಗ್ರಾಫ್ ಕಂಪೆನಿಯ ಡೈರೆಕ್ಟರುಗಳ ಪರವಾಗಿ ಕೆಲವು ದೊಡ್ಡ ಮನುಷ್ಯರು ಒಂದು ಷಾರವರ ಸಮ್ಮುಖಕ್ಕೆ ವಂದನಾಪೂರ್ವಕವಾಗಿ ಒಂದು ಪತ್ರಿಕೆಯನ್ನು ಬೆಳ್ಳಿಯ ಪೆಟ್ಟಿಗೆಯಲ್ಲಿಟ್ಟು ಒಪ್ಪಿಸಿದರು. ಪ್ರಿನ್ಸ್ ಆವ್ ವೇಲ್ಸ್ ಯುವರಾಜರು ಷಾರವರನ್ನು ಆ ಸಾಯಂಕಾಲ ನಾಟಕಶಾಲೆಗೆ ಕರೆದುಕೊಂಡು ಹೋಗಿ ಉಪಚರಿಸಿದರು.

ದಕ್ಷಿಣ ಆಫ್ರಿಕ ಯುದ್ಧದಲ್ಲಿ ಪ್ರಸಿದ್ಧರಾದ ಬೋಯರ್ ದಳಪತಿಗಳಲ್ಲಿ ಕೆಲವರು ವಿಲಾಯಿತಿಯಲ್ಲಿ ಸಂಚಾರಮಾಡಿಕೊಂಡು ಬರುವದಕ್ಕೆ ಹೋಗಿರುತ್ತಾರಷ್ಟೆ. ಇವರು ಸೌಥಾಂಪ್ಟನ್ ರೇವು ಪಟ್ಟಣದಲ್ಲಿ ಇಳಿಯವಾಗ್ಯೆ ರಾಬರ್ಟ್ಸ್ ಸರದಾರರೂ ಕಿಚ್ನರ್ ಸರದಾರರೂ ಇದಿರುಗೊಂಡು ಕರೆದು ಕೊಂಡು ಹೋಗಿ ಎಡ್ವರ್ಡ್ ಮಹಾರಾಜರಿಗೆ ಭೇಟಿಮಾಡಿಸಿದರು. ಮಹಾರಾಜರವರು ಅವರೊಂದಿಗೆ ಬಹು ಸನ್ಮಾನಪೂರ್ವಕವಾಗಿ ಬರಮಾಡಿಕೊಂಡು ಕೇವಲ ಸ್ನೇಹಭಾವದಿಂದ ಕೆಲವು ಹೊತ್ತು ಸಲ್ಲಾಪ ಮಾಡಿದರು. ಬೋಯರರ ಸಾಹಸವನ್ನೂ ಪ್ರತಿಪಕ್ಷದಲ್ಲಿ ಗಾಯಪಟ್ಟವರಿಗೂ ಸೆರೆಯಾದವರಿಗೂ ಬೋಯರರು ತೋರಿಸಿದ ದಯೆಯನ್ನೂ ಮಹಾರಾಜರು ಬಹಳವಾಗಿ ಕೊಂಡಾಡಿದರು. ಹೀಗೆ ಮಹಾರಾಜರ ಭೇಟಿಯು ಮುಗಿದನಂತರ ಈ ಬೋಯರ್ ದಳಪತಿಗಳನ್ನು ಕಿಚ್ನರ್ ಸರದಾರರು ತಮ್ಮ ಬಿಡಾರವಿದ್ದ ಹಡಗಿಗೆ ಕರೆದುಕೊಂಡು ಹೋಗಿ ಉಪಚರಿಸಿದರು. ತರುವಾಯ ಆ ದಳಪತಿಗಳು ದಾಡಿಮ ನೋಡುವುದಕ್ಕೆ ಹೇಗ್ ಪಟ್ಟಣಕ್ಕೆ ಹೊರಟುಹೋದರು, ಅಲ್ಲಿಂದ ಪುನಃ ಲಂಡನ್ ನಗರಕ್ಕೆ ಜಾಗ್ರತೆಯಲ್ಲೇ ಬರುವರು.

ಚೀನಾ ದೇಶಕ್ಕೆ ಇತರ ದೇಶಗಳಿಂದ ಹೋಗುವ ವ್ಯಾಪಾರದ ಸರಕುಗಳ ಮೇಲೆ ಈ ಪರ್ಯಂತರ ಬಹು ದುಬಾರಿಯಾಗಿ ಸುಂಕವನ್ನು ವಸೂಲ್ಮಾಡುತ್ತಿದ್ದರು. ಅಂದರೆ ಸರಕು ಇಳಿಯತಕ್ಕ ರೇವು ಪಟ್ಟಣಗಳಲ್ಲಿಯೂ, ತರುವಾಯ ಅದನ್ನು ದೇಶದೊಳಕ್ಕೆ ತಕೊಂಡು ಹೋದಾಗ ದಾರಿಯ ಉದ್ದಕ್ಕೂ ಬೇರೆ ಬೇರೆ ಠಾಣ್ಯಗಳಲ್ಲಿಯೂ ಸುಂಕ ಕೊಡಬೇಕಾಗಿತ್ತು. ಹೀಗೆ ಒಳದೇಶಗಳಲ್ಲಿ ವಸೂಲಾದದ್ದೆಲ್ಲಾ ಸರ್ಕಾರದ ಭಂಡಾರಕ್ಕೆ ಸೇರದೆ ಅಧಿಕಾರಿಗಳ ಬೊಕ್ಕಸಕ್ಕೇ ಸೇರುತ್ತಿದ್ದದರಿಂದ ಅಧಿಕಾರಿಗಳು ಚೀನಾ ವರ್ತಕರನ್ನು ನಾನಾವಿಧವಾಗಿ ಹಿಂಸಿಸಿ ಸುಂಕದ ಪಟ್ಟಿಗಳನ್ನು ಹೆಚ್ಚಿಸುವದಕ್ಕೆ ಬಹಳ ಇಷ್ಟಪಡುವರಷ್ಟೆ. ಈ ರೀತಿಯಲ್ಲಿ ವ್ಯಾಪಾರಕ್ಕೆ ಬಹಳ ಪ್ರತಿಬಂಧಕಗಳಿರುವದರಿಂದ ಪರದೇಶ ವರ್ತಕರು ಇದರ ವಿಷಯದಲ್ಲಿ ಬಹು ಕಾಲದಿಂದ ಆಕ್ಷೇಪಿಸುತ್ತಿದ್ದರು. ಈಗ ಆ ದೇಶದಲ್ಲಿ ಹೊಸಕಾರ್ಯಗಳು ಸ್ಥಾಪಿಸಲಾಗುವ ಕಾಲವು ಒದಗಿಬಂದಿರುವ ಸಂದರ್ಭವನ್ನು ಬಿಡದೆ ಪರದೇಶೀಯರೆಲ್ಲಾ ಸೇರಿ ಚೀನಾ ರಾಜ್ಯಭಾರದವರಿಗೆ ಈ ಪ್ರತಿಬಂಧಕವನ್ನು ನೀಗಿಸಿ ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಈ ಒಳದೇಶದ ಸುಂಕವನ್ನೆಲ್ಲಾ ವಜಾ ಮಾಡಿದರೆ ಸರಕು ಇಳಿಯುವ ರೇವು ಪಟ್ಟಣದಲ್ಲಿ ಮೊದಲು ಕೊಡುತ್ತಿದ್ದ ಸುಂಕಕ್ಕಿಂತ ಹೆಚ್ಚಾಗಿ ಕೊಡುವದಕ್ಕೆ ಸಿದ್ಧನಾಗಿದ್ದೇವೆ ಎಂದು ವರ್ತಕರು ಹೇಳುತ್ತಾರೆ. ಈ ಸಲಹೆಯು ಬಹು ಸಮಂಜಸವಾಗಿಯೂ ವ್ಯಾಪಾರವು ಮುಂದೆ ಸರಾಗವಾಗಿ ನಡೆಯುವದಕ್ಕನುಕೂಲವಾಗುವದೆಂದು ತೋರುತ್ತದೆ. ಈ ಸಲಹೆಗೆ ಅಮೇರಿಕದವರೂ ಇಂಗ್ಲೆಂಡ್ ಮುಂತಾದ ದೇಶದ ರಾಜ್ಯಭಾರದವರೆಲ್ಲರೂ ಒಪ್ಪತಕ್ಕವರಾಗಿದ್ದಾರೆ.

ಇವಲ್ಲದೆ ನಮ್ಮಲ್ಲಿ ಸಿಕ್ಕುವ ಇತರ ಕನ್ನಡ, ಇಂಗ್ಲಿಷ್, ಮರಾಠಿ, ಸಂಸ್ಕೃತ ಪುಸ್ತಕಗಳ ಕ್ಯಾಟಲಾಗ್ ಗೋಸ್ಕರ ಬರೆದಲ್ಲಿ ರವಾನಿಸುತ್ತೇವೆ.

ಯಂ. ರುದ್ರಪ್ಪ ಅಂಡ್ ಸನ್,
ಅವಿನ್ಯೂ ರೋಡ್,
ಬೆಂಗಳೂರು ಸಿಟಿ.

MELLIN'S FOOD.

ಮೆಲ್ಲಿನ್ ಎಂಬವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

29

೧. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ನರಗಳೂ ಮೆದುಳೂ ಚನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಮಾಂಸ ಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯವಾಗಿದೆ.

೪. ಮೆಲ್ಲಿನ್‌ರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಕ ಮಾನಸಿಕ ಶಕ್ತಿಗಳುವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯು ಆಗುತ್ತದೆ.

೬. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನ್‌ರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದವರಿಗಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನ್‌ರು ಮಾಡಿರುವ ಆಹಾರವನ್ನು ಯಥೋಚಿತವಾಗಿ ಪಾಕ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ಪಚನಕ್ಕೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಉಪಯೋಗಿಸುವ ಪದಾರ್ಥ ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ಆ ದೇಹದ ಬಂದೋಬಸ್ತವಾಗುತ್ತದೆ.

೧೦. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಸಿಡುಬು ಹಾಕಿದ ಕಾಲದಲ್ಲಿಯೂ ಕ್ಷೀಣದಲ್ಲಿ ಒದಗುವ ಮಿಶ್ರಿತ ರೋಗಗಳ ಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನ್‌ರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನ್‌ರು ಮಾಡಿರುವ ಆಹಾರದಲ್ಲಿ ಗುರುಪದಾರ್ಥವಾವದೂ ಸೇರಿರುವದಿಲ್ಲ. ತಾಯಿ ಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನ್‌ರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನ ಕೋಶಕ್ಕೆ ದಕ್ಷತಕ್ಕನಿದ್ದಾರೆ.

೧೪. ಮೆಲ್ಲಿನ್‌ರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ವೃದ್ಧಿಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಬಹಳ ಮಟ್ಟಿಗೆ ಕಡಮೆ ಮಾಡುತ್ತದೆ.

೧೫. ಮೆಲ್ಲಿನ್‌ರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಬಿಡಿಸುವ ಸಮಯಕ್ಕೆ ಅತ್ಯಂತ ಸಹಕಾರಿಯಾಗಿರುತ್ತದೆ. ತಾಯಿ ಹಾಲಿನ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಂದಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ಔಷಧಗಳ ಅಂಗಡಿಗಳಲ್ಲಿ ಕೊಳ್ಳಬಹುದು:—

ಮೈಸೂರು:—ಮೆ॥ ಕಾವಸ್ ದಿನ್ಷಾ ಬ್ರದರ್ಸ್.
ಬೆಂಗಳೂರು:—ಮೆ॥ ಥಾಮ್ಸನ್ ಅಂಡ್ ಕಂಪ್ನಿ.
ಕಲ್ಕತ್ತಾ:—ಮೆ॥ ಮೆಕ್ಕನಿಸ್ ಲಯನ್ ಕಂಪ್ನಿ.
ಕೊಲಂಬೊ:—ಮೆ॥ ಹಾರಿ ವಿಲ್ಸನ್ ಕಂಪ್ನಿ.
ಕರಾಚಿ:—ಮೆ॥ ಎಚ್. ಜೆ. ಮಿಸ್ತ್ರಿ ಕಂಪ್ನಿ.
ಮದ್ರಾಸು:—ಮೆ॥ ಓಕ್ ಕಂಪ್ನಿ.
ಮುಂಬಯಿ:—ಥಾಮ್ಸನ್ ಟೈಲರ್ ಕಂಪ್ನಿ.

ಈಗಷ್ಟೇ ವಿಲಾಯಿತಿಯಿಂದ ಬಂದಿದೆ.

ಬೇಗ ನೋಡಿ! ಬೇಗ ನೋಡಿ!!

ಎಣ್ಣೆ ಬಣ್ಣಗಳ ದೊಡ್ಡ ಪಟಗಳು

ವಿಲಾಯಿತಿಯ ಎಡ್ವರ್ಡ್ ಮಹಾರಾಜರು ಮತ್ತು ಅಲೆಕ್ಸಾಂಡ್ರಾ ಮಹಾರಾಣಿಯವರದು.

ಪಟಗಳ ಅಳತೆ ೩೦ ಅಂಗುಲ ಉದ್ದ, ೨೪ ಅಂಗುಲ ಅಗಲ.

ಕ್ರಯ ೧೪ ೮ ಅಣೆ ಮಾತ್ರ

ವಿಳಾಸ:—ಮಿಡಸ್ ಬುಕ್ ಡಿಪೋ, ಮೈಸೂರು.

ಹೊಸಪುಸ್ತಕವು! ಹೊಸಪುಸ್ತಕವು!! ಹೊಸಪುಸ್ತಕವು!!!

ಬೋಯರ ಮಹಾಯುದ್ಧ.

ಡಾಕ್ಟರ್ ಕೋನನ್‌ಡಾಯಲ್ ವಿದ್ವಾಂಸರು ಇಂಗ್ಲಿಷಿನಲ್ಲಿ ಬರೆದಿರುವ ಪುಸ್ತಕದ ಆಧಾರದ ಮೇಲೆ ರಚಿಸಲ್ಪಟ್ಟಿದೆ. ಇದನ್ನು ಓದಿದರೆ ಬೋಯರ ಯುದ್ಧದ ಕಾರಣಗಳು, ಯುದ್ಧ ನಡೆದರೀತಿ, ಫಲಿತಾಂಶಗಳು ಇವೇ ಮುಂತಾದ ಅನೇಕ ಸಂಗತಿಗಳೆಲ್ಲಾ ವಿಶದವಾಗಿ ತಿಳಿದು ಬರುವವು.

ಇದರಲ್ಲಿ ಅಡಗಿರುವ ಅಧ್ಯಾಯಗಳನ್ನು ಸ್ವಲ್ಪ ನೋಡಿ:—(೧) ಬೋಯರರು. (೨) ಯುದ್ಧಕ್ಕೆ ಕಾರಣ. (೩) ಬ್ರಿಟಿಷರಿಗೂ ಬೋಯರಿಗೂ ನಡೆದ ಸಂಧಿಗಳು. (೪) ಸಮಾಧಾನದ ವಿಷಯವಾಗಿ ನಡೆದ ಸಂಧಿಗಳು, (೫) ಬ್ರಿಟಿಷರಮೇಲೆ ಆರೋಪಿಸಲ್ಪಡುವ ದೋಷಗಳು. (೬) ಬೋಯರ ಸೈನ್ಯಗಳ ಮೇಲೆ ಯಾವ ತಪ್ಪು ಹೊರಿಸುವದಿಲ್ಲವೋ?

ಇದರ ಕ್ರಯ ಎಂಟು ಅಣೆ ಮಾತ್ರ.

ಪುಸ್ತಕದ ಸಾಹಿತ್ಯೋಚಿತ ಪ್ರೌಢಿಮೆ, ದೈವಿಕ ವಿಶೇಷವಾಗಿ ಇದರಲ್ಲಿ ಅಡಗಿರುವ ಸಂಗತಿಗಳಿಗೂ ಸಾಕ್ಷ್ಯ ಕೊಟ್ಟದ್ದೂ ಕಾಣಬರುವದು. ಜಾಗ್ರತೆ ನೋಡಿ!! ಪುಸ್ತಕವು ಮುಗಿದು ಹೋದೀತು!! ವಿ. ಪಿ. ಮೂಲಕ ತರಿಸಿದರೆ ಪುಸ್ತಕದ ಕ್ರಯ ಪೋಸ್ಟೇಜ್ ಸಹಿತ ಸಾಕಾಗುವದು.

ಪುಸ್ತಕ ವ್ಯಾಪಾರಸ್ಥರು ಜಾಸ್ತಿಯಾಗಿ ಪ್ರತಿಗಳನ್ನು ತರಿಸಿಕೊಂಡರೆ ಯೋಗ್ಯವಾದ ಡಿಸ್ಕೌಂಟು ದೊರೆಯುವದು.

ಮ್ಯಾನೇಜರ್, ಮಿಡಸ್ ಬುಕ್ ಡಿಪೋ, ಮೈಸೂರು. } ಅಥವಾ { ಮ್ಯಾನೇಜರ್, ಮಿಡಸ್ ಬುಕ್ ಡಿಪೋ, ಬೆಂಗಳೂರು.

ಹೊಸ ಪುಸ್ತಕಗಳು! ಈಗ ತಾನೆ ಪ್ರಕಟವಾಗಿದೆ!!

ಬರ್ಮ ದೇಶವೂ—ಬರ್ಮಿಯರೂ.

ಈ ಹೊಸ ಪುಸ್ತಕದಲ್ಲಿ ಬರ್ಮ ದೇಶವನ್ನೂ ಅಲ್ಲಿನ ಜನರ ಸ್ವಭಾವಗಳನ್ನೂ ಬಹು ಸುಲಭವಾಗಿ ವಿವರಿಸಿದೆ. ಪುಸ್ತಕದ ತುಂಬಾ ಚಿತ್ರಗಳಿರುವವು. ಒಳ್ಳೇ ಕಾಗದ, ನೇತ್ರಾನಂದಕರವಾಗಿ ಅಚ್ಚು ಹಾಕಿದೆ.

ಪುಟ ೨೫೦ ಅಣೆ, ಹಾಸಲು ಬೇರೆ.

ಚಾಮರಾಜ ಚಿತ್ರಗಳು. ಕ್ರಯ ೩ ಪೈ ಮಾತ್ರ.

೧. ಶುದ್ಧವಾದ ಜೀವನ ಬಗೆ:—ಜೀವನ ಉಪಯೋಗ, ಅದನ್ನು ಶುದ್ಧಿ ಮಾಡಿಕೊಳ್ಳುವದು ಹ್ಯಾಗೆ ಮುಂತಾದ ವಿಷಯಗಳನ್ನು ಬರೆದಿದೆ.

೨. ಪ್ರಾಯಶ್ಚಿತ್ತ:—ವಿದೇಶ ಗಮನದ ಮುಂತಾದ ಕಾರಣಗಳಿಗಾಗಿ ಬೇಡಿಸುವ ಪ್ರಾಯಶ್ಚಿತ್ತದ ವಿಚಾರವ್ಯಾಪಕತ್ವ ತಿಳಿಸಿದೆ.

೩. ವೇದಗಳನ್ನು ಬರೆದವರು ಯಾರು? ಹಿಂದೂ ಹಿಂದೂಸ್ತಾನದ ಉದ್ಧಟತನದ ಸಂಸ್ಕೃತ ಪಂಡಿತರನ್ನು ಅಧಿಕಾರಿಗಳ ಮೇಲೆ ಬರೆದಿದೆ.

೪. ಹಿಂದುಸ್ಥಾನದ ಬಡತನಕ್ಕೆ ಕಾರಣಗಳು.

೫. ವಿಷ್ಣುಲಿಯೂ ಕರ್ಜನ ಉಪದ್ರವಗಳು:—ಅವರುಗಳಿಗೆ ಆಗಲೇನು? ಅವರ ತಪ್ಪಿಸಿಕೊಳ್ಳುವದು ಹ್ಯಾಗೆ? ಈ ವಿಷಯಗಳ ಮೇಲೆ ಯಾವ ಚಿಕಿತ್ಸೆ ಮಾಡಬೇಕು? ಇದರಲ್ಲಿ ತಿಳಿಸಿದೆ.

ಮೇಲ್ಕಂಡ ಪುಸ್ತಕಗಳು ದೊರೆಯುವ ಸ್ಥಳ—

ಮಿಡಸ್ ಬುಕ್ ಡಿಪೋ, ಮೈಸೂರು;

ಅಥವಾ

ಮಿಡಸ್ ಬುಕ್ ಡಿಪೋ, ಬೆಂಗಳೂರು ಸಿಟಿ.

ಪ್ರಶ್ನೋತ್ತರ ರತ್ನಬೋಧಿನಿ.

22

ಡೆಮ್ಮಿ ಅಷ್ಟಪುಟಗಳು ೨೯೦—ವಿಷಯಗಳು ೩೧೦—ಅನೇಕ ಚಿತ್ರಗಳು ವರಾರಿಗೆಯಾಗಿ ಸ್ವಲ್ಪ ಪ್ರತಿಗಳೇ ಉಳಿದಿವೆ. ಈ ಜಾಗೆ ಶೀಘ್ರವಾಗಿ ಸಂಗ್ರಹ ಮಾಡಿ ಇಡುವುದು ಉತ್ತಮವು. ಇದರಲ್ಲಿ ಕ್ಷೇಮಸಮಾಚಾರ ಕಾಗದಗಳು, ಬಗೆ ಬಗೆ ಪತ್ರಗಳು, ಸಿವಿಲ್ ಕೋರ್ಟಿನ ಎಲ್ಲಾ ವಿಧವಾದ ಅರ್ಜಿಗಳು, ಕ್ರಿಮಿನಲ್, ಕಲೆಕ್ಟರಿ ವಿವಿಧ ಅರ್ಜಿಗಳು, ರೆವಿನ್ಯೂ ಅರ್ಜಿಗಳು, ಅಲ್ಲದೆಯೇ ಅವುಗಳ ವಿಧಿ, ಅನ್ಯ ಭಾಷಾ, ಸಾಮಾನ್ಯ, ಸಾಹಿತ್ಯ, ಚರಿತ್ರೆಯ ಮುಂತಾದ ಇವುಗಳ ವಿವರಗಳು, ರಕ್ಷಣೆಯ ಲೆಕ್ಕಗಳು, ಮುಖ್ಯವಾದ ಇನ್ನೂ ಅನೇಕ ವಿಷಯಗಳು, ಸ್ವಲ್ಪ ಬುದ್ಧಿಗೆ ಹಿಡಿಯುವ ಹಾಗೆ ಓದುವರು ಬಹಳ ಸ್ವತಃ ಸುಲಭವಾಗಿ ತಿಳಿದು ಕೊಳ್ಳುವ ಹಾಗೆ ಪ್ರಶ್ನೋತ್ತರ ರೀತಿಯಾಗಿ ಪ್ರಸಿದ್ಧಂ ಮಾಡಿ ಬೇಕಾದ ವಿಷಯ ಸಹಾಯದಿಂದ ಬರೆಯಲ್ಪಟ್ಟಿದೆ. ಲಾಯರುಗಳ ಬಳಿ ಹೋಗಿ ಸುಮಾರಾಗಿ ಪ್ರತಿಯೊಬ್ಬರಲ್ಲಿಯೂ ಈ ಪುಸ್ತಕ ಒಂದು ಇದ್ದೇ ಇರಬೇಕು. ಹೊಸ ಕಾಗದದ ಪುಸ್ತಕ ಒಂದರ ಕ್ರಯ ಒಂದು ರೂಪಾಯಿ. ಸಾಧಾರಣ ಕಾಗದದ ಪುಸ್ತಕ ಒಂದರ ಕ್ರಯ ಹನ್ನೆರಡಾಣೆ—ಅಂಚೆ ಖರ್ಚು ಕೊಡಬೇಕು. ಮುಂಗಡ ಹಣ; ಅಥವಾ ವಿ. ಪಿ. ಮೂಲಕ ಕಳುಹಿಸಲ್ಪಡುವುದು. ೧೦ ಪುಸ್ತಕಗಳಿಗೆ ಹೆಚ್ಚಾಗಿ ತೆಗೆದುಕೊಳ್ಳುವವರಿಗೆ ವಿಶೇಷವಾದ ದರ್ಜೆ ಸಲ್ಲುವದು. ವಿಳಾಸ:—ಬಿ. ಪಿ. ಕೋದಂಡರಾಮಯ್ಯ, ಚಿಕಪೇಟೆ, ಬೆಂಗಳೂರು.

ಎಲ್ಲರಿಗೆ ಪ್ರಯೋಜನಕರವಾದ ಹೊಸ ಪುಸ್ತಕ.

ರೋಗ ಚಿಕಿತ್ಸೆಯು.

ಇದರಲ್ಲಿ ಅನುಭವಕ್ಕೆ ಬಂದ ಔಷಧಗಳ ಪ್ರಯೋಗ,

ಮತ್ತು

ಆರೋಗ್ಯರಕ್ಷಣೆ, ಪಥ್ಯ, ರೋಗಪರೀಕ್ಷೆ ಮುಂತಾದ ವಿಷಯಗಳನ್ನು ಕುರಿತು ಕೆಲವು ಪ್ರಾರಂಭಸೂಚನೆಗಳು ಸಹ ಅವೆ.

೨೩೪ ಪುಟಗಳು.

ಕ್ರಯ: ರೂ. ೧ ಆಣೆ ೮ ಮಾತ್ರ.

ಟಪಾಲು ಹಾಸಲು ಸಹಿತ ರೂ. ೧ ಆಣೆ ೧೦.

೧೮೭೬—೧೮೮೮ನೇ ಇಸವಿಗಳ ನಮ್ಮ ಕನ್ನಡ ಪಂಚಾಂಗಗಳಲ್ಲಿ ಹದಿಮೂರು ವರ್ಷಗಳ ವರೆಗೆ ಪ್ರಕಟಿಸೋಣಾದ ಶರೀರಚಿಕಿತ್ಸೆ ಎಂಬ ವೈದ್ಯಸಂಗ್ರಹವು ವಾಚಕರಿಗೆ ಬಹಳ ಪ್ರಯೋಜನಕರವಾಗಿ ತೋರಿದ ದರಿಂದ ಆ ಕಾಲದ ಪಂಚಾಂಗಗಳು ಹೆಚ್ಚಾಗಿ ಮಾರಾಟವಾದದ್ದಲ್ಲದೆ ಉಳಿದ ಪ್ರತಿಗಳಿಂದ ಈ ಸಂಗ್ರಹವನ್ನು ಮಾತ್ರ ಪ್ರತ್ಯೇಕಿಸಿ ಕಟ್ಟಿಸೋಣವಾದ ಪ್ರತಿಗಳು ಸಹ ವಿಕ್ರಯವಾಗಿ ಖರ್ಚಾದವು. ಇನ್ನೂ ಪ್ರತಿಗಳಿಗೆ ೧೮೯೭ರ ಬಹಳ ಒರುವದರಿಂದ, ಪಂಚಾಂಗಕ್ಕಾಗಿ ಬರೆದ ಆ ಸಂಗ್ರಹವನ್ನಲ್ಲ ಪುನಹಾ ಪರಿಶೋಧಿಸಿ, ತಿದ್ದಿ, ಬೇರೆ ಅನೇಕ ಹೊಸ ಸೂಚನೆಗಳನ್ನು ಸೇರಿಸಿ, ಉಚಿತವಾದ ಪುಸ್ತಕರೂಪವಾಗಿ ಈಗ ಪ್ರಕಟಿಸಿದ್ದೇವೆ.

ಈ ಪುಸ್ತಕ ಅಪೇಕ್ಷಕರು "ಬಾಸೆಲ್ ಮಿಷನ್ ಬುಕ್ ಎಂಡ್ ಟ್ರೇಕ್ಟ್ ಡಿಪೋಸಿಟರಿ" ಮಂಗಳೂರು, ಎಂಬ ಮಿಷನ್ ಪುಸ್ತಕಶಾಲೆಯ ಮೇಲುವಿಚಾರಕರಿಗೆ ಬರೆಯತಕ್ಕದ್ದು.

ನೋಟೀಸ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ,

ತಾರೀಖು ೩೦ನೆ ಮಾಹೆ ಸೆಪ್ಟಂಬರ್ ೧೯೦೨.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಸಿಟಿ ಮಾರ್ಕೆಟು ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳಲ್ಲಿ ಸನ್ ೧೯೦೧ನೆ ಇಸವಿ ಜುಲೈ ಮಾಹೆ ೧ನೇ ತಾರೀಖು ೧೯೦೩ನೆ ಇಸವಿ ಜೂನ್ ೩೦ನೆಯ ವರೆಗೆ ಹೊಸದಾಗಿ ಕಟ್ಟಲ್ಪಟ್ಟ ಮನೆಗಳು, ಚಿಕ್ಕ ಹೊಸದಾಗಿ ರಿಪೇರಿ ಮಾಡಲ್ಪಟ್ಟ ಕಟ್ಟಡಗಳು, ಹೊಸದಾಗಿ ಇಡಲ್ಪಟ್ಟ ಅಂಗಡಿಗಳು ಇವುಗಳಿಗೆ ಹಾಕತಕ್ಕ ಬಾಡಿಗೆ ಅಂದಾಜು ತೆರಿಗೆ ಮತ್ತು ಕಂದಾಯ ಇವುಗಳ ತಪಸೀಲ್ ತೋರಿಸುವ ಅಸೆಸ್‌ಮೆಂಟ್ ಬುಕ್ಕು ತಯಾರಾಗಿ ಸಿದ್ಧವಾಗಿದೆ. ಅಪೇಕ್ಷೆಯುಳ್ಳವರು ಕಛೇರಿ ಇರತಕ್ಕ ದಿವಸಗಳಲ್ಲಿ ರಂಗಾಚಾರ್ಲು ಮೆಮೋರಿಯಲ್ ಹಾಲಿನಲ್ಲಿ ಇರುವ ಮ್ಯುನಿಸಿಪಲ್ ಆಫೀಸಿಗೆ ಬಂದು ನೋಡಿಕೊಂಡು ಹೋಗಬಹುದು. ೧೯೦೨ನೆ ಇಸವಿ ಅಕ್ಟೋಬರ್ ೨೦ನೆ ತಾರೀಖಿನ ಒಳಗಾಗಿಯೇ, ಪ್ರೆಸಿಡೆಂಟರವರು ಮೇಲ್ಕಂಡ ಅಂದಾಜನ್ನು ರಿವೈಸ್ ಮಾಡುವದಕ್ಕೆ ಪ್ರಾರಂಭಿಸುತ್ತಾರೆ. ರಿವಿಜನ್ ಬಗ್ಗೆ ಅರ್ಜಿ ಕೊಡತಕ್ಕವರು ರಿವಿಜನ್ ಪ್ರಾರಂಭಿಸುವ ಮುಂಚಿನ ದಿವಸ ಮುಂಚಿತವಾಗಿ ಅರ್ಜಿ ಕೊಟ್ಟರೆ ಅಂಗೀಕರಿಸಲ್ಪಡುವವು.

ಮಂಡಿ ಮೊಹಲ್ಲಾ ೧—೨ನೆ ಡಿವಿಜನ್—೧೯೦೨ನೆ ಇಸವಿ ಅಕ್ಟೋಬರ್ ತಾರೀಖು ೨೪ನೆ ಶುಕ್ರವಾರ.

ಲಷ್ಕರ್ ಮೊಹಲ್ಲಾ ೧—೨ ಮತ್ತು ೩ನೆ ಡಿವಿಜನ್—೧೯೦೨ನೆ ಇಸವಿ ಅಕ್ಟೋಬರ್ ತಾರೀಖು ೨೫ನೆ ಶನಿವಾರ.

K. SREENIVASA RAO,
ವೈಸ್ ಪ್ರೆಸಿಡೆಂಟ್.

ವೃತ್ತಾಂತ ಪತ್ರಿಕೆ.

—:o:—

ಈ ೧೯೦೨ನೇ ಇಸವಿ ಅಕ್ಟೋಬರ್ ೯ನೇ ಗುರುವಾರ.

ಪ್ರಜಾ ಪ್ರತಿನಿಧಿ ಸಭೆಯು.

ಶ್ರೀಮನ್ ಮಹಾರಾಜರವರು ಈ ವರುಷ ನವರಾತ್ರಿ ಉತ್ಸವಗಳು ಕಳೆದನಂತರ ಪ್ರಜಾ ಪ್ರತಿನಿಧಿ ಸಭೆಯನ್ನು ನಡಸುತವರಾಗಿಲ್ಲವೆಂದು ಕಳೆದ ಭಾನುವಾರ ಒಂದು ಹುಕುಮನ್ನು ಪ್ರಕಟಿಸಿದಾರೆ. ರಾಜಧಾನಿಯ ಈಗಿನ ಆರೋಗ್ಯಸ್ಥಿತಿಯನ್ನು ಕಂಡು ಕೇಳರುವವರ್‍ಯಾರೂ ಈ ಹುಕುಮು ಅನಿರೀಕ್ಷ್ಯವಾದದ್ದೆಂದು ಊಹಿಸಲಾರರು. ತಮಗೆ ದವಲತ್ತು ಆಗಿರುವ ಈ ಮೊದಲನೇ ವರುಷ ಪ್ರಜಾಪ್ರತಿನಿಧಿಗಳನ್ನು ಕರೆಸಿಕೊಂಡು, ಅವರ ಸಂಗ ರಾಜ್ಯಭಾರ ವಿಷಯಗಳನ್ನು ಚರ್ಚೆ ಮಾಡಬೇಕೆಂಬದಾಗಿ ಶ್ರೀಮನ್ ಮಹಾರಾಜರವರು ಎಷ್ಟೋ ಕುತೂಹಲವುಳ್ಳವರಾಗಿದ್ದರು. ಈ ಸಲ ಪ್ರತಿನಿಧಿಗಳು ಇಲ್ಲಿಗೆ ಬಂದರೆ ಇಲ್ಲಿ ಹಾವಳಿ ಮಾಡುತ್ತಿರುವ ಪ್ಲೇಗ್ ಉಪದ್ರಕ್ಕೆ ಅವರು ಸಿಕ್ಕಿದರೂ ಸಿಕ್ಕಬಹುದು; ಅಲ್ಲದೇ, ಅವರು ತಮ್ಮ ಸಂಗಡ ತಮ್ಮೂರಿಗೆ ಕರೆದುಕೊಂಡು ಹೋದರೂ ಹೋಗಬಹುದು ಎಂಬ ಭೀತಿಯು ವಿಶೇಷವಾಗಿರುವದು. ಪ್ರತಿನಿಧಿಗಳು ಉಪದ್ರಕ್ಕೆ ಸಿಕ್ಕಿದರೂ ಕಷ್ಟ; ಅಥವಾ ಆ ರೋಗವಾಗಿರುವ ತಮ್ಮ ಊರುಗಳಿಗೆ ಅದನ್ನು ಕರೆದುಕೊಂಡು ಹೋದರೂ ಕಷ್ಟ. ಈ ಅಭಿಪ್ರಾಯದಿಂದಲೇ ಮೇಲ್ಕಂಡ ಸಮಾಜವನ್ನು ಈ ಸಲ ನಿಲ್ಲಿಸಬೇಕಾಯಿತು. ಕಳೆದ ೧೯೦೧ನೆ ಇಸವಿಯಲ್ಲಿ ನಡೆದ ಪ್ರತಿನಿಧಿ ಸಭೆಗೆ ಮೂರರಲ್ಲಿ ಒಂದು ಪಾಲಿಗಿಂತಲೂ ಕಡಿಮೆಯಾಗಿ ಪ್ರಜಾ ಪ್ರತಿನಿಧಿಗಳು ಬಂದಿದ್ದರು. ಈ ಸಲವಾದರೋ ರಾಜಧಾನಿಯ ಆರೋಗ್ಯಸ್ಥಿತಿಯು ಇನ್ನೂ ಪರಿತಾಪಕರವಾಗಿರುವದರಿಂದ ಅದಕ್ಕಿಂತಲೂ ಬಹಳ ಕೊಂಚವಾಗಿಯೇ ಮೆಂಬರುಗಳು ಬರುತ್ತಿದ್ದರು. ಬಂದ ಕೊಂಚಮಂದಿಗೂ ಮನಸ್ಸಮಾಧಾನವಿರುತ್ತಿರಲಿಲ್ಲ. ಆದದರಿಂದ ಈ ಸಲ ಈ ಸಭೆಯನ್ನು ನಿಲ್ಲಿಸಿದ್ದೇ ಒಳ್ಳೇದಾಯಿತು. ಆದರೂ ಗೌವರ್ನ್ಮೆಂಟಿನವರು ವಾರ್ಷಿಕ ರಿಪೋರ್ಟು, ಬಡ್ಜೆಟ್ಟು, ಮುಂತಾದ್ದನ್ನು ಸಕಾಲದಲ್ಲಿ ಪ್ರಕಟಿಸುತ್ತಾ ರಂತಲೂ, ಒಂದೊಂದು ಪ್ರತಿಯನ್ನು ಪ್ರಜಾ ಪ್ರತಿಧಿಗಳಿಗೆ ಕಳುಹಿಸಿಕೊಡುತ್ತಾರಂತಲೂ ನಿರೀಕ್ಷಿಸುತ್ತೇವೆ.

ಪ್ಯಾರಿಸ್ ನಗರದಿಂದ ಕಾಲುದಾರಿಯಾಗಿ ನ್ಯೂಯಾರ್ಕಿಗೆ ಪ್ರಯಾಣ ಮಾಡಿದ ಧೀರನ ವೃತ್ತಾಂತ.

ಯೂರೋಪ್ ಖಂಡದ ಫ್ರಾನ್ಸ್ ದೇಶಕ್ಕೆ ರಾಜಧಾನಿಯಾಗಿರುವ ಪ್ಯಾರಿಸ್ ನಗರದಿಂದ ಅಮೆರಿಕದ ಉತ್ತರ ಭಾಗದಲ್ಲಿರುವ ನ್ಯೂಯಾರ್ಕ್ ಪಟ್ಟಣಕ್ಕೆ ಕಾಲುದಾರಿಯಲ್ಲಿ ಪ್ರಯಾಣ ಮಾಡುವದು ವಿನೋದಕರವಾಗಿದ್ದಲ್ಲವೆಂಬದನ್ನು ತಿಳಿಯಬೇಕಾದರೆ ವಾಚಕರು ಭೂಪಟವನ್ನು ಮುಂದಿಟ್ಟುಕೊಂಡು ಇದನ್ನು ಓದಬೇಕು. ಯೂರೋಪ್ ಖಂಡಕ್ಕೆ ಉತ್ತರದಲ್ಲಿ ಉತ್ತರ ಸಮುದ್ರವಿದೆಯಷ್ಟೆ. ಆ ಪ್ರಾಂತ್ಯವು ನಿರಂತರವಾಗಿ ಮಂಜುಗಡ್ಡೆಗಳಿಂದ ತುಂಬಿರುವ ಸಮುದ್ರವಾಗಿದೆಯಷ್ಟೆ. ಅಲ್ಲಿ ಜನಗಳಾದರೂ ಮನುಷ್ಯರಾದರೂ ಇಲ್ಲ. ಅಲ್ಲಿರುವ ಚಳಿಯನ್ನು ಸಹಿಸುವದು ಸಾಧ್ಯವಲ್ಲ. ಈ ಪ್ರಾಂತ್ಯವನ್ನು ದಾಟಿ ಆಚೆ ಕಡೆಯಲ್ಲಿರುವ ಅಮೆರಿಕವನ್ನು ಸೇರುವದು ಪ್ರಾಣಾಯಕರವಾದದ್ದೆಂದು ಹೇಳಬೇಕಾದದ್ದಿಲ್ಲವಷ್ಟೆ. ಇಂಥಾ ಭಯಂಕರವಾದ ಕಾರ್ಯವನ್ನು ನೆರವೇರಿಸುವದಕ್ಕೆ ಧೈರ್ಯಶಾಲಿಗಳಾದ ಯುರೋಪ್ಯರೇ ತಕ್ಕವರೆಂದು ತೋರುತ್ತದೆ. ನಮ್ಮವರೂ ಪ್ರಯತ್ನಮಾಡಿದರೆ ಕಷ್ಟಸಾಧ್ಯಗಳಾದ ಕಾರ್ಯಗಳನ್ನು ಕೈಗೂಡುವಂತೆ ಮಾಡಿಕೊಳ್ಳುವರೆಂಬುವದರಲ್ಲಿ ಸಂಶಯವಿಲ್ಲ. ಇತರ ದೇಶೀಯರ ಸಾಮರ್ಥ್ಯವನ್ನು ಕೇಳುವದರಿಂದ ನಮಗೆ ಪ್ರೋತ್ಸಾಹಕರವಾಗಿರುವದೆಂಬ ನಂಬಿಕೆಯಿಂದ ಈ ವೃತ್ತಾಂತವನ್ನು ಇಲ್ಲಿ ತಿಳಿಸಿದ್ದೇವೆ.

ಕಳೆದ ಡಿಸೆಂಬರ್ ತಿಂಗಳ ೧೯ರಲ್ಲಿ ಪ್ಯಾರಿಸ್ ನಗರದಿಂದ ಹೊರಟ ಹ್ಯಾರಿ ಡಿಪಿಂಡಿಂಬವನು ತನ್ನ ಈ ಪ್ರಯಾಣದ ವಿಷಯದಲ್ಲಿ ತಿಳಿಸಿದ್ದೇನಂದರೆ—"ನಾನೂ ನನ್ನ ಇಬ್ಬರು ಜೊತೆಗಾರರೂ ಪ್ಯಾರಿಸ್ ನಗರದಿಂದ ಹೊರಟು ಸೈಬೀರಿಯಾ ಪ್ರಾಂತ್ಯದಲ್ಲಿ ಸಂಚರಿಸಿದ ದೂರ ೧೧,೩೩೬ ಮೈಲುಗಳು. ಕೆಲವು ದೂರ ಕುದುರೆ ಗಾಡಿಯಲ್ಲಿಯೂ ಇನ್ನು ಕೆಲವು ದೂರ ಹಿಮಸಾರಂಗವನ್ನು ಹೂಡಿದ ಗಾಡಿಗಳಲ್ಲಿಯೂ ಮತ್ತೆ ಕೆಲವು ದೂರವನ್ನು ನಾಯಿಗಳನ್ನು ಕಟ್ಟಿದ ಗಾಡಿಗಳ ಮೂಲಕ ಪ್ರಯಾಣ ಮಾಡಿದೆವು. ಈ ಪ್ರಕಾರ ನಾವು ಉಪಯೋಗಿಸಿದ ಕುದುರೆಗಳು ೮೦೦, ಸಾರಂಗಗಳು ೯೦೦, ನಾಯಿಗಳು ೧೧೩, ನಾಯಿಗಳ ಸೈತೆ ೩ ಮಾತ್ರ ಉಳಿದವು. ಸಾರಂಗಗಳಲ್ಲಿ ಅನೇಕವು ಸೈಬೀರಿಯಾ ಪ್ರಾಂತ್ಯದ ಬೆಟ್ಟಗಳನ್ನು ದಾಟುವ ಕಾಲದಲ್ಲಿ ಕಾಲು ಮುರಿದು ಕಳೆದು ಹೋದವು. ಯೂರೋಪಿಗೂ ಆ ಮೆರಿಕಕ್ಕೂ ಮಧ್ಯೆ ಇರುವ ಬೇರಿಂಗ್ ಎಂಬ ಜಲಸಂಧಿಯನ್ನು ದಾಟಿ ಆಚೆಯಿರುವ ಅಲಾಸ್ಕಾ ಎಂಬ ಪ್ರಾಂತ್ಯದಲ್ಲಿ ಸಂಚರಿಸಿದ್ದು ಸುಮಾರು ೪,೦೦೦ ಮೈಲುಗಳು.

"ನಾವು ಮೊದಲು ಪ್ಯಾರಿಸಿನಿಂದ ಸೈಬೀರಿಯಾದ ಸೈಬೀರಿಯಾದಲ್ಲಿ ಇರ್ಕುಟ್ಸ್ಕ ಎಂಬ ಸ್ಥಳವನ್ನು ಮುಟ್ಟಿದೆವು. ಅಲ್ಲಿಂದ ನೆಟ್ಟಗೆ ಉತ್ತರಕ್ಕೆ, ಯಾಕುಟ್ಸ್ಕ ಎಂಬಲ್ಲಿಯ ವರೆಗೂ ಕುದುರೆ ಗಾಡಿಯಲ್ಲಿ ಹೋದೆವು. ಅಲ್ಲಿಂದ ಈಶಾನ್ಯವಾಗಿ ಹೊರಟು ೧,೬೦೦ ಮೈಲು ದೂರದಲ್ಲಿರುವ ಸ್ರೆಡ್ನಿ ಕೋಲಿಂಸ್ಕ್ ಎಂಬ ರಾಜ್ಯವನ್ನು ಸೇರಿದೆವು. ಅಲ್ಲಿಂದ ಸಾರಂಗಗಳೂ ನಾಯಿಗಳೂ ಕಟ್ಟಿದ ಗಾಡಿಗಳಲ್ಲಿ ಕುಳಿತು ನಿಷ್ನಿ ಕೋಲಿಂಸ್ಕ್‌ಗೆ ಹೋದೆವು. ಅಲ್ಲಿಗೂ ಉತ್ತರ ಧ್ರುವ ಸಮುದ್ರಕ್ಕೂ ೩೦ ಮೈಲು ದೂರವಿದೆ. ಈ ಸ್ಥಳದಿಂದ ಸಮುದ್ರತೀರದ ಪಕ್ಕದಲ್ಲಿ ೬೦೦ ಮೈಲುಗಳ ದೂರ ಪ್ರಯಾಣ ಮಾಡಿ ಎರ್ಸ್ಕಿಟಿ ಎಂಬ ಶಿಖರದ ಅಧಿಪತ್ಯದ ಯಾವಶ್ಟೇವನ್ನೂ ಟಾವು ಸಹಾ ಅನುಭವಿಸುವ ಪ್ರದೇಶವನ್ನು ಮುಟ್ಟಿದೆವು. ಅಲ್ಲಿಂದಾಚೆಗೆ ಜನರೇ ಇಲ್ಲದ ಮರುಭೂಮಿಯಲ್ಲಿ ನೂರಾರು ಮೈಲುಗಳ ವರೆಗೂ ಪ್ರಯಾಣ ಮಾಡಿ, ಏಷ್ಯ ಖಂಡದ ಈಶಾನ್ಯ ಮೂಲೆಗೆ ೬ ಮೈಲು ದೂರವಿರುವ ಮತ್ತೊಂದು ರಾಜ್ಯವನ್ನು ಸೇರಿ, ಅಲ್ಲಿಯೇ ಒಂದು ತಿಂಗಳ ವರೆಗೂ ನಿಂತೆವು. ಅಲ್ಲಿ ಆಹಾರ ಪದಾರ್ಥಗಳೇನೂ ಸಿಕ್ಕದೆ ಇದ್ದದರಿಂದಲೂ ನಮ್ಮಲ್ಲಿದ್ದದ್ದೆಲ್ಲಾ ತೀರಿಹೋಗಿದ್ದದರಿಂದಲೂ ನಾವು ಅನೇಕ ದಿನವೂ ಹೆಚ್ಚು ಕಡಿಮೆ ಉಪವಾಸವಾಗಿಯೇ ಇದ್ದೆವು. ಇಷ್ಟರೊಳಗೆ ಅಮೆರಿಕ ಖಂಡದ ಉತ್ತರ ಸಮುದ್ರದಲ್ಲಿ ತಿಮಿಂಗಿಲಗಳನ್ನು ಹಿಡಿಯುವದಕ್ಕೆ ಬಂದಿದ್ದ ಬೇಟೆಗಾರರು ನಮ್ಮ ಅವಸ್ಥೆಯನ್ನು ನೋಡಿ, ನಮಗೆ ಸ್ವಲ್ಪ ಆಹಾರವನ್ನು ಕೊಟ್ಟರು. ಹಾಗೆಯೇ ಬಳಿಕ ತಮ್ಮ ಅಮೆರಿಕದ ಸಂಯುಕ್ತ ಸಂಸ್ಥಾನಗಳಿಗೆ ಸೇರಿದ ಒಂದು ಹಡಗಿನವರು ನಮ್ಮನ್ನು ಕರೆಸಿಕೊಂಡು ಬೇರಿಂಗ್ ಜಲಸಂಧಿಯನ್ನು ದಾಟಿಸುತ್ತಾ ಅಮೆರಿಕ ಖಂಡದ ವಾಯುವ್ಯ ಮೂಲೆಯಾದ ಪ್ರಿನ್ಸ್ ಆಫ್ ವೇಲ್ಸ್ ಎಂಬ ಭೂಶಿರಕ್ಕೆ ಕರೆದುಕೊಂಡು ಹೋದರು. ಆ ಪ್ರಾಂತ್ಯದಲ್ಲಿ ಹಿಮದ ಗಡ್ಡೆಗಳು ದೊಡ್ಡ ದೊಡ್ಡ ಬಂಡೆಗಳಂತೆ ಉತ್ತರ ದಿಕ್ಕಾಗಿ ತೇಲಿಕೊಂಡು ಹೋಗುತ್ತಿದ್ದದರಿಂದ ಅಮೆರಿಕದ ತೀರದಿಂದ ೩೦ ಮೈಲು ದೂರದಲ್ಲೇ ಹಡಗನ್ನು ನಿಲ್ಲಿಸಬೇಕಾಯಿತು. ಆದಕಾರಣ ನಾವು ಅಲ್ಲಿ ಇಳಿದು ಕೆಲವು ಹೊತ್ತಿನ ವರೆಗೆ ನಡೆದು ಮತ್ತೆ ಕೆಲವು ದೂರವನ್ನು ದೋಣಿಯಲ್ಲಿ ದಾಟಿದೆವು. ನಾವು ಪ್ಯಾರಿಸಿನಿಂದ ಹೊರಟು ಅಮೆರಿಕದ ನೆಲದ ಮೇಲೆ ಕಾಲಿಡುವದಕ್ಕೆ ಸರಿಯಾಗಿ ೬ ತಿಂಗಳಾಯಿತು.

"ಸೈಬೀರಿಯಾದಲ್ಲಿ ಪ್ರಯಾಣಿಕರು ಅನುಭವಿಸುವ ಕಷ್ಟವನ್ನು ವರ್ಣಿಸುವದು ಅಸಾಧ್ಯ. ಅಲ್ಲಿಗೆ ಹೋದವನು ಪುನಃ ಹಿಂದಿರುಗಿ ಬರುವದೇ ಇಲ್ಲ. ಹೋದವರನ್ನೆಲ್ಲ ಆರಿಸಿ ಆ ಪ್ರಾಂತ್ಯವು ಹಿಮದ ಪ್ರದೇಶವಾದದರಿಂದಲೂ ಇತರ ಕಾರಣಗಳಿಂದಲೂ ನುಂಗಿಬಿಡುತ್ತದೆ. ಇದನ್ನು ಕುರಿತು ನಾನು ರಷ್ಯಾ ಸರ್ಕಾರದವರಿಗೆ ತಿಳಿಸುತ್ತೇನೆ.

"ಈ ಪ್ರಯಾಣದಲ್ಲಿ ನನಗೆ ಅತ್ಯಂತ ಕಷ್ಟಕರವಾದದ್ದು ಉತ್ತರ ಧ್ರುವ ಸಾಗರವೇ. ಕೆಲವು ದಿನಗಳ ವರೆಗೂ ಅಲ್ಲಿ ಆಹಾರ ಒಂದು ಕಡ್ಡಿಯಾದರೂ ಸಿಕ್ಕುತ್ತಿರಲಿಲ್ಲ. ಒಂದೆಡೆಯಲ್ಲಿ ಅರುವತ್ತು ಗಳ ವರೆಗೂ ಅಪರಿಮಿತವಾದ ಚಳಿಯಿದ್ದದರಿಂದ ನಾವು ಬಾಯಿಂದ ಹೊರಡಿಸುವ ಶ್ವಾಸವು ಗಡ್ಡೆ ಕಟ್ಟಿ ನೆಲದ ಮೇಲೆ ಬೀಳುತ್ತಿತ್ತು. ಬೇರಿಂಗ್ ಜಲಸಂಧಿಯನ್ನು ದಾಟುತ್ತಿರುವಾಗ ಬಿರುಗಾಳಿಯುಂಟಾಗಿ ಆ ಪ್ರಾಂತ್ಯದಲ್ಲಿ ಬೆಟ್ಟಗಳಂತೆ ತೇಲುತ್ತಿರುವ ಹಿಮದ ಗಡ್ಡೆಗಳು ಒಂದಕ್ಕೊಂದು ತಗಲಿ ಆದರಿಂದ ದುಂಟಾಗುತ್ತಿದ್ದ ಶಬ್ದವು ಇಷ್ಟೆಂದು ವರ್ಣಿಸುವದಕ್ಕಾಗುವದಿಲ್ಲ.

"ನಾನು ಈ ಪ್ರಯಾಣವನ್ನು ಮಾಡುವದಕ್ಕೆ ಒಂದು ಕಾರಣವುಂಟು. ಈಗ ಸೈಬೀರಿಯಾ ರೈಲ್ವೆ ಯು ಮುಗಿದಿರುವ ಸ್ಥಳವಾದ ಬೇಕಲ್ ಸರೋವರದ ಇರ್ಕುಟ್ಸ್ಕ ಸ್ಟೇಷನಿನಿಂದ ಮುಂದಕ್ಕೆ ರೈಲು ದಾರಿಯನ್ನು ಬೇರಿಂಗ್ ಜಲಸಂಧಿಯ ಕೆಳಗಡೆ ಸುರಂಗ ತೋಡಿ ಆಚೆಗೆ ಅಮೆರಿಕದ ಅಲಾಸ್ಕಾ ಎಂಬ ಪ್ರಾಂತ್ಯವನ್ನು ಸೇರಿಸುವದು ಸಾಧ್ಯವೇ ಸಾಧ್ಯವಲ್ಲವೇ ಎಂಬುವದನ್ನು ಕಂಡು ಹಿಡಿಯುವದೇ ನನ್ನ ಉದ್ದೇಶ. ಈ ಕಾರ್ಯವು ಸಾಧ್ಯವೆಂದು ನನಗೆ ತೋರುತ್ತದೆ. ರಷ್ಯಾ ಸರ್ಕಾರದವರು ಇರ್ಕುಟ್ಸ್ಕನಿಂದ ಯಾಕುಟ್ಸ್ಕನ ವರೆಗೆ ರೈಲು ರಸ್ತೆ ಹಾಕಿ ಮುಗಿಸಿದ್ದಾರೆ. ರಸ್ತೆಯನ್ನು ಮುಗಿಸುವದಕ್ಕೆ ನಾಲ್ಕು ವರ್ಷಗಳು ಹಿಡಿಯುವದು. ಆ ಪ್ರಾಂತ್ಯದಲ್ಲಿ ಭೂಗರ್ಭವು ಸಿಕ್ಕುವದರಿಂದ ರಷ್ಯಾ ಸರ್ಕಾರದವರು ಈ ರೈಲು ರಸ್ತೆಯ ಕೆಲಸವನ್ನು ಅತ್ಯಂತ ವೇಗವಾಗಿ ಪ್ರಾರಂಭಿಸುವದರಲ್ಲಿ ಆಸಕ್ತರಾಗಿದ್ದಾರೆ."

ಹರಳೆ ಮಾರಿಕೊಳ್ಳುವದು.

ಪೂರ್ವಕಾಲದಲ್ಲಿ ಗಿಲ್ಯಾಡ್ ಎಂಬ ಊರಿನಲ್ಲಿ ಒಬ್ಬನೆಂಬ ದೊಡ್ಡ ಮನುಷ್ಯನಿದ್ದನು. ಅವನಿಗೆ ಮದುವೆ ಹೆಂಡತಿಯಲ್ಲಿ ಕೆಲವು ಮಕ್ಕಳೂ ಉಪಪತ್ನಿಯಲ್ಲಿ ಒಬ್ಬ ಮಗನೂ ಇದ್ದರು. ಆ ಉಪಪತ್ನಿಯ ಮಗನನ್ನು ಆ ಮದುವೆ ಹೆಂಡತಿಯ ಮಕ್ಕಳು ಹೊಡೆದು, ನೀನು ನಮ್ಮ ತಂದೆಯ ಆಸ್ತಿಗೆ ಬಾಧ್ಯನಾಗಬಾರದು, ನೀನು ಎಲ್ಲಾದರೂ ಹೋಗಿ ಬದುಕಿಕೊ ಎಂದು ಹೇಳಿ ಮನೆಯಿಂದ ಓಡಿಸಿಬಿಟ್ಟರು. ಆ ಯೆಫ್ತಾ ಎನ್ನುವವನು ಯಾವದೋ ಒಂದು ಕ

ಳ್ಳಿಗೆ ಹೋಗಿ ಕೆಲವು ಮಂದಿಯನ್ನು ಕೂಡಿಸಿಕೊಂಡು ಅವರಿಗೆ ನಾ ಯಕನಾಗಿ ಯುದ್ಧ ಕೌಶಲದಿಂದ ತನ್ನ ಜೀವನವನ್ನು ನಡಿಸಿಕೊಳ್ಳುತ್ತಿದ್ದನು.

ಹೀಗಿರುವಾಗ್ಯೆ ಆ ಕಾಲಸ್ಥಿತಿಯನ್ನನುಸರಿಸಿ ಅಮ್ಮೋನ್ಯರೆಂಬವರು ಆ ಗಿಲ್ಯಾದ್ ಊರಿನವರ ಮೇಲೆ ಬಂದು ಯುದ್ಧ ಕಲಹ ಮಾಡಿದರು. ಆಗಲಾ ಊರಿನವರು ಸುಖಕಾಲದಲ್ಲಿ ತಮ್ಮ ಊರಿನಿಂದ ಓಡಿಸಿಬಿಟ್ಟಿದ್ದ ಆ ಯೆಫ್ತಾಹನೆಂಬ ಶೂರನ ಸಹಾಯವನ್ನು ಆಪತ್ಕಾಲದಲ್ಲಿ ಅಪೇಕ್ಷಿಸಿ, ಅವನಿದ್ದ ಊರಿಗೆ ಹೋಗಿ ತಮ್ಮ ಕಷ್ಟವನ್ನು ಅವನಿಗೆ ಹೇಳಿಕೊಂಡು—ತಾವು ನಮ್ಮ ಮೇಲೆ ಕಟಾಕ್ಷವಿಟ್ಟು ಈ ಕಷ್ಟಕಾಲದಲ್ಲಿ ಕೈ ಹಿಡಿಯಬೇಕು; ತಾವು ಬೇರೆ, ನಾವು ಬೇರೆಯಲ್ಲ. ನಾವೆಲ್ಲರೂ ಒಂದೇ ಊರು, ಒಂದೇ ಮನೆತನಕ್ಕೆ ಸೇರಿದವರು. ನಮ್ಮ ಮಾನಾಪಮಾನಗಳಿಗೂ ಕಷ್ಟಸುಖಗಳಿಗೂ ತಾವೂ ಬಾಧ್ಯರಾಗಿದ್ದೀರಿ ಎಂದು ಹಂಬಲಿಸಿದರು. ಆದಕ್ಕಾ ಶೂರನು ತನಗೆ ಪೂರ್ವದಲ್ಲಿ ಗಿಲ್ಯಾದ್ ಊರಿನವರಿಂದ ಉಂಟಾದ ಅಪಚಾರವನ್ನು ಬಗೆಯದೆ ತನ್ನ ಜನಕ್ಕೆ ಬಂದ ವಿಪತ್ತೇ ತನಗೆ ಬಂದದ್ದೆಂಬುದಾಗಿ ಭಾವಿಸಿ, ಅನೇಕ ಮಂದಿ ಜನರನ್ನು ಕಟ್ಟಿಕೊಂಡು ಹೋಗಿ ಶತ್ರುಗಳಾದವರ ಮೇಲೆ ಬಿದ್ದು ಅವರನ್ನು ಸಂಪೂರ್ಣವಾಗಿ ಸೋಲಿಸಿ ಓಡಿಸಿದನು.

ಯೆಫ್ತಾಹನು ಯುದ್ಧಕ್ಕೆ ಹೊರಡುವದಕ್ಕಿಂತ ಮುಂಚಿತವಾಗಿ ಒಂದು ಹರಕೆಯನ್ನು ಮಾಡಿಕೊಂಡನು. ಅದೇನೆಂದರೆ—ನಾನು ಈಗ ಹೋಗುವ ಈ ಯುದ್ಧದಲ್ಲಿ ಜಯವುಂಟಾದರೆ ನಾನು ಊರಿಗೆ ಹಿಂದಿರುಗಿ ಬರುವಾಗ ನನ್ನನ್ನು ಎದುರುಗೊಳ್ಳುವದಕ್ಕೆ ಬರುವ ಪುರುಷನಾಗಲಿ ಸ್ತ್ರೀಯಾಗಲಿ ಅವರನ್ನು ಕೊಟ್ಟು ಆ ಭಗವಂತನಿಗೆ ಬಲಿ ಕೊಡುತ್ತೇನೆಂದು ಹರಕೆ ಮಾಡಿಕೊಂಡಿದ್ದನು.

ಯೆಫ್ತಾಹನು ಅಮ್ಮೋನ್ಯರ ಮೇಲೆ ಯುದ್ಧ ಮಾಡಿ ಜಯವನ್ನು ಪಡೆದು ಸ್ವಂತ ಊರಿಗೆ ಹಿಂದಿರುಗಿ ಬರುತ್ತಿರುವಾಗ ಮುಖ್ಯವಾಗಿ ಅವನ ಏಕಮಾತ್ರ ಕುಮಾರಿಯು ಬಂದು ಅವನನ್ನು ಎದುರುಗೊಂಡಳು. ಅವಳ ಮುಂದೆಯೂ ಹಿಂದೆಯೂ ಇದ್ದವರೆಲ್ಲರು ಬಹು ಸಂಭ್ರಮದಿಂದ ನೆಳ ತಾಳ ಮೃದಂಗ ಮೊದಲಾದ ವಾದ್ಯಗಳನ್ನು ಬಾರಿಸುತ್ತಾ ಅವನ ಪರಾಕ್ರಮವನ್ನೂ ದೇಶಕ್ಕೆ ಉಂಟಾದ ಉಪಕಾರವನ್ನೂ ಕೊಂಡಾಡುತ್ತಾ ಬರುತ್ತಿದ್ದರು. ಇಷ್ಟು ವೈಭವದಿಂದ ಪುರಪ್ರವೇಶವನ್ನು ಮಾಡುತ್ತಿರುವ ಆ ಶೂರನನ್ನು ಇದಿರುಗೊಳ್ಳುವದಕ್ಕೆ ತನ್ನ ಮನೆಯಿಂದ ಯಾರೂ ಬರಲಿಲ್ಲವೇ! ಅವನು ಧರಿಸಿದ ಉಡುಪನ್ನು ಕಳಚಿ, ದಣಿವಿನಲ್ಲಿ ಪ್ರೀತಿ ಕಟ್ಟಿಕೊಂಡಿರುವ ಶಸ್ತ್ರಗಳ ಕಟ್ಟುಗಳನ್ನು ಬಿಚ್ಚುವದಕ್ಕೆ ಅವನ ಮನೆಯ ಗಂಡಾಳುಗಳು ಸಿದ್ಧರಾಗಿ ಬರಲಿಲ್ಲವೇ? ಅವನ ಮನೆಯ ಸಾನ್ನಿಧ್ಯವಾದುದು ಗೃಹಪ್ರವೇಶವನ್ನು ಮಾಡಿಸಿಕೊಳ್ಳುವದಕ್ಕೆ ಹೆಣ್ಣಾಳುಗಳು ಬರಲಿಲ್ಲವೇ? ಗಂಡಾಳುಗಳೂ ಹೆಣ್ಣಾಳುಗಳೂ ತಮ್ಮ ತಮ್ಮ ಕೆಲಸಗಳನ್ನು ಯಥೋಚಿತವಾಗಿ ನಿರ್ವಹಿಸುವದಕ್ಕೋಸ್ಕರ ಸಾಗಿ ಮಾಡಿಕೊಳ್ಳುತ್ತಿರಲು ತಂದೆಯನ್ನು ಆಲಿಂಗಿಸುವದಕ್ಕೋಸ್ಕರ ಅವನ ಪ್ರೇಮಪುತ್ರಿಯೇ ಓಡಿಬಂದಳು! ಅಯ್ಯೋ ಯೆಫ್ತಾಹನೇ, ನಿರ್ಭಾಗ್ಯಶಾಲಿಯೇ, ನಿನ್ನನ್ನು ಇದಿರುಗೊಳ್ಳುವದಕ್ಕೆ ಈ ಬಾಲೆ ಬರಬೇಕಾಗಿದ್ದ ಮಗಳು ಓಡಿಬರಬೇಕೆ! ನಿನ್ನ ಎದೆಯಲ್ಲಿ ಆಗ ನಿಟ್ಟುಸಿರಾಗಲಿಲ್ಲವೇ? ನೀನು ಪ್ರೀತಿಸುವ ನೀನೇ ಬೆಳೆಸಿದ ನಿನ್ನನ್ನು ನುಂಗಿಬಿಟ್ಟಿತೆ ಎಷ್ಟೋ ಉತ್ತಮವೆಂದು ನಿನ್ನ ಮನಸ್ಸು ಹೇಳಲಿಲ್ಲವೇ? ಎಷ್ಟು ಹೇಳಿ ಏನು ಫಲ! ಮಾತು ಕೊಟ್ಟಮೇಲೆ ಹೋಯಿತು, ಮುತ್ತು ಒಡೆದ ಮೇಲೆ ಹೋಯಿತು. ಪ್ರಿಯ ಪುತ್ರಿಯಾದರೂ, ನವಯೌವನ ವಿಲಸಿತ ಕೋಮಲಾಂಗಿಯಾದರೂ, ಕುಲವರ್ಧಿನಿಯಾದ ಏಕಪುತ್ರಿಯಾದರೂ ಬಲಿಯು ಅರ್ಪಿಸಲ್ಪಡಲೇ ಬೇಕು!

ಯೆಫ್ತಾಹನು ಹೋಲಿದ ಮನೋವ್ಯಥೆಯು ವಿವರಿಸಲಸಾಧ್ಯವಾದದ್ದು. ಆದರೂ ಅವನು—ನಾನು ಯೆಹೋವನಿಗೆ ಮಾತುಕೊಟ್ಟಿದ್ದೇನೆ, ಮಾತು ತಪ್ಪಲಾರೆನು ಎಂದು ಹೇಳಿ ತಾನು ನಿರ್ಣಯ ಮಾಡಿಕೊಂಡದ್ದನ್ನೇ ನಡೆಸಿದನು. ಆತನು ನಡೆಸಿದ ಈ ಕಾರ್ಯವು ಆ ಕಾಲಸ್ಥಿತಿಯನ್ನು ಅನುಸರಿಸುವಂಥದ್ದಾಗಿತ್ತು. ಭಗವಂತನನ್ನು ಮೆಚ್ಚಿಸಬೇಕೆಂಬ ಅಭಿಪ್ರಾಯದಿಂದ ಮನುಷ್ಯ ವಸ್ತುಗಳಲ್ಲಿ ಶ್ರೇಷ್ಠವಾದ ನರಬಲಿಯನ್ನು ಅರ್ಪಣೆಗಾಗಿ ಮನುಷ್ಯನ ಪ್ರಾಣವನ್ನೇ ಬಲಿಯಾಗಿ ಕೊಡುವದು ಭಗವಂತನಿಗೆ ಮೆಚ್ಚಿಕೆಯಾದ ಉತ್ಕೃಷ್ಟವಾದ ಅರ್ಪಣೆಯೆಂದು ಜನರು ಭಾವಿಸುತ್ತಿದ್ದರು. ಮತ್ತು ಈ ಅರ್ಪಣೆಯನ್ನು ಕೊಡದಿದ್ದರೆ ಭಗವಂತನು ಕೋಪಿಷ್ಠನಾಗಿ ನಮ್ಮನ್ನು ಬಾಧಿಸುವನು, ಆದ್ದರಿಂದ ಅರ್ಪಣೆಗಳಿಂದ ಕ್ರಿಯೆಯನ್ನು ಕೊಟ್ಟು ದೇವರ ದಯೆಯನ್ನು ಹೊಂದಬೇಕೆಂಬ ಎಂಬ ನಂಬಿಕೆ ಬಹಳ ಕಾಲದವರೆಗೂ ಆ ಕಾಲದಲ್ಲಿ ಪ್ರಬಲವಾಗಿತ್ತು. ಒಂದಾನೊಂದು ಕಾಲದಲ್ಲಿ ನಮ್ಮ ದೇಶದಲ್ಲಿಯೂ ಇಂಥ ಅಭಿಪ್ರಾಯವಿರುವದು. ಇದು ಕಷ್ಟವೆಂದು ಎಲ್ಲರೂ ಸುಲಭವಾಗಿ ಗ್ರಹಿಸಬಹುದು. ತಾಯಿಯ ಪ್ರೀತಿಯನ್ನು ಕ್ರಿಯೆಗೊಟ್ಟು ಕೊಂಡುಕೊಳ್ಳಬೇಕೆಂದು ಯೋಚಿಸತಕ್ಕವನನ್ನು ಕಂಡರೆ ನಾವೇನು ಹೇಳುವೆವು? ಭಗವಂತನು ಮಹಾಪ್ರೀತಿಯೇ ಆಗಿದ್ದಾನೆಂದು ನಾವು ತಿಳಿದಿರಬೇಕಲ್ಲವೆ. ಹಾಗಾದರೆ ಆತನನ್ನು ಅರ್ಪಣೆಗಳಿಂದ ಸಂತೋಷಪಡಿಸಿದ್ದರೆ ನಮ್ಮನ್ನು ಮೆಚ್ಚಲಾರನೆಂದು ನಾವು ಯೋಚಿಸತಕ್ಕದ್ದು ಉಚಿತವಲ್ಲ. ಈ ಅಭಿಪ್ರಾಯವು ಸಲ್ಲುತ್ತಿದ್ದ ಕಾಲವು ಹೋಯಿತು. ದೇವರು ಉಗ್ರಸ್ವರೂಪಿಯೆಂದು ಭಯಪಟ್ಟು ಆತನಿಗೆ ಶಾಂತಿ ಮಾಡದೇ ಹೋದರೆ ಮೇಲೆಬೀಳುವನು ಎಂದು ಹೆದರತಕ್ಕ ಕಾಲಕ್ಕೆ ಬದಲಾಗಿ ಈಗ ಭಗವಂತನು ಪ್ರೀತಿಸ್ವರೂಪಿ, ಆತನನ್ನು ಪ್ರೀತಿಪೂರ್ವಕವಾಗಿ ಸೇವಿಸಿ ನಮ್ಮ ಕಸುಬುಗಳ ಕೈಚಳಕವನ್ನು ಸ್ವಾಭಾವಿಕವಾಗಿ ಯಾವಜ್ಜೀವವೂ ಸಮರ್ಪಿಸುವದು ಉಚಿತವೆಂಬ ತಿಳುವಳಿಕೆಯ ಕಾಲವು ಬಂದಿದೆ. ಆದ್ದರಿಂದ ಈ ಭಗವಂತನ ವಿಷಯವಾಗಿ ಈ ನಾಗರಿಕ ಅಭಿಪ್ರಾಯವನ್ನಿಟ್ಟುಕೊಂಡು ಆತನನ್ನು ಸತ್ಯವಾಗಿ ಸೇವಿಸುವದು ಅವಶ್ಯವಾಗಿದೆ.

ಯೆಫ್ತಾಹನ ಚರಿತ್ರೆಯಿಂದ ನಮಗೆ ಇನ್ನೊಂದು ಸಂಗತಿಯು ಗೊತ್ತಾಗುತ್ತದೆ, ಅದೇನೆಂದರೆ—ಅವನು ಪ್ರಾಮಾಣಿಕ. ಅವನು ಭಗವತ್ ಪರಿಪಾಲಕನಾಗಿದ್ದನು. ಇದು ಉತ್ತಮ ಪುರುಷನ ಲಕ್ಷಣ. ಈ ವಿಷಯದಲ್ಲಿ ಪಾಪಿಷ್ಠರು ತಮ್ಮ ಪರಮ ತಂದೆಯಾದ ದೇವರಿಗೆ ಸಮರ್ಪಣೆಗಿರುವದಕ್ಕೆ ಅಪರಾಧವುಂಟು. ಭಗವಂತನು ಮಾತು ಕೊಟ್ಟಿಲ್ಲ ಎಂದಾದರೂ ವಿಶ್ವಾಸದ್ರೋಹಿಯೆ? ನನ್ನನ್ನು ಪ್ರೀತಿಸುವಿ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವವರಿಗೆ ಸಾವಿರಾರು ತಲೆಮಾರಿನ ವರೆಗೂ ಕೃಪೆಯುಳ್ಳವನಾಗಿರುತ್ತೇನೆ; ಆದರೆ ನನ್ನನ್ನು ತಿರಸ್ಕರಿಸತಕ್ಕವರನ್ನು ನಾನೂ ತಿರಸ್ಕರಿಸುವೆನು ಎಂದು ಹೇಳಿದ ಆ ಭಗವಂತನು ಭೂಲೋಕದ ಚರಿತ್ರೆಯಲ್ಲಿ ನಡೆಸುತ್ತಾ ಬಂದಿರುವ ದೊಡ್ಡ ಕಾರ್ಯಗಳನ್ನೂ ಚಿಕ್ಕ ಕಾರ್ಯಗಳನ್ನೂ ಪರೀಕ್ಷಿಸುವವರಿಗೆ ಆತನ ಮಾತು ಸತ್ಯವೆಂದು ಪ್ರಕಟವಾಗದಿರದು. ಈ ಪ್ರಕಾರ ಭಗವಂತನು ನಮ್ಮ ಸಂಗಡ ತಪ್ಪದೆ ನಡೆಯುತ್ತಿರುವಲ್ಲಿ ನಾವೂ ಆತನಲ್ಲಿ ಪ್ರಾಮಾಣಿಕರಾಗಿ ನಡೆಯತಕ್ಕದ್ದು ನಮ್ಮ ಕರ್ತವ್ಯವಲ್ಲವೇ? ನಾವು ವಿಷಯವಾದ ದರಿದ್ರ್ಯ ನಮ್ಮನ್ನು ಉದ್ಧರಿಸುವ ಭಗವಂತನ ಗುಣಲಕ್ಷಣಗಳನ್ನು ಅನುಸರಿಸತಕ್ಕವರಾಗಬೇಕು. ಆತನನ್ನು ಅನುಸರಿಸುವದೇ ಅಂದರೆ ಆತನು ಪ್ರಕಟಿಸಿಕೊಂಡಿರುವ ಗುರುವರ್ಯನ ಚಾರಿತ್ರ್ಯವನ್ನು ಮುಂದಿಟ್ಟುಕೊಂಡು ನಡೆಯುವದೇ ಮನುಷ್ಯನಿಗೆ ಸರ್ವೋತ್ಕೃಷ್ಟವಾದ ಜೀವನವಾಗಿದೆ.

ಆದರೆ ಸಕಲ ಕಾರ್ಯಗಳಲ್ಲಿ ಇದು ಬಹು ಕಷ್ಟಸಾಧ್ಯವಾದದ್ದೆಂಬುವದನ್ನು ನಾವು ಮರೆಯಬಾರದು. ಆದಕಾರಣ ಭಗವಂತನನ್ನು ಸೇವಿಸುತ್ತೇನೆಂದು ಆತನಿಗೆ ಮಾತು ಕೊಡತಕ್ಕವರೆಲ್ಲರೂ ಈ ಕಾರ್ಯಕ್ಕೆ ಕೈಹಾಕುವುದಕ್ಕೆ ಆತುರ ಪಡಬಾರದು. ಪರ್ಯಾಲೋಚನೆ ಮಾಡಬೇಕು. ಸೇನೆಯಲ್ಲಿ ಕೆಲಸಕ್ಕೆ ಸಿಲ್ಲುವ ಸಿಪಾಯಿಯಾಗಲಿ, ವರ್ತಕರಲ್ಲಿ ನೆಲೆಗೊಳ್ಳಬೇಕೆಂಬ ವ್ಯಾಪಾರಿಯಾಗಲಿ ವ್ಯವಸಾಯದಿಂದ ಜೀವಿಸಬೇಕೆಂಬ ರೈತನಾಗಲಿ ಯಾವ ಕೆಲಸಕ್ಕಾದರೂ ಕೈಹಾಕತಕ್ಕವನು ಯಾರೇ ಆಗಲಿ ಮೊದಲು ಆ ಕೆಲಸದಲ್ಲಿ ತನಗೆ ಸಿದ್ಧಿಯುಂಟಾಗುವದಕ್ಕೆ ಎಷ್ಟು ಪ್ರಯಾಸಪಡಬೇಕಾಗಿದೆಯೋ ಅದನ್ನು ಪರ್ಯಾಲೋಚನೆಗಾಗಿ ಗ್ರಹಿಸಿ ನೋಡಿದರೆ ಆ ಕೆಲಸದಲ್ಲಿ ಸಾಫಲ್ಯವುಂಟಾಗಲಾರದೆಂಬುವದನ್ನು ಹೇಳಬೇಕಾದ ಅವಶ್ಯಕವಿಲ್ಲ. ಹಾಗೆಯೇ ಭಗವಂತನ ಸೇವೆಯೇ ಉತ್ಕೃಷ್ಟವಾದದ್ದೆಂದು ಮನಃಪೂರ್ವಕವಾಗಿ ತಿಳಿದಿರತಕ್ಕವರಾದ ನಾವು ಉಚಿತ ಯೋಗಸಾಧನಗಳಿಂದ ಆತನನ್ನು ನಿರ್ವಂಚನೆಯಾಗಿ ಯಾವಜ್ಜೀವವೂ ಸೇವಿಸಬೇಕಾದರೆ ನಡುವೆ ಬರುವ ಅನಿರೀಕ್ಷಿತವಾದ ವಿಘ್ನಗಳು ದೂರವಾದರೂ, ಅವುಗಳನ್ನು ಜಯಿಸಿ ಕಾರ್ಯಸಿದ್ಧಿಯನ್ನು ಪಡೆಯುವದಕ್ಕೆ ಭಗವಂತನು ಕಲ್ಪಿಸಿ ಕೊಟ್ಟಿರುವ ಮಾರ್ಗವು ಯಾವದೆಂಬುದನ್ನು ಪರ್ಯಾಲೋಚಿಸಿ ತಿಳಿಯತಕ್ಕದ್ದು.

ಸ್ವದೇಶದ ವೃತ್ತಾಂತಗಳು.

ಉಡಿಗಾಮಿನ ಪೋಲೀಸ್ ಠಾಣ್ಯಾನಿದ್ದ ಒಬ್ಬ ಕೈದಿಯು ಕಳೆದ ವಾರ ತಪ್ಪಿಸಿಕೊಂಡು ಹೋದನೆಂತಲೂ, ಇನ್ನೂ ಪತ್ತೆ ಆಗಿಲ್ಲವೆಂತಲೂ ತಿಳಿಯುವದು.

ಪೋ॥ ಕೆ. ಕಾಮಯ್ಯನವರ್ರು ಈಚೆಗೆ ಕೆಲ್ಲಾ ಕ್ಯಾಂಪಿನಲ್ಲಿ ಆನೆಗಳನ್ನು ಹಿಡಿದಿದ್ದರು. ಆ ಆನೆಗಳ ಹಿಂಡು ಕಳೆದ ವಾರ ಕಟ್ಟದಿಂದ ತಪ್ಪಿಸಿಕೊಂಡು ಹೋಗಿಬಿಟ್ಟವೆಂತಲೂ, ಎಲ್ಲಿ ಹುಡುಕಿದರೂ ಅವುಗಳು ಹೋದ ಮಾರ್ಗವೇ ಗೊತ್ತಾಗಲಿಲ್ಲವೆಂತಲೂ ಸಮಾಚಾರ ಬಂದಿದೆ.

ರಾಜಧಾನಿಯಲ್ಲಿ ನವರಾತ್ರಿ ಆದ ನಂತರ ನಡೆಯ ಬೇಕಿದ್ದ ಪ್ರಜಾಪ್ರತಿನಿಧಿ ಸಭಾಕೂಟವು ಪ್ಲೇಗಿನ ನಿಮಿತ್ತವಾಗಿ ಮುಂದಕ್ಕೆ ನಿಲ್ಲಿಸಲ್ಪಟ್ಟಿದೆ. ಈ ಅರ್ಥಕ್ಕೆ ನಮ್ಮ ಮಹಾರಾಜರವರು ಮೊನ್ನೆ ಘೋಷಣಾಪತ್ರ ಒಂದು ಶಾಸನವನ್ನು ಪ್ರಕಟಿಸಿ, ಎಲ್ಲಾ ಡಿಸ್ಟ್ರಿಕ್ಟ್ ಅಧಿಕಾರಿಗಳಿಗೂ ತಕ್ಕ ಮುಖೇನ ತಿಳಿಸುವಂತೆ ಮಾಡಿದರು.

ಮೈಸೂರು ಮಹಾರಾಜಾ ಕಾಲೇಜಿನ ಎಫ್. ಎ ಕ್ಲಾಸಿನಲ್ಲಿ ಓದುತ್ತಿದ್ದ ಶ್ರೀ ಕೃಷ್ಣಸ್ವಾಮಿ ಆಚಾರಿಯರು ಕಳೆದ ವಾರ ಪ್ಲೇಗ್ ರೋಗದಿಂದ ತೀರಿಹೋದರು. ಇವರಿಗೆ ಇನ್ನೂ ೨೦—೨೧ ವರುಷ ವಯಸ್ಸಾಗಿತ್ತು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದ್ದರಿಂದ ಇವರಿಗೆ ತಿಂಗಳಿಗೆ ೫ರೂ ವಿದ್ಯಾರ್ಥಿ ವೇತನ ದೊರೆಯುತ್ತಿತ್ತು. ಇಂಥಾ ಬುದ್ಧಿಶಾಲಿಯನ್ನು ಕಳೆದುಕೊಂಡ ಪಕ್ಕೆಗೆ ಎಷ್ಟು ದುಃಖವಿರಬಹುದೋ ವಿವರಿಸಲಾಗದು.

ಪಿನಿಮಸ್ ಎಂಬಂದು ಜಾಜಿನ ಕುದುರೆಯು ೬-೮ ತಿಂಗಳ ವರೆಗೆ ಮೃಗಾಲಯದಲ್ಲಿ ಯಾರೂ ಕೊಂಡುಕೊಳ್ಳದೆ ನಿಂತಿತ್ತು. ಈಚೆಗೆ ನಮ್ಮ ಕರ್ನಲ್ ದೇಶಾಯರೇ ಅದೇನವರು ಒಂದು ತಿಂಗಳ ಕೆಳಗೆ ಅದನ್ನು ಸಂಪಾದಿಸಿಗೆ ತೆಗೆದುಕೊಂಡು, ತರಬೇತು ಮಾಡಿದರು. ಈ ಕುದುರೆಯನ್ನು ಕಳೆದ ವಾರ ಪೂನದಲ್ಲಿ ನಡೆದ ಕುದುರೆ ಜೂಜಿಗೆ ಕಳುಹಿಸಿ ಓಡಿಸಿದರು. ಅದು ಎರಡು ಜೂಜುಗಳನ್ನು ಗೆದ್ದು ಸುಮಾರು ನಾಲ್ಕು ಸಾವಿರ ರೂಪಾಯಿ ಬಹುಮಾನವನ್ನು ತಂದು ಕೊಟ್ಟಿರುತ್ತದೆ.

ಶಿವಮೊಗ್ಗೆಯ ಸೆಷನ್ಸ್ ಜಡ್ಜಿಯವರು ತಿಮ್ಮ ಎಂಬೊಬ್ಬನು ಕಳವು ಮಾಡಿದನೆಂದು ತಪ್ಪು ಹೊರಿಸಿದ್ದಕ್ಕಾಗಿ ದಂಡ ವಿಧಿಸಿ, ಆ ತಿಮ್ಮನಿಗೆ ೫ ವರುಷಗಳ ಕಠಿಣ ಸಜಾ ವಿಧಿಸಿದರು. ಅದರ ಮೇಲೆ ಅವನು ಬೆಂಗಳೂರು ಛೀಫ್ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡನು. ಛೀಫ್ ಜಡ್ಜಿಯವರು—ಕೆಳಕೋರ್ಟಿನಲ್ಲಿ ಈ ಮೊಕದ್ದಮೆ ಸರಿಯಾಗಿ ವಿಚಾರಣೆ ಮಾಡಲ್ಪಡಲಿಲ್ಲವೆಂದು ಹೇಳಿ, ಸಜಾ ಶಿಕ್ಷೆಯನ್ನು ವಜಾಮಾಡಿದ್ದಲ್ಲದೆ, ಈ ಮೊಕದ್ದಮೆ ಪುನರ್ವಿಚಾರಣೆ ಆಗಬೇಕೆಂದು ತೀರ್ಮಾನ ಮಾಡಿದ್ದಾರೆ.

ಅರಸೀಕೆರೆಯ ಅಜೂಬಾಜೂನಲ್ಲಿ ಪ್ರಜೆಗಳು ಹುಲಿಯ ಸಂಗಡ ಜಗಳ ಮಾಡುವದಕ್ಕಾಗುವದಿಲ್ಲವೆಂದೂ, ಪ್ಲೇಗಿನಂತೆಯೂ ಇದರ ಕಾಟ ಹೆಚ್ಚಾಗಿದೆ ಎಂದೂ, ಇದು ವರೆಗೆ ಆ ಮೃಗವು ಜನರನ್ನು ಗೋಕರುಗಳನ್ನು ಸಂಹಾರ ಮಾಡಿ ಆ ಪ್ರಾಂತ್ಯದಲ್ಲೆಲ್ಲಾ ಸಂಚಾರ ಮಾಡುತ್ತಿದೆ ಎಂದೂ ಒಬ್ಬ ಬಾತ್ಮಿದಾರನು ಬರೆಯುವದನ್ನು ಈ ಪತ್ರಿಕೆಯು ಇನ್ನೊಂದು ಕಡೆಯಲ್ಲಿ ಪ್ರಕಟಿಸುತ್ತೇವೆ. ಅಮಲ್ದಾರರಾಗಲಿ, ಡೆಪ್ಯುಟಿ ಕಮಿಷನರಾಗಲಿ ಆ ಮೃಗದ ಕಾಟವನ್ನು ತಪ್ಪಿಸಿ ಪ್ರಜಾ ನೆಮ್ಮದಿಯನ್ನು ಕಾಪಾಡುವದಕ್ಕೆ ಪಟ್ಟಾಗಬೇಕೆಂದು ಕೋರುತ್ತೇವೆ.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ ಮಿ॥ ತಿರುಮಲಾಚಾರ್ಯರನ್ನು ಸರ್ಕಾರದವರು ಪೆನ್ಷನ್ ಮೇಲೆ ತೆಗೆದು ಬಿಟ್ಟರು. ಕಳೆದ ಮುಕ್ಕಾಲಿ ಇಲ್ಲಿನ ಲಾಯರುಗಳು ಕೋರ್ಟಿನಲ್ಲಿ ಅವರಿಗೆ ಒಂದು ಅಡ್ರೆಸ್ಸನ್ನು ಕೊಟ್ಟರು. ಮಿ॥ ತಿರುಮಲಾಚಾರ್ಯರು ಅವರಿಗೆ ಸುಸ್ತಾತ್ರವನ್ನು ಕೊಟ್ಟರು. ಮತ್ತು ಕೆಲವು ಕಾಲದಿಂದ ಮೈಸೂರಿನಲ್ಲಿ ಸಬ್ ಜಡ್ಜಿಗಳಾಗಿದ್ದ ಈಗ ಬೆಂಗಳೂರಿಗೆ ವರ್ಗವಾದ ಮಿ॥ ಸಿಂಗರಾಚಾರ್ಯರಿಗೆ ಕಳೆದ ಶನಿವಾರ ಲಾಯರುಗಳು ಕೋರ್ಟಿನಲ್ಲಿ ಅಡ್ರೆಸ್ಸು ಕೊಟ್ಟರು. ಮಿ॥ ಸಿಂಗರಾಚಾರ್ಯರು ಲಾಯರುಗಳಿಗೆ ತಕ್ಕ ಉತ್ತರವನ್ನು ಕೊಟ್ಟು ಆ ರಾತ್ರಿಯೇ ಬೆಂಗಳೂರಿಗೆ ಪ್ರಯಾಣ ಮಾಡಿದರು.

ರಾಜಧಾನಿಯಲ್ಲಿ ಸರ್ಕಾರ ಕರ್ನಾಟಕ ಆಸ್ಪತ್ರೆಯಲ್ಲಿ ಕಳೆದ ೫ ವರುಷಗಳಿಂದಲೂ ವೇತನ ಪಡೆದು ೭ ಮಂದಿ ವಿದ್ಯಾರ್ಥಿಗಳು ವೈದ್ಯವನ್ನು ಕಲಿಯುತ್ತಿದ್ದರು. ಪ್ರತಿ ವರುಷದ ಅಂತ್ಯದಲ್ಲೂ ಅವರು ಕಲಿತ ಭಾಗಗಳಲ್ಲಿ ಅವರನ್ನು ಪರೀಕ್ಷೆ ಮಾಡಿದರು. ಕಡೆಗೆ ಕಳೆದ ಜುಲೈ ತಿಂಗಳಿನಲ್ಲಿ ವಿದ್ಯಾರ್ಥಿಗಳಿಗೆ ೬ ದಿನ ಪರೀಕ್ಷೆ ನಡೆಯಿತು. ಮಿ॥ ಗಳಡ ಅಂಬಳೆ ಪಂಡಿತರು, ಕೃಷ್ಣಸ್ವಾಮಿ ಪಂಡಿತರು, ರಾಮಾನುಜಾಚಾರ್ಯರು, ಲಕ್ಷ್ಮೀನಾರಾಯಣರು, ವೆಂಕಣ್ಣ ಆಯರು ಪ್ರಶ್ನಪತ್ರಿಕೆಗಳನ್ನು ಕೊಟ್ಟರು. ಪರೀಕ್ಷೆಯ ಫಲಿತಾಂಶ ಈಗ ತಾನೇ ಪ್ರಕಟವಾಗಿದೆ. ೫ ಮಂದಿ ವಿದ್ಯಾರ್ಥಿಗಳು ಅಂದರೆ, ಎಂ. ಆರ್. ವೆಂಕಟಾಚಾರ್ಯ, ಎಂ. ಆರ್. ಕಾಮಣ್ಣ, ಎಂ. ಎಸ್. ಸಿದ್ಧಯ್ಯ, ಎಚ್. ಲಕ್ಷ್ಮೀನಾರಾಯಣ, ಗುರು ರಾವ್ ಇವರುಗಳು ಪಾಸ್ ಮಾಡಿ ತೇರ್ಗಡೆ ಹೊಂದಿದ್ದಾರೆ. ಮೊದಲು ಉದ್ದೇಶಪಟ್ಟ ಪ್ರಕಾರ ಸರ್ಕಾರದವರು ಡಿಸ್ಟ್ರಿಕ್ಟ್‌ಗಳಲ್ಲಿ ಕರ್ನಾಟಕ ಆಸ್ಪತ್ರೆಗಳನ್ನಿಟ್ಟು, ಅಲ್ಲಿಗೆ ತೇರ್ಗಡೆ ಹೊಂದಿದ ಈ ಪಂಡಿತರುಗಳನ್ನು ವೈದ್ಯರನ್ನಾಗಿ ನೇಮಕ ಮಾಡುತ್ತಾರೆಂದು ಕೇಳುತ್ತೇವೆ.

ರಾಜಧಾನಿಯಲ್ಲಿ ಪ್ಲೇಗ್ ಉಪದ್ರವವು ಬಹು ಉಗ್ರರೂಪವನ್ನು ತಾಳಿದೆ. ಜನರು ಕಾದರೂ ಪೇಟೆ ಪಾಳ್ಯಗಳಿಂದ ಗಾಳಿ ಬೀಸಿದರೂ ಅದರ ಉಲ್ಬಣ ಸ್ಥಿತಿಯು ಕಡಿಮೆಯಾಗುವಂತಿಲ್ಲ. ಎಲ್ಲಾ ಪೇಟೆಗಳಲ್ಲೂ ಉಪದ್ರವವು ವ್ಯಾಪಿಸಿಕೊಂಡಿರುವದು. ಪ್ರಜೆಗಳು ವಾಸಕ್ಕೆ ಮನೆ ಸಿಕ್ಕದೆ ಬಹಳ ಸಂಕಟ ಪಡುತ್ತಿದ್ದಾರೆ. ಹೆಲ್ತ್ ಕ್ಯಾಂಪುಗಳಲ್ಲಿ ಪ್ರಾಣಭಯದಿಂದ ಬರುವ ಜನರು ತುಳುಕಾಡುತ್ತಿರುವರು. ಕ್ವಾರಂಟೈನ್ ಪ್ರದೇಶ ಕಾಣಿಸಿಕೊಂಡ ಬಂಗಲೆಗಳಲ್ಲೂ ಕೂಡ ಮನೆಗಳಲ್ಲೂ ಇಲಿ ಹೆಗ್ಗಣಗಳು ಸಾಯುತ್ತಿರುವವು. ನಮ್ಮ ಡೆಪ್ಯುಟಿ ಕಮಿಷನರ್ ಮಿ॥ ರಾಮಾನುಜಯ್ಯಂಗಾರ್ಯರ ಜ್ಯೇಷ್ಠಪುತ್ರನು ಈ ಉಪದ್ರವಕ್ಕೆ ಸಿಕ್ಕಿ ಸರಿಸತ್ತಿರುವನು. ಆತನು ಬಿ. ಎ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಮೊನ್ನೆ ತಾನೇ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಕೆಲಸಕ್ಕೆ ಸೇರಿಕೊಂಡನು. ಈ ವಾರದಲ್ಲಿ ಜನಾರ್ದನ ಬರಲಾರಂಭಿಸಿದೆ. ಕಳೆದ ಸೋಮವಾರದಿಂದ ಉರಿ ಬಿಸಿಲು ತಪ್ಪಿ ತಂಗಾಳಿಯೂ ಮೋಡದ ಮುಸುಕಿಕೊಳ್ಳುವದೂ ನಾಲ್ಕಾರು ಹನಿ ಬೀಳುವದೂ ಪ್ರಾರಂಭವಾಗಿದೆ. ಪ್ಲೇಗ್ ಆಸ್ಪತ್ರೆಯಲ್ಲಿ ಮೊನ್ನೆ ಸಾಯಂಕಾಲ ೬೭ ಮಂದಿ ರೋಗಿಗಳು ಇರುತ್ತಿದ್ದರು. ಕಳೆದ ಸಪ್ಟೆಂಬರ್ ತಿಂಗಳಲ್ಲಿ ೧,೪೮೬ ಜನರಿಗೆ ಉಪದ್ರವ ತಗಲಿದ್ದರ ಪೈಕಿ ೧,೧೧೮ ಮಂದಿ ಕಾಲವಾದರು; ಆ ತಿಂಗಳಲ್ಲಿ ಎಲ್ಲಾ ಕಾರಣಗಳಿಂದ ೧,೪೧೭ ಜನರು ತೀರಿ ಹೋದರು. ಈ ಕೆಳಗೆ ಕಾಣಿಸಿರುವ ಅಂಕೆಗಳಿಂದ ಕಳೆದ ವಾರದ ಪ್ಲೇಗಿನ ಸ್ಥಿತಿಯನ್ನು ತಿಳಿದುಕೊಳ್ಳಬಹುದು:—

ಮೊಹಲ್ಲಾ.	ಖಾಯಿಲೆಯವರು.	ಸತ್ತವರು.	ಒಟ್ಟು ಮರಣ.
ಲಷ್ಕರಿ	[illegible]	[illegible]	[illegible]
ದೇವಾಂಗ	[illegible]	[illegible]	[illegible]
ದೇವರಾಜ	[illegible]	[illegible]	[illegible]
ನಾರಾಯಣ	[illegible]	[illegible]	[illegible]
ಕೃಷ್ಣರಾಜ	[illegible]	[illegible]	[illegible]
ಚಾಮುಂಡಿ	[illegible]	[illegible]	[illegible]
ಮಂಡಿ	[illegible]	[illegible]	[illegible]
ಪ್ಲೇಗ್ ಕ್ಯಾಂಪ್	[illegible]	[illegible]	[illegible]
ಒಟ್ಟು.	[illegible]	[illegible]	[illegible]

ನವರಾತ್ರಿ ಉತ್ಸವಗಳು.

ಕಳೆದ ೨ನೆ ತಾರೀಖು ಗುರುವಾರ ರಾಜಧಾನಿಯಲ್ಲಿ ನವರಾತ್ರಿ ಉತ್ಸವಗಳು ಪ್ರಾರಂಭವಾದವು. ಸದ್ಯ ಇಲ್ಲಿ ಪ್ಲೇಗ್ ಉಪದ್ರವು ಹೆಚ್ಚಾಗಿ ಇರುವದರಿಂದ ಈ ಉತ್ಸವಗಳ ಸಂತೋಷವು ಅಷ್ಟು ವಿಶೇಷವಾಗಿಲ್ಲ. ಉತ್ಸವಗಳು ಎಂದಿನಂತೆ ಜಗನ್ಮೋಹನ ಬಂಗಲೆಯಲ್ಲಿಯೇ ನಡೆಯುತ್ತಿವೆ. ಈ ಬಂಗಲೆಯ ಉತ್ತರ ದಕ್ಷಿಣ ದಿಕ್ಕುಗಳಲ್ಲಿರತಕ್ಕ ಹಲವು ಮನೆಗಳಲ್ಲಿ ವಾಸಮಾಡುತ್ತಿದ್ದವರನ್ನೆಲ್ಲಾ ಬೇರೆ ಕಡೆಗಳಲ್ಲಿ ವಾಸಮಾಡುವಂತೆ ಕಳುಹಿಸಿಕೊಟ್ಟು, ಆ ಮನೆಗಳನ್ನು ಉದ್ವಸ್ತ ಖಾಲಿ ಮಾಡಿಸಿದಾರೆ. ಪ್ಲೇಗಿನ ಸೋಂಕು ಮಹಾರಾಜರವರು ಇರತಕ್ಕ ಜಗನ್ಮೋಹನ ಬಂಗಲೆಗೆ ವ್ಯಾಪಿಸದಂತೆ ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರುವರು. ಆ ಬಂಗಲೆಯನ್ನು ಬಹಳ ಚನ್ನಾಗಿ ದತ್ತ ವಿಶೇಷ ಮುಂತಾದವುಗಳಿಂದ ಶುದ್ಧಮಾಡಿಸಿದರು. ಜಗನ್ಮೋಹನ ಬಂಗಲೆಗೆ ಹೋಗಿ ಬರತಕ್ಕ ಅರಮನೆ ನೌಕರಮಾನ್ಯರುಗಳನ್ನೂ, ದಿವಾನರೇ ಮುಂತಾದವರನ್ನೂ, ಪುರೋಹಿತರು ಮುತ್ಸದ್ದಿಗಳನ್ನೂ ಊರಿನಿಂದ ಪ್ರತ್ಯೇಕವಾದ ಸ್ಥಳಗಳಲ್ಲಿ ವಾಸಮಾಡುವಂತೆ ಏರ್ಪಾಡು ಮಾಡಿ ನೋಡಿಕೊಳ್ಳುತ್ತಿದಾರೆ.

ಉತ್ಸವಗಳು.

ಇದೇ ಅಶ್ವೀಜ ಶುದ್ಧ ಪಾಡ್ಯಮಿ ಗುರುವಾರ ಪ್ರಾತಃಕಾಲ ಶ್ರೀಮನ್ ಮಹಾರಾಜರವರು ಮಂಗಳ ಸ್ನಾನ ಮಾಡಿ ಶುಭನಕ್ಷತ್ರಯುಕ್ತವಾದ ಸುಮುಹೂರ್ತದಲ್ಲಿ ಪುನೆ ದೇವರಾದ ಚಾಮುಂಡೇಶ್ವರಿಯನ್ನು ಪೂಜಿಸಿ, ನಿತ್ಯ ಕರ್ಮಗಳನ್ನು ತೀರಿಸಿಕೊಂಡು, ಸುಮಾರು ೯॥ ಗಂಟೆಗೆ ದರ್ಬಾರ್ ಮಂಟಪಕ್ಕೆ ಚಿತ್ತೈಸಿ, ಪೀಠದ ಮೇಲೆ ದೀಕ್ಷಿತರಾಗಿ ಋತ್ವಿಕ್ಕು ಪುರೋಹಿತರುಗಳ ಮುಖೇನ ಕಳಶ, ವಸ್ತ್ರ, ಪ್ರತಿಮೆ, ನವಗ್ರಹ ಮುಂತಾದವುಗಳನ್ನು ಯಥಾ ವಿಧಿಯಾಗಿ ಅರ್ಚನೆ ಮಾಡಿದರು. ಇದು ಸುಮಾರು ಅರ್ಧ ಗಂಟೆ ಹೊತ್ತು ಹಿಡಿಯಿತು. ಅನಂತರ ಮಹಾರಾಜರವರು ಸಿಂಹಾಸನದ ಬಳಿಗೆ ದಯಮಾಡಿ, ಅದರ ಪೀಠದ ಬಳಿ ಇರತಕ್ಕ ಸಿಂಹವನ್ನು ವಿಧ್ಯುಕ್ತವಾಗಿ ಪೂಜೆಮಾಡಿ, ಒಂದೆರಡು ಸಲ ಸಿಂಹಾಸನಕ್ಕೆ ಪ್ರದಕ್ಷಿಣೆ ಮಾಡಿದರು. ತರುವಾಯ ಭಕ್ತಿ ಒಸ ನಾಲ್ಕು ಅರಸುಗಳು ಮಹಾರಾಜರವರ ಹಸ್ತಗಳನ್ನು ಹಿಡಿದುಕೊಂಡು ಸಿಂಹಾಸನದ ಮೇಲಕ್ಕೆ ಹತ್ತಿಸಿದರು. ಶ್ರೀಮನ್ ಮಹಾರಾಜರವರು ಸಿಂಹಾಸನದ ಮೇಲೆ ನಿಂತುಕೊಂಡ ಕೂಡಲೇ ಕೋಟೆ ಕೊತ್ತಲದಿಂದ ೨೧ ತೋಪುಗಳು ಹಾರಿದವು; ಇಂಗ್ಲಿಷ್, ಹಿಂದು ಬ್ಯಾಂಡುಗಳೂ, ಬಂಗ ಕಹಳೆ ತಮಟೆ ನಗಾರಿಗಳೂ ಭೋರ್ಗರೆದವು. ಸುತ್ತಲೂ ಜಯಘೋಷವುಂಟಾದವು. ವೇ॥ ಸುಬ್ರಹ್ಮಣ್ಯಶಾಸ್ತ್ರೀ ಅರಮನೆಯವರ ಕುಮಾರರು ಕಟ್ಟಿದ ಕತ್ತಿಯನ್ನು ತಂದು ಸಿಂಹಾಸನದ ಮೇಲೆ ಮಹಾರಾಜರವರ ಬಲಗಡೆಯಲ್ಲಿಟ್ಟರು. ತರುವಾಯ ಮಹಾರಾಜರವರು ಕುಳಿತುಕೊಂಡರು. ದರ್ಬಾರಿನಲ್ಲಿ ಯುವರಾಜರು, ದಿವಾನ್ ರು, ಮಹಾರಾಜರವರ ಮಾವರು ಭಾವಮೈದುನರು, ಕೌನ್ಸಿಲ್ ಮೆಂಬರುಗಳು, ಅರಸುಗಳು ಅಧಿಕಾರಿಗಳು, ಸಾಹುಕಾರರು, ಮ್ಯುನಿಸಿಪಲ್ ಕಮಿಷನರುಗಳೇ ಮೊದಲಾದವರೆಲ್ಲಾ ಹಾಜರಾಗಿದ್ದರು. ಮಹಾರಾಜರವರು ಸಿಂಹಾಸನದ ಮೇಲೆ ಕುಳಿತುಕೊಂಡ ಕೂಡಲೆ ದಿವಾನರೇ ಮುಂತಾದವರೆಲ್ಲಾ ಸಿಂಹಾಸನದ ಸಮೀಪಕ್ಕೆ ಹೋಗಿ ಮಹಾರಾಜರಿಗೆ ಮುಜರೆ ಮಾಡಿ, ನಜರು ಒಪ್ಪಿಸಿದರು. ಆ ಮೇಲೆ ಮಹಾರಾಜರ ಸಿಪಾಯಿಗಳು ಸಲಾಂ ಮಾಡಿ ಸಿಂಹಾಸನದ ಮುಂದೆ ಹೋದರು. ದರ್ಬಾರಿನಲ್ಲಿ ಬಹಳ ಕೊಂಚ ಜನರೇ ಇದ್ದರು. ಪ್ಲೇಗ್ ಇರತಕ್ಕ ಕಡೆಯಿಂದ ಬರತಕ್ಕ ದರ್ಬಾರಿಗಳನ್ನು ಅರಮನೆ ಒಳಗೆ ಬಿಡುವದು ಬಾಗಿಲಲ್ಲೇ ನಿಂತು ಕಳಿಸಿಬಿಟ್ಟರು. ಸುಮಾರು ೧೧॥ ಗಂಟೆಗೆ ಮಹಾರಾಜರವರು ದರ್ಬಾರನ್ನು ಮುಕ್ತಾಯ ಮಾಡಿದರು.

ಆ ದಿನ ಸಾಯಂಕಾಲ ಮಹಾರಾಜರವರು ಸಿಂಹಾಸನದ ಮೇಲೆ ಕುಳಿತುಕೊಂಡು ದರ್ಬಾರು ಮಾಡಿದರು. ಪಟ್ಟದಾನೆ ಕುದುರೆಗಳು ಕೆರೆಯಿಂದ ಮೆರವಣಿಗೆ ಬಂದಮೇಲೆ ಚಿತ್ರವಿಚಿತ್ರವಾದ ಬಾಣ ಬಿರುಸುಗಳು ಹಾರಿಸಲ್ಪಟ್ಟವು. ಆಟ್ಟಗಳ ಕುಸ್ತಿಗಳೂ ನಡೆದವು. ಈ ಪ್ರಕಾರ ಮೊದಲನೆ ದಿನದ ಉತ್ಸವಗಳು ಮುಕ್ತಾಯವಾದವು.

ಮುಂದೆ ಹತ್ತು ದಿನಗಳ ಉತ್ಸವ.

ಆ ಮಾರನೇ ದಿನವೂ ಹಾಗೆಯೇ ಮಹಾರಾಜರು ದಶರಾತ್ರಿ ಕಳೆಯುವ ತನಕ ದಿನಾ ಸಾಯಂಕಾಲದ ಹೊತ್ತಿನಲ್ಲಿ ಪದ್ಧತಿಯ ಪ್ರಕಾರ ಸಿಂಹಾಸನದ ಮೇಲೆ ಕುಳಿತುಕೊಂಡು ದರ್ಬಾರು ನಡಿಸುತ್ತಾ ಬರುವರು. ಯಾವಾಗಲೂ ೮ ಗಂಟೆಗೆ ದರ್ಬಾರು ಪ್ರಾರಂಭವಾಗಿ ರಾತ್ರಿ ೧೨ ಗಂಟೆಯ ತನಕ ನಡೆಯುವದು ಪದ್ಧತಿಯಾಗಿತ್ತು. ಆದರೆ ಪ್ಲೇಗಿನ ಭಯದಿಂದ ಈ ದರ್ಬಾರುಗಳು ಬಹಳ ಸ್ವಲ್ಪ ಹೊತ್ತು ಮಾತ್ರ ನಡೆಯುವವು. ಸಾಯಂಕಾಲ ೭ ಗಂಟೆಯ ಮೇಲೆ ಮಹಾರಾಜರವರು ದರ್ಬಾರಿಗೆ ಚಿತ್ತೈಸಿ ೭—೮ ಗಂಟೆಯೊಳಗಾಗಿ ಉತ್ಸವಗಳನ್ನು ಮುಕ್ತಾಯ ಮಾಡುತ್ತಾರೆ.

೧೦ನೆ ೧೧ನೆ ತಾರೀಖಿನ ಸಾಯಂಕಾಲ ಇಂಗ್ಲಿಷ್ ದರ್ಬಾರು ನಡೆಯುವದು. ಪ್ಲೇಗಿನ ಭಯದಿಂದ ಮಹಾರಾಜರವರು ಈ ಸಲ ಹೊರಗಿನಿಂದ ಯೂರೋಪಿಯನ್ ಸರದಾರರುಗಳ್ಯಾರನ್ನೂ ಕರೆಯಿಸುವದಿಲ್ಲ. ಮತ್ತು ಉತ್ಸವಗಳೂ ಅಷ್ಟೇನೂ ವಿಶೇಷ ವೈಭವದಿಂದಾಗಿ ನಡೆಯುತ್ತಾ ಇಲ್ಲ. ಡಿಸ್ಟ್ರಿಕ್ಟುಗಳಿಂದ ಅಧಿಕಾರಿಗಳಾಗಲಿ, ಪ್ರಜಾಪ್ರತಿನಿಧಿಗಳಾಗಲಿ ರಾಜಧಾನಿಗೆ ಬಂದಿಲ್ಲ. ಇಂಥಾದ್ದರಲ್ಲಿ ನೋಡಲು ಹೋಗುವದಕ್ಕೆ ಸುತ್ತ ಮುತ್ತಿನ ಪ್ರಜೆಗಳು ರಾಜಧಾನಿಗೆ ಬರದೇ ಇರುವದೇನೂ ಆಶ್ಚರ್ಯವಲ್ಲ. ಹೊರಗಿನವರಿಗೆ ವಿಶೇಷ ಕೊಂಡರೆ ಈ ಉತ್ಸವಗಳು ಬರುವರು. ಪ್ರತಿಯೊಬ್ಬ ಪ್ಲೇಗಿನಲ್ಲಿ ಸಿಕ್ಕಿ

ಯುವದು ಹೆಚ್ಚಾಗಿರಬಹುದು ಎಂದು ಭಯದಿಂದ ಬೀದಿಗೆ ಮನೆ ಮಾರನ್ನು ತೊರೆದುಕೊಂಡು ಅಲೆಯುತ್ತಿರುವಾಗ್ಯೆ ಈ ಉತ್ಸವದ ತಮಾಷೆ ನೋಡತಕ್ಕವರ್ಯಾರೋ ಕಾಣೆವು.

ಪ್ರತಿನಿಧಿಗಳ ಸಮಾಜ.

ಶ್ರೀಮನ್ ಮಹಾರಾಜರವರೂ, ದಿವಾನರವರೂ ಈ ಸಲ ಹ್ಯಾಗಾದರೂ ನವರಾತ್ರಿ ಕಳೆದ ನಂತರ ಪ್ರಜಾಪ್ರತಿನಿಧಿಗಳ ಸಭೆಯನ್ನು ನಡಿಸಬೇಕೆಂದು ತುಂಬಾ ಕುತೂಹಲಯುಕ್ತರಾಗಿದ್ದರು. ಕಳೆದ ಶನಿವಾರದ ತನಕ ಈ ಸಭೆಯನ್ನು ಈ ಸಲ ನಡಿಸುವದೇ ಸರಿ ಎಂದು ನಿರ್ಧರಿಸಿಕೊಂಡಿದ್ದರು. ಆದರೆ ಡಾಕ್ಟರುಗಳನ್ನು ಇದರ ಬಗ್ಗೆ ಹುದೇ ಎಂದು ಪ್ರಶ್ನೆ ಮಾಡಿದಾಗ ಅವರು—ಉಪದ್ರವು ರಾಜಧಾನಿಯ ಎಲ್ಲಾ ದಿಕ್ಕುಗಳಲ್ಲೂ ಹರಡಿಕೊಂಡು, ತುಂಬಾ ಹಾನಿ ಮಾಡುತ್ತಿದೆ; ಇಂಥಾದ್ದರಲ್ಲಿ ಪ್ರತಿನಿಧಿಗಳೇ ಮುಂತಾದ ಹೆಚ್ಚು ಜನರನ್ನು ತಾಲ್ಲೂಕುಗಳಿಂದಲೂ ಡಿಸ್ಟ್ರಿಕ್ಟುಗಳಿಂದಲೂ ರಾಜಧಾನಿಗೆ ಕರೆಸುವದು ಸರ್ವಥಾ ಚನ್ನಾಗಿಲ್ಲವೆಂಬದಾಗಿ ಅಭಿಪ್ರಾಯ ಪಟ್ಟರು. ಆದಕಾರಣ ಶ್ರೀಮನ್ ಮಹಾರಾಜರವರು ಕಳೆದ ಭಾನುವಾರದ ದಿನ ಒಂದು ಹುಕುಮನ್ನು ಪ್ರಕಟಿಸಿ ಅದನ್ನು ಡಿಸ್ಟ್ರಿಕ್ಟುಗಳಲ್ಲಿರತಕ್ಕ ಡೆಪ್ಯುಟಿ ಕಮೀಷನರಿಗೆಲ್ಲಾ ತಂತಿಯ ಮೂಲಕ ತಿಳಿಸುವಂತೆ ಆಜ್ಞೆ ಮಾಡಿದರು. ಅವರ ಅಭಿಪ್ರಾಯವೇನೆಂದರೆ.—"ಡಾಕ್ಟರುಗಳ ಅಭಿಪ್ರಾಯವನ್ನು ಅನುಸರಿಸಿ ಶ್ರೀಮನ್ ಮಹಾರಾಜರವರು ಈ ವರುಷ ಪ್ರಜಾಪ್ರತಿನಿಧಿ ಸಮಾಜವನ್ನು ಮುಂದಾಗಿ ಮಾಡಬೇಕೆಂದು ತೀರ್ಮಾನಿಸುತ್ತಾರೆ" ಎಂಬುವದೇ.

ಈ ಸಮಾಚಾರವು ಪ್ರತಿನಿಧಿಗಳಿಗೆಲ್ಲಾ ಉತ್ಸಾಹ ಭಂಗವನ್ನುಂಟುಮಾಡುವದೆನ್ನುವದಕ್ಕೆ ಸಂಶಯವಿಲ್ಲ. ಆದರೆ ಕಾಲಸ್ಥಿತಿಯು ಇಂಥಾ ಹುಕುಮನ್ನು ಪ್ರಕಟಿಸುವಂತೆ ಮಾಡಿತಲ್ಲಾ ಎಂದು ಸಕಲರೂ ವ್ಯಸನಪಡತಕ್ಕದ್ದಾಗಿದೆ. ಸದ್ಯ ರಾಜಧಾನಿಯಿಂದ ಅನೇಕ ಪ್ರಜೆಗಳು ಓಡಿಹೋಗಿದ್ದರೂ ಇರುವವರಲ್ಲೇ ದಿನಕ್ಕೆ ೫೦ ಮಂದಿಗೆ ಕಡಿಮೆ ಇಲ್ಲದಂತೆ ಒಂದು ತಿಂಗಳಿಂದ ಸಾಯುತ್ತಿದಾರೆ. ಇಂಥಾ ಭಯಂಕರವಾದ ಕಾಲದಲ್ಲಿ ಮೇಲ್ಕಂಡ ಸಮಾಜವನ್ನು ನಡೆಸದೆ ನಿಲ್ಲಿಸಿದ್ದೇ ಉತ್ತಮವಾಯಿತು.

ಕರೆಸ್ಪಾಂಡೆನ್ಸ್.

ಗೋರಿಪಾಳ್ಯದ ಸಂಗತಿಗಳು.

ಅಯ್ಯಾ,

ಈ ಊರ ಯಾವಿಗರ ಆಂಜನೇಯರ ಮನೆ ಪಕ್ಕದಿಂದ ಕೇ ದಿ ಅಂಗಡಿ ಮುಂಭಾಗದಲ್ಲಿನಿಂದ ಕೇಂದ್ರ ಅಂಗಡಿ ಮುಂದೆ ಹರಿಯುವ ಒಂದು ಚರಂಡಿಯಲ್ಲಿನ ದುರ್ನಾತದಿಂದ ಜನಾ ಕಷ್ಟ ಜನಗಳಿಗೆ ತೊಂದರೆ ಉಂಟುಮಾಡಬಹುದಾಗಿರುತ್ತೆ.

ಈ ಊರಿನಲ್ಲಿ ಒಬ್ಬ ಹುಚ್ಚನು ಯಾವಾಗಲೂ ಬೆತ್ತಲೆ ತಿರುಗುವದರಿಂದ ಇದು ಬಹಳ ನಾಚಿಕೆಕರವಾಗಿರುತ್ತೆ. ಅಲ್ಲದೆ ಪೋಲಿ ಹುಡುಗರು ಇವನನ್ನು ಕಲ್ಲುಗಳಿಂದ ಹೊಡೆದು ಘಾಯಗಳ ಮಾಡುತ್ತಾರೆ. ಸದರಿಯವನು ಇದಕ್ಕೆ ಪ್ರತಿಯಾಗಿ ತನ್ನ ಎದುರಿಗೆ ಸಿಕ್ಕಿದವರನ್ನೆಲ್ಲಾ ಹೆಂಗಸರು ಮಕ್ಕಳೆಂಬುವ ತಾರತಮ್ಯವಿಲ್ಲದೆ ಬಯ್ಯುವದು, ಕಲ್ಲುಗಳಿಂದ ಹೊಡೆಯುವದು ಈ ರೀತಿಯಾದ ತೊಂದರೆ ಮಾಡುತ್ತಾನೆ. ಇವನನ್ನು ಆಸ್ಪತ್ರೆಗೆ ರವಾನಿಸಬೇಕು.

ಈ ಊರಿನ ಸಂತೆಯಲ್ಲಿ ಕಳ್ಳ ಸೇರುಗಳ ಉಪಯೋಗ ಬಹಳವಿರುತ್ತೆ. ಈ ವಿಷಯಕ್ಕೆ ಮುನಿಸಿಪಲ್ ದರೋಗರೂ ಪೋಲೀಸಿನವರೂ ಗಮನವಿಡಬೇಕು. ಈ ಮೇಲ್ಕಂಡ ಪ್ರತಿ ಒಂದು ಸಂಗತಿಗೂ ಸರ್ಕಾರದ ಅಧಿಕಾರಿಗಳು ತಿಳಿದುಕೊಂಡು ಸ್ವತಹ ತಕ್ಕ ಏರ್ಪಾಡುಗಳು ಏನೊಂದು ಮಾಡಿಯಾರು. ಮುನಿಸಿಪಲ್ ಮೆಂಬರುಗಳಿಗೆ ಏನೂ ಅವಶ್ಯವಿರುವಂತೆ ತೋರಿಬರಲಿಲ್ಲ.

ಪ್ರತ್ಯಕ್ಷದರ್ಶಿ.

ಅರಸೀಕೆರೆ ವಿಷಯಗಳು.

ಅಯ್ಯಾ,

ಈ ಊರು ರೈಲ್ವೇ ಪೋಲೀಸ್ ನೌಕರರು ಬಡ ರೈತರ ಗೋಳು ಹಾಕಿಕೊಳ್ಳುವದನ್ನು ವಿನೋದಿಸುವರಲ್ಲ! ಇಲ್ಲಿಯ ಸ್ಟೇಷನ್ ಬಳಿ ಪ್ರತಿ ದಿನ ಸುಮಾರು ೩೦—೪೦ ಗಾಡಿಗಳು ಬಿಟ್ಟು ಇರುತ್ತವೆ. ಟ್ರೈನು ಬಂದನಂತರ ಗಾಡಿಯವರು ಬಾಡಿಗೆ ಮಾತನಾಡಿಕೊಂಡು, ಗಾಡಿ ಕಟ್ಟುವ ವೇಳೆಯಲ್ಲಿ ಮುಂದಕ್ಕೆ ಹೋಗಿ ನಿಂತು ಗಾಡಿಯವರಿಂದ ಫೀಯನ್ನು ೪ ಆಣೆಯಂತೆ ವಸೂಲ್ಮಾಡುತ್ತಾರೆ. ಯಾಗೆ ಕೊಡದೆ ಹೋದರೆ ಗಾಡಿ ಬಿಡುವದಕ್ಕೆ ತಕರಾರು ಮಾಡುತ್ತಾರೆ. ಈ ಒಡವರ ವಿಚಾರಣೆಯನ್ನು ಮಾಡತಕ್ಕವರೇ ಕಾಣುವದಿಲ್ಲ. ಈಗಲಾದರು ಮುನಿಸಿಪಾಲಿಟಿಗಳು ದಯವಿಟ್ಟು ಇವರ ಹಾವಳಿಯನ್ನು ನಿಲ್ಲಿಸಿ ಕಾಪಾಡತಕ್ಕದ್ದು. ಸದಾ ಕಾಲವಲ್ಲೂ ಕೊಡುತ್ತಲಿದ್ದಾನೆ. ತುಂಬಾ ಕೀರ್ತಿ ಬಂದೀತು.

ಕಾಲೆಜ್ಜೀಕು ತಿಮ್ಮಪ್ಪರವರ ತೋಟದ ಮನೆಯಲ್ಲಿ ಕಳೆದ ಗುರುವಾರ ಆಶ್ವೀಯ ಅಮಲ್ದಾರರು ಮತ್ತು ಸಬ್ ರಿಜಿಸ್ಟ್ರಾರ್, ಇತರ ದೊಡ್ಡ ಮನುಷ್ಯರು ಕೂಡಿ ಒಬ್ಬ ಸಂಗೀತಗಾರರಿಂದ ಗಾನವನ್ನು ಮಾಡಿಸಿ ಸಭಿಕರಿಗೆ ತುಂಬಾ ಸಂತೋಷವನ್ನುಂಟು ಮಾಡಿದರು. ಗಾಯಕರು ತುಂಬಾ ವಿದ್ವಾಂಸರಾಗಿ ತೋರುತ್ತಾರೆ.

ಈ ಊರಿನ ಪುರದ ಛಾವಡಿಯನ್ನು ಮರಾಮತ್ತರು ತುಂಬಾ ಕಾಲದಿಂದ ಎಷ್ಟು ಕೆಲಸ ಮಾಡಿಸಿದಾಗ್ಯೂ ತೀರಿಲ್ಲದೆ ತುಂಬಾ ಅನಾನುಕೂಲ ಒದಗಿರುತ್ತೆ. ದೇವರು ಮುಂದೆ ಯಾವ ವಿಧಿಯನ್ನು ಕಲ್ಪಿಸುತ್ತಾನೋ ಗೊತ್ತಿಲ್ಲ.

ಪ್ರಜಾಹಿತ ಚಿಂತಕ.

ಚಿತ್ರದುರ್ಗ ವಿಷಯ.

ಅಯ್ಯಾ,

ಕನಕಾಪುರ ಡಿಸ್ಟ್ರಿಕ್ಟ್ ಕೊಪ್ಪ ತಾಲ್ಲೂಕು ಬಿಗ್ಗಂಟೆ ಚಿತ್ರದುರ್ಗದ ಸುಬ್ರಾಯಶೆಟ್ಟಿ ಬರೆದುಕೊಂಡದ್ದು, ಅದಾಗಿ.

ನಾನು ಶ್ರೀ ದೇವರ ಗುಡ್ಡಕ್ಕೆ ಯಾತ್ರಾರ್ಥವಾಗಿ ಹೋಗಲು ಕುಟುಂಬ ಸಹ ೩ ಜನ ಗಂಡಸರನ್ನು ೩ ಜನ ಹೆಂಗಸರು, ಏಳು ವರ್ಷದ ಮಗ ೧, ನಾಲ್ಕು ವರ್ಷದ ಹುಡುಗಿ ೧, ಹತ್ತು ತಿಂಗಳ ಗಂಡು ಮಗು ೧, ಸಮೇತವಾಗಿ ಸಪ್ಟಂಬರು ತಾ॥ ೨೭ ನೆ ಶನಿವಾರ ಬಿಗ್ಗಂಟೆಯಿಂದ ಪ್ರಯಾಣ ಮಾಡಿ, ಸವಾರಿಗೆ ೩ ಎತ್ತುಗಳು ತೆಗೆದುಕೊಂಡು ಕೊಪ್ಪಕ್ಕೆ ಬಂದು, ತಾ॥ ೨೮ ನೆ ಭಾನುವಾರ ರಾತ್ರಿ ಕೊಪ್ಪದಿಂದ ಹೊರಟು ೧೨ರ ಮೇಲೆ ೩ ಘಂಟೆ ಸಮಯ ಬೀಡಿನ ಹಳ್ಳಿಗೆ ಬಂದು ಈ ದೇವಸ್ಥಾನದಲ್ಲಿ ಬಂದು ಬಿಡಾರ ಮಾಡಿದೆವು. ೫-೬ ಜನ ಬಂದು ಗಂಧಾ ತೀರುವ ಚಿಟ್ಟಿ ನೆಪಾ ಮಾಡಿಕೊಂಡು ಬಟ್ಟೆಗೆ ಒರಸಿಕೊಂಡ ಬಂಡಿಗಳನ್ನ ತಂದರು ಬಂಡಿಗಳಲ್ಲಿ ಹೆಂಗಸರು ಮಕ್ಕಳು ಇದ್ದಾರೆ. ಸವಾರಿ ಬಂಡಿಗಳು ಬಿಟ್ಟುಬಿಡಿ ಎಂದು ಹೇಳಿದ್ದಕ್ಕೆ ಬಂಡಿ ೧ ಕ್ಕೆ ೮ ಆಣೆಯಂತೆ ಕೊಟ್ಟರೆ ಬಿಡುತ್ತೇವೆ. ಇಲ್ಲವಾದರೆ ಬಿಡುವದಿಲ್ಲವೆಂತ ಹೇಳಿದ್ದರಿಂದ ಅವರಿಗೂ ನನಗೂ ವ್ಯಾಜ್ಯವಾಗಿ ಬೆಳಗಿನ ಜಾವ ೪ ಘಂಟೆ ಸಮಯದಲ್ಲಿ ಯಡತಳ್ಳಿ ಅಮಲ್ದಾರರಿಗೆ ಹೇಳಿಕೊಂಡದಕ್ಕೆ ಸದರಿ ಜವಾನನನ್ನು ಕರೆಸಿ ವಿಚಾರಿಸಿಕೊಂಡು ಅಷ್ಟಕ್ಕೇ ಮುಗಿದಿದ್ದರಿಂದ ಬಿಟ್ಟುಬಿಟ್ಟರು. ಆ ಭಾಗಸ್ಥ ಇಲಾಖಾ ಬ್ರ. ಪಂಡ ಗಂಧಾ ತೀರುವ ಚಿಟ್ಟಿ ನೆಪಾ ಮಾಡಿಕೊಂಡು ಬಂಡಿಗಳನ್ನು ಹಿಡಿಯುವರು. ಬಂಡಿ ೧ಕ್ಕೆ ೮ ಆಣೆ ವಸೂಲ್ಮಾಡಿಕೊಂಡು ಬಹಳ ಹಣ ಸಂಪಾದನೆ ಮಾಡುತ್ತಾ ಇದ್ದಾರೆ. ಸರಕಾರಕ್ಕೆ ಈ ಸಂಗತಿ ತಿಳಿದಿರಲಿಲ್ಲ. ಬಡಜನಗಳ ಗೋಳಾಟವೆಂತ ಹೇಳತೀರದು. ತಮ್ಮ ಪತ್ರಿಕೆಯಲ್ಲಿ ಈ ಸಂಗತಿ ಪ್ರಕಟಿಸಿದರೆ ಸರಕಾರಕ್ಕೆ ತಿಳುವಳಿಗೆ ಬಂದು, ಬಂಡಿಗಳು ಬೇಕಾದರೆ ಅಮಲ್ದಾರರ ಹುಕುಂ ಪ್ರಕಾರ ಬಿಟ್ಟಗ ಹಿಡಿಯಬೇಕೇ ಹೊರತು ಭಾಗಸ್ಥ ಇಲಾಖಾ ಜವಾನರು ಸ್ವತಂತ್ರಿಸಿ ಹಿಡಿಯಕೂಡದೆಂತ ಹುಕುಂ ಆದರೆ ಬಡಜನಗಳಿಗೆ ಬಹಳ ಉಪಕಾರವಾದೀತೆಂತ ನಂಬಿ ಇದ್ದೇನೆ.

ಸುಬ್ರಾಯಶೆಟ್ಟಿ.

ಗಂಡಸೀ ಸಂತೆ ಕಟ್ಟುವದು.

ಅಯ್ಯಾ,

ಈ ಗಂಡಸಿಯೇ ಮೊದಲಾದ ೬ ಹ್ರ ಗ್ರಾಮಗಳಿಗೆಲ್ಲಾ ಸುತ್ತಲಿಯ ೮—೧೦—೧೨—೧೪—೧೬ ಮೈಲಿ ಅಂತರದಿಂದ ಇಲ್ಲಿನ ಅನೇಕ ಬಡಜನಗಳ ಗೋಳಾಟವನ್ನು ನೋಡುವಂತಿದೆ. ಅಲ್ಲದೆ ಪೂರ್ವ ಅಂದರೆ ಸುಮಾರು ೧೦—೧೫ ವರ್ಷದಿಂದಾಚೆ ಈ ಗಂಡಸಿಗ್ರಾಮದ ಊರಿನ ಬಳಿ ಪ್ರತಿ ಭಾನುವಾರ ಸಂತೆ ನಡೆಯುತ್ತಿತ್ತು. ಈ ಸಂತೆ ನಿಂತುಹೋಗಿ ಈಗ್ಗೆ ಸುಮಾರು ೪॥ ವರ್ಷವಾಗಿರುತ್ತೆ. ಈ ಹುಟ್ಟೇಗೌಡರ ಮಕ್ಕಳು ರಂಗೇಗೌಡರೆಂಬುವರು ಎಲ್ಲಾ ಗ್ರಾಮದ ವರ್ತಕರು ಗೌಡರು ರೈತರೇ ಜನಗಳಿಗೆ ಪ್ರೋತ್ಸಾಹಪಡಿಸಿ ಈ ಗಂಡಸಿಯಲ್ಲಿ ಪೂರ್ವ ನಡೆಯುತ್ತಿದ್ದ ಭಾನುವಾರ ಸಂತೆ ಮುಂದೆ ಪ್ರತಿ ಗುರುವಾರ ನಡೆಯುವಂತೆ ಹುಕುಂ ಕೊಡಿಸಬೇಕೆಂದು ತಾಲ್ಲೂಕಿಗೂ ಡಿಸ್ಟ್ರಿಕ್ಟಿಗೂ ಅರ್ಜಿ ಸಹಿ ಹಾಕಿ ಕಳುಹಿಸಿಕೊಂಡದ್ದರ ಮೇಲೆ ಈ ತಾಲ್ಲೂಕಿನ ಮಿ॥ ಪ್ರೆಸಿಡೆಂಟ್ ಅಸಿಸ್ಟೆಂಟ್ ಕಮಿಷನರ್ ಅಮಲ್ದಾರರು ಪ್ರಜಾ ಪ್ರತಿನಿಧಿಗಳೇ ಮುಂತಾದ ಗಂಡಸಿ ಗ್ರಾಮದಲ್ಲಿ ಈಗ ಸಂತೆಯನ್ನು ೫ಗ ಗುರುವಾರ ನಡೆಯಲು ತೀರ್ಮಾನ ಮಾಡಿದರು. ಆದರೆ ಮಹಜರ್ ನಡೆಯುತ್ತಾ ಇತ್ತು. ಹೀಗಿರಲು ಯಾವುದೋ ನಮ್ಮ ಡೆಪುಟಿ ಕಮಿಷನರ್ - ಅವರ ಸವಾರಿ ಈ ಮೂಕತ್ತಂಗ ದಯಮಾಡಿದ್ದ ಗಂಡಸಿಯಲ್ಲಿ ಈ ರಂಗೇಗೌಡರೇ ಮೊದಲಾದವರು ಮತ್ತು ಅನೇಕ ಜನ ರೈತರುಗಳೆಲ್ಲಾ ಹೋಗಿ ನಮ್ಮ ತೋರಿಸುವಂತೆ ಬಾಸನ, ತಿಪ್ಪೂರು, ಅರಸೀಕೆರೆ, ಚನ್ನರಾಯಪಟ್ಟಣ, ಸಂಭವಿಸುವ ಈ ರಸ್ತೆ ಬಳಿ ಬಿಡಾರ ಮೇಲೆ ಸಂತೆ ಆಗುವಂತೆ ಹುಕುಂ ಕೊಡಿಸಬೇಕೆಂತ ಕೇಳಿಕೊಳ್ಳಲು ಆ ಸ್ಥಳದಲ್ಲಿ ಒನ ಕೆಗೆ ಸೀರು ನೆರಳು ಅನುಕೂಲವಾಗಲು ಭೂಮಿ, ತೋಪು ನಡುವೆ ಸಂತೆ ನಡಸುವದಾದರೆ ಹುಕುಂ ಕೊಡುತ್ತೇವೆಂತ ಅಪ್ಪಣೆ ಕೊಡಿಸಿದರು. ಅದಕ್ಕೆ ಸರಕಾರದವರ ಅರ್ಥದಲ್ಲಿ ಪ್ರೀತಿಯಿಂದ ಈ ರಂಗೇಗೌಡರು ತೋಪು ಮಾಡಿಸುವದಾಗಿ ಒಪ್ಪಿಕೊಂಡದ್ದರ ಮೇಲೆ ದಯವಿಟ್ಟು ಅವರಾಭಿಪ್ರಾಯದಂತೆ ಪ್ರಜೆಗಳ ಹಿತ ಚಿಂತನೆಯೇ ಸಹಿತ ಉತ್ಸವದಿಂದ ನಮ್ಮ ಡೆಪುಟಿ ಕಮಿಷನರ್ ಸಾ॥ ದವರು ಬಹಳ ದಯವಂತರೇ ಆದ್ದರಿಂದ ಇದೇ ಅಕ್ಟೋಬರ್ ತಾರೀಖು ೨ ನೇ ಗುರುವಾರದಿಂದ ಪ್ರತಿ ಗುರುವಾರ ಸಂತೆ ನಡೆಸುವಂತೆ ಹುಕುಂ ದಯಪಾಲಿಸಿದ್ದಾರೆ. ಹೀಗೆ ಲೋಕೋಪಕಾರವಾದ ಇಂಥಾ ಕೆಲಸಗಳನ್ನು ಅವಿಚ್ಛಿನ್ನವಾಗಿ ನಡೆಯಲು ಹುಕುಂ ದಯಪಾಲಿಸಿದ ಇವರಿಗೂ ಅಮಲ್ದಾರರವರಿಗೂ ಕೃತಜ್ಞತೆಯಿಂದ ವಂದಿಸುತ್ತೇವೆ.

ಪ್ರಜಾ ಹಿತಚಿಂತಕ.

ಇಂಡಿಯಾ ದೇಶದ ವೃತ್ತಾಂತಗಳು.

ತ್ರಿವಾಂಕೂರು ಸಂಸ್ಥಾನದ ಮಹಾರಾಜರವರು ಎಂ ಎ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಾಗಿ ಬಂದು, ಮಾಜಿ ಸ್ಟೇಟ್ ಡಿಸ್ಟ್ರಿಕ್ಟ ಮೆಜಿಸ್ಟ್ರೇಟ್ ಹುದ್ದೆಯಲ್ಲಿ ಇಟ್ಟುಕೊಂಡಿದ್ದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಯೂರೋಪಿಯನ್ ಜನರು ಪತ್ರಿಕೆಗಳನ್ನು ಸುಡ ಬಳಕೆ ವಿಚಾರಣೆ ಮಾಡಬೇಕೆಂದು, ಅಲ್ಲಿನ ಕೆಲ್ಲ ಅಧಿಕಾರಿಗಳು ಮ್ಯುನಿಸಿಪಾಲಿಟಿಗೆ ಅರ್ಜಿ ಬರೆದಿದಾರೆ.

[illegible]

ವಿದೇಶ ವರ್ತಮಾನಗಳು.

[illegible]

[illegible] ಎಂಬ ಪಟ್ಟಣದ [illegible] ಎಂಬುವ [illegible] ಪ್ರತ್ಯೇಕವಾದ ಒಂದು [illegible] ಪ್ರಜೆಗಳನ್ನು [illegible], [illegible] ಮುನಿಸಿಪಾಲಿಟಿ [illegible] ಎಂದಾಗಿ [illegible] ಪ್ರಜೆಗಳು [illegible] [illegible] ಗಳ [illegible] ಸಭೆಯ [illegible].

[illegible] ಸಿ.ಪಿ. ಯಲ್ಲಿ [illegible] ಒಂದನ್ನು [illegible] ಅವರ [illegible] ಅಲ್ಲಿ [illegible] —ನಾಯಕರುಗಳನ್ನು [illegible]; ಅಲ್ಲಿ [illegible] ರಾಜ್ಯದ [illegible] ಎಂಬುದಾಗಿ [illegible] ಹೇಳುತ್ತಾರೆ. [illegible] ಆಗಲೆಂದು [illegible] ನಾಯಕರನ್ನೆಲ್ಲಾ [illegible] ೪೦,೦೦೦ ರೂಪಾಯಿಗಳು [illegible] ಸಾವಿರ ರೂಪಾಯಿಗಳನ್ನು [illegible] ತಿಳಿದುಬಂದಿದೆ.

[illegible] ಪಟ್ಟಣದ [illegible] ರೈಲ್ವೆ ಸ್ಟೇಷನಿನಲ್ಲಿ ರೈಲ್ವೆ [illegible] ಒಂದು [illegible] ಒಂದು ಸಣ್ಣ ಪೆಟ್ಟಿಗೆಯನ್ನು [illegible] ರೈಲ್ ಗಾಡಿಗಳಲ್ಲಿ ಪ್ರಯಾಣ [illegible] ಪ್ರಯಾಣಿಕರು [illegible] ಪೆಟ್ಟಿಗೆಗೆ [illegible] ರೈಲ್ವೆ ನೌಕರರ [illegible] ೧೨,೦೦೦ ರೂ. [illegible] ಜೀವನ [illegible] ಮಕ್ಕಳು [illegible].

ಅನ್ಯಾಂ [illegible] ರಾಜ್ಯದ [illegible] ಜನಾನಿಯೊಳಕ್ಕೆ [illegible] ಬಂದಿದ್ದರು. [illegible] ಸರ್ಕಾರದ [illegible] [illegible] [illegible] ಉಪಯುಕ್ತವಾಗಿದೆ.

[illegible] ಇಂಡಿಯಾ [illegible] ಸರ್ ಆರ್. ಬಿ. [illegible] ಎಂಬ [illegible] ವರದಿಯ [illegible] ಪ್ರದೇಶದಲ್ಲಿ [illegible] ೧೦೦ ಮಂದಿ [illegible] ಆಸ್ಪತ್ರೆಯಲ್ಲಿ [illegible] ೧೦೦ ಮಂದಿ [illegible] ೪೦ ಮಂದಿ ಉಳಿಯಬಹುದು ಆದ್ದರಿಂದ ಅವರು [illegible] ಹೇಳಲಾಗಿದೆ. [illegible] ೨,೦೦೦ ಜನರಿಗೆ [illegible] ಅನ್ನ ಹಾಕುತ್ತಿದ್ದಾರೆ [illegible] ಬಹಿರಂಗಪಡಿಸುತ್ತಿದೆ ಎಂಬುದಾಗಿದೆ.

ಮೈಸೂರು ಗೆಜೆಟ್ ಸಂಗ್ರಹ.

ಶಿವಮೊಗ್ಗೆ ಡಿಸ್ಟ್ರಿಕ್ಟು ಮತ್ತು ಸೆಷನ್ಸು ಜಡ್ಜಿಯವರಾದ ಮಿ|| ಎಂ. ರಾಮಸ್ವಾಮಿ ಅಯ್ಯರ್ ಬಿ. ಎ., ಬಿ ಎಲ್ ಯವರು, ಪೆನ್ಷನ್ ಮೇಲೆ ಕೆಲಸದಿಂದ ನಿವೃತ್ತರಾದ ಮಿ|| ಬಿ. ತಿರುವೆಂಗಳಾಚಾರ್ಯರ ಸ್ಥಳಕ್ಕೆ ಮೈಸೂರಿಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಬೆಂಗಳೂರು ಸಬ್ ಜಡ್ಜಿಯವರಾದ ಮಿ|| ಎಸ್. ವೆಂಕಟವರದಯ್ಯಂಗಾರ್ಯರು ಶಿವಮೊಗ್ಗದ ಡಿಸ್ಟ್ರಿಕ್ಟು ಮತ್ತು ಸೆಷನ್ಸು ಜಡ್ಜಿಯವರಾಗಿ ನೇಮಿಸಲ್ಪಟ್ಟಿದ್ದಾರೆ.

ಮೈಸೂರಿನ ಸಬ್ ಜಡ್ಜಿಯವರಾದ ಮಿ|| ಪಿ. ಶಿಂಗರಾಚಾರ್ಯರು ಬೆಂಗಳೂರಿಗೂ, ಬೆಂಗಳೂರಿನ ಪ್ರಿನ್ಸಿಪಲ್ ಮುನ್ಸೀಫರಾದ ಮಿ|| ಎಸ್. ವರದಾಚಾರ್ಯಸ್ವಾಮಿ ಅಯ್ಯಂಗಾರ್ಯರು ಸಬ್ ಜಡ್ಜಿಯವರಾಗಿ ನೇಮಿಸಲ್ಪಟ್ಟು ಮೈಸೂರಿಗೂ ವರ್ಗಾಯಿಸಲ್ಪಟ್ಟಿರುತ್ತಾರೆ.

೨ ನೇ ಕ್ಲಾಸಿನಲ್ಲಿದ್ದ ಅಸಿಸ್ಟೆಂಟ್ ಸರ್ಜನ್ ಮಿ|| ಸಿ. ರಾಮಚಂದ್ರರಾಯರನ್ನು ೧ನೇ ಕ್ಲಾಸಿಗೂ, ೩ ನೇ ಕ್ಲಾಸಿನಲ್ಲಿದ್ದ ಅ|| ಸರ್ಜನ್ ಮಿ|| ಟಿ. ಎ. ಕೃಷ್ಣಸ್ವಾಮಿ ಮೊದಲಿಯಾರರನ್ನು ೨ನೇ ಕ್ಲಾಸಿಗೂ ಹೆಚ್ಚಿಸಿದೆ.

ಅಸಿಸ್ಟೆಂಟ್ ಸರ್ಜನ್ ಮಿ|| ಎ. ಅಪ್ಪಾದೊರೆ ಮೊದಲಿಯಾರ್ರಿಗೆ ೧೯೦೨ನೇ ಮೆ ಮತ್ತು ಜುಲೈ ತಿಂಗಳಲ್ಲಿ ಕೊಟ್ಟಿದ್ದ ಪ್ರಿವಿಲೆಜ್ ರಜವು ಆ ಕಾಗಾಯಿತು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಟ್ಟ ರಜ ಎಂದು ಭಾವಿಸಲ್ಪಟ್ಟು ಮುಂದಕ್ಕೆ ೩ ತಿಂಗಳು ಪರಿಯಂತರ ಹೆಚ್ಚಿಸಲ್ಪಟ್ಟಿದೆ.

ಹಾಸನ ಡಿ|| ಅ|| ಕಮಿಷನರ್ ಮಿ|| ಬಿ. [illegible] ಅಯ್ಯಂಗಾರ್ಯರಿಗೆ ಜನವರಿ ತಿಂಗಳಲ್ಲಿ ಕೊಡಲ್ಪಟ್ಟಿದ್ದ ೧೫ ದಿನಗಳ ಪ್ರಿವಿಲೇಜ್ ರಜವು ರದ್ದು ಮಾಡಲ್ಪಟ್ಟಿದೆ.

ಮೊಳಕಾಲ್ಮೂರು ತಾಲ್ಲೂಕು ಅಫೀಸಿಯೇಟಿಂಗ್ ಅಮಲ್ದಾರ್ ಎಂ. ಕೃಷ್ಣರಾಯರಿಗೆ ಸೆಪ್ಟೆಂಬರ್ ೨೧ ರಿಂದ ಅಥವ ಅವರು ಉಪಯೋಗಿಸಿಕೊಳ್ಳುವ ಕಾಲದಿಂದ ೧೦ ದಿನಗಳ ಪ್ರಿವಿಲೇಜ್ ರಜ ಮಂಜೂರಾಗಿದೆ. ಇವರ ಗೈರುಹಾಜರಿಯಲ್ಲಿ ತಾಲ್ಲೂಕು ಶಿರಸ್ತೆದಾರರು ಚಾರ್ಜಿ ಕೆಲಸಗಳನ್ನು ನೋಡತಕ್ಕದ್ದು.

ಪ್ರೊ|| ಅ|| ಕಮಿಷನ್ನರ್ ಮಿ|| ಯಜ್ಞನಾರಾಯಣ ಅಯ್ಯರಿಗೆ ಸೆಪ್ಟೆಂಬರ್ ೨೦ ರಿಂದ ಅಥವ ಅವರು ಉಪಯೋಗಿಸಿಕೊಳ್ಳುವ ಕಾಲದಿಂದ ೧೪ ದಿನಗಳ ಪ್ರಿವಿಲೇಜ್ ರಜ ಕೊಡಲ್ಪಟ್ಟಿದೆ.

ಎಕ್ಸೈಜ್ ಅ|| ಕಮಿಷನರ್ ಮಿ|| ನಿಜಾಮುದ್ದೀನ್ ಅಹ್ಮದ್ ಖಾನರಿಗೆ ಫೆಬ್ರವರಿಯಲ್ಲಿ ಕೊಟ್ಟಿದ್ದ ಪ್ರಿವಿಲೇಜ್ ರಜವನ್ನು ಆಗಸ್ಟ್ ೨೦ನೇ ತಾರೀಖಿನವರೆಗೆ ಮಾತ್ರ ಉಪಯೋಗಿಸಿಕೊಂಡು ಕೆಲಸಕ್ಕೆ ಹಾಜರಾದ್ದರಿಂದ, ಉಪಯೋಗಿಸಿಕೊಳ್ಳದೆ ಇರುವ ಬಾಕಿ ೨ ತಿಂಗಳ ರಜವನ್ನು ರದ್ದು ಮಾಡಿದೆ.

ಇದರ ಕೆಳಗೆ ಕಂಡ ಅಮಲ್ದಾರರು ೪ನೇ ಕ್ಲಾಸಿನಲ್ಲಿ ಖಾಯಂ ಮಾಡಲ್ಪಟ್ಟು ಅವರ ಹೆಸರಿನ ಮುಂದೆ ಕಂಡಿರುವ ಊರಿಗೆ ನೇಮಿಸಲ್ಪಟ್ಟಿದ್ದಾರೆ.

ಗುಲಾಮ್ ಮಹಮದ್ ಬಿಡಿಯವರು, ಕಗ್ಗದೇವನ ಕೋಟೆಗೆ; ಸಿ. ಶೇಷಗಿರಿರಾಯರು, ಮಂಡ್ಯಕ್ಕೆ; ಡಿ. ಕೇಶವಸಿಂಗರು, ಮಳವಳ್ಳಿಗೆ; ಎಸ್. ವೆಂಕಟರಮಣಶಾಸ್ತ್ರಿಗಳು, ತೀರ್ಥಹಳ್ಳಿಗೆ; ಅಬ್ದುಲ್ ಹಕೀಂ ರವರು ಮೂಡಿಗೆರೆಗೆ; ಎಸ್. ಕೃಷ್ಣಪ್ಪನವರು ಸೊರಬಕ್ಕೆ; ಎಂ. ಪಿ. ವಿಶ್ವನಾಥರಾಯರು, ಚಿಕ್ಕನಾಯಕನಹಳ್ಳಿಗೆ; ಪಿ. ಎಸ್. ರಾಮಸ್ವಾಮಿ ಅಯ್ಯರು, ಚನ್ನ; ಸಿ. ಮಾದಯ್ಯನವರು, ಗೋರೂರಿಗೆ.

ಮಿ|| ಎಸ್. ಗೋಪಾಲಯ್ಯಂಗಾರ್ಯರು ಮತ್ತು ಸಿ. ಬಿ. ರಾಮಸ್ವಾಮಯ್ಯನವರು ಎಕ್ಸ್ಟ್ರ ಅ|| ಕಮಿಷನರಾಗಿರುವ ವರೆಗೂ ಮಿ|| ಬಿ. ಬಾಲಾಜಿರಾವ್ ದೊಡ್ಡಬಳ್ಳಾಪುರದ ಯೂ, ಸಿ. ವೆಂಕಟರಾಯರು ಹೊಳನರಸೀಪುರದಲ್ಲಿಯೂ, ಮತ್ತು ರಾಮಸ್ವಾಮಯ್ಯನವರು ರಜದಲ್ಲಿರುವ ವರೆಗೆ ಬೆಂಗಳೂರು ರೆವಿನ್ಯೂ ಕಮಿಷನ್ ಆಫೀಸ್ ಅಸ್ಸಿಸ್ಟಂಟ್ ಪಿ. ಕೆ. ಲಕ್ಷ್ಮಣಯ್ಯನವರು ಶಿವಮೊಗ್ಗೆಯಲ್ಲಿಯೂ ಸಬ್ ಪ್ರೊಬೇಷನ್ ಅಮಲ್ದಾರರಾಗಿ ಆಕ್ಟು ಮಾಡತಕ್ಕದ್ದು.

ಇದರ ಕೆಳಗೆ ಹೆಸರಿಸಲ್ಪಟ್ಟ ಅಮಲ್ದಾರರಲ್ಲಿ ಮೊದಲು ಮೂವರು ೪ನೇ ಕ್ಲಾಸದಲ್ಲಿ ಖಾಯಂ ಮಾಡಲ್ಪಟ್ಟು, ಉಳಿದವರು ಸಬ್ ಪ್ರೊಬೇಷನ್ ಆಕ್ಟು ಮಾಡುತ್ತ ಅವರ ಹೆಸರಿನ ಮುಂದೆ ಕಂಡಿರುವ ಊರಿಗೆ ನೇಮಿಸಲ್ಪಟ್ಟಿದ್ದಾರೆ.—

ಸಿ. ಎಸ್. ವೆಂಕಟೇಶಯ್ಯನವರು, ಕುಣಿಗಲ್; ಎಚ್. ನರಸಿಂಗರಾವ್ ಭಾಸ್ಕರರಾಯರವರು, ಹರಿಹರಕ್ಕೆ; ಸಿ. ಆರ್. ಕೃಷ್ಣರಾಯರು, ಗುಡಿಬಂಡೆಗೆ; ಚನ್ನಿಂಗಪ್ಪನವರು, ತುರುವೇಕೆರೆಗೆ; ಗುಲಾಂ ಮೊಹಿಯದ್ದೀನ್ ಮೊಕ್ತೆಯರವರು, ಕೊರಟಗೆರೆಗೆ; ಶೇಖ್ ಅಬ್ದುಲ್ಲಾ ಯವರು, ಶ್ರೀರಂಗಪಟ್ಟಣಕ್ಕೆ; ಜಗನ್ನಾಥರಾಯರು, ಎಡತೊರೆಗೆ; ಮೊಹಿಯದ್ದೀನ್ ಷರೀಫರು, ಆಲೂರಿಗೆ; ಹನುಮಂತರಾಯರು, ಕಲ್ಲೋಜಿಪೇಟೆಗೆ.

ತಾಲ್ಲೂಕು ವರ್ತಮಾನಗಳು.

ಹೊಳಲ್ಕೆರೆ.—ಇಲ್ಲಿ ಮುಂಗಾರು ಆಗಾಯಿತು ಮಳೆ ಸರಿಯಾಗಿ ಬೀಳದೆ ಹೋದ್ದರಿಂದ ಮುಂಗಾರು ಬೆಳೆಗಳೂ ಹಾಳಾಗಿದ್ದವೆ. ಕಾಲುವೆ ಭೂಮಿಗೆ ಬಿತ್ತಿದ ಪೈರೆಲ್ಲ ಒಣಗುತ್ತಾ ಇದೆ. [illegible] ದನಗಳು ಮೇಯುವುದಕ್ಕೆ ಅಗ್ಗದ ಹುಲ್ಲು ಇಲ್ಲದೆ ಕುಡಿಯುವುದಕ್ಕೆ ನೀರು ಸಾಲದೆ ದನಗಳನ್ನೆಲ್ಲಾ ಮಾರುತ್ತಿದ್ದಾರೆ. ಜನಗಳಿಗಾದರೋ ತಿನ್ನುವುದಕ್ಕೆ ದವಸ ಧಾನ್ಯ ಇಲ್ಲ. ಕೊಳ್ಳುವುದಕ್ಕೆ ಹಣಕ್ಕೆ ಗತಿಯಿಲ್ಲ. ಈ ಕೆರೆ ಈ ದಿನಕ್ಕೆ ಒಬ್ಬನು ಆಹಾರವಿಲ್ಲದವರು, ಅರೆಹೊಟ್ಟೆ ತಿಂದು ಜೀವಿಸುವವರು ಅನೇಕರಾಗಿದ್ದಾರೆ. ಅನೇಕ ಗ್ರಾಮಗಳಲ್ಲಿ ಕುಡಿಯುವುದಕ್ಕೆ ನೀರಿಲ್ಲದೆ ಮನೆ ಒಂದಕ್ಕೆ [illegible] ನೀರು [illegible], ಅಥವಾ [illegible] ಯಿಂದ ನೀರು ತರುವುದು, ಈ ಪ್ರಕಾರ ಮಾಡುತ್ತಾರೆ. ಇನ್ನು ಮೇಲಾದರೂ ಮಳೆ ಬಂದೀತೆ ಎನ್ನುವುದಕ್ಕೆ ನಿರ್ಮಲಾಕಾಶವಾಗಿ ಬಿಸಿಲು ಬೀಸುತ್ತ ಇರುತ್ತೆ. ಆದ್ದರಿಂದ ಜನಗಳೆಲ್ಲಾ ತುಂಬಾ ಅಧೈರ್ಯರಾಗಿದ್ದಾರೆ. ಸರ್ಕಾರದವರು ಇಂಥಾ ಕಾಲದಲ್ಲಿ ಜನಗಳಿಗೆಲ್ಲಾ ಧೈರ್ಯ ತೋರುವಂತೆ ಮಳೆ ಬರುವುದಕ್ಕೆ ಜಪ ಅಭಿಷೇಕಾದಿಗಳಿಂದ ದೇವರ ಪ್ರಾರ್ಥನೆ ಮಾಡುವುದಕ್ಕೆ [illegible] ಬಾವಿಗಳಲ್ಲಿ ಕೆಲವು ಮೊಬಲಗು ಕೊಡಿಸಿ ಸಾಲದ್ದಕ್ಕೆ ಧನಿಕರಾದವರಿಂದ ಚಂದಾಹಾಕಿಸಿ ಧರ್ಮಕೆಲಸ ನಡಿಸಬೇಕೆಂತಲೂ, ಜಲವಸತಿಯಾಗುವಂಥಾ ಕೆರೆ [illegible] ಗಳನ್ನು ಕೊಡಿಸಿ ಜನಗಳಿಗೆ ಕೂಲಿ ಸಿಕ್ಕುವಂತೆ ಮಾಡಿಸಬೇಕೆಂತಲೂ ಹುಕ್ಕುಂ ಕೊಡಿಸಿದರೆ ಬಹಳ ಪುಣ್ಯವಿರುತ್ತೆ. ರೈತರು ಬೇಸಾಯಕ್ಕೆ ಅಲ್ಲಿ ಪಾಲು ಮಾಡುವ ಹಾಗೆ, ಅದ್ಯ ವ್ಯವಸಾಯದ ಎತ್ತುಗಳನ್ನು ಮಾರುಕಿಸಿಕೊಳ್ಳುವದು ಹಾಗೆ, [illegible] ದಾರು ಕೊಡಬೇಕಾಗಿ, ಎಂತಾ ತುಂಬಾ ಚಿಂತೆಪಡುತ್ತಾ ಇದ್ದಾರೆ. ಇಂಥಾವರಿಗೆಲ್ಲಾ ಧೈರ್ಯ ತೋರಿಸುವ ಯೋಚನೆಗಳು ಈಗಿನ ಪ್ರಜಾ ಪರಿಪಾಲನ ತತ್ಪರರಾದ ಸರ್ಕಾರದವರು ಮಾಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಚನ್ನಪಟ್ಟಣ.—ಇಲ್ಲಿನ ರೈಲ್ವೆ ಸ್ಟೇಷನ್ನಲ್ಲಿ ೪ ಮಂದಿ ಬೆಂಗಳೂರಿಗೆ ಹೊರಡುವರು ಸೇರಿ ಕೆಲವು ಮಾತುಕತೆಗೆ ಹುಚ್ಚ ಮಾಡಿದರು. ಎನೇ ಅ|| ರಾತ್ರಿ ಸ್ಟೇಷನ್ ಮಾಸ್ಟರು ಪೆಟ್ಟಿಗೆ ಮೇಲೆ [illegible] ಎಲ್ಲರು [illegible] ಒಳಗೆ ಹೋಗಿ ಬಿಟ್ಟು ಪೆಟ್ಟಿಗೆ [illegible] ಒಂದು ಗಂಟನ್ನು [illegible]

[illegible] ಅಲ್ಲಿ [illegible]

ಶಿವಮೊಗ್ಗೆ.—ಇಲ್ಲಿ ಈಗ [illegible] ಒಂದು ವಾರದಿಂದ [illegible]

ಹಾಸನ.—ಇಲ್ಲಿನ ಮ್ಯುನಿಸಿಪಾಲಿಟಿಯ [illegible]

[illegible]ದಿಂದ ಶಾಸನ್ನೆಲ್ಲಾ ದಹಿಸಿ ಬಿಡಬಹುದಲ್ಲವೆ? ಅಂಥ ಸ[illegible]ದಲ್ಲಿ ಆ ಕೆಟ್ಟನ್ನು ಅಡಗಿಸಲು ಸಾಧ್ಯವಾಗದಿರುವದೋ? ದಂಡ[illegible]ದಲ್ಲಿ ಹುಂಡೆಯೊ ಬಿಡಿಸದ ಮನೆ ಜಗುಲಿಗಳನ್ನು ಆ[illegible]ದಿಂದ ತೆಗೆಸ ಬೇಕಲ್ಲವೇ? ಈ ನ್ಯಾಯವನ್ನು ಸರ್ಕಾರ[illegible] ತಾಲೂಕು ಯೋಚಿಸಿ, ಇಲ್ಲಿಗೆ ಕಾವಲ ಬಂದೋಬಸ್ತು [illegible] ಕೊಡಿಗೆ ಅಧಿಕಾರಿಯಾಗಿ ಬಡುದಾಗಿರುವ ಅನ್ನಂಕ ಅನ್ನಲು [illegible] ಗಾರುಹಾಗುಯ ಗೋಂದುಗಳನ್ನು ಶೀಘ್ರವಾಗಿ ತೆಗೆಸತಕ್ಕದರ [illegible] ನಮ್ಮ ಸುಕ್ಷೇಮವನ್ನು ದಯಾ ಶೀಲಿಸುವರು — ಗಾರೆ [illegible] ಸಾಮಾನ್ಯವಾಗಿದೆ. ಭೀಕರ ಕಾಲವು ಸಹಿಸಲಸಾಧ್ಯವಾಗಿದೆ. [illegible] ವಾರಗಳಿಂದ ಮಳೆಯು ಕೊಂಚಕೊಂಚ ಸ್ವಲ್ಪ ಸ್ವಲ್ಪ ಹೊಡೆದ[illegible] ಅದು ಫಲಕಾರಿಯಾಗಲಿಲ್ಲ. ಸರ್ವತ್ರ ನಿರುಪದ್ರವ ಹೆಚ್ಚಾಗುತ್ತಲಿದೆ ಅತಿ ಸಮೀಪದ[illegible] ಗ್ರಾಮಗಳ ಪ್ರತಿ ಚಿಕ್ಕ ಕೊಂಪೆಗಳ, ದಾಸರ ಕೊಪ್ಪಲು, [illegible] ಕೊಪ್ಪಲು, ಗಾಣಿಕೊಪ್ಪಲು, ಉಡುವಳ್ಳಿ, ಕಾಟಳ್ಳಿ ಮೊದಲಾದ [illegible]ಗಳಲ್ಲಿ ಪ್ಲೇಗ್ ರೋಗದ ಹಾವಳಿ ಹೆಚ್ಚುತ್ತಿದೆ. ಈ ಪ್ರತಿ ಕೆಲವು [illegible]ಗಳಲ್ಲಿ ಕೆಲವರು ಸತ್ತರು. ಹಾಸನದ ಪೇಟೆಯಲ್ಲಿ ಒಂದೆರಡು [illegible]ಗಳಲ್ಲಿ ಕೆಲವು ಇಲಿಗಳು ಸತ್ತಿವೆ. ಸದರಿ ಬೀದಿಗಳವರು ಆಗಲೇ [illegible] ಗಾಬರಿಯಾಗಿ ಊರು ಬಿಡುವ ಏರ್ಪಾಡಿನಲ್ಲಿದ್ದಾರೆ. ಕಳೆದ [illegible] ಇದೇ ಕಾಲದಲ್ಲಿ ಇಲ್ಲಿನ ನಿವಾಸಿಗಳು ಪ್ಲೇಗ್ ರೋಗದ ಹಾವಳಿ[illegible] ಹಿಂಸೆಯನ್ನು ಅನುಭವಿಸಿ, ತಾಲ್ಲೂಕು ತಿಂಗಳು ಊರಾಚೆ[illegible] ಬಂದರು. ತಿರಿಗಿ ಇಷ್ಟು ಬೇಗನೇ ಅಂಥಾ ಸಂಕಟ ಬಂತಲ್ಲಾ [illegible] ಯೋಚಿಸುವವರಾಗಿದ್ದಾರೆ.

ಪುಷ್ಪಗಿರಿ.—ಈ ಪ್ರಾಂತ್ಯ ಬೆಳೆಗಳು ಬಿತ್ತಿದ ಕೆಲವು ದಿನಗ[illegible] ದೊಡ್ಡ ಮಳೆ ಬಂದು ನಂತರ ೧—೨ ತಿಂಗಳ ವರೆಗೂ ಮಳೆ ಬಾ[illegible] ಹೋದದರಿಂದ ಪೈರುಗಳೆಲ್ಲಾ ಬಾಡಿ ನಾಶವಾಗುವದರಲ್ಲಿದ್ದವು[illegible] ದೈವಕೃಪೆಯಿಂದ ಈಗ ಕೆಲವು ದಿನಗಳ ಹಿಂದೆ ಒಂದ[illegible] ಮಳೆ ಬಂದದ್ದರಿಂದ ಪೈರುಗಳೆಲ್ಲಾ ಸುಧಾರಿಸಿಕೊಂಡವು. ಬೆಳೆಗಳಿಗೆ ಮತ್ತು ಅಧಿ[illegible] ಏನೂ ಇಲ್ಲ. ಇನ್ನು ೩—೪ ಹದ ಮಳೆ ಆದರೆ ಆಗುತ್ತದೆ. ಭಾ[illegible]ಗಳಿಗೆ ಮತ್ತು ಕೆರೆಗಳಿಗೆ ಇನ್ನೂ ತಗಿನವರೆಗೆ ನೀರು ವಿಶೇಷ ಬಂದಿಲ್ಲ.— [illegible]ದಲ್ಲಿ ಒಂದು ಲಿಂಗಾಯಿತರ ಮಂದಿ ಅನೇಕ ವರ್ಷ [illegible] ತಾಳಲಾರದೆ ಭಾವಿಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡ[illegible]. ಹೊಳಲ್ಕೆರೆ ಹಳ್ಳಿಯಲ್ಲಿ ಒಬ್ಬ ಬ್ರಾಹ್ಮಣನ ಸಮೀಪ [illegible] ಅಧಿಕಾರಿಗಳು [illegible] ನಡೆದು ನಗರದ [illegible] ಹೋದನಾಗಿ [illegible] ಹೊಲಗಳಿಗೆ [illegible] ತನ್ನ ಮನೆಯಲ್ಲಿ ಅನ್ನ [illegible] ಆಗಲಿಲ್ಲವೆಂತಲೂ ಕೇಳಿ ಸತ್ತ [illegible] ಹಳ್ಳಿಯಲ್ಲಿ ಒಬ್ಬ ಹೆಂಗಸು [illegible] ಪ್ರತಿ ದಿನ ಹೊಲಕ್ಕೆ ಹೋಗಿ [illegible] ತನ್ನ ಮನೆ [illegible] ಹೊಡೆದುಕೊಂಡು ಹೋದನಾಗಿ, [illegible] ತಿರುಗಿ ಕೊಂಡು ಬಂದು [illegible] ಭಾವಿಯಲ್ಲಿ ಬಿದ್ದನಾಗಿ, ಆ ಹೆಂಗಸನ್ನು [illegible] ಭಾವಿಯ ಬಳಿಗೆ ಹೋಗಿ [illegible] ಕಾರಣ [illegible] ನಡುಗಿ [illegible] ಬಿದ್ದುಬಿಟ್ಟ ಹಾಗೆ, [illegible] ಸ್ಥಳದಲ್ಲಿ [illegible] ಬಿದ್ದುಬಿಟ್ಟ ಹಾಗೆ [illegible] ಮರಣ ಹೊಂದಿತು. [illegible] ಪೊಲೀಸ್ [illegible] ಬಿದ್ದಿದ್ದ [illegible] ಗ್ರಾಮ [illegible] ಹಳ್ಳಿಯಲ್ಲಿ [illegible].

ಶಾಲೀಸ್ ಪೇಟೆ.—ಈ ಪ್ರಾಂತ್ಯ ಕೆಲವು ದಿನಗಳಿಂದ ಮಳೆ [illegible] ಪೈರುಗಳೆಲ್ಲಾ ಬಾಡಿ ಹೋಗುತ್ತಲಿವೆ. ಬಿಸಿಲಿನ [illegible] ಸಹಿಸ ಕೂಡದಾಗಿದೆ. [illegible] ಆಕಾಶವನ್ನೇ ದೃಷ್ಟಿಸು[illegible].—ನಮ್ಮ ಅನಲಿಪದಾರ ಮ|| ಹನುಮಂತರಾಯರು [illegible] ದೇಶದಿಂದ [illegible] ಪ್ರಜಾಗಳು [illegible] ಈ [illegible] ಸಂತೋಷ [illegible].— [illegible] ಮ|| [illegible] ಪ್ರಜೆಗಳು [illegible] ಅವರು [illegible].

[illegible] ಬಿದ್ದಿದ್ದರು. ಅವರ ಸ್ಥಿತಿಯು ಬಹಳ ದಯನೀಯವಾಗಿದ್ದರಿಂದ [illegible] ಹೋದರು. ಈ ಹುಡುಗರನ್ನು [illegible] ಸಾಹೇಬ ಮ|| [illegible] ಅವರು, [illegible] ಸರ್ಕಾರದವರು [illegible] ನೀರು [illegible] ಆದ್ದರಿಂದ [illegible] ಹುಡುಗರನ್ನು [illegible] ಕರೆದುಕೊಂಡು ಹೋದರು [illegible] ೧೦ ದಿನಗಳ [illegible] ಆಸ್ಪತ್ರೆಗೆ [illegible] ಸಾಧ್ಯವೋ.— ಈ ಕಾಲದಲ್ಲಿ [illegible] ವಿಷಯ [illegible] ನಮ್ಮ [illegible] ಸಹಾಯ [illegible] ನೀರು [illegible] ದಿನಗಳವರೆಗೂ ನೀರ[illegible] ಅಂಥಾ ಸಂದರ್ಭದಲ್ಲಿ [illegible] ಕೆಲವು ಕಾರ್ಖಾನೆಗಳ[illegible] ಕೆಲವು [illegible] ಸರಕಾರದವರು [illegible] ಒಂದು [illegible] ಆದರೆ [illegible] ಇಲ್ಲ. ಅದು ಯಾವ ಕಾರಣ [illegible]? [illegible] ಜನರು [illegible] ಆದರೆ [illegible] ಸರ್ಕಾರ [illegible] ೮ ಗಂಟೆ [illegible] ಹೋಗಿ [illegible].

ಬೇಲೂರು.—ಈ ಊರಿನಲ್ಲಿ ಪ್ಲೇಗು ಸಂಬಂಧವಾದ ಯಾವ [illegible] ಇಲ್ಲವೆನ್ನು, ಈ ಊರಿನ [illegible] ಕಟ್ಟಡಗಳಲ್ಲಿ [illegible] ಕಲ್ಪಿಸಿಕೊಳ್ಳುವರೇ, ಆಕಳ, [illegible] ಊರವರೆಲ್ಲರೂ [illegible] ಮಳೆ [illegible] ದೇವಸ್ಥಾನ [illegible] ಊರಿನ [illegible] ಸುಮಾರು [illegible] ಹಳ್ಳಿಗಳಲ್ಲಿ [illegible] ಜನರು [illegible] ಮಳೆ ಬಾರದಿದ್ದರೆ [illegible] ಕಾಲದಲ್ಲಿ [illegible].

ಅರಸೀಕೆರೆ.—ಈ ತಾಲೋಕಿನ ಗ್ರಾಮಗಳ ಸ್ಥಿತಿ [illegible] ಪಟ್ಟಣ್ಣಕ್ಕೆ ಸಮೀಪದಲ್ಲಿ ಕೆಲವು [illegible] ಈ ಗ್ರಾಮದ [illegible] ಮಳೆ ಕಡಿಮೆ [illegible] ಬಹಳ ಕಷ್ಟ [illegible] ಕಾಲ [illegible] ಜನರು [illegible] ನಮ್ಮ [illegible] ಹುಲಿಯು [illegible] ಗ್ರಾಮದ [illegible] ಹೋಗಿ [illegible] ಸರಕಾರದವರು [illegible] ಜನರು [illegible] ಈ ಹುಲಿಯು [illegible] ಪ್ಲೇಗು [illegible] ಜನರು [illegible] ಮಳೆ [illegible] ಸರ್ಕಾರದವರು [illegible] ಪ್ರಜೆಗಳಿಗೆ [illegible].

ROBINSON'S PATENT BARLEY.

ರಾಬಿನ್‌ಸನ್‌ಯವರ ಬಾರ್ಲಿ ರಿಟ್ಟು.

ಸರ್ಕಾರದಲ್ಲಿ ರಿಜಿಸ್ಟರಾಗಿದೆ.

ಈ ಹಿಟ್ಟು ಸರ್ವೋತ್ಕೃಷ್ಟವಾದ ಬಾರ್ಲಿ ಎಂಬ ಜವೆಗೋಧಿಯಿಂದ ತಯಾರಿಸಿದೆ. ಇದು ಸ್ವಲ್ಪವೂ [illegible].

ಈ ಹಿಟ್ಟನಲ್ಲಿ ಸ್ವಲ್ಪವನ್ನು ಹಾಲಿನಲ್ಲಿ ಬೆರಸಿ ಕುದಿಸುವಾಗ [illegible] ಕುದಿ ಬಿಸಿನೀರು ಹಾಕಿ ಕಾಲು ಗಂಟೆ ಹೊತ್ತು ಕಾಯಿಸಿದರೆ ಹಿತವಾಗಿಯೂ ಬಲಕಾರಿಯಾಗಿಯೂ ಇರುವ ಪಾನವಾಗುವದು.

ಇದಕ್ಕೆ ಸ್ವಲ್ಪ ಹಾಲು ಮಿಶ್ರಮಾಡಿದರೆ ಮಕ್ಕಳಿಗೆ ಉತ್ಕೃಷ್ಟವಾದ ಆಹಾರವಾಗುತ್ತದೆ.

ಇದು ಜ್ವರದಿಂದ ತಾಪಪಡುತ್ತಿರುವವರಿಗೆ ಬಲಕಾರಿಯೂ ದಣಿವು [illegible] ಹೋಗುವಂಥ ಪಾನವಾಗಿರುತ್ತದೆ.

ಇದಕ್ಕೆ ಸ್ವಲ್ಪ ಲಿಂಬೆಹುಳಿಯನ್ನೂ ಸಕ್ಕರೆಯನ್ನೂ ಬೆರಸಿದ್ದು ಎಲ್ಲರಿಗೂ ಹಿತವಾದಂಥ ಪಾನವಾಗುತ್ತದೆ.

ಎಚ್ಚರಿಕೆ.— ಈ ಪ್ರಸಿದ್ಧವಾದ ಪದಾರ್ಥದಂತೆ ತೋರುವ ಕೆಳ ವಸ್ತುವನ್ನು ಕೆಲವರು ತಯಾರುಮಾಡುವದರಿಂದ ಕೊಂಡು ಹಿಟ್ಟಿನ ಡಬ್ಬಿಯ ಮೇಲ್ಭಾಗದಲ್ಲಿ ಮೈಲ್ಯಾಂಡ್ ಮೋಹರನ್ನೂ ಕೆಳಗೆ ನಮ್ಮ ರುಜುವನ್ನೂ ನೋಡಿ ತೆಗೆದುಕೊಳ್ಳಬೇಕು.

ಹೋಮೋಸಿಯಾ.

ಪತ್ನಿ ಆಕಾರ. ಕಾಗಲುತ್ತದೆ ಮೋಡು ಪಾನ ಯಾಗುತ್ತ.

ಈ ಔಷಧಿಯು ಸುಟ್ಟ, ತರಚುವ, ಕಜ್ಜಿ, ಆಸ್ತ್ರ, [illegible] ವಿದ್ಯಾರ್ಥಿ [illegible], ಕಳ್ಳು, ಮುಂತಾದವುಗಳಲ್ಲೆಲ್ಲಾ ಇದೇ ಇರಬೇಕು. ಇದಕ್ಕೆ ಸಮಾನವಾದ ಔಷಧ [illegible] ಪ್ರಸಿದ್ಧವಾಗಿದೆ.

ಈ ತೈಲವು ತಮ್ಮಲ್ಲಿ ಜೀವರಾಶಿಗಳಿಗೆ ಮಹತ್ತಾಗಿ [illegible]. ಇದನ್ನು ಉಪಯೋಗಿಸಿದ [illegible] ಮುಂತಾದವರು ಇದರ ಗುಣಗಳನ್ನು ಹೊಗಳಿ [illegible] ಕೊಟ್ಟಿದ್ದಾರೆ. ಹೋಮೋ [illegible] ಕೂಡಲೇ [illegible].

ಈ ತೈಲವು ಅರೆ ತಲೆನೋವು, ಸೊಂಟನೋವು, [illegible], ಬೆನ್ನು ಹಲ್ಲುನೋವು, [illegible], ಗಾಯಗಳು, [illegible], ಶೀತಲ [illegible] ಗುಳ್ಳೆಗಳು, ಹಲ್ಲುನೋವು, [illegible] ಗಾಯಗಳು, ಗಂಟುಗಳು, ಚರ್ಮಗಳು, ಹುಳುಕಡ್ಡಿ, [illegible] ಮುಂತಾದವುಗಳನ್ನು ಗುಣಪಡಿಸುವದು. [illegible] ಹೋಮೋ ಸಿಯ [illegible] ಹತ್ತಿರ ಇಡಲುಬೇಕು.

ಕ್ರಯ:—ಸಣ್ಣ ಡಬ್ಬಿ ೧ಕ್ಕೆ ೧ ರೂ., ದೊಡ್ಡದಕ್ಕೆ ರೂ [illegible]; ಒಂದೇ ಸಲ ೧೨ ಡಬ್ಬಿ ತರಿಸಿಕೊಂಡರೆ ಟಪಾಲು ಖರ್ಚು ಹಾಕುವದಿಲ್ಲ.

ಹೋಮೋಸಿಯಾ ಯಂಬ್ರೊಕೇಷನ್.

ಈ ತೈಲವು ಹಳೇ ರೋಗಗಳಿಗೆ ಉಪಯೋಗಿಸತಕ್ಕದು [illegible] ಇದನ್ನು [illegible]. ಇದರಲ್ಲಿ [illegible] ಗುಣಗಳು ಬಹು ತೀಕ್ಷ್ಣವಾಗಿ ಇರುತ್ತವೆ. ಅದರಲ್ಲಿ ಇನ್ನೆರಡು ಗುಣಗಳುಳ್ಳ ಹೊಸಭಾಗವಿರುತ್ತೆ. ಇದನ್ನು [illegible] ಬಹು ಬೇಗನೆ ಸೇವಿಸಿಕೊಳ್ಳಬಲ್ಲದು. ಡಬ್ಬಿಗೆ [illegible] ೧ ರೂ. ೧೨ ಒಂದೇ ಸಲ [illegible] ಟಪಾಲ್ ಖರ್ಚು [illegible] ಎಲ್ಲಾ ಶಾಪುಗಳಲ್ಲಿಯೂ ಸಿಕ್ಕುವದು.

ಈ ಔಷಧಗಳ ವಿವರಣೆಯೂ, ಸರ್ಟಿಫಿಕೇಟುಗಳೂ ಉಚಿತ [illegible] ಅಪೇಕ್ಷಿಸುವವರಿಗೆ ಕಳುಹಿಸುವೆವು.

ವಿಳಾಸ:—[illegible]

ಬೇಗನೋಡಿ! ಓಡಿಹೋದೀತು!! ವ್ಯಸನ ಪಡಬೇಕಾಗುತ್ತೆ!!!

ಪಟ್ಟಾಭಿಷೇಕದ ಚಿತ್ರ ಪುಸ್ತಕಗಳು ಕೆಲವುಮಾತ್ರ ಉಳಿದಿವೆ. ಜಾಗ್ರತೆಯಲ್ಲಿ ತರಿಸಿಕೊಳ್ಳದೆ ಹೋದರೆ ದಳ್ಳಾಳಿಗಳು ಎಲ್ಲವನ್ನು ಕೊಂಡುಕೊಂಡು ಹೆಚ್ಚು ಬೆಲೆಗೆ ಮಾರುತ್ತಾರು!!! ಪ್ರತಿಯೊಬ್ಬರ ಮನೆಯಲ್ಲೂ ಇರತಕ್ಕದ್ದು. ಈ ಚಿತ್ರಪುಸ್ತಕದ ಸುಲಭ ಬೆಲೆಯನ್ನು ಜನಗಳು ಕೇಳಿ ಒಳ್ಳೆ ವಿಶಾಲವಾದ [illegible] ಕಾಗದ ಬರೆಯುತ್ತಾರೆ. ಚಿತ್ರಪುಸ್ತಕವು ಇಂಗ್ಲೆಂಡ್ ಸ್ಕಾಟ್‌ಲೆಂಡ್ ಅಮೇರಿಕ ಮುಂತಾದ ಪರದೇಶಗಳಿಗೂ ಸಹ ಕಳುಹಿಸಲ್ಪಟ್ಟಿದೆ. ಈ ಪುಸ್ತಕದಲ್ಲಿ ಮಹಾರಾಜರು, ಯುವರಾಜರು, ರೆಸಿಡೆಂಟರು, ಪ್ರೇಸರ್‌ಸಾಹೇಬರು, ಕೇಂಬಲ್ ಸರದಾರರು, ಮಂತ್ರಿಗಳಾದ ಕೃಷ್ಣಮೂರ್ತಿಗಳು ಆಕಾಶದಿಂದ ದೇವರಾಯಸಮುದ್ರ, ಶ್ರೀ ಚಾಮುಂಡೇಶ್ವರಿಬೆಟ್ಟ, ಮೈಸೂರು ಜಿಲ್ಲೆ ಸುಂದರವಾದ ಭುವನೇಶ್ವರಿಯ ಬಾಗಿಲು, ಬೆಂಗಳೂರು ಅರಮನೆ—ಇವುಗಳು ಬಹು ರಮಣೀಯವಾಗಿವೆ. ಚಿತ್ರಗಳು ಎಂದಿಗೂ ಕೆಡತಕ್ಕವುಗಳಲ್ಲ ಪುಸ್ತಕದ ಕ್ರಯ ಎಂಟಾಣೆ ಮಾತ್ರವೇ.

ವಿ. ಪಿ. ಪಿ. ಮೂಲಕ ತರಿಸಿಕೊಂಡರೆ ಹನ್ನೊಂದು ಆಣೆಗಳಾಗುತ್ತವೆ. ಮಹಿಳಾಸಖೀ ಎಂಬ ಮಾಸಪತ್ರಿಕೆಗೆ ಹೊಸದಾಗಿ ಚಂದಾ ಕೊಟ್ಟರೆ ಚಿತ್ರ ಪುಸ್ತಕವು ಸಾಲ್ಯಾಕೆಗೆ ದೊರೆಯುವದು.

ಮಹಿಳಾಸಖೀ ಚಂದಾ ವರುಷ ೧ಕ್ಕೆ:—ಸ್ಥಳದವರಿಗೆ ೦—೬—೦
" " —ಪರಸ್ಥಳದವರಿಗೆ ೦—೯—೦

ಚಿತ್ರಪುಸ್ತಕ ಬೇಕಾದ ಸ್ಥಳದ ಚಂದಾದಾರರು ನಾಲ್ಕಾಣೆ ಕೊಟ್ಟರೆ ಪುಸ್ತಕವು ದೊರೆಯುವದು. ಚಿತ್ರಪುಸ್ತಕ ಬೇಕಾದ ಪರಸ್ಥಳದ ಚಂದಾದಾರರು ಆರಾಣೆ ಕೊಟ್ಟರೆ ಪುಸ್ತಕವು ದೊರೆಯುವದು.

ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು.	ಅಥವಾ	ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಬೆಂಗಳೂರು ಪೇಟೆ.

ಜ್ವರಹರಿ. 10



ಇದು—ಸಾಧಾರಣ ಜ್ವರ, ಚಳೀಜ್ವರ, ಮೋರೇಜ್ವರ, ಪಿತ್ತಜ್ವರ, ಶೀತಜ್ವರ, ವಾತಜ್ವರ, ಚಳಿ ಹಿಡಿಯುವದು, ಎಂಬ ಸಕಲ ವಿಧವಾದ ಜ್ವರಗಳನ್ನು ಬಹು ಬೇಗನೆ ವಾಸಿಮಾಡುವದು. ಇದನ್ನು ಸೇವಿಸುತ್ತಾ ಬಂದರೆ ಆಯುರ್ವೃದ್ಧಿಯನ್ನೂ ಕೊಡುವದು. ಪ್ರಯಾಣ ಮಾಡತಕ್ಕವರು ಈ ಔಷಧವನ್ನು ಅವಶ್ಯವಾಗಿ ಹತ್ತಿರ ಇಟ್ಟುಕೊಂಡಿರಬೇಕು. ಇದು ದೇಹವನ್ನು ಬಹಳ ಒಳ್ಳೇ ಸ್ಥಿತಿಯಲ್ಲಿ ಇಟ್ಟುಕೊಳ್ಳಬಲ್ಲದು. ಇದನ್ನು ಉಪಯೋಗಿಸಿದವರ ಕಾಗದಗಳನ್ನು ಅಪೇಕ್ಷಿಸಿದವರಿಗೆ ಕಳುಹಿಸುತ್ತೇವೆ. ಸಣ್ಣ ಮತ್ತು ದೊಡ್ಡ ಸೀಸೆಗಳಲ್ಲಿ ಹಾಕಿ ಮಾರಲಾಗುವದು.

ಕ್ರಯ:—ಸೀಸೆ ೧ಕ್ಕೆ ೮ ಆಣೆ, ೧ ರೂ., ೧½ ರೂ., ೩ ರೂ., ೧೧ ರೂ. ಹನ್ನೆರಡು ಸೀಸೆ ತರಿಸಿಕೊಂಡರೆ ಪೋಸ್ಟೇಜು ಮಾಫಿ ಮಾಡಲಾಗುವದು.

ಓಮಂ ಕರ್ಪೂರ.

ಈ ಔಷಧವು ಅಜೀರ್ಣ, ಶೀತಭೇದಿ, ಸಾಧಾರಣ ಹೊಟ್ಟೆ ನೋಯುವದು, ವಾಂತಿಭೇದಿ, ನಾನಾತರದ ಹೊಟ್ಟೆನೋವುಗಳು—ಮುಂತಾದ್ದಕ್ಕೆಲ್ಲಾ ದಿವ್ಯೌಷಧವಾಗಿ ಪರಿಣಮಿಸಿ, ಕೂಡಲೇ ಗುಣಪಡಿಸುವದು. ಇದು ಹೆಂಗಸರು ತಿಂಗಳಿಗೆ ಒಂದಾವರ್ತಿ ಹೊರಗೆ ಆಗುವಾಗ್ಯೆ ಹೊಟ್ಟೆನೋವು ಮುಂತಾದ ವ್ಯಾಧಿಗಳನ್ನು ಕೂಡಲೆ ಗುಣಪಡಿಸುತ್ತದೆ. ಕ್ರಯದ ಪರವು ಜ್ವರಹರಿ ಎಂಬ ಔಷಧದಂತೆಯೇ. ಸೀಸೆಗಳಲ್ಲಿ ದೊರಕುವದು.

ಕಡಪದ ಅಸಿಸ್ಟೆಂಟು ಸರ್ಜನ್ ಗಣಪತಿಯವರು—ತಿರ್ಯ ಓಮಂ ಕರ್ಪೂರವನ್ನು ನಾನೂ ನನ್ನ ಕಾಲೇದಾರರೂ ಮ್ಯುನಿಸಿಪಲ್ ಆಸ್ಪತ್ರೆಯಲ್ಲಿ ಅನೇಕ ವರುಷಗಳಿಂದಲೂ ಕಾಲರಾ, ಅತಿಸಾರಭೇದಿ, ಅಜೀರ್ಣ ರೋಗಿಗಳಿಗೆ ಕೊಡುತ್ತೇವೆ. ಕೊಟ್ಟ ಕೂಡಲೆ ಅವರ ರೋಗವು ಗುಣವಾಗುತ್ತಲಿದೆ. ಇದು ಬಹು ಒಳ್ಳೇ ಔಷಧಿ ಎಂದು ಬರೆದಿದ್ದಾರೆ.

ಈ ಶಾಸ್ತ್ರ ಔಷಧಗಳೂ ಊರೂರುಗಳಲ್ಲಿರುವ ವೈದ್ಯಶಾಲೆಗಳಲ್ಲೂ, ಹೊಸ ಶಾಪುಗಳಲ್ಲೂ, ಔಷಧ ವ್ಯಾಪಾರಿಗಳಲ್ಲೂ ಕ್ರಯಕ್ಕೆ ಸಿಕ್ಕುತ್ತವೆ. ಇದಲ್ಲದೆ ಕೆಳಗಿನ ವಿಳಾಸದಾತ್ರಲ್ಲಿ ವಿಶೇಷ:—ಪಿಕ್ಕಿಯುವರ ಗ್ರೇಟ್ ಇಂಡಿಯನ್ ಔಷಧಗಳ ಕಂಪೆನಿ ಶೇರ್ಡ್ ಲೇನ್ ಕೈನ್, ಮದರಾಸ್.

ಎಡ್‌ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರ ಚಕ್ರವರ್ತಿನಿಯವರ ಜೀವ ಚರಿತ್ರೆಯು.

ದಪ್ಪನಾದ ಹೊಳೆಯುವ ಕಾಗದ, ಅನೇಕ ಫೋಟೋ ಗ್ರಾಫ್‌ಗಳಿಂದ ಕೂಡಿದ್ದು; ಚಕ್ರವರ್ತಿಯವರು, ಚಕ್ರವರ್ತಿನಿಯವರು, ವಂಶಜರು, ಇವರ ಪತ್ನಿಯವರು ಮುಂತಾದವರ ಫೋಟೋ ಪ್ರಿಂಟಾಗಿವೆ. ಇದಲ್ಲದೆ ವಿಲಾಯಿತಿಯಲ್ಲಿ ಪ್ರಖ್ಯಾತವಾಗಿರುವ ಬೇರೆ ಬೇರೆ ರಾಜಭವನಗಳೂ, ಸೆಂಟ್ ಪಾಲ್ ದೇವಾಲಯ, ವೆಸ್ಟ್ ಮಿನಿಸ್ಟರ್ ಅಬಿ ಎಂಬ ಭವನವೂ ಮೊದಲಾದವುಗಳ ಚಿತ್ರಗಳು ಬಹು ಸುಂದರವಾಗಿ ಕಾಣಿಸುವಂತೆ ಪ್ರಿಂಟಾಗಿವೆ.

ಕ್ರಯ ೧ ಪ್ರತಿಗೆ ೪ ಆಣೆ, ಪೋಸ್ಟೇಜು ಬೇರೆ.

ವಿಳಾಸ:—ಮೈಸೂರು ಮಿಷನ್ ಬುಕ್ ಡಿಪೋ; ಅಥವಾ ಬೆಂಗಳೂರು ಸಿಟಿ ಮಿಷನ್ ಬುಕ್ ಡಿಪೋ.

ಶಾಲೀವಾಹನ ಶಕ ೧೮೨೪ ನೇ ಶುಭಕೃತು ನಾಮ ಸಂವತ್ಸರದ ಆಶ್ವೀಜ ಶುದ್ಧ ಸಪ್ತಮಿ ಗುರುವಾರದಿಂದ ಆಶ್ವೀಜ ಶುದ್ಧ ತ್ರಯೋದಶಿ ಬುಧವಾರದ ವರೆಗಿನ ವಾರದ ಪಂಚಾಂಗ.

೧೯೦೨ನೇ ಇಸವಿ ಅಕ್ಟೋಬರ್.

ತಾ.	ವಾರ.	ತಿಥಿ.	ಘಳಿಗೆ.	ನಕ್ಷತ್ರ	ಘಳಿಗೆ.	[illegible]
9	ಗುರು *	ಸಪ್ತಮಿ	0 38	ಪೂಷಾ	53-42	[illegible]
10	ಶುಕ್ರ §	ಅಷ್ಟಮಿ	5-39	ಉ ಷಾ	59-28	[illegible]
11	ಶನಿವಾರ /	ನವಮಿ	10-2	ಶ್ರ	60 0	[illegible]
12	ರವಿವಾರ †	ದಶಮಿ	13-24	ಶ್ರ	4 38	[illegible]
13	ಚಂದ್ರ ¶	ಏಕಾದಶಿ	15 15	ಧ	8 28	[illegible]
14	ಕ.ಜವಾರ ‡	ದ್ವಾದ	16 58	ಶ	11 8	[illegible]
15	ಬುಧ ◊	ತ್ರಯೋದ.	16 50	ಪೂಭಾ	12 16	[illegible]

* ದುರ್ಗಾರ್ಘ್ಯಪೂಜಾ § ಕಾಳಿಕಾಷ್ಟಮಿ, ತಿರುಪತಿ ವೆಂಕಟಸ್ವಾಮಿ ರಥ / ಮಹಾನವಮಿ, ಆಯುಧಗಳ ಪೂಜಾ † ವಿಜಯದಶಮಿ, ಶಮೀಪೂಜಾ. ¶ ಸರ್ವತ್ರ ಏಕಾದ. ‡ ಶ್ರೀರಂಗಪಟ್ಟಣದಲ್ಲಿ ಚಾಮುಂಡೀಶ್ವರೀ ಉತ್ಸವ.

ಪೇಟೆ ಧಾರಣೆ.

ದಿನಿಸಿ.	ಮೈಸೂರು	ಬೆಂಗಳೂರು
ಅಷ್ಟೇ ಅಕ್ಕಿ ಪಲ್ಲ ೧ಕ್ಕೆ ರೂ.	೧೧-೦-೦	[illegible]
ಕಿಂಬೂತಿ ಅಕ್ಕಿ ಅದರ	೧೧-೦-೪	೧೧-೪
ಸಿಟಿಸೋ ದುಯಂ	೧೦-೦-೦	೧೧-[illegible]
ಕಾಸಿ ವ ಅಕ್ಕಿ	೧೧-೦-೦	೧೭-[illegible]
ಸಣ್ಣಕ್ಕಿ ಅದರ	೧೭ ೦-೦	೧೭-[illegible]
ಸಿಟಿಸೋ ದುಯಂ	೧೨-೪-೦	೧೧-೧೭
ಹೊಗೆ ಜೇಳ ಪಲ್ಲ ೧ಕ್ಕೆ	೧೧-೪-೦	[illegible]
ಸಿಟಿಸೋ ದುಯಂ	೧೧-೦-೦	೧-[illegible]
ಕೈರ ರಾಗಿ ಪಲ್ಲ ೧ಕ್ಕೆ	೪-೪-೦	೪-[illegible]
ಕಡಲೆ	೭-೦-೦	[illegible]
ಜೋಳ	೪-೪-೦	[illegible]
ಹುರುಳಿ ಪಲ್ಲ ೧ಕ್ಕೆ	೫-೪-೦	[illegible]
ಬೇಳೆ ಅವರೆ	೫ ೪ ೦	[illegible]
ಹೆಸರು	೬-೪-೦	[illegible]
ಉದ್ದು	೯-೬-೦	[illegible]
ತೊಗರಿ	೧೦-೦-೦	೯-೪-[illegible]
ಎಳ್ಳು	೧೭-೪-೦	೧೧-[illegible]
ಹುರುಳಿ	೪ ೪-೦	[illegible]
ಹರಳು ಎಣ್ಣೆ ಸೇರಿಗೆ	೬-೪-೦	[illegible]
ಸೀಗೇಕಾಯಿ ಮಣ ೧ಕ್ಕೆ	೧-೦-೦	[illegible]
ಮೆಣಸಿನಕಾಯಿ	೨-೪-೦	[illegible]
ಮುಯಂ ತರಹ	೨-೦-೦	[illegible]
ಬೆಲ್ಲ ದೊಡ್ಡ ಅಚ್ಚು	೫ ೦-೦	[illegible]
ಒಳ್ಳೆಯ ಮಣ ೧ಕ್ಕೆ	೬-೪-೦	[illegible]
ಹರಳು	೭-೪-೦	[illegible]
ಕೊತ್ತುಂಬರಿ ಪಲ ೧ಕ್ಕೆ	೭-೪-೦	[illegible]
ಹುಣಸೆ	೯-೪-೦	[illegible]
ಹುಣಸೇ ಹಣ್ಣು	೦-೧೨-೦	[illegible]
ಹಳೇ ಹುಣಸೆಹಣ್ಣು	೦-೧೦-೦	[illegible]
ತುಪ್ಪ	೧೨-೦-೦	[illegible]
ಸೀಮೆಯುಂಡೆ ಪೇಟೆ ೧ಕ್ಕೆ	೪-೪-೦	[illegible]
ತೆಂಗಿನಕಾಯಿ ೧೦೦ ಕ್ಕೆ	೪-೪-೦	[illegible]
ಅಳಲೆಕಾಯಿ ಮಣ ೧ಕ್ಕೆ	೧ ೪-೦	[illegible]
ಅಂಟುವಾಳದಕಾಯಿ ಮಣಂಕ್ಕೆ	೦-೧೨-೦	[illegible]
ಚಕ್ (ನಾರಿ) ಕೆಂಪು	೧೫-೪-೦	[illegible]
" " ಜಬಿಡು	೧೫-೪-೦	[illegible]
" " ಸಪ್ಪೆ ತೊಲ ೧ಕ್ಕೆ	೨೨-೦-೦	[illegible]
[illegible] ೧೦೦ ಕ್ಕೆ	೭೨ ೦-೦	[illegible]

Printed and Published by the Rev. E. W. Thompson, [illegible] the Proprietor and Manager, Wesleyan Mission Press, Mysore. 9/10/1902.

ವೃತ್ತಾಂತ ಪತ್ರಿಕೆ.

ಕ್ರಯ ೧ ದುಡ್ಡು —o:— ಕ್ರಯ ೧ ದುಡ್ಡು

ಪ್ರತಿ ಗುರುವಾರ ಪ್ರಾತಃಕಾಲದಲ್ಲಿಯೂ ಪ್ರಕಟಿಸಲ್ಪಡುವದು.

ಸಂಪುಟ ೧೬. ಮೈಸೂರು—ಸನ್ ೧೯೦೮ ನೇ ಇಸವಿ ಅಕ್ಟೋಬರ್ ತಾರೀಖು ೧೬ ನೇ ಗುರುವಾರ. ಸಂಚಿಕೆ ೨೦

ಒಳ್ಳೇ ಔಷಧಗಳು.

18

ನಯನವ್ಯಾಧಿಗೆ ಸುಖಾಂಜನವು.—ಹೊಸತಾಗಿ ಅಥವಾ ಬಹು ಕಾಲದಿಂದ ಕಣ್ಣುಗಳಲ್ಲಿ ಇರುತಿದ್ದ ಎಲ್ಲ ಪ್ರಕಾರದ ಬಾಧೆಗಳು ಇದರಿಂದ ಬಹು ಬೇಗನೆ ಗುಣಹೊಂದುವವು. ಕಣ್ಣುಗಳಲ್ಲಿ ಕೆಂಪೇರುವಿಕೆ, ಕಣ್ಣಿನಿಂದ ನೀರೂ, ಪಿಸರೂ ಬರುತ್ತಿರುವದೂ, ಉರಿ, ಬೆಳಕಿಗೆ ನೋಡಲಿಕ್ಕೆ ಆಗದಿರುವದೂ, ದೃಷ್ಟಿಮಾಂದ್ಯ ಮುಂತಾದ ವಿಶಿಷ್ಟ ವ್ಯಾಧಿಗಳು ಗುಣಹೊಂದುತ್ತವೆ. ಕ್ರಯ ೧ ಡಬ್ಬಿಗೆ ೧ ರೂ. ಪೋಸ್ಟ ಖರ್ಚು ಅಗಲ.

ವಾಯುಸಂಹಾರಕತೈಲ.—(ಬಾಹ್ಯಲೇಪನಕ್ಕೆ ಮಾತ್ರ). ಇದನ್ನು ತಿಕ್ಕಿದ ೫ ನಿಮಿಷದೊಳಗೆ ಸಂಧಿವಾತ, ಕಟಿವಾತ, ಮ ಇತರ ವಾಯುಗಳ ಬಾಧೆ, ತಲೆನೋವು, ಚಿಕ್ಕ ಹುಡುಗರ ಉಬ್ಬಸ, ಕೆಮ್ಮು ಕೂಡ ಗುಣಹೊಂದುವವು. ಕುಪ್ಪಿಗೆ ೧ ರೂ. ಖರ್ಚು ಆಣೆ ೬.

ಅಮೃತರಸ ಳನೆ ನಂಬರ.—ಇದರ ಸೇವನದಿಂದಲೇ ಏನೊಂದು ಬಾಧೆ ಇಲ್ಲದೆ ಹೊಸ ಮತ್ತು ಹಳೇ ತರಕ್ಕೆ ಬಿದ್ದ ಜ್ವರಗಡೆಗಳು ಕರಗಿ ಹೋಗಿ ಮೈಯಲ್ಲಿ ಶಕ್ತಿಯೂ, ಕಾಂತಿಯೂ, ಆರೋಗ್ಯವೂ ಪ್ರಾಪ್ತವಾಗುವದು. ಕಯು ಕುಪ್ಪಿಗೆ ರೂ. ೨—೪ ಆಣೆ, ಖರ್ಚು ಆಣೆ ೬.

ಗುಹಶರ್ಕದಮುಲಮು.—೨ ಯಾ ೩ ಆವರ್ತಿ ಹಚುವದರೊಳಗೆ ಎಂಥ ... ಗುಹಶರ್ಕ ಯಾ ದದ್ದು ಇದರೂ ಪೂರ್ಣ ಗುಣಹೊಂದುವದು. ... ಆಣೆ, ಖರ್ಚು ೧ ರಿಂದ ೬ ಡಬ್ಬಿವರೆಗೆ ಆಣೆ ೬. ವಿ. ಪಿ. ಯಿಂದಲೂ ರವಾನಿಸುವೆವು. ಇನ್ನು ಅನೇಕ ಉಪಯುಕ್ತವಾದ ಔಷಧಗಳ ಬಗ್ಗೆ ನಮ್ಮ ಕ್ಯಾಟಲಾಗು ತರಿಸಿ ಓದಿನೋಡಿ.

ರಾಜವೈದ್ಯ ಮತ್ತು ಕಂಪನಿ, ಬಿಳಗಿ, ಉತ್ತರ ಕನ್ನಡಾ ಜಿಲ್ಲಾ.

ವಿಶೇಷ ಓದಿ ನೋಡಿ! ಓದಿ ನೋಡಿ! ಓದಿ ನೋಡಿ!

ಕಟ್ಟಿದ ಹಣ್ಣಿನ ಗಿಡಗಳು.

6

ಮಾವಿನ ಗಿಡಗಳು:—ರಸಪುರಿ ಮೊದಲಾಗಿ ೬ ರಿಂದ ೮ರೂ. ನೀಲಂ ಗೋವಾ ೮ ರಿಂದ ೧೦ರೂ., ಬಾದಾಮಿ ೯ ರಿಂದ ೧೨ರೂ., ಸುಂದರಷಾ ೧೨ ರೂ., ಅಪೂಸ ೯ ರಿಂದ ೧೦ ರೂ.

ಕಟ್ಟಿದ ಕಿತ್ತಳೆ, ಸಾತಗುಡಿ ಕಿತ್ತಳೆ, ಸಿಂಬೆ, ಚಕೋತ್ರ, ಪೇರು, ಸಪೋಟಾ, ದಾಳಿಂಬೆ, ನಿಂಬೆಹಣ್ಣು ಮತ್ತು ಸೀಬೆ:—ಡಜನ್ ಒಂದಕ್ಕೆ ೬ ರೂ. ಅಂಜೂರ, ದ್ರಾಕ್ಷಿ, ಬಾದಾಮಿ, ಪಪ್ಪಾಯಿ,—ಡಜನ್ ಒಂದಕ್ಕೆ ೩ ರೂ.

ಇತರ ಹೂವಿನ ಗಿಡಗಳು ಮತ್ತು ಬೀಜಗಳ ಕ್ಯಾಟಲಾಗಿನ ಕ್ರಮದಲ್ಲಿ ರವಾನಿಸುತ್ತೇವೆ.

ಈ ಕೆಳಗೆ ನಮೂದಾಗಿರುವ ಪುಸ್ತಕಗಳು ನಮ್ಮಲ್ಲಿ ಮಾರಲ್ಪಡುತ್ತವೆ. ಬೇಕಾದವರು ವಿ. ಪಿ. ಮೂಲಕ ತರಿಸಿಕೊಳ್ಳಬಹುದು.

ಶ್ರೀ ಕೃಷ್ಣರಾಜ ವಾಣೀವಿಲಾಸ ಹೆಂಬ ಮಹಾಭಾರತದ ಕನ್ನಡ ಟೀಕು:—ಆದಿಪರ್ವ ೩ ೦ ೦, ಸಭಾಪರ್ವ ೧ ೦ ೦, ಭೀಷ್ಮ ೨ ೦ ೦ ಸ್ತ್ರೀಪರ್ವ ೦ ೬ ೦, ಅನುಶಾಸನಿಕಪರ್ವ ೩ ೧೨ ೦

ಶ್ರೀ ಕೃಷ್ಣರಾಜ ವಾಣೀವಿಲಾಸವೆಂಬ ಭಾಗವತ ಕನ್ನಡಟೀಕು:—ಪ್ರಥಮ ದ್ವಿತೀಯ ತೃತೀಯ ಸ್ಕಂಧಗಳು ೨ ೦ ೦, ಚತುರ್ಥ ಪಂಚಮ ೧ ೧೨ ೦, ಷಷ್ಠ ಸಪ್ತಮ ಅಷ್ಟಮ ನವಮ ೨ ೮ ೨, ದಶಮ ೨ ೮ ೦, ಏಕಾದಶ ದ್ವಾದಶ ೧ ೮ ೦.

ಶ್ರೀ ಚಾಮರಾಜೋಕ್ತಿ, ವಿಲಾಸವೆಂಬ ರಾಮಾಯಣ ಕನ್ನಡ ಟೀಕು:—ಬಾಲಕಾಂಡ ೧ ರೂ., ಅಯೋಧ್ಯಾಕಾಂಡ ೨ ರೂ., ಅರಣ್ಯಕಾಂಡ ೧ ೦ ೦, ಕಿಷ್ಕಿಂಧಾಕಾಂಡ ೧ ೦ ೦, ಸುಂದರಕಾಂಡ ೧ ೦ ೦, ಯುದ್ಧಕಾಂಡ ೨ ೮ ೦, ಉತ್ತರಕಾಂಡ ೧ ೮ ೦.

೧೦ ರೂ. ಮತ್ತು ಮೇಲ್ಪಟ್ಟ ಪುಸ್ತಕಗಳು ಕೊಂಡುಕೊಂಡರೆ ಶೇಕಡ ೧೦ರಂತೆ ಡಿಸ್ಕೌಂಟು ಕೊಡುತ್ತೇವೆ.

ಈ ಪುಸ್ತಕಗಳು ಬೆಂಗಳೂರು ಬುಕ್ ಡಿಪೋ ಮತ್ತು ರಾಜಾ ಕೋಯ ಕೃಷ್ಣಯ್ಯನವರಲ್ಲಿಯೂ ಸಿಕ್ಕುತ್ತವೆ.

ಇವಲ್ಲದೆ ನಮ್ಮಲ್ಲಿ ಸಿಕ್ಕುವ ಇತರ ಕನ್ನಡ, ಆಂಧ್ರ, ಮತ್ತು ಸಂಸ್ಕೃತ ಪುಸ್ತಕಗಳ ಕ್ಯಾಟಲಾಗುಗಳನ್ನು ಕ್ರಮದಲ್ಲಿ ರವಾನಿಸುತ್ತೇವೆ.

ಯಂ. ರುದ್ರಪ್ಪ ಅಂಡ್ ಸನ್,

ಲಾಲ್ ಬಾಗ್ ರೋಡ್,

ಬೆಂಗಳೂರು ಸಿಟಿ.

MELLIN'S FOOD.

ಮೆಲ್ಲಿನ್ ಯೆಂಬವರು ಧಾನ್ಯಗಳಿಂದಲೇ ತಯಾರು ಮಾಡಿರುವ ಆಹಾರ.

30

೧. ಮೆಲ್ಲಿನರು ಮಾಡಿರುವ ಆಹಾರವು ದೇಹಕ್ಕೆ ಬಲವನ್ನೂ ಆರೋಗ್ಯವನ್ನೂ ಶಕ್ತಿಯನ್ನೂ ಕೊಡುತ್ತದೆ.

೨. ಮೆಲ್ಲಿನರು ಮಾಡಿರುವ ಆಹಾರವು ದೇಹದ ನರಗಳೂ ಮೆದುಳೂ ಚೆನ್ನಾಗಿ ಬಲಗೊಳ್ಳುವಂತೆ ಪೋಷಿಸುತ್ತದೆ.

೩. ಮೆಲ್ಲಿನರು ಮಾಡಿರುವ ಆಹಾರವು ದೇಹದ ಮಾಂಸಖಂಡಗಳು ಬಲಿತು ದೃಢವಾಗುವದಕ್ಕೆ ಸಹಾಯವಾಗಿದೆ.

೪. ಮೆಲ್ಲಿನರು ಮಾಡಿರುವ ಆಹಾರವು ಶರೀರದಲ್ಲಿ ಅತ್ಯಂತ ಸುಲಭವಾಗಿ ಜೀರ್ಣಿಸಿ, ಕಾಯಿಕ ಮಾನಸಿಕ ಶಕ್ತಿಗಳು ವೃದ್ಧಿಯಾಗುವಂತೆ ಮಾಡುತ್ತದೆ.

೫. ಮೆಲ್ಲಿನರು ಮಾಡಿರುವ ಆಹಾರವನ್ನು ಹಾಲಿನಲ್ಲಿ ಮಿಶ್ರ ಮಾಡಿ ಕೊಟ್ಟರೆ ಬೆಳೆಯುವ ಮಕ್ಕಳಿಗೆ ಸುಲಭವಾದ ಪೋಷಣೆಯುಂಟಾಗುತ್ತದೆ.

೬. ಮೆಲ್ಲಿನರು ಮಾಡಿರುವ ಆಹಾರದಲ್ಲಿರುವ ಗುಣವು ಎಷ್ಟು ಕಾಲವಾದರೂ ಯಾವ ವಾಯುಗುಣದಿಂದಲಾದರೂ ಕೆಡುವದಿಲ್ಲ.

೭. ಮೆಲ್ಲಿನರು ಮಾಡಿರುವ ಆಹಾರವು ಎಷ್ಟು ಎಳೇ ಕೂಸುಗಳಿಗಾದರೂ ಯಾವದೇಶದಲ್ಲಾದರೂ ಕೇವಲ ಯೋಗ್ಯವಾದದ್ದಾಗಿದೆ.

೮. ಮೆಲ್ಲಿನರು ಮಾಡಿರುವ ಆಹಾರವನ್ನು ಯುಕ್ತೋಚಿತವಾಗಿ ಪಾಕ ಮಾಡಿ ಸೇವಿಸಿದರೆ ತಾಯಿ ಹಾಲಿಗೆ ಸಮಾನವಾಗಿ ಕೇವಲ ನಂಜಿಗೆ ಅರ್ಹವಾದದ್ದಾಗುತ್ತದೆ.

೯. ಮೆಲ್ಲಿನರು ಮಾಡಿರುವ ಆಹಾರದಲ್ಲಿ ಉಪಯೋಗಿಸಿರುವ ದಿನಸು ಸುಲಭವಾಗಿ ಜೀರ್ಣಿಸಿ ರಕ್ತದಲ್ಲಿ ಮಿಶ್ರವಾಗುವದರಿಂದ ತಕ್ಷಣ ದೇಹದ ಪುಂಡಂಶವಾಗುತ್ತದೆ.

೧೦. ಮೆಲ್ಲಿನರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿಯೂ ಶೈಶವದಲ್ಲಿ ಒದಗುವ ವಿಶ್ವಾಸದ ರೋಗಗಳ ಯೂ ವಿಪತ್ತನ್ನು ತಪ್ಪಿಸುತ್ತದೆ.

೧೧. ಮೆಲ್ಲಿನರು ಮಾಡಿರುವ ಆಹಾರವು ಸಕಲ ಜಾತಿಯವರ ಮಕ್ಕಳಿಗೂ ತಕ್ಕದ್ದಾಗಿದೆ.

೧೨. ಮೆಲ್ಲಿನರು ಮಾಡಿರುವ ಆಹಾರದಲ್ಲಿ ಗುರುಪದಾರ್ಥವಾವದೂ ಸೇರಿರುವದಿಲ್ಲ. ತಾಯಿ ಹಾಲಿನಲ್ಲಿರುವ ಪದಾರ್ಥವೆಲ್ಲಾ ಇದರಲ್ಲಿ ಕೂಡಿದೆ.

೧೩. ಮೆಲ್ಲಿನರು ಮಾಡಿರುವ ಆಹಾರವು ಕೂಸುಗಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಸೂಕ್ಷ್ಮವಾಗಿರುವ ಅನ್ನ ಕೋಶಕ್ಕೆ ದಕ್ಕತಕ್ಕದ್ದಾಗಿದೆ.

೧೪. ಮೆಲ್ಲಿನರು ಮಾಡಿರುವ ಆಹಾರವು ದೇಹದ ಶಕ್ತಿಯನ್ನು ಸ್ಥಿರಪಡಿಸುವದರಿಂದ ಶಿಶುಗಳಿಗೆ ರೋಗಕಾಲದ ವಿಪತ್ತುಗಳನ್ನು ಬಹಳ ಮಟ್ಟಿಗೆ ಕಡಮೆ ಮಾಡುತ್ತದೆ.

೧೫. ಮೆಲ್ಲಿನರು ಮಾಡಿರುವ ಆಹಾರವು ಮಕ್ಕಳಿಗೆ ಸ್ತನ್ಯ ಕೊಡುವ ಸ್ತ್ರೀಯರಿಗೆ ಅತ್ಯಂತ ಫಲಕಾರಿಯಾಗಿರುತ್ತದೆ. ಹಾಲು ಹೆಚ್ಚಿಸುವ ಗುಣವು ಇದರಲ್ಲಿ ಪರಿಪೂರ್ಣವಾಗಿರುವದರಿಂದ ಬೇರೆ ಯಾವ ಪದಾರ್ಥವೂ ಇದಕ್ಕೆ ಸಮವಾಗಲಾರದು.

ಈ ಆಹಾರವನ್ನು ಪರೀಕ್ಷೆ ಮಾಡತಕ್ಕವರು ಕೆಳಗೆ ಸೂಚಿಸಿರುವ ನಮ್ಮ ಏಜಂಟರುಗಳಲ್ಲಿ ಯಾರಿಗಾದರೂ, ಬೆಂಗಳೂರು ಮೈಸೂರು ಮೊದಲಾದ ಪಟ್ಟಣಗಳಲ್ಲಿರುವ ವಾಪಾರಿಗಳಿಗೂ ಬರೆದು ತರಿಸಿಕೊಳ್ಳಬಹುದು:—

ಮದ್ರಾಸ್:—ಮೆ॥ ಕಾಮಸ್ ದಿನಾಶಾ ಬ್ರದರ್ಸ್.

ಬೊಂಬಾಯಿ:—ಮೆ॥ ರೇಡಮ್ ಆಡೆಕಾಕ್ ಕಂಪೆನಿ.

ಕಲ್ಕತ್ತಾ:—ಮೆ॥ ಮಕ್ಕಿನ್‌ಜಿ ಲಯಾಲ್ ಕಂಪೆನಿ.

ಕೊಲಂಬೋ:—ಮೆ॥ ಹಾಲ್ ವಿಲ್ಸನ್ ಕಂ.

ಕರಾಚಿ:—ಮೆ॥ ಎಲ್. ಜೆ. ರುಸ್ತುಂಜಿ ಕಂಪನಿ

ರಂಗೂನ್:—ಮೆ॥ ಓಕ್ ಕಂಪೆನಿ.

ಸಿಂಗಪೂರ್:—ರೇಡಮ್ ಬ್ಲಾಕ್ ಕಂಪೆನಿ.

ಈಗ ತಾನೇ ವಿಲಾಯಿತಿಯಿಂದ ಬಂದಿದೆ.

ಬೇಗ ನೋಡಿ! ಬೇಗ ನೋಡಿ!!

ಎಲ್ಲಾ ಬಣ್ಣಗಳ ದೊಡ್ಡ ಪಟ್ಟಿಗಳು.

ವಿಲಾಯಿತಿಯ ಎಡ್ವರ್ಡ್ ಮಹಾರಾಜರು ಮತ್ತು ಅಲೆಕ್ಸಾಂಡ್ರಾ ಮಹಾರಾಣಿಯವರು.

ಪಟ್ಟಿಗಳ ಅಳತೆ ೩೦ ಅಂಗುಲ ಉದ್ದ, ೨೪ ಅಂಗುಲ ಅಗಲ.

ಕ್ರಯ ೧ಕ್ಕೆ ೮ ಆಣೆ ಮಾತ್ರ.

ವಿಳಾಸ:—ಮಿಷನ್ ಬುಕ್ ಡಿಪೋ, ಮೈಸೂರು.

ಹೊಸ ಪುಸ್ತಕವು! ಹೊಸ ಪುಸ್ತಕವು!! ಹೊಸ ಪುಸ್ತಕವು!!!

ಬೋಅರ ಮಹಾಯುದ್ಧ.

ಡಾಕ್ಟರ್ ಕೋನನ್‌ಡಾಯಲ್ ವಿದ್ಯಾಸಿದ್ಧನು ಇಂಗ್ಲಿಷಿನಲ್ಲಿ ಬರೆದಿರುವ ಪುಸ್ತಕದ ಆಧಾರದ ಮೇಲೆ ರಚಿಸಲ್ಪಟ್ಟಿದೆ. ಇದನ್ನು ಓದಿದರೆ ಬೋಅರ ಯುದ್ಧದ ಕಾರಣಗಳು, ಯುದ್ಧ ನಡೆದ ರೀತಿ, ಫಲಿತಾಂಶಗಳು ಇವೇ ಮುಂತಾದ ಅನೇಕ ಸಂಗತಿಗಳೆಲ್ಲಾ ವಿಶದವಾಗಿ ತಿಳಿದು ಬರುವವು.

ಇದರಲ್ಲಿ ಅಡಗಿರುವ ಅಧ್ಯಾಯಗಳನ್ನು ಸ್ವಲ್ಪ ನೋಡಿ:—(೧) ಬೋಅರರು. (೨) ಯುದ್ಧಕ್ಕೆ ಕಾರಣ. (೩) ಬ್ರಿಟಿಷರಿಗೂ ಬೋಅರರಿಗೂ ನಡೆದ ಸಂಧಿಗಳು. (೪) ಸಮಾಧಾನದ ವಿಷಯವಾಗಿ ನಡೆದ ಸಂಧಿಗಳು. (೫) ಪ್ರಿಟೋರಿಯಾದಲ್ಲಿ ಆರೋಪಿಸಲ್ಪಡುವ ಕೆಲವು ದೋಷಗಳು. (೬) ಬೋಅರ ಸಿಪಾಯಿಗಳ ಮೇಲೆ ಯಾವ ತಪ್ಪೂ ಹೊರಿಸುವದಿಲ್ಲವೋ?

ಇದರ ಕ್ರಯ ಎರಡು ಆಣೆ ಮಾತ್ರ.

ಪುಸ್ತಕದ ನಾಟಕೋಕ್ತದ ಪ್ರೀತಿಗೂ, ಪ್ರೌಢಿಗೂ ವಿಶೇಷವಾಗಿ ಅದರಲ್ಲಿ ಅಡಗಿರುವ ಸಂಗತಿಗಳಿಗೂ ನಾಲ್ಕಾಣೆ ಕೊಟ್ಟರೂ ಸಾಲದು. ಜಾಗ್ರತೆ ನೋಡಿ!! ಪುಸ್ತಕವು ಮುಗಿದು ಹೋದೀತು!!! ವಿ. ಪಿ. ಸಿದರೆ ಪುಸ್ತಕದ ಕ್ರಯ ಪೋಸ್ಟೇಜ್ ಸಹಿತ ನಾಲ್ಕಾಣೆ ಆದೀತು.

ಪುಸ್ತಕ ವ್ಯಾಪಾರಸ್ಥರು ಹೆಚ್ಚಾಗಿ ಪ್ರತಿಗಳನ್ನು ತರಿಸಿಕೊಂಡರೆ ವಿಶೇಷವಾದ ಡಿಸ್ಕೌಂಟು ದೊರೆಯುವದು.

ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು.	ಅಥವಾ	ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಬೆಂಗಳೂರು.

ಹೊಸ ಪುಸ್ತಕಗಳು! ಈಗ ತಾನೆ ಪ್ರಕಟವಾಗಿವೆ!!

ಬರ್ಮ ದೇಶವೂ—ಬರ್ಮಿಯರೂ.

ಈ ಹೊಸ ಪುಸ್ತಕದಲ್ಲಿ ಬರ್ಮ ದೇಶವನ್ನೂ ಅಲ್ಲಿನ ಜನರ ಪೂರ್ವೋತ್ತರವನ್ನೂ ಬಹು ಸುಲಭವಾಗಿ ವಿವರಿಸಿದೆ. ಪುಸ್ತಕದ ತುಂಬಾ ಚಿತ್ರಗಳಿರುವವು. ಒಳ್ಳೇ ಕಾಗದ, ನೇತ್ರಾನಂದಕರವಾಗಿ ಅಚ್ಚು ಹಾಕಿದೆ.

ಕ್ರಯ ೩॥ ಆಣೆ, ಹಾಸಲು ಬೇರೆ.

ಬನರಂಜಕ ಪತ್ರಗಳು. ಕ್ರಯ ೩ ಪೈ ಮಾತ್ರ.

೧. ಶುದ್ಧವಾದ ಸೀಸನ ಬೇರೆ:—ಸೀಸದ ಉಪಯೋಗ, ಅದನ್ನು ಶುಚಿ ಮಾಡಿಕೊಳ್ಳುವದು ಇವುಗಳಿಗೆ ಸಂಬಂಧವಾದ ವಿಷಯಗಳನ್ನು ಬರೆದಿದೆ.

೨. ಪ್ರಾಯಶ್ಚಿತ್ತ:—ವಿದೇಶ ಸಂಚಾರ ಮುಂತಾದ ಕಾರ್ಯಗಳಿಗಾಗಿ ನೇಮಿಸಿರುವ ಪ್ರಾಯಶ್ಚಿತ್ತದ ವಿಚಾರವ್ಯಾಪಕತ್ವ ತಿಳಿದೆ.

೩. ವೇದಗಳನ್ನು ಬರೆದವರು ಯಾರು? ಹಿಂದೂ ವೇದಶಾಸ್ತ್ರಗಳ ಉದ್ಧರಿಸಿದ ಸಂಸ್ಕೃತ ಶ್ಲೋಕಗಳನ್ನು ಅರ್ಥಸಮೇತ ಬರೆದಿದೆ.

೪. ಇಂಡಿಯಾದೇಶದ ಬಡತನಕ್ಕೆ ಕಾರಣಗಳು.

೫. ವಿಷೂಚಿಯೂ ಕರುಳಿನ ಉಪದ್ರವವೂ:—ಇವುಗಳಿಗೆ ಕಾರಣಗಳೇನು? ಇದಕ್ಕೆ ತಪ್ಪಿಸಿಕೊಳ್ಳುವದು ಹೇಗೆ? ಈ ರೋಗಗಳು ತಗಲಿದರೆ ಯಾವ ಚಿಕಿತ್ಸೆ ಮಾಡಬೇಕು? ಇದೆಲ್ಲಾ ಹೇಳಿದೆ.

ಮೇಲ್ಕಂಡ ಪುಸ್ತಕಗಳು ದೊರೆಯುವ ಸ್ಥಳ:—

ಮಿಷನ್ ಬುಕ್ ಡಿಪೋ, ಮೈಸೂರು;

ಅಥವಾ

ಮಿಷನ್ ಬುಕ್ ಡಿಪೋ, ಬೆಂಗಳೂರು ಸಿಟಿ.

ಗಂಧದ ಮರಗಳ ಹರಾಜು.

ಸನ್ ೧೯೦೩ನೆ ಇಸವಿಯಲ್ಲಿ ಮೈಸೂರು ಸಂಸ್ಥಾನದ ಬೇರೆ ಬೇರೆ ಡಿಸ್ಟ್ರಿಕ್ಟುಗಳಲ್ಲಿ ಶ್ರೀಗಂಧದ ಮರಗಳನ್ನು ಪಬ್ಲಿಕ್ ಹರಾಜಿನಮೂಲಕ ಈ ಕೆಳಗೆ ಕಂಡಂತೆ ವಿಕ್ರಯಿಸಲ್ಪಡುತ್ತೆ.

ಮೈಸೂರು—ನೊವೆಂಬರ್ ೨೪ರಿಂದ ೨೭ರವರೆಗೆ. ಬೆಂಗಳೂರು—ಡಿಸೆಂಬರ್ ೧. ಹಾಸನ—ಡಿಸೆಂಬರ್ ೪. ಕಡೂರು. ಡಿಸೆಂಬರ್, ೪. ಶಿವಮೊಗ್ಗ—ಡಿಸೆಂಬರ್ ೧೩ರಿಂದ ೨೦ರ ವರೆಗೆ.

ಈ ಹರಾಜಿಗೆ ಸಂಬಂಧಪಟ್ಟ ಇತರ ವಿಷಯಗಳನ್ನು ತಿಳಿಯಬೇಕಾದರೆ ಆಯಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರನ್ನು ಕೇಳತಕ್ಕದ್ದು.

ಬಿ. ಹೀರಾಸಿಂಗ್,

ಫಾರ್ ಛ. ಫಾರೆಸ್ಟ್ ಕನ್ಸರ್ವೆಟರ್.

ಎಡ್ವರ್ಡ್ ಚಕ್ರವರ್ತಿಯವರ ಮತ್ತು ಅಲೆಕ್ಸಾಂಡ್ರಾ ಚಕ್ರವರ್ತಿನಿಯವರ ಜೀವ ಚರಿತ್ರೆಯು.

ದಪ್ಪನಾದ ಹೊಳೆಯುವ ಕಾಗದ, ಅನೇಕ ಫೋಟೋ ಗ್ರಾಫುಗಳಿಂದ ಕೂಡಿದ್ದು; ಚಕ್ರವರ್ತಿಯವರು, ಚಕ್ರವರ್ತಿನಿಯವರು, ಯುವರಾಜರು, ಇವರ ಪತ್ನಿಯವರು ಮುಂತಾದವರ ಫೋಟೋಗಳು ಪ್ರಿಂಟಾಗಿವೆ. ಇದಲ್ಲದೆ ವಿಲಾಯಿತಿಯಲ್ಲೂ ಸ್ಕಾಟ್ಲಾಂಡಿನಲ್ಲೂ ಇರುವ ಬೇರೆ ಬೇರೆ ರಾಜಭವನಗಳೂ, ಸಂಟ್ ಪಾಲ್ ದೇವಾಲಯವೂ, ವೆಸ್ಟ್ ಮಿನಿಸ್ಟರ್ ಅಬಿ ಎಂಬ ಭವನವೂ ಮೊದಲಾದವುಗಳ ಚಿತ್ರಗಳು ಬಹು ಸುಂದರವಾಗಿ ಕಾಣಿಸುವಂತೆ ಪ್ರಿಂಟಾಗಿವೆ.

ಕ್ರಯ ೧ ಪ್ರತಿಗೆ ೪ ಆಣೆ, ಪೋಸ್ಟೇಜು ಬೇರೆ.

ವಿಳಾಸ:—ಮೈಸೂರು ಮಿಷನ್ ಬುಕ್ ಡಿಪೋ; ಅಥವಾ ಬೆಂಗಳೂರು ಸಿಟಿ ಮಿಷನ್ ಬುಕ್ ಡಿಪೋ.

ಪ್ರಶ್ನೋತ್ತರ ಲೆಖ್ಖಬೋಧಿನಿ.

23

ಡೆಮ್ಮಿ ಅಷ್ಟಪುಟಗಳು ೨೪೦—ವಿಷಯಗಳು ೩೧೦—ಅನೇಕ ಪುಸ್ತಕಗಳು ಮಾರಿಗೆಯಾಗಿ ಸ್ವಲ್ಪ ಪ್ರತಿಗಳೇ ಉಳಿದಿವೆ. ಅತಿ ಜಾಕ್ರತೆಯಾಗಿ ಸಂಗ್ರಹ ಮಾಡಿ ಇಡುವುದು ಉತ್ತಮವು. ಇದರಲ್ಲಿ ಕ್ಷೇಮಸಮಾಚಾರ ಕಾಗದಗಳು, ಬಗೆ ಬಗೆ ಪತ್ರಗಳು, ಸಿವಿಲ್ ಗೋರ್ಟಿನ ಯೆಲ್ಲಾ ವಿಧವಾದ ಅರ್ಜಿಗಳು, ಕ್ರಿಮಿನಲ್, ಚೀಫ್ ವಿವಿಧ ಅರ್ಜಿಗಳು, ರೆವಿನ್ಯು ಅರ್ಜಿಗಳು, ಅಕ್ಷ್ಯೇಷ್ಠೆ ಅವುಗಳ ವಿಧಿ, ಅನುಭವ, ಸಹವಳಿಕೆ, ಸಾಂಪು, ರಿಜಿಸ್ತ್ರಮಾಯಿದೆ, ಇವುಗಳ ವಿವರಗಳು, ವ್ಯಾಪಾರದ ಲೆಕ್ಕಗಳು, ಮುಂತಾದ ಇನ್ನೂ ಅನೇಕ ವಿಷಯಗಳು, ಸ್ವಲ್ಪ ಬುದ್ಧಿಗೆ ಓದುಬರಹ ಬಂದವರು ಕೂಡ ಸ್ವತಃ ಸುಲಭವಾಗಿ ತಿಳಿದುಕೊಳ್ಳುವ ಹಾಗೆ ಪ್ರಶ್ನೋತ್ತರ ರೀತಿಯಾಗಿ ಪ್ರಸಿದ್ಧರಾದ ಅಡ್ವೋಕೇಟರ ಸಹಾಯದಿಂದ ಬರೆಯಲ್ಪಟ್ಟಿದೆ. ಲಾಯರುಗಳ ಬಳಿ ಯೋಚನೆ ಕೇಳಿ ಪ್ರತಿಯೊಬ್ಬರಲ್ಲಿಯೂ ಈ ಪುಸ್ತಕ ಒಂದು ಇದ್ದೇ ಇರಬೇಕು. ಹೊಸನು ಕಾಗದದ ಪುಸ್ತಕ ಒಂದರ ಕ್ರಯ ಒಂದು ರೂಪಾಯಿ. ಸಾಧಾರಣ ಕಾಗದದ ಪುಸ್ತಕ ಒಂದರ ಕ್ರಯ ಹನ್ನೆರಡಾಣೆ—ಅಂಚೆ ಖರ್ಚು ಕೊಡಬೇಕು. ಮುಂಗಡ ಹಣ; ಅಥವಾ ವಿ. ಪಿ. ಮೂಲಕ ಕಳುಹಿಸಲ್ಪಡುವವು. ೧೨ ಪುಸ್ತಕಗಳಿಗೆ ಜಾಸ್ತಿಯಾಗಿ ಒಂದೇ ಸಲ ಕೊಳ್ಳುವವರಿಗೆ ವಿಶೇಷವಾದ ದಳ್ಳಾಳಿ ಸಲ್ಲುವದು. ವಿಳಾಸ:—ಭಾರತಿ ಸೂರ್ಯನಾರಾಯಣ, ತಿರ್ಸಲೇಪ್, ಹಿರಿಯೂರು.

ಪುಸ್ತಕವ್ಯಾಪಾರ.

ಕೇರಿರಾಜ ಕವಿಯ ಶಬ್ದಮಣಿದರ್ಪಣ		೧—೮—೦
ನಾಗವರ್ಮನಛಂದಸ್ಸು		೧—೦—೦
ಇಂಗ್ಲಿಷ್—ಕನ್ನಡ ಸಂಭಾಷಣವಾಕ್ಯಗಳು		೦—೧೦—೦
ಮುದ್ರಾಮಂಜೂಷ		೧—೮—೦
ವಿರಾಟಪರ್ವ		೦—೩—೦
[illegible]		೦—೧೨—೦
ದಮಯಂತಿ ಸ್ವಯಂವರ		೦—೧೨—೦
ಪಂಚತಂತ್ರ		೦—೮—೦
ಬಸವಶಾಸ್ತ್ರ		೧—೦—೦
ಕಥಾಸಂಗ್ರಹ ೧—೩ ಭಾಗಗಳು		೧—೦—೦
ಕಥಾಸಂಗ್ರಹ ೪—೬ ಭಾಗಗಳು		೧—೦—೦
ಪತ್ರ ರತ್ನಾಕರ	ಅರ್ಜಿ ಬರೆಯುವ ಕ್ರಮ	೦—೮—೦
ಧರ್ಮಶಾಸ್ತ್ರ ಪ್ರಕಾಶಿಕೆ	ಪತ್ರ ಬರೆಯುವದು	೦—೧೨—೦
ಗೀತಮಂದಾರ		೦—೩—೦
[illegible]		೦—೪—೦
[illegible] ಸೂತ್ರಗಳು		೦—೩—೦
ಕೆಲಯುಸ್ಸಿನ ಚರಿತ್ರೆ		೦—೧—೦

ಮೇಲ್ಕಂಡ ಪುಸ್ತಕಗಳನ್ನು ವಿ. ಪಿ. ಪಿ. ಮೂಲಕವಾಗಿ ಅಥವಾ ಹಣವನ್ನು ಮುಂಗಡವಾಗಿ [illegible] ಕಳುಹಿಸಲಾಗುವುದು.

ವಿಳಾಸ—ಮ್ಯಾನೇಜರ್, ಮಿಷನ್ ಬುಕ್ ಡಿಪೋ, ಮೈಸೂರು.

ಎಲ್ಲರಿಗೆ ಪ್ರಯೋಜನಾರ್ಥವಾದ ಹೊಸ ಪುಸ್ತಕ.

ರೋಗ ಚಿಕಿತ್ಸೆಯು.

ಇದರಲ್ಲಿ ಅನುಭವಕ್ಕೆ ಬಂದ ಔಷಧಗಳ ಪ್ರಯೋಗ

ಮತ್ತು

ಆರೋಗ್ಯರಕ್ಷಣೆ, ಪಥ್ಯ, ರೋಗಪರೀಕ್ಷೆ ಮುಂತಾದ ವಿಷಯಗಳನ್ನು ಕುರಿತು ಕೆಲವು ಪ್ರಾರಂಭಸೂಚನೆಗಳು ಸಹ ಅವೆ.

೨೩೪ ಪುಟಗಳು.

ಕ್ರಯ: ರೂ. ೧ ಆಣೆ ೮ ಮಾತ್ರ.

ಟಪ್ಪಾಲ್ ಹಾಸಲು ಸಹಿತ ರೂ. ೧ ಆಣೆ ೧೦

೧೮೭೭—೧೮೮೮ನೇ ಇಸವಿಗಳ ನಮ್ಮ ಕನ್ನಡ ಪಂಚಾಂಗಗಳಲ್ಲಿ ಹನ್ನೆರಡು ವರ್ಷಗಳ ವರೆಗೆ ಪ್ರಕಟವಾಗಿದ್ದ ಶರೀರಚಿಕಿತ್ಸೆ ಎಂಬ ವೈದ್ಯಸಂಗ್ರಹವು ವಾಚಕರಿಗೆ ಬಹಳ ಪ್ರಯೋಜನಕರವಾಗಿ ತೋರಿದ ದರಿಂದ ಆ ಕಾಲದ ಪಂಚಾಂಗಗಳು ಹೆಚ್ಚಾಗಿ ಮಾರಾಟವಾದದ್ದಲ್ಲದೆ ಉಳಿದ ಪ್ರತಿಗಳಿಂದ ಈ ಸಂಗ್ರಹವನ್ನು ಮಾತ್ರ ಪ್ರತ್ಯೇಕಿಸಿ ಕಟ್ಟಿಸೋಣಾದ ಪ್ರತಿಗಳು ಸಹ ವಿಕ್ರಯವಾಗಿ ಖರ್ಚಾದವು. ಇನ್ನೂ ಪ್ರತಿಗಳಿಗೆ ಗಿರಾಕಿಗಳು ಬಹಳ ಒದಗುವದರಿಂದ, ಪಂಚಾಂಗಕ್ಕಾಗಿ ಬರೆದ ಆ ಸಂಗ್ರಹವನ್ನೆಲ್ಲ ಪುನಹಾ ಪರಿಶೋಧಿಸಿ, ತಿದ್ದಿ, ಬೇರೆ ಅನೇಕ ಹೊಸ ಸಂಗತಿಗಳನ್ನು ಸೇರಿಸಿ, ಅನುಕೂಲವಾದ ಪುಸ್ತಕರೂಪವಾಗಿ ಈಗ ಪ್ರಕಟಿಸಿದ್ದೇವೆ.

ಈ ಪುಸ್ತಕ ಅಪೇಕ್ಷಕರು "ಬಾಸೆಲ್ ಮಿಷನ್ ಬುಕ್ ಎಂಡ್ ಟ್ರೇಕ್ಟ್ ಡಿಪೋಜಿಟರಿ" ಮಂಗಳೂರು, ಎಂಬ ಮಿಷನ್ ಪುಸ್ತಕಶಾಲೆಯ ಮೇಲುವಿಚಾರಕರಿಗೆ ಬರೆಯತಕ್ಕದ್ದು.

ವೃತ್ತಾಂತ ಪತ್ರಿಕೆ.

೧೯೦೩ನೇ ಇಸವಿ ಅಕ್ಟೋಬರ್ ತಾ ೧೬ನೇ ಗುರುವಾರ.

ಸಾವಿನಲ್ಲಿ ಪ್ರಕಟವಾಗುವ ದೇವರ ಮಹಿಮೆ.

ಅತ್ಯಂತ ಪ್ರಿಯ ಸ್ನೇಹಿತನಿಗೆ—ದುಃಖಿತನಾಗಿ ವ್ಯಾಸಂಗಮಾಡುತ್ತಿರುವ ರಾಮಣ್ಣನು ಮಾಡುವ ಅನೇಕ ಆಶೀರ್ವಾದಗಳು. ಸಾಂ ॥

ಮೈಸೂರಿನಲ್ಲಿ ಈಗ ಹಾವಳಿ ಮಾಡುತ್ತಿರುವ ಪ್ಲೇಗು ರೋಗದ ದೆಸೆಯಿಂದ ನಮ್ಮಿಬ್ಬರಿಗೆ ಅತ್ಯಂತ ಪ್ರಿಯನಾಗಿದ್ದ ಶ್ರೀನಿವಾಸನೂ, ನಿಮ್ಮ ಪ್ರಿಯ ಸಹೋದರಿಯೂ ಸ್ವರ್ಗಸ್ಥರಾದರೆಂಬ ದುಃಖಕರವಾದ ವರ್ತಮಾನವನ್ನು ಕೇಳಿ ಶಕ್ಯದ ಮುನ್ನೇನ ತಿಳಿದು ನಾನು ಶೋಕಸಂತಪ್ತ ಹೃದಯನಾದೆನು. ಮೈಸೂರು ಸಂಸ್ಥಾನದಲ್ಲಿ ಈ ಭಯಂಕರವಾದ ವ್ಯಾಧಿಯು ಬಹು ವಿಪರೀತವಾಗಿ ವ್ಯಾಪಿಸಿಕೊಂಡಿದೆಯೆಂಬುದನ್ನು ನಾನು ವರ್ತಮಾನ ಪತ್ರಗಳಿಂದಲೂ ಸ್ನೇಹಿತರು ಬರೆಯುವ ಕಾಗದಗಳಿಂದಲೂ ಪದೇ ಪದೇ ತಿಳಿಯುತ್ತಾ ಬಂದಿರುತ್ತೇನೆ. ನಮ್ಮ ಪರಿಚಿತ ಸ್ನೇಹಿತರಲ್ಲಿಯೂ ಅನೇಕರಲ್ಲಿಯೂ ಎಷ್ಟು ಮಂದಿ ಹೋದರು! ಈ ಮಹಾ ವ್ಯಾಧಿಗೆ ತುತ್ತಾಗದಿರುವ ಒಂದು ಮನೆಯಾದರೂ ಇಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ. ಕಡೆಗೆ ನಿಮ್ಮ ಮನೆಗೂ ಈ ಮೃತ್ಯು ಕಾಲಿಟ್ಟು ನಿಮ್ಮ ಮನಸ್ಸನ್ನು ಗಾಯಮಾಡಿ ಬಿಟ್ಟಿತಲ್ಲಾ. ಸ್ವರ್ಗಸ್ಥನಾದ ನಮ್ಮ ಮಿತ್ರನಾದ ಶ್ರೀನಿವಾಸನ ಧೈರ್ಯವನ್ನೂ, ಸತ್ಯನಿಷ್ಠೆಯನ್ನೂ ಉಲ್ಲಾಸಕರವಾದ ಅವನ ಸರಸ ಸಲ್ಲಾಪಗಳನ್ನೂ ಅವನಲ್ಲಿದ್ದ ಇತರ ಸುಗುಣಗಳನ್ನೂ ನಾನು ಎಷ್ಟೆಂದು ವರ್ಣಿಸಲಿ! ಅವನಿಲ್ಲದಿರುವದು ನಮ್ಮ ಜೀವಮಾನದಲ್ಲಿ ಅರ್ಧಭಾಗ ಹೋದಂತಾಯಿತು. ಸ್ವರ್ಗ ಕೀರ್ತಿಗಳಿಗಿಂತ ಅವನ ಸ್ನೇಹವು ನಮಗೆ ಹೆಚ್ಚಾದುದಾಗಿತ್ತು. ನಮ್ಮ ಸ್ನೇಹಿತನ ವಿಷಯದಲ್ಲಿ ಹೇಳಿದಷ್ಟು ಧಾರಾಳವಾಗಿ ನಿಮ್ಮ ಸಹೋದರಿಯ ವಿಷಯದಲ್ಲಿ ಹೇಳುವದಕ್ಕೆ ನನಗೆ ಧೈರ್ಯ ಸಾಲದು. ಆದರೂ ನಾನು ನಿಮ್ಮ ಮನೆಗೆ ಬಂದಾಗಲೆಲ್ಲಾ ಆಕೆಯ ಸೌಮ್ಯತೆಯನ್ನೂ ಗುಣಶೀಲ ಭಾವಗಳನ್ನೂ ನೋಡಿದ್ದೆನು. ಮಂದ ಭಾಗ್ಯರಾದ ನಿಮ್ಮ ಮಾತಾಪಿತೃಗಳಿಗೂ ಒಬ್ಬಳೇ ಸಹೋದರಿಯಾದ ನಿಮಗೂ ನಿರಂತರವಾದ ಸಂತೋಷವನ್ನುಂಟುಮಾಡುತ್ತಾ ನಿಮ್ಮ ಮನೆಗೆ ಚಂದ್ರಪ್ರಭಾ ಕಾಂತಿಯಾಗಿದ್ದಳು. ಸುಂದರವೇಗಾಯೂ ನಿದ್ಗುಣ ಶೀಲೆಯಾಗಿಯೂ ಈಗ ತಾನೇ ಅರಳುತ್ತಿರುವ ಹೂವಿನಂತೆಯೂ ಇದ್ದ ನಿಮ್ಮ ಸಹೋದರಿಯನ್ನು ಮೃತ್ಯು ಒಂದು ಕಿತ್ತುಕೊಂಡು ಹೋದ್ದರಿಂದ ಉಂಟಾಗಿರುವ ದುಃಖವನ್ನು ವರ್ಣಿಸುವದಸಾಧ್ಯ.

ದುಃಖಕಾಲದಲ್ಲಿ ಸ್ನೇಹಿತನಾದವನು ತನಗೆ ಉತ್ಕೃಷ್ಟವಾಗಿ ತೋರಿದ ಆದರಣೆಯ ಮಾತನ್ನು ತಿಳಿಸುವದು ಉಚಿತವಾಗಿದೆ. ಇಂಥ ಸಂದರ್ಭದಲ್ಲಿ ನನಗೆ ಬೈಬಲಿನಲ್ಲಿರುವ ಬೋಧನೆಯು ಅತ್ಯುತ್ಕೃಷ್ಟವಾದದ್ದಾಗಿ ತೋರುವದೆಂದು ನಾನು ಹೇಳುವಲ್ಲಿ ನಿಮಗೆ ಆಶ್ಚರ್ಯವಾಗಲಾರದು. ಇಹಪರಲೋಕಗಳಲ್ಲಿ ನನ್ನನ್ನು ನಡಿಸತಕ್ಕ ರಕ್ಷಕನೂ ನಾಯಕನೂ ಆಗಿರುವ ಆ ಕ್ರೀಸ್ತಸ್ವಾಮಿಯನ್ನು ನಾನು ಪರಮಾನಂದಪೂರ್ವಕವಾಗಿ ಅಂಗೀಕರಿಸಿದ್ದೇನೆಂಬುವದು ನಿಮಗೆ ತಿಳಿಯದ ವಿಷಯವಲ್ಲ. ನಾನು ನಂಬಿರುವ ಕ್ರೈಸ್ತ ಧರ್ಮವೇ ನಿಜವೆಂದು ನಂಬಿರುವದಕ್ಕೆ ಅನೇಕ ವಿಘ್ನಗಳಿವೆಯಾದರೂ ನಾವಿಬ್ಬರು ಮನುಷ್ಯನಿಗೆ ಪರಮಧರ್ಮವು ಯಾವದೆಂಬ ವಿಷಯದಲ್ಲಿ ಅನೇಕ ತರ್ಕ ಮಾಡುತ್ತಿರುವಲ್ಲಿ ಕ್ರೀಸ್ತಸ್ವಾಮಿಯನ್ನು ಕುರಿತು ಬೈಬಲಿನಲ್ಲಿ ಓದುವಾಗ ಆತನ ವಿಷಯದಲ್ಲಿ ನಿಮಗಿರುವ ವಿಶೇಷ ಗೌರವವನ್ನೂ ಆತನನ್ನೇ ಅನುಸರಿಸಿ ನಡೆಯಬೇಕೆಂಬದಾಗಿ ನೀವು ಮಾಡಿಕೊಂಡಿದ್ದ ದೃಢ ತೀರ್ಮಾನವನ್ನೂ ನಾನು ಬಲ್ಲೆನು. ಆದದರಿಂದ ನಿಮ್ಮ ಈ ದುಃಖಕಾಲದಲ್ಲಿ ಆದರಣೆಯಾಗಿರಬೇಕು ಭಾವದಿಂದ ನಾನು ಆ ಯೇಸುಸ್ವಾಮಿ ಮರಿಯಳು ಮಾರ್ಥಳು ಎಂಬ ಅಕ್ಕತಂಗಿಯರಿಗೆ ಒಬ್ಬನೇ ಸಹೋದರನಾಗಿದ್ದ ಲಾಜರನನ್ನು ಸತ್ತವರೊಳಗಿಂದ ತಿರಿಗಿ ಎಬ್ಬಿಸಿದ ವೃತ್ತಾಂತವನ್ನು ನಿಮ್ಮ ನೆನಪಿಗೆ ತರಲುದ್ದೇಶಿಸಿದ್ದೇನೆ. ನಾವು ಇಬ್ಬರೂ ಕೂಡಿ ಯೋಹಾನನ ಸುವಾರ್ತೆಯನ್ನು ಓದುವಾಗ ಈ ವೃತ್ತಾಂತವನ್ನು ಓದಿದ್ದು ಜ್ಞಾಪಕವಿರಬಹುದು. ನಿಮ್ಮ ವಿಷಯದಲ್ಲಿ ನನಗುಂಟಾದ ದುಃಖಕ್ಕೆ ಕಾರಣವಾಗಿರುವಂತೆ ನಾನು ಮತ್ತೊಂದು ಸಾರಿ ಈ ವೃತ್ತಾಂತವನ್ನು ಓದುವಲ್ಲಿ ಅದರೊಳಗೆ ಪ್ರಕಟವಾಗುವ ಎರಡು ಅಂಶಗಳು ನನ್ನ ಮನಸ್ಸಿಗೆ ಬಂತು.

ಮೊದಲನೇದು—ಭಗವಂತನು ಯಾರನ್ನು ಪ್ರೀತಿಸುತ್ತಾನೆಯೋ ಅವರಿಗೆ ದುಃಖವು ಬಾರದಂತೆ ದೇವರು ಅಡ್ಡಿ ಮಾಡುವದಿಲ್ಲ—ಬೇಥಾನ್ಯವೆಂಬ ಊರಿನಲ್ಲಿದ್ದ ಆ ಕುಟುಂಬದಲ್ಲಿ ಮೂವರೇ ಮಂದಿ ಇದ್ದರಷ್ಟೆ. ಇವರನ್ನು ಯೇಸುಸ್ವಾಮಿ ಪ್ರೀತಿಸಿದನೆಂದು ಆ ಸುವಾರ್ತೆಯನ್ನು ಬರೆದ ಯೋಹಾನನೇ ತಿಳಿಸಿದ್ದಾನೆ. ಆತನ ಅತ್ಯಂತ ಆಪ್ತರಾದ ಸ್ನೇಹಿತರಲ್ಲಿ ಆ ಕುಟುಂಬದವರೂ ಸೇರಿದ್ದರು. ಅವರ ಮನೆಯಲ್ಲಿ ಆತನು ಅನೇಕಾವರ್ತಿ ಉಪಚಾರವನ್ನು ಹೊಂದಿದನು. ತನಗೆ ಪ್ರಯಾಣದಲ್ಲಿ ದಣಿವುಂಟಾದಾಗಲೂ ಶತ್ರುಗಳು ನಿಂದಿಸಿದ್ದರಿಂದ ಮನಸ್ಸು ನೊಂದಾಗಲೂ ಆ ಮನೆಯೇ ಆತನಿಗೆ ಆಶ್ರಯವಾಗಿತ್ತು. ಆ ಲಾಜರನು ಸತ್ತು ಹೂಳಲ್ಪಟ್ಟ ಗೋರಿಯ ಬಳಿಯಲ್ಲಿ ಆತನು ಕಣ್ಣೀರು ಸುರಿಸಿ ಅತ್ತನೆಂದು ಬರೆದಿದೆ. ಆತನು ಅಳುವದನ್ನು ನೋಡಿದ ಯೆಹೂದ್ಯರು—ಆಹಾ, ಈತನು ಅವನ ಮೇಲೆ ಎಷ್ಟೋ ಮಮತೆ ಇಟ್ಟಿದ್ದನು ಅಂದರು. ಅವರೆ ಆ ಮಿತ್ರ ಕೆಲವರು—ಕುರುಡನಿಗೆ ಕಣ್ಣು ಕೊಟ್ಟನಲ್ಲಾ; ಈ ಮನುಷ್ಯನನ್ನು ಸಾಯದ ಹಾಗೆ ಮಾಡಲಾರದೆ ಇದ್ದನೇ? ಅಂದರು. ಯೇಸುಸ್ವಾಮಿ ಆ ಲಾಜರನನ್ನು ಪ್ರೀತಿಸಿದ್ದು ನಿಜವಾದರೆ, ಅವನನ್ನು ಸಾಯದ ಹಾಗೆ ಮಾಡುವದಕ್ಕೆ ಶಕ್ತಿಯಿದ್ದರೆ ಯಾಕೆ ಹಾಗೆ ಮಾಡಲಿಲ್ಲ ಎಂದು ಅವರು ಆಶ್ಚರ್ಯಪಟ್ಟರು. ಈ ಸಂದರ್ಭದಲ್ಲಿ ಕ್ರೀಸ್ತನ ಶತ್ರುಗಳ ಮನಸ್ಸಿನ ಭಾವವೇನಾಗ ಅಂದರೆ—ಈತನಿಗೆ ಶಕ್ತಿಯಿದ್ದರೂ ಪ್ರೀತಿಯಿರಲಿಲ್ಲ, ಅಥವಾ ಪ್ರೀತಿಯಿದ್ದರೂ ಶಕ್ತಿಯಿರಲಿಲ್ಲ ಎಂದು ಅವರು ನೆನಸಿದರು. ಅಂದರೆ ಆತನು ಪ್ರೀತಿಯುಳ್ಳದ ಸ್ವರೂಪನಾದ ದಿವ್ಯಪುರುಷನಾಗಿರಬೇಕು ಅಥವಾ ಶಕ್ತಿಯಿಲ್ಲದ ಸಾಧಾರಣ ಮನುಷ್ಯನಾಗಿರಬೇಕು ಎಂದು ಅವರ ತೀರ್ಮಾನ. ಅದರೆ ಆತನ ಕಾರ್ಯವನ್ನು ಪರೀಕ್ಷಿಸುವಲ್ಲಿ ಆತನು ಲಾಜರನನ್ನು ಸಾಯದ ಹಾಗೆ ಮಾಡುವದಕ್ಕೆ ಶಕ್ತನಾಗಿದ್ದನಲ್ಲದೆ, ಅವನ ಮೇಲೆಯೂ ಅವನ ಸಹೋದರಿಯರ ಮೇಲೆಯೂ ಆತನು ಅತಿಯುಳ್ಳವನಾಗಿದ್ದನೆಂದು ಗೊತ್ತಾಗುವದು. ತಮಗಾದ ಸಾವು ದುಃಖಗಳಿಂದ ದೇವರು ನಮ್ಮನ್ನು ಪ್ರೀತಿಸುವದಿಲ್ಲವೆಂದು ನಾವು ನಿಶ್ಚಯಿಸಿ ಮಾಡುತ್ತಿರುವದಾಗಿ ನಿರ್ಧರಿಸುವದಕ್ಕಾಗುವದಿಲ್ಲ. ಆತನು ನಮ್ಮ ವಿಷಯದಲ್ಲಿ ಶಕ್ತನಾಗಿದ್ದಾನೆಂತಲಾಗಲಿ ನಮ್ಮ ವಿಷಯದಲ್ಲಿ ಔದಾಸೀನ್ಯವನ್ನು ತಾಳಿದ್ದಾನೆಂತಲಾಗಲಿ ಹೇಳುವದಕ್ಕೆ ನಾವು ಆಧಾರ ಕಾಣುವದಿಲ್ಲ. ಆತನು ಸರ್ವಶಕ್ತನೂ ಸರ್ವಜ್ಞನೂ ತಾನು ಯಾರನ್ನು ಪ್ರೀತಿಸುತ್ತಾನೋ ಅವರಿಗೆ ಹಿತವಾಗುವಂತೆ ಅವಕಾಶವನ್ನು ಕೊಡುತ್ತಾನೆ. ಇಲ್ಲವೆ ತಾನು ಪ್ರೀತಿಸುವವರು [illegible] ಮರಣಕ್ಕೆ ಒಳಗಾಗುವಂತೆಯೂ ಮಾಡುತ್ತಾನೆ. ನಿಮಗೆ ಈ ದುಃಖವು ಬಂದಿರುವದರಿಂದ ಭಗವಂತನು ನಿಮ್ಮ ಮೇಲೆ ಕೋಪವುಳ್ಳವನಾಗಿದ್ದಾನೆಂತಾಗಲಿ, ಸ್ವರ್ಗಸ್ಥರಾದವರ ಪಾಪದಿಂದ ಈ ದುರ್ಗತಿ ಬಂತೆಂತಾಗಲಿ ನೀವು ಯಾವುದನ್ನೂ ಯೋಚಿಸಬೇಡಿ.

ಆ ಲಾಜರನಿಗೆ ಸಂಭವಿಸಿದ ರೋಗದ ಸುದ್ದಿಯು ಯೇಸುಸ್ವಾಮಿಗೆ ಮುಟ್ಟಿದಾಗ ಆತನು—ಈ ರೋಗವು ಮರಣಕ್ಕಾಗಿ ಬಂದದ್ದಲ್ಲ ದೇವರ ಮಹಿಮೆಗೋಸ್ಕರ ಬಂದದ್ದು ಅಂದನು. ಇದರಿಂದ ನಮಗೆ ತೋರುವದೇನಂದರೆ ಸಕಲವೂ ಸಾವಿನಲ್ಲಿ ಮುಗಿಯುವದಿಲ್ಲ. ದೇವರ ಶಕ್ತಿಯೂ ಪ್ರೀತಿಯೂ ಸಾವಿನಲ್ಲಿ ಬಹಳವಾಗಿ ಪ್ರಕಟವಾಗುತ್ತವೆ. ಲಾಜರನು ಸಾಯದಿದ್ದರೆ ಕ್ರೀಸ್ತಸ್ವಾಮಿಯ ಹೃದಯವು ಎಷ್ಟು ಕನಿಕರವುಳ್ಳದ್ದೆಂಬುವದು ಪ್ರಕಟವಾಗುತ್ತಿರಲಿಲ್ಲ. ಆತನು ಕಣ್ಣೀರು ಸುರಿಸಿ ಅಳುತ್ತಿರಲಿಲ್ಲ. ಆತನಲ್ಲಿದ್ದ ಸತ್ತವರನ್ನು ಎಬ್ಬಿಸುವ ಶಕ್ತಿಯು ಪ್ರಕಟವಾಗುತ್ತಿರಲಿಲ್ಲ.

ಭೂಲೋಕದಲ್ಲಿ ಸಾವಿಗಿಂತಲೂ ದುಃಖಕರವಾದಂಥ ಅನುಭವವನ್ನು ಮಾಡತಕ್ಕಂಥ ಕಾರ್ಯವು ಬೇರೊಂದಿಲ್ಲ ಎಂದು ನಾವು ಅನೇಕವೇಳೆ ಯೋಚಿಸುವದುಂಟು. ಬೈಬಲಿನ ಕೆಲವು ಭಾಗಗಳಲ್ಲಿ ಮರಣವು ಪಾಪದಿಂದ ಹುಟ್ಟಿದ ಶಿಕ್ಷೆಯಾದ [illegible] ಬರೆದಿದೆ. ಮರಣದ ವಿಷಯದಲ್ಲಿ ಹೇಳತಕ್ಕದ್ದೆಲ್ಲಾ ಇಷ್ಟೇ ಎನ್ನುವಂತಿಲ್ಲ. ಭೂಲೋಕದಲ್ಲಿ ಮರಣವೇ ಇಲ್ಲದಿರುತ್ತಿದ್ದರೆ ಕ್ರೀಸ್ತ ಸ್ವಾಮಿಯು ಸಾಯುತ್ತಿರಲಿಲ್ಲ. ಆತನು ಸಾಯದಿರುತ್ತಿದ್ದರೆ ಭಗವಂತನ ಪ್ರೀತಿಯೇನೆಂಬುವದು ಗೊತ್ತಾಗುತ್ತಿರಲಿಲ್ಲ.

ಮನುಷ್ಯರಲ್ಲಿರುವ ಸರ್ವೋತ್ಕೃಷ್ಟವಾದ ಗುಣಗಳು ಸಾವಿನ ದೆಸೆಯಿಂದಲೇ ಹೊರಪಡುತ್ತವೆ. ನಾವು ಬಂದಾಗ ಎಷ್ಟು ಮಂದಿ ಸ್ವಲ್ಪವೂ ಭಯಪಡದೆ ಬಂದ ಕಷ್ಟಗಳನ್ನೆಲ್ಲಾ ತಾಳಿಕೊಂಡು ಅತಿ ವಿನಯದಿಂದ ತಮ್ಮನ್ನು ಒಪ್ಪಿಸಿಕೊಟ್ಟಿರುವದನ್ನು ನೋಡಿಲ್ಲ! ಅವರು ಈ ಜೀವವನ್ನು ಬಿಟ್ಟು ಹೋಗುವ ಸಮಯವನ್ನು ನೋಡುವಲ್ಲಿ ಮರಣವಾಗ ಅವರಿಗೆ ಇಷ್ಟು ಭೂಷಣವಾಗಿದ್ದದ್ದು ಬಂದೂ ಇಲ್ಲದೆ ತೋರಿತು. ವಿಯೋಗ ಕಾಲವು ಬಂದಾಗ ಅನೇಕರು ಭಗವಂತನಲ್ಲಿ ಪ್ರಕಟಿಸಿದ ನಂಬಿಕೆಯನ್ನೂ ಭರವಸವನ್ನೂ ಎಷ್ಟು ಅತಿಶಯವಾಗಿ ಶ್ರೇಷ್ಠವಾಗಿ ಮಾರ್ಗದರ್ಶನ! ಅವರ ಭಕ್ತಿಯ ಸೊಬಗು ಅತಿ ಪ್ರಕಾಶಮಾನವಾಗಿ ಉರಿಯುವದು ಮುಗಿಬಿದ್ದ ಮಳೆ ಗಾಳಿ ಅದರ ಮೇಲೆ ಬೀಸುವಾಗಲೇ. ಹೀಗಿರುವದರಿಂದ ಪ್ರಿಯ ಮಿತ್ರ

ಭಗವಂತನು ನಮ್ಮಲ್ಲಿಟ್ಟಿರುವ ನಮತೆಯನ್ನೂ ತನ್ನಲ್ಲಿರುವ ಶಕ್ತಿಯನ್ನು ಪ್ರಕಟಿಸುವದಕ್ಕೆ ಮರಣವೇ ಅತ್ಯಂತ ಅನುಕೂಲವಾದ ಸಂದರ್ಭವೆಂದು ತಿಳಿಯಿರಿ. ನಮ್ಮ ಸೆಂಟರಿಷ್ಟರಿಗೆ ಒಂದು ರೋಗವು ಸಾವಿನಲ್ಲಿ ಮುಗಿಯುವದಕ್ಕೆ ಒಂದಲ್ಲ. ಅವರ ಆತ್ಮಗಳು ಭಗವಂತನ ಬಳಿ ಇವೆ. ನಿಮಗೆ ಒದಗಿರುವ ಈ ದುಃಖದಿಂದಲೇ ದೇವರ ಮಹಿಮೆಯು ನಿಮಗೆ ಪ್ರಕಟವಾಗುವದೆಂದು ನಂಬಿದ್ದೇನೆ.

ನಿಮ್ಮ ಪ್ರಿಯ ಮಿತ್ರ.

ಒಳದೇಶದ ವೃತ್ತಾಂತಗಳು.

ಅರಮನೆ ಇಲಾಖೆಯು ಅಪ್ಪಣೆಯಾದನಂತರ ಮಾನೋಜಿಗೆಲ್ಲ ಒಟ್ಟಕ್ಕೆ ಒಡೆಯನಲ್ಲಿ ಜಾತಿವಾರು ಮನೆಗಳನ್ನು ಕಟ್ಟಿಸಿ ಕೊಡುತ್ತಾರೆಂದು ವರ್ತಮಾನ ಇದೆ.

ಕಳೆದ ಒಬ್ಬನಿಂದ ಘಾನುವಾರದ ತನಕ ರಾಜಧಾನಿಯು ೭ ಇಂಚಿನ ಪ್ರಮಾಣದಷ್ಟು ಮಳೆಗಳಾದವು. ಹವಾ ಬದಲಾಯಿತು. ಇನ್ನೂ ಮಳೆ ಬರುವಂತೆ ಕಾಣುವದು.

ಬೆಂಗಳೂರು ಡೆಪ್ಯುಟಿ ಕಮಿಷನರಾಗಿದ್ದ ಮಿ॥ ಎಂ. ಎಸ್. ನಾರಾಯಣರಾಯರನ್ನು ಸರ್ಕಾರದವರು ತುಮಕೂರು ಡಿಸ್ಟ್ರಿಕ್ಟಿಗೆ ನೇಮಿಸಿ ವರ್ಗಮಾಡಿದರು. ಆದ್ದರಿಂದ ಮಿ॥ ಕೆ. ಎಸ್. ದೊರೆಸ್ವಾಮಿಯವರು ಈಗ ಸಬ್ ಡಿವಿಜನ್ ಆಫೀಸರಾಗಿ ಪ್ರಾಂತಕ್ಕೆ ಬರುವರು.

ಸಕ್ಕರೆಯನ್ನು ಹೆಚ್ಚಾಗಿ ಆಹಾರದ ಸಂಗಡ ಉಪಯೋಗಿಸುತ್ತಿದ್ದರೆ ಯಾವ ತರದ ಜ್ವರವೂ ಮೈಗೆ ಹತ್ತುವದಿಲ್ಲವೆಂತಲೂ, ಸಕ್ಕರೆ ವಿಶೇಷವಾಗಿ ತಿನ್ನತಕ್ಕ ದೇಶಗಳಲ್ಲಿ ಪ್ಲೇಗಿನ ಹೆಸರೇ ಇಲ್ಲವೆಂತಲೂ, ಮಿ॥ ಜಾನ್ ಬೂಚನ್ ಎಂಬವರು ಬೆಂಗಳೂರಿನಿಂದ ಬರೆದಿದ್ದಾರೆ.

ಮೈಸೂರು ಮಹಾರಾಣಿ ಕಾಲೇಜ್ ಎಫ್. ಎ. ಕ್ಲಾಸಿನಲ್ಲಿ ಓದುತ್ತಿದ್ದ ಸ॥ ಕಿಟ್ಟಮ್ಮನೆಂಬ ವಿದ್ಯಾರ್ಥಿನಿಯು ಹಿಂದಿನ ವಾರ ಪ್ಲೇಗ್ ನಿಂದ ಕಾಲವಾದಂತೆ ಪ್ರಕಟಿಸಿದ್ದೆವಷ್ಟೆ. ಆಕೆ ಕಾಲವಾದದ್ದು ಹಿಂದಿನ ವಾರವಲ್ಲ; ಕಳೆದ ಘಾನುವಾರ ತೀರಿಹೋದರೆಂದು ತಿಳಿದುಬಂದಿದೆ.

ಲೇಟ್ ದಿವಾನ್ ಸರ್ ಶೇಷಾದ್ರಿ ಅಯ್ಯರವರ ಪ್ರಾರ್ಥನೆಯ ಪ್ರಕಾರ ಅವರ ಜ್ಯೇಷ್ಠಪುತ್ರರಾದ ಮಿ॥ ಕೆ. ಎಸ್. ದೊರೆಸ್ವಾಮಿ ಐಯರು ಅರಮನೆ ದರ್ಬಾರಿನಲ್ಲಿ ಕಮ್ಮರ್ ಬಂದ್ (ನಡಾ ಕಟ್ಟುವದು) ಕಟ್ಟಬೇಕಾದ ಅಗತ್ಯವಿಲ್ಲವೆಂಬದಾಗಿ ಮಹಾರಾಜರು ಅವರಿಗೆ ರಿಯಾಯಿತಿಯನ್ನು ತೋರಿಸಿದಾರೆ.

ಪೆನ್‌ಷನ್ ಮೇಲೆ ಕೆಲಸ ಬಿಟ್ಟ ಕರ್ನಲ್ ಕ್ಯಾಂಬೆಲ್ ಯವರು ಮಹಾರಾಜರ ಅಪೇಕ್ಷೆಯಂತೆ ನವರಾತ್ರಿ ಕಳೆಯುವ ತನಕ ರಾಜಧಾನಿಯಲ್ಲಿದ್ದರು. ಇವರು ನಾಳೆ ಶನಿವಾರ ಬೆಂಗಳೂರಿಗೆ ಹೋಗಿ ಅಲ್ಲಿ ಕೆಲವು ದಿನವಿದ್ದು, ಅನಂತರ ಬೊಂಬಾಯಿನಲ್ಲಿ ಹಡಗು ಹತ್ತಿ ಸೀಮೆಗೆ ಪ್ರಯಾಣ ಮಾಡುವವರಾಗಿದ್ದಾರೆ.

ರಾಜಧಾನಿಯಲ್ಲಿ ಬೀದಿ ಕಸವಾ ಗುಡಿಸುವವರ ಪೈಕಿ ಕೆಲವು ಕೂಲಿ ಪ್ಲೇಗಿನಲ್ಲಿ ಮೃತಪಟ್ಟರು. ಉಳಿದವರಿಗೆ ಪ್ರತ್ಯೇಕವಾದ ಸ್ಥಳದಲ್ಲಿ ಆರೋಗ್ಯವಾದ ಕ್ಯಾಂಪುಗಳನ್ನು ಕಟ್ಟಿಸಿಕೊಡಬೇಕೆಂದು ಹೆಲ್ತ್ ಆಫೀಸರು ಮ್ಯುನಿಸಿಪಾಲಿಟಿಗೆ ತಿಳಿಸಿರುತ್ತಾರೆ. ಇದು ಕೂಡಾ ಅವಶ್ಯವಾದ್ದರಿಂದ ಮ್ಯುನಿಸಿಪಾಲಿಟಿಯವರು ಅವರಿಗೆ ಬೇಗನೆ ಕ್ಯಾಂಪು ಕಟ್ಟಿಸಿಕೊಡುವರೆಂದು ನಿರೀಕ್ಷಿಸಲ್ಪಟ್ಟಿದೆ.

ಮೈಸೂರು ಡೆಪ್ಯುಟಿ ಕಮಿಷನರ್ ಮಿ॥ ರಾಮಸ್ವಾಮಿ ಐಯಂಗಾರ್ಯರ ಜ್ಯೇಷ್ಠ ಪುತ್ರರಾದ ಶ್ರೀನಿವಾಸೈಯಂಗಾರ್ಯ ಕಳೆದ ಬುಧವಾರ ಸಂಧ್ಯೆಗೆ ಪ್ಲೇಗಿನಲ್ಲಿ ಕಾಲವಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮಿ॥ ರಾಮಸ್ವಾಮಿಐಯಂಗಾರ್ಯರು ಡಿಸ್ಟ್ರಿಕ್ಟಿನ ಛಾರ್ಜನ್ನು ಮಿ॥ ಶಾಮರಾವ್ ರವರಿಗೆ ಒಪ್ಪಿಸಿ ರಜಾ ಪಡೆದು ಸಂಸಾರ ಸಹಿತ ಮದರಾಸಿಗೆ ಪ್ರಯಾಣ ಮಾಡಿದರು.

ಕಳೆದ ತಿಂಗಳ ೩೦ನೇ ತಾರೀಖಿನಲ್ಲಿ ಮಿ॥ ಬ್ರೇಯಿತ್ವೇಟ್ ಕೋರ್ಟ್‌ಫೀಲ್ಡ್ ಎಂಬುವರು ಸದರರ್ಲೆಂಡಿನಲ್ಲಿ ಕಾಲವಾದರು. ಅತನಿಗೆ ಮರಣ ಕಾಲದಲ್ಲಿ ೯೩ ವರುಷ ವಯಸ್ಸಾಗಿತ್ತು. ಹಿಂದುಸ್ಥಾನದಲ್ಲೆಲ್ಲಾ ಆತನಷ್ಟು ವೃದ್ಧನಾದ ಯೂರೋಪ್ಯನು ಯಾರೂ ಇಲ್ಲವೆಂದೂ, ಆತನು ಕಳೆದ ೧೮೫೭ನೇ ಇಸವಿ ದಂಗೆಯ ಕಾಲದಲ್ಲಿ ಹಿಂದುಸ್ಥಾನದಲ್ಲಿ ಇದ್ದವನೆಂದೂ ತಿಳಿದುಬಂದಿದೆ.

ರಾಜಧಾನಿಯ ಆರೋಗ್ಯಸ್ಥಿತಿಯನ್ನು ಅಭಿವೃದ್ಧಿ ಪಡಿಸುವದಕ್ಕೋಸ್ಕರ ಊರಿನ ಸಫಾಯಿ ಕೆಲಸವನ್ನು ಒಡನೆಯೇ ಮಾಡುವದಕ್ಕೆ ಸರ್ಕಾರದವರು ನೇಮಕ ಮಾಡಿರುವ ಕಮಿಟಿ ಮೆಂಬರುಗಳು ಕಳೆದ ಸೋಮವಾರವೂ ಮಂಗಳವಾರವೂ ಸಭೆ ಸೇರಿ ಕೆಲವು ವಿಷಯಗಳನ್ನು ಚರ್ಚೆ ಮಾಡಿದರು. ಈ ಸಂಘದವರ ಕಾರ್ಯಗಳು ಪ್ರಕಟವಾಗಲು ಕೆಲವು ಕಾಲ ಹಿಡಿಯುವದು.

ಮಿ॥ ತಂಬುಚೆಟ್ಟಿ, ಸಿ. ಐ. ಇ., ಯವರ ಹೆಸರನ್ನು ಮೈಸೂರು ಸಂಸ್ಥಾನದಲ್ಲಿ ಶಾಶ್ವತಪಡಿಸಬೇಕೆಂದು ಮೀಟಿಂಗ್ ಮುಂತಾದ್ದು ನಡೆದು ಒಂದು ವರುಷದ ಮೇಲಾಗುತ್ತಾ ಬಂತು. ಆಗ ದೊಡ್ಡ ಮನುಷ್ಯರು ೩,೦೦೦ ರೂ. ಗಳಿಗೂ ಹೆಚ್ಚಾಗಿ ಚಂದಾ ಕೊಟ್ಟಿದ್ದರು. ಈ ವಿಚಾರದ ವಿನಾಯಿತಿಯೂ ಇನ್ನೂ ಪ್ರಕಟವಾಗಲಿಲ್ಲ. ಅವರ ತಸ್ವೀರನ್ನಾದರೂ ತಯಾರು ಮಾಡಿಸಿ ಛೀಫ್ ಕೋರ್ಟಿನಲ್ಲಿ ಇಡಿಸುವಂತೆ ಮಾಡಬಾರದೇ ಎಂಬದಾಗಿ ಒಬ್ಬ ಬಾತ್ಮಿದಾರರು ಬರೆದಿದಾರೆ.

ಜಗನ್ಮೋಹನ ಬಂಗಲೆಯ ಎರಡು ಪಕ್ಕದಲ್ಲಿರುವ ಮನೆಗಳನ್ನೆಲ್ಲಾ ದಸರಾ ಉದ್ದಿಶ್ಯ ಖಾಲಿಮಾಡಿಸಿದ್ದರಷ್ಟೆ. ಲಕ್ಷ್ಮೀವಿಲಾಸ ರಸ್ತೆಯಲ್ಲಿ ಅರಮನೆ ಜನಾನಾ ಸಮುಖದ ಒಳಬಾಗಿಲು ಚಾಮುಂಡಿನವರ ಮನೆಯಲ್ಲಿ ನವರಾತ್ರಿ ಉತ್ಸವಕಾಲದಲ್ಲಿ ಕಳ್ಳರು ಕನ್ನ ಹಾಕಿ ೪೦೦—೫೦೦ ರೂಪಾಯಿನ ನಗನಾಣ್ಯಗಳನ್ನು ಕಳವು ಮಾಡಿದರು. ಅರಮನೆಯ ಪಕ್ಕದಲ್ಲೇ ಇಂಥಾ ದುಷ್ಕೃತ್ಯ ನಡೆಸುವದಕ್ಕೆ ಕಳ್ಳರ ಧೈರ್ಯವೆಷ್ಟೋ ಹೇಳಲಾರೆವು. ಪೊಲೀಸ್ ಇಲಾಖೆಯವರು ಕ್ರಮಪ್ರಕಾರ ತನಿಖೆ ಪತ್ತೆತರದೂದು ಮುಂತಾದ್ದನ್ನು ಮಾಡತಾರಂಭಿಸಿದಾರೆ.

ತಿಪಟೂರು ತಾಲ್ಲೂಕು ಹೊನ್ನವಳ್ಳಿ ಗ್ರಾಮದ ಸ್ಥಿತಿಯನ್ನು ಕುರಿತು ಒಬ್ಬ ಬಾತ್ಮಿದಾರರು ಬರೆದಿರುವದೇನಂದರೆ.—ಈ ತಾಲ್ಲೂಕಿನ ಅನೇಕ ಗ್ರಾಮಗಳಲ್ಲಿ ಇಲಿಗಳು ಸಾಯುತ್ತಿವೆ. ಹೊನ್ನವಳ್ಳಿಯಲ್ಲಿ ಪ್ಲೇಗ್ ಪ್ರಾರಂಭವಾಯಿತು. ಅನೇಕ ಜನರು ಇತರ ಕಡೆಗಳಿಗೆ ಹೋಗಿ ಸೇರಿಕೊಂಡರು. ಬ್ರಾಹ್ಮಣರು ಕುರುಬರು ಊರು ಬಿಡದೆ ಇದ್ದರು. ಇವರಲ್ಲೇ ಒಂದು ಜನರು ಪ್ಲೇಗಿನಲ್ಲಿ ಮೃತಪಟ್ಟರು. ಇದುವರೆಗೆ ೭೦ ಜನರು ತೀರಿಹೋಗಿದಾರೆ. ಇನ್ನಾದರೂ ಈ ಜನರು ಊರುಬಿಟ್ಟಾರೆಂದು ತೋರುತ್ತೇನೆ ಎಂಬುವದೇ

ಹೆಗ್ಗಡದೇವನ ಕೋಟೆ ತಾಲ್ಲೂಕು ನಾಗನ ಹಳ್ಳಿಗೆ ಸುಮಾರು ೨ ವಾರಗಳ ಹಿಂದೆ ಸಾಯಂಕಾಲಕ್ಕೆ ಮುಂಚೆಯೇ ಎರಡು ಹುಲಿಗಳು ಬಂದು, ಒಂದು ಕರುವನ್ನು ಹೊಡೆದು ತಿನ್ನಲಾರಂಭಿಸಿದವು. ೫೦—೬೦ ಜನ ಗ್ರಾಮಸ್ಥರು ೫೦ ಗಜ ದೂರದಲ್ಲಿ ಸೇರಿ ಅವೆರಡನ್ನು ಓಡಿಸ ಬೇಕೆಂದು ವಿಪರೀತ ಶಬ್ದ ಮಾಡಿದರು. ಆದರೆ ಅವೆರಡೂ ಚಲನೆ ಮಾಡಲಿಲ್ಲ ಕಡೆಗೆ ಅಲ್ಲಿದ್ದ ಒಬ್ಬ ಪಾದ್ರಿಯವರು ಬಂದೂಕವನ್ನು ತಂದು ಗುರಿಯಿಟ್ಟು ಹುಲಿಗಳನ್ನು ಹೊಡೆದರು. ಆ ಗುಂಡು ಒಂದು ಹುಲಿಯ ಮೈಗೆ ತಾಕಿತು ಕೂಡಲೇ ಅವೆರಡೂ ಅಲ್ಲಿಂದ ಓಡಿಹೋದವು ಎಂಬದಾಗಿ ಒಬ್ಬ ಬಾತ್ಮಿದಾರನು ಬರೆಯುತ್ತಾನೆ.

ಬರ್ಮಾ ದೇಶದಲ್ಲಿ ಡೆಂಗ್ಯೂಫೀವರ್ (ಡಿಂಕಿಜ್ವರ್) ಎಂಬ ಜ್ವರವು ಪ್ರಜೆಗಳನ್ನು ಬಹಳವಾಗಿ ಪೀಡಿಸುತ್ತಿದೆ ಎಂದು ಕಳೆದವಾರ ತಿಳಿಸಿದೆವಷ್ಟೆ. ಈ ಜ್ವರವು ಹಾಂಗ್‌ಕಾಂಗಿನಿಂದ ಮದರಾಸಿಗೆ ಬಂತು. ಅಲ್ಲಿ ಆಗಲೇ ೭೦೦—೮೦೦ ಜನರಿಗೆ ಅದು ವ್ಯಾಪಿಸಿತು; ಇನ್ನೂ ಅನೇಕರಿಗೆ ವ್ಯಾಪಿಸುತ್ತಾ ಇದೆ. ಅದು ಈಚೆಗೆ ಅಲ್ಲಿಂದ ಬೆಂಗಳೂರಿಗೂ ಬಂದಿರುವ ಹಾಗೂ, ಬೆಂಗಳೂರಿನಲ್ಲಿ ಜನರಿಗೆ ಹಿಡಿಯುತ್ತಿದೆ ಎಂತಲೂ ತಿಳಿದು ಬರುವದು. ೩—೪ ದಿನ ಕೈಕಾಲು ಕೀಲುಗಳೆಲ್ಲಾ ಹಿಡಿಯುವದು, ಸ್ವಲ್ಪ ಜ್ವರ ಬಂದು ಗುಣವಾಗುವದು, ಇಷ್ಟೇ ಈ ರೋಗದ ಲಕ್ಷಣವೆಂದು ನಮ್ಮ ವಾಚಕರಲ್ಲಿ ಅನೇಕರಿಗೆ ಗೊತ್ತೇ ಇದೆ.

ಕಡೂರು, ಚಿಕ್ಕಮಗಳೂರು, ತರಿಕೆರೆ, ಬೀರೂರು, ಮೂಡಿಗೆರೆ ಮುಂತಾದ ಕಡೆಗಳಲ್ಲಿ ಪ್ಲೇಗ್ ಉಪದ್ರವು ಬಹಳ ಹಾವಳಿಯನ್ನುಂಟು ಮಾಡುತ್ತಿದೆ. ಚಿಕ್ಕಮಗಳೂರಿನಲ್ಲಿ ಕೆಲವು ಅಂಗಡಿಗಳು ಮಾತ್ರ ತೆರೆದಿವೆ. ಮೂಡಿಗೆರೆಯಲ್ಲಿ ಅಂಗಡಿಗಳೇ ಇಲ್ಲ. ಪ್ರಜೆಗಳನ್ನು ಊರು ಬಿಟ್ಟು ಹೊರಡಿಸುವದೊಂದು ವಿನಹ ಉಪದ್ರವನ್ನು ಅಡಗಿಸುವ ಬೇರೆಯಾವ ಏರ್ಪಾಡೂ ನಡೆಯುತ್ತಾ ಇಲ್ಲ. ಇದರಿಂದ ಜನರು ಓಡಿಹೋಗಿ ಎಲ್ಲಾ ಕಡೆಗಳಿಗೂ ಉಪದ್ರವನ್ನು ಹರಡುವದಕ್ಕೆ ಅನುಕೂಲವಾಗಿದೆ. ಬಿಟ್ಟು ಹೋದವರ ಮನೆಗಳನ್ನು ಶುದ್ಧಿ ಮಾಡಿಸುವಂತೆ ಸರ್ಕಾರದವರು ಏರ್ಪಾಡು ಮಾಡುವದು ಒಳ್ಳೆದು ಎಂಬದಾಗಿ ಒಬ್ಬ ವರ್ತಕರು ಬರೆಯುತ್ತಾರೆ.

ಬೆಂಗಳೂರು ಸೂರ್ಯೋದಯ ಪತ್ರಿಕೆಯು ಮೈಸೂರಿನಲ್ಲಿ ಪ್ಲೇಗ್ ನಿಲ್ಲಿಸುವ ಉಪಾಯವನ್ನು ಕುರಿತು ತಿಳಿಸುವದೇನಂದರೆ.—ಪ್ಲೇಗ್ ವ್ಯಾಧಿಗೆ ಕೆಲವು ತಿಂಗಳುಗಳು ಊರು ಬಿಡುವದೇ ಔಷಧಿಯಾಗಿ ದೃಷ್ಟಾಂತವಾಗಿರುವದರಿಂದ ಮೈಸೂರನ್ನು ಜನಗಳು ಶುದ್ಧಾಂಗವಾಗಿ ೩ ತಿಂಗಳ ವರೆಗೂ ಬಿಟ್ಟು ಹೋದರೆ ಪ್ಲೇಗ್ ನಿಂತೇ ಹೋಗುವದು. ಇದಕ್ಕೆ ಹಿಂದೆ ಪಂಡಿತರು ಸಹಾ ಒಂದು ಕೃತಿಯಲ್ಲಿ ಹೀಗೆ ಹೇಳಿರುವರು. ಶ್ರೀಮನ್ ಮಹಾರಾಜರವರು ಪ್ಲೇಗನ್ನು ನಿಲ್ಲಿಸುವದಕ್ಕೆ ಬಹಳ ಪ್ರಯತ್ನ ಪಡುತ್ತಿರುವರು. ಮೈಸೂರಿನ ಸುತ್ತಲು ಆರೋಗ್ಯವಾದ ಪ್ರದೇಶಗಳನ್ನು ಆರಿಸಿ ಗುಡಿಸಲುಗಳನ್ನು ಹಾಕಿಸಿ ಅವುಗಳಲ್ಲಿ ಜನಗಳು ವಾಸ ಮಾಡುವಂತೆ ಪ್ರೋತ್ಸಾಹಿಸಬೇಕು. ಅಲ್ಲಿಯೂ ಮೈಸೂರು ಟವನ್‌ನಲ್ಲಿಯೂ ಇರತಕ್ಕ ಜನಗಳ ಸ್ವತ್ತುಗಳನ್ನು ಕಾಪಾಡಲು ತಕ್ಕಷ್ಟು ಪೊಲೀಸ್ ಸಿಬ್ಬಂದಿಯನ್ನು ನೇಮಿಸಬೇಕು. ಆಯಾ ಹೆಲ್ತ್ ಕ್ಯಾಂಪುಗಳಲ್ಲಿ ಒಂದೊಂದು ಅಂಗಡಿಯನ್ನು ಇಡಿಸಬೇಕು. ಈ ರೀತಿಯಾದ ಏರ್ಪಾಡು ಮಾಡಿದಲ್ಲಿ ಕೂಡಲೇ ಪ್ಲೇಗ್ ಕಡಿಮೆಯಾಗಲು ಸಂದೇಹವಿಲ್ಲವು.

ಕಳೆದ ವಾರ ರಾಜಧಾನಿಯಲ್ಲಿ ಪ್ಲೇಗ್ ಉಪದ್ರವು ಒಂದೇಸಮವಾಗಿತ್ತು. ಇನ್ನು ಮುಂದೆ ಕಡಿಮೆಯಾಗಬಹುದೆಂದು ಹೇಳುತ್ತಾರೆ. ಉಪದ್ರದ ಸ್ಥಿತಿಯನ್ನು ಕೆಳಗೆ ಕಂಡ ಲೆಖ್ಖದಿಂದ ತಿಳಿಯಬಹುದು. ತಾ. ೮ ರಿಂದ ತಾ. ೧೪ ರ ವರೆಗೆ ೭ ದಿನಗಳಲ್ಲಿ:—

ಮೊಹಲ್ಲಾ.	ಆಗಲಿತವರು.	ಸತ್ತವರು.	ಒಟ್ಟು ಮರಣ.
ಲಷ್ಕರ್	೧೦೪	೩೩	೪೯
ಮಂಡಿ	೩೬	೫೮	೫೯
ದೇವರಾಜ್	೭೩	೫೦	೫೫
ಚಾಮರಾಜ್	೪೦	೬೫	೪೦
ಕೃಷ್ಣರಾಜ್	೫೫	೪೬	೫೫
ಕೋಟೆ	೧೦	೩	೩
ಹಜರಬಾದ್	೬೦	೨೩	೨೯
ಪ್ಲೇಗ್ ಕ್ಯಾಂಪ್	೫	೨೩	೨೩
ಜುಮ್ಲಾ.	೬೪೨	೬೧೯	೬೩೦

ಕಳೆದ ೪ನೇ ತಾ॥ನ ಮಧ್ಯಾಹ್ನ ೮ ಘಂಟೆಗೆ ಬೆಂಗಳೂರು ಡಿಸ್ಟ್ರಿಕ್ಟ್ ಆಫೀಸ್ ಡೆಪ್ಯುಟಿ ಕಮಿಷನರವರ ಛೇಂಬರ್ ಹಾಲಿನಲ್ಲಿ ಸರ್ ಶೇಷಾದ್ರಿಯ್ಯನವರ ಮೆಮೋರಿಯಲ್ ವಿಷಯವಾದ ಒಂದು ಮೀಟಿಂಗ್ (ಸಭೆಯು) ನಡೆಯಿತು. ಈ ಸಭೆಗೆ ಡಿ॥ ಕ॥ ಮಿ॥ ಸ್ಟ್ರಾಟ್ಸ್‌ನ್‌ಯವರು ಮಿ॥ ಅರ್ಕಾಡು ಶ್ರೀನಿವಾಸಾಚಾರ್ಯ, ಅಡ್ವೊಕೇಟ್ ಮತ್ತು ಸಿಟಿ ಮ್ಯುನಿಸಿಪಲ್ ಕಮಿಷನರ್ ಮಿ॥ ಸಿ. ಕೃಷ್ಣಮೂರ್ತಿಯವರು, ದಿವಾನ್ ಆಫೀಸ್ ಅಂಡರ್ ಸೆಕ್ರೆಟರಿ ಮಿ॥ ಎಚ್. ರಾಮಯ್ಯನವರು, ಅಡ್ವೊಕೇಟ್ ಮಿ॥ ಶ್ರೀನಿವಾಸೈಯಂಗಾರ್ಯ, ಸಾಹುಕಾರ್ ಗುಬ್ಬಿ ತೋಟದಪ್ಪನವರು, ಮುಖ್ಯನ ಬಸಪ್ಪನವರೇ ಮುಂತಾದ ಕಮಿಟಿ ಮೆಂಬರುಗಳು, ಪತ್ರಿಕಾ ಪ್ರತಿನಿಧಿಗಳು ಸೇರಿದ್ದರು. ಮೀಟಿಂಗಿನಲ್ಲಿ ಹಾಜರಿದೆ ಇದ್ದ ಸುಮಾರು ೨೫—೩೦ ಜನ ಪ್ರತಿನಿಧಿಗಳ ಹೆಸರುಗಳ ಒಂದು ಪಟ್ಟಿಯು ತಯಾರಿಸಲ್ಪಟ್ಟಿತು. ಒಂದು ಜನ ಸೇರಿಸಿ ಒಂದು ಮೀಟಿಂಗ್ ಮಾಡಬೇಕೆಂದು ಮಿ॥ ಸಿ. ಕೃಷ್ಣಮೂರ್ತಿಯವರು ಸೂಚಿಸಿದ್ದಕ್ಕೆ ಆ ವಿಷಯವನ್ನು ಸೋಮವಾರ ಸೇರುವ ಮೀಟಿಂಗಿನಲ್ಲಿ ತೀರ್ಮಾನ ಮಾಡುವದೆಂದು ನಿಶ್ಚಯಿಸಿದರು. ೮॥ ಘಂಟೆಗೆ ಮೀಟಿಂಗ್ ಬರಖಾಸ್ತಾಯಿತು. ಅದೇ ಪ್ರಕಾರ ಸೋಮವಾರ ಪ್ರಾತಃಕಾಲ ಒಂದು ಮೀಟಿಂಗ್ ನಡೆಯಿತು. ಮಿ॥ ಗುಬ್ಬಿ ತೋಟದಪ್ಪನವರು ಮಗ್ಗೆಯು ೮೦೦ ರೂ. ತನಕ ಚಂದಾವನ್ನು ಹಾಕಿದರು.—ಸೂ.

ಮೈಸೂರು ಗೆಜೆಟ್ ಸಂಗ್ರಹ.

ಹೊಳೆಹೊನ್ನೂರಲ್ಲಿ ಮುನಿಸಿಪಲ್ ಮೆಂಬರಾಗಿದ್ದ ಮ॥ ರಾ॥ ಪಾಪಿಗ ಸೀತಾರಾಮಪ್ಪನವರೂ, ಹೊನ್ನಾಳಿಯಲ್ಲಿ ಇದ್ದ ಮ॥ ರಾ॥ ಚಿಕ್ಕ ಹಳ್ಳಿ ಕೃಷ್ಣರಾಯರೂ, ಮುನಿಸಿಪಲ್ ಮೆಂಬರಾಗಿ ಚುನಾಯಿತರಾದ್ದರಿಂದ ಮುಂದಿನ ಮೀಟಿಂಗಿನ ವರೆಗೆ ಬದಲು ಮೈಸೂರು ಸರ್ಕಾರ್ ಹುಜೂರ್ ಸರಪೇಷ್ಕಾರ್ ಮ॥ ರಾ॥ ವೆಂಕಟರಮಣರಾಯರನ್ನೂ ಮುನಿಸಿಪಲ್ ಮೆಂಬರಾಗಿ ಮ॥ ರಾಜೆ ಉಮಾರ ಸಾಹೇಬರನ್ನೂ ನೇಮಿಸಿದಾರೆ.

ಅನ್ನಛತ್ರದ ಅಮಲ್ದಾರ್ ಮ॥ ಸಿ. ವಿ. ನಾರಾಯಣರಾಯರಿಗೆ ಆಗಸ್ಟ್ ೨೪ ರಿಂದ ಅಥವ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೧೦ ದಿವಸ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ. ಅವರ ಗೈರುಹಾಜರಿಯಲ್ಲಿ ಶಿರಸ್ತೇದಾರರು ತಾಲ್ಲೂಕ್ ಛಾರ್ಜನಲ್ಲಿದ್ದು ಕ್ರಿಮಿನಲ್ ಕೆಲಸವನ್ನು ಕೊಳ್ಳೇಗಾಲ ಡೆಪ್ಯುಟಿ ಅಮಲ್ದಾರರು ನೋಡತಕ್ಕದ್ದು.

ದಿವಾನರ ಆಫೀಸಿನಲ್ಲಿದ್ದ ಅಸಿಸ್ಟೆಂಟ್ ಕಮಿಷನರ್ ಮ॥ ಸಿ. ದೇವರಾಜ ಅರಸಿನವರಿಗೆ ಹಿಂದೆ ಕೊಡಲ್ಪಟ್ಟಿದ್ದ ರಜವನ್ನು ಇನ್ನು ೧೫ ದಿನ ಕಾಲ ಹೆಚ್ಚಿಸಿದೆ.

ಶ್ರೀಮನ್ ಮಹಾರಾಜರವರ ಪಟ್ಟಾಭಿಷೇಕ ಕಾಲದಲ್ಲಿ ಹಾಸನ ತಾಲ್ಲೂಕ್ ಅಮಲ್ದಾರ್ ಮ॥ ಕೃಷ್ಣಮಾಚಾರ್ಯರು ಸ್ಪೆಷಲ್ ಡ್ಯೂಟಿಯ ಮೇಲೆ ಮೈಸೂರಿಗೆ ಕಳುಹಿಸಲ್ಪಟ್ಟಿದ್ದರಿಂದ, ಆ ಕಾಲದಲ್ಲಿ ಅಂದರೆ, ಜುಲೈ ೨೩ ರಿಂದ ಆಗಸ್ಟ್ ೨೦ ರ ವರೆಗೆ ತಾ॥ ಶಿರಸ್ತೇದಾರ್ ಮ॥ ನರಸಿಂಗರಾಯರು ಅಮಲ್ದಾರರಾಗಿ ಆಕ್ಟ್ ಮಾಡಿದರು.

ಅ॥ ಕಮಿಷನರ್ ಮ॥ ಎಂ. ವೆಂಕಟರಾಜೆ ಅರಸಿನವರಿಗೆ ಹಿಂದೆ ಕೊಡಲ್ಪಟ್ಟಿದ್ದ ಖಾಯಿಲೆ ರಜವು ಇನ್ನೂ ೬ ತಿಂಗಳ ಕಾಲ ಹೆಚ್ಚಿಸಲ್ಪಟ್ಟಿದೆ.

ಸೆಪ್ಟಂಬರ್ ೧೪ನೇ ತಾ॥ ನಾರಥ್ಯ ಗವರ್ನ್ಮೆಂಟ್ ಅ॥ ಗ್ರಾಜುಯೆಟರಾದ ಮ॥ ವಿ. ಆರ್. ತ್ಯಾಗರಾಜ ಐಯ್ಯರಿಗೆ ೧೬ ದಿವಸ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

೩೧ನೇ ಅಕ್ಟೋಬರ್ ೧೯ ರಲ್ಲು ಅರಕಲಗೂಡು ಅಮಲ್ದಾರ್ ಮ॥ ರಂಗನಾಥ ರಾಯರಿಗೆ ಕೊಡಲ್ಪಟ್ಟಿದ್ದ ರಜವನ್ನು ಅವರು ಉಪಯೋಗಿಸಿಕೊಳ್ಳದೆ ಹೋದದರಿಂದ, ಅವರಿಗೆ ೧೯೦೨ ನೇ ಅಕ್ಟೋಬರ್ ೧೬ ರಿಂದ ೬ ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ. ಅವರ ಗೈರುಹಾಜರಿಯಲ್ಲಿ ಹಾಸನದ ತಿ॥ ಶಿರಸ್ತೇದಾರ್ ರಾಮಯ್ಯನವರು ಅಲ್ಲಿನ ಅಮಲ್ದಾರರಾಗಿ ಕೆಲಸ ನೋಡತಕ್ಕದ್ದು.

ನವರಾತ್ರಿ ಉತ್ಸವಗಳು.

ಇಂಗ್ಲಿಷ್ ದರ್ಬಾರು.

ಮೊನ್ನೆ ಶನಿವಾರ ಆಯುಧ ಪೂಜಾ ಅಶ್ವಪೂಜೆ ನಡೆಯಿತು. ಆ ದಿನ ಬೆಳಿಗ್ಗೆ ಪಟ್ಟದ ಕತ್ತಿ, ಪಟ್ಟದಾನೆ ಕುದುರೆಗಳನ್ನು ಪದ್ಧತಿಯ ಪ್ರಕಾರ ಮೆರವಣಿಗೆ ಮಾಡಿಕೊಂಡು ದೊಡ್ಡ ಕೆರೆ ಬಳಿ ಸ್ನಾನ ಮಾಡಿಸಿ, ಪುನಃ ಅರಮನೆಗೆ ತಂದರು. ಈ ಮೆರವಣಿಗೆಯು ಚಿತ್ತಾಕರ್ಷಕವಾಗಿತ್ತು. ಸಾಯಂಕಾಲ ೫ ಗಂಟೆಗೆ ಜಗನ್ಮೋಹನ ಬಾಗಿಲಿನಲ್ಲಿ ಇಂಗ್ಲಿಷ್ ದರ್ಬಾರು ನಡೆಯಿತು. ಹೊರಗಿನಿಂದ ಯೂರೋಪಿಯನ್ ಸಮಾಜಸ್ಥರೂ ಬಂದಿದ್ದರು. ನಮ್ಮ ರೆಸಿಡೆಂಟರು, ಅಸಿಸ್ಟೆಂಟ್ ರೆಸಿಡೆಂಟರು, ಡೆಪ್ಯುಟಿ ಕಮಿಷನರುಗಳು, ಸೆಕ್ರೆಟರಿಗಳು, ಮುಂತಾದ ಕೆಲವು ಮಂದಿ ಮಾತ್ರ ದರ್ಬಾರಿನಲ್ಲಿ ಹಾಜರಾಗಿದ್ದರು. ಶ್ರೀಮನ್ ಮಹಾರಾಜರವರು ದರ್ಬಾರಿಗೆ ದಯಮಾಡಿ, ರೆಸಿಡೆಂಟರಿಗೆ ಸುಸ್ವಾಗತವನ್ನು ಬಯಸಿ, ತರುವಾಯ ಸಿಂಹಾಸನದ ಮೇಲೆ ಕುಳಿತುಕೊಂಡರು. ಬಳಿಕ ಕಾಳಗ, ದೊಂಬರಾಟ, ಮೊದಲಾದ ವಿನೋದಗಳು ನಡೆದವು. ಅಷ್ಟರೊಳಗೇ ಪಟ್ಟದಾನೆ ಕುದುರೆಗಳು ಕೆರೆಯಿಂದ ಮೆರವಣಿಗೆಯಾಗಿ ಅರಮನೆಗೆ ಬಂದವು. ಜೀವಟಿಗೆ ಸಲಾಂ, ಬಾಬಾ ಒಂತ್ರಿಗಳು ಆದವು. ತರುವಾಯ ವಿಶೇಷವಾದ ಮತ್ತು ಚಿತ್ರ ವಿಚಿತ್ರವಾದ ಬಾಣ ವಿರಸುಗಳು ದರ್ಬಾರಿಗಳಿಗೆ ಸಂತೋಷವನ್ನುಂಟುಮಾಡಿದವು. ಸುಮಾರು ೬ ಗಂಟೆಗೆ ದರ್ಬಾರು ಪೂರೈಸಿತು. ಎರಡು ಮೂರು ದಿನಗಳಿಂದ ಮಳೆ ಸಾಯಂಕಾಲದ ಹೊತ್ತು ಬಹಳವಾಗಿ ಸುರಿದು ಉತ್ಸವಗಳ ಸಂತೋಷವನ್ನು ತಕ್ಕ ಮಟ್ಟಿಗೆ ಕಡಿಮೆಮಾಡಿತು.

ವಿಜಯದಶಮಿ ಉತ್ಸವಗಳು.

ಭಾನುವಾರ ಬೆಳಿಗ್ಗೆ ಶ್ರೀಮನ್ ಮಹಾರಾಜರವರು ಪಟ್ಟದ ಕುದುರೆಯ ಮೇಲೆ ಕುಳಿತುಕೊಂಡು ಶಮೀವೃಕ್ಷದ ತನಕ ಸ್ವಲ್ಪ ದೂರ ದಯಮಾಡಿ, ಹಿಂದಿರುಗಿದರು. ತರುವಾಯ ಪಟ್ಟದ ಕಾಳಗಗಳಾದವು. ದರ್ಬಾರು ಆದನಂತರ ಪಟ್ಟದಾನೆ ಕುದುರೆಗಳು ಮೆರವಣಿಗೆಯಾಗಿ ಹೊರಟು ದೊಡ್ಡಪೇಟೆಯ ಮೂಲಕ ಬೊಮ್ಮನಹಳ್ಳಿ ಕೆರೆಯ ಬಳಿ ಇರುವ ಬನ್ನಿಮಂಟಪದ ಬಂಗಲೆಯನ್ನು ಸೇರಿದವು.

ಸಾಯಂಕಾಲ ೪ ಗಂಟೆಗೆ ಶ್ರೀಮನ್ ಮಹಾರಾಜರವರು ಸವಾರಿಯಾಗಿ ... ಆನೆಯ ಮೇಲೆ ಅಂಬಾರಿಯಲ್ಲಿ ಕುಳಿತು ಸಕಲ ಮರ್ಯಾದೆಯೊಡನೆ ಜಗನ್ಮೋಹನ ಬಂಗಲೆಯಿಂದ ಗೌರವಾರ್ಥವಾದ ೨೧ ತೋಪುಗಳು ಹಾರುತ್ತಿರುವ ವೇಳೆಯಲ್ಲಿ ಮೆರವಣಿಗೆ ದಯಮಾಡಿದರು. ಕುದುರೆಗಳು, ಸಿಪಾಯಿಗಳು, ಭಲ್ಲೆಯವರು, ... ಸವಾರರು, ಪಲ್ಲಕ್ಕಿ ..., ಒಂಟೆ ಸವಾರರೇ ಮುಂತಾದವರು ಬಿರುದುಗಳನ್ನು ಹಿಡಿದಿದ್ದರು. ಮೆರವಣಿಗೆಯ ಮುಂಭಾಗದಲ್ಲಿ ಕರ್ನಲ್ ... ಅವರು ಕುದುರೆಯ ಮೇಲೆ ಹುಕುಂ ಕೊಡುತ್ತಾ, ಯುವರಾಜರು, ಮಿ॥ ಕಾಂತರಾಜೇ ಅರಸಿನವರು, ಮೇ॥ ... ಅರಸಿನವರು ಮುಂತಾದವರು ಕುದುರೆಯ ಮೇಲೆ ... ಹಿಂದೆ ... ಅವರ ಮಕ್ಕಳು ಮುಂದೆ ... ಕುಲಗ, ... ಮೇಳಗಳು ... ಮಾಡುತ್ತಿದ್ದವು. ... ಚಿತ್ರದಿಂದ ಅಲಂಕರಿಸಿದ್ದ ದೊಡ್ಡಪೇಟೆಯ ಮಾರ್ಗವಾಗಿ ಹೊರಟು ಸುಮಾರು ೫॥ ಗಂಟೆಯ ಹೊತ್ತಿಗೆ ಬನ್ನಿ ಮಂಟಪವನ್ನು ಸೇರಿತು.

ಅಲ್ಲಿ ಶ್ರೀಮನ್ ಮಹಾರಾಜರವರು ಅಂಬಾರಿಯಿಂದಿಳಿದು ಒಡ ... ಉಡುಪುಗಳನ್ನು ಧರಿಸಿ ಶಾಸ್ತ್ರೋಕ್ತಕ್ರಮಾನುಸಾರವಾಗಿ ಶಮೀವೃಕ್ಷಕ್ಕೆ ಪೂಜೆ ಮುಂತಾದ್ದು ಮಾಡಿದರು. ಅನಂತರ ಬೇರೆ ಪೋಷಾಕು ಧರಿಸಿ ... ಆಸ್ಥಾನಕ್ಕೆ ಚಿತ್ತೈಸಿದರು. ಅಲ್ಲಿ ಕೆಲವು ಸವಾರರು ಸಿಪಾಯಿಗಳು ... ಮುಂತಾದ್ದನ್ನು ಮಾಡಿದರು. ... ಸಾಹಸ ಕಾರ್ಯಗಳನ್ನು ಪ್ರದರ್ಶನ ಮಾಡಿದರು. ... ಸುರುಟೂ ಆದವು. ಅಷ್ಟರಲ್ಲಿ ಕತ್ತಲೆ ಮುಸುಕಿಕೊಂಡಿತು. ಸಾಧಾರಣವಾದ ಬಾಣ ವಿರಸುಗಳ ... ಬಹಳವಾಗಿ ಹಾರಿಸಿದರು. ಇಷ್ಟೆಲ್ಲ ಆಗುವಾಗ್ಗೆ ಸುಮಾರು ೭-೩೦ ಗಂಟೆ ಆಯಿತು.

ಉತ್ಸವ ಭಂಗ.

ಸಿಲ್ಲೇದಾರ್ ಕುದುರೆಗಳೆಲ್ಲಾ ಮೈದಾನದಲ್ಲಿದ್ದವು. ಕೆಲವು ಮಂದಿ ಸವಾರರು ತಮ್ಮ ಕುದುರೆಗಳಿಂದ ಯಾಕೋ ಇಳಿದಿದ್ದರು. ಕೆಲವರು ಆ ಕುದುರೆಗಳ ಲಗಾಮನ್ನು ಹಿಡಿದುಕೊಂಡಿದ್ದರು. ಸಮೀಪದ ... ಒಂದು ಪೊದೆಯಿಂದ ... ಆಕಾಶಕ್ಕೆ ಹೋಗುವ ಎಂಬ ಬಾಣಗಳನ್ನು ಏಕಕಾಲದಲ್ಲಿ ಹತ್ತಿಸಲಾಯಿತು. ಹತ್ತಿಸಿದರೆ ಏನೂ ಆಗುವದಿಲ್ಲವೆಂದು ಮಿಲ್ಟೆರಿ ಇಲಾಖೆಯವರು ಧೈರ್ಯ ಕೊಟ್ಟಿದ್ದರು. ಬಾಣಗಳ ಸೊಯ್ಯೆಂಬ ಶಬ್ದವು ಘೋರ ... ಸವಾರರಿಲ್ಲದ ಕುದುರೆಗಳೆಲ್ಲಾ ಬೆದರಿ ಕಿತ್ತುಕೊಂಡು ಬಿರ್ರಾನೆ ... ಸ್ವೇಚ್ಛೆಯಿಂದ ಓಡಿದವು. ಆಗ ನೋಟ ನೋಡಲು ... ಗಾಡಿಯನ್ನೂ ... ಇಷ್ಟೆಂದು ವಿವರಿಸಲಾಗದು. ಕುದುರೆಗಳು ನುಗ್ಗಿ ೩-೪ ಜನರನ್ನು ಕೆಡವಿಬಿಟ್ಟವು. ಗಾಡಿಯಲ್ಲಿ ... ಕೆಲವರು ... ಬಿದ್ದುಬಿಟ್ಟರು. ಇವರಿಬ್ಬರಿಗೂ ಏಟು ತಗಲಿತು. ಮತ್ತು ೧೦-೧೨ ಮಂದಿ ಸಿಲ್ಲೇದಾರರಿಗೂ ಅಲ್ಪಸ್ವಲ್ಪ ಏಟು ಆಯಿತು. ... ಕುದುರೆಗಳು ಕತ್ತಲಲ್ಲಿ ... ಭಾಗಗಳ ... ಹೊರಟುಹೋದವು. ೧೦-೪೦ ಕುದುರೆ ... ಸ್ವಚ್ಛೆಯಾಗಿ ಓಡುತ್ತಾ ದೊಡ್ಡಪೇಟೆ ... ವಾಗಿ

ಬಂದು ತಮ್ಮ ಲೈನನ್ನು ಸೇರಿದವು. ಆ ಸಮಯದಲ್ಲಿ ಏಟು ತಗಲಿದವರನ್ನೂ ತುಳಿದು ಗಾಯಪಟ್ಟವರನ್ನೂ ದಾಕ್ಟರುಗಳು ಸೇರಿ ಕಟ್ಟಿ ಗಾಡಿಯಮೇಲೆ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಅವರಿಗೆ ಆಸ್ಪತ್ರೆಯಲ್ಲಿ ಔಷಧ ಕೊಟ್ಟು ವಾಸಿಮಾಡುತ್ತಿದ್ದಾರೆ.

ಉತ್ಸವ ಅರಮನೆ ತಲುಪಿದ್ದು.

ಮೇಲ್ಕಂಡ ಅಕಸ್ಮಾತ್ತಾದ ಕಾರ್ಯವು ನಡೆದ ವೇಳೆ ಸುಮಾರು ೮ ಗಂಟೆಯ ನಂತರ ಶ್ರೀಮನ್ ಮಹಾರಾಜರವರು ಆನೆಯಮೇಲೆ ಅಂಬಾರಿಯಲ್ಲಿ ಕುಳಿತು ವಾಪಸು ಮೆರವಣಿಗೆಯಾಗಿ ಅರಮನೆಯನ್ನು ಕುರಿತು ದಯಮಾಡಿದರು. ದಾರಿಯಲ್ಲಿ ಅರಮನೆಗೆ ಬಾಗಿಲಿನವರೆಗೆ ಉದ್ದಕ್ಕೂ ಮಳೆ ಸುರಿಯುತ್ತಲೇ ಇತ್ತು. ಮೆರವಣಿಗೆಯು ಅರಮನೆ ತಲುಪುವದಕ್ಕೆ ರಾತ್ರಿ ೧೦ ಗಂಟೆಯಾಯಿತು. ಅನಂತರ ಅರಮನೆಯಲ್ಲಿ ದರ್ಬಾರು ನಡೆದು ನಜರು ಮುಂತಾದ ಎಲ್ಲಾ ಮುಕ್ತಾಯವಾಗಲು ಇನ್ನೂ ಅರ್ಧಗಂಟೆ ಹಿಡಿಯಿತು.

ಪೋಲೋ ಪಂದ್ಯವು.

ಮೊನ್ನೆ ಸೋಮವಾರ ಸಾಯಂಕಾಲ ರೇಸ್‌ಕೋರ್ಸ್ ಮೈದಾನದಲ್ಲಿ ಪೋಲೋ ಎಂಬ ಕುದುರೆ ಮೇಲೆ ಕೂತು ಆಡುವ ಚೆಂಡಾಟದ ಮೊದಲನೇ ಪಂದ್ಯವು ನಡೆಯಿತು. ಶ್ರೀಮನ್ ಮಹಾರಾಜರು, ಯುವರಾಜರು, ಕರ್ನಲ್ ದೇಶರಾಜೇ ಅರಸಿನವರು, ಕೆಲವು ಮಂದಿ ಯೂರೋಪಿಯನ್ ಸರದಾರರು ಈ ಚೆಂಡಾಟವನ್ನು ನೋಡಲು ಮೈದಾನಕ್ಕೆ ದಯಮಾಡಿದ್ದರು. ಬೆಂಗಳೂರು ಇಂಪೀರಿಯಲ್ ಸರ್ವಿಸ್ ಬ... ಎಂಬ ಗುಂಪಿನವರಿಗೂ ಮೈಸೂರು ಬಿ. ಟೀಂ ಎಂಬ ಗುಂಪಿನವರಿಗೂ ಪಂದ್ಯವಾಯಿತು. ಬೆಂಗಳೂರಿನ ಕಡೆ ಜಮೇದಾರ್ ಟಿ. ನಂಜರಾಜೇ ಅರಸಿನವರು, ಜಮೇದಾರ್ ... ಸುಬೇದಾರ್ ... ಚಾಮರಾಜೇ ಅರಸಿನವರು, ... ಚಂದ್ರ ... ನಾಲ್ವರು ಆಡಿದರು. ಮೈಸೂರಿನವರ ಕಡೆ ಆಡಿದ ನಾಲ್ವರು ಯಾರೆಂದರೆ,—ಜಮೇದಾರ್ ... ಜಮೇದಾರ್ ... ಅರಸಿನವರು, ಮಿ॥ ಲಕ್ಷ್ಮೀಕಾಂತರಾಜೇ ಅರಸಿನವರು ... ಮಿ॥ ... ಬೌರಿಂಗ್ ಇವರು. ಸುಮಾರು ಒಂದು ಗಂಟೆ ಹೊತ್ತು ಆಟವಾಡಿ ಬೆಂಗಳೂರಿನವರು ೧೧ ಗೋಲ್‌ಗಳನ್ನು ಮಾಡಿ ಗೆದ್ದರು. ಮೈಸೂರಿನವರು ಒಂದು ಗೋಲನ್ನಾದರೂ ಮಾಡಲಾಗಲಿಲ್ಲ. ಆದರೆ ಮಿ॥ ... ಇವರು ಚೆನ್ನಾಗಿ ಆಡಿದರೆಂದು ಕೇಳುತ್ತೇವೆ.

ಈ ಪಂದ್ಯದ ಎರಡನೇ ಆಟವು ನೆನ್ನೆ ಬುಧವಾರ ನಡೆಯುವ ತೀರ್ಮಾನವಾಗಿತ್ತು.

ಬಾತ್ಮೀದಾರರಿಗೆ ನೋಟೀಸ್.

ಬೇಲೂರು.—ನಿಮ್ಮ ಬಾತ್ಮಿಯಲ್ಲಿ ಪ್ರಕಟನೆಗೆ ಯೋಗ್ಯವಾದ ವರ್ತಮಾನಗಳ್ಯಾವೂ ಇಲ್ಲವಾದ್ದರಿಂದ ಅದನ್ನು ಪ್ರಕಟಿಸಲಿಲ್ಲ.

ಚಿಕ್ಕಮಗಳೂರು ಬಾತ್ಮೀದಾರರು ಪ್ಲೇಗ್ ... ಪರ ಮನೆ ... ಅವರ ... ಮಾತ್ರ ತಪ್ಪಿಸಿ... ಈ ಪತ್ರಿಕೆಯ ... ಸಂಚಿಕೆಯೊಂದರಲ್ಲಿ ಪ್ರಕಟಿಸಿದ್ದರು. ಇದಕ್ಕೆ ... ದ ಸಂಚಿಗೆ ... ಬೆಂಗಳೂರು ಚಿಕ್ಕಪೇಟೆ ... ಮನೆಯಿಂದ ನಮಗೆ ಬರೆದು ತಿಳಿಸಿರುವದೇನೆಂದರೆ —"ಚಿಕ್ಕಮಗಳೂರಿನ ನಮ್ಮ ಲೇವಾದೇವಿ ಬಹಳವಾಗಿದೆ. ... ನಮಗೆ ಬಹಳ ದಿವಸ ... ಮತ್ತು ನಮ್ಮ ಮನೆ ... ಪತ್ರಿಕೆಯಲ್ಲಿ ... ಪ್ರಕಟಿಸಿ... ನಮ್ಮ ಲೇವಾದೇವಿಗೂ ... ಪ್ಲೇಗ್ ... ಉಳ್ಳ ಮನೆಯನ್ನು ಬಿಟ್ಟು ನಾನು ಸ್ವಲ್ಪ ದೂರದಲ್ಲಿ ... ಗಳ ... ಹತ್ತಿರದಲ್ಲೇ ... ಇದ್ದೇನೆ. ಈ ... ಜನರೆಲ್ಲಾ ತಿಳಿಯುತಕ್ಕದ್ದು. ದುಷ್ಪರ್ಯಾರಾದರೂ ನಿಮ್ಮ ಪತ್ರಿಕೆಯನ್ನು ... ನನ್ನ ಮನೆಗೆ ... ಎಂಬುದೇ. ಆದರೆ ನಮ್ಮ ಪತ್ರಿಕೆಯನ್ನು ದುಷ್ಪರ್ಯಾರೂ ಓದುವದಿಲ್ಲವೆಂದು ದೃಢವಾಗಿ ಹೇಳುತ್ತೇವೆ". ಕಳುವು ... ಲೇವಾದೇವಿಗಳು ನಾಶವಾಗದಂತೆಯೂ ... ಪೋಲೀಸಿನವರು ... ಜಾಗ್ರತೆಗಳನ್ನು ... ಎಡಿಟರ್.

ಕರೆಸ್ಪಾಂಡೆನ್ಸ್.

ತಾಲ್ಲೂಕಿನಲ್ಲಿ ಅನ್ಯಾಯ.

ಅಯ್ಯಾ,

ಕಳೆದ ತಿಂಗಳಲ್ಲಿ ಹೊಳೆನರಸೀಪುರದ ತಾಲ್ಲೂಕಿನ ಕಡುವಿನ ಕೋಟೆ ಎಂಬ ಗ್ರಾಮದಲ್ಲಿ ಅಪ್ಪಾಜಿ ಗೌಡನೆಂಬ ರೈತನೂ, ಆತನ ತಂಗಿಯೂ ಕ್ರಿಮಿನಲ್ ಚಾರ್ಜ್ ಮಾಡಲ್ಪಟ್ಟು, ವಿಚಾರಣೆ ತರುವಾಯ ಅಪರಾಧಿಗಳಲ್ಲವೆಂದು ಬಿಡಲ್ಪಟ್ಟಿದ್ದರು. ಸದರಿ ಇವರನ್ನು ಕಾಯಲಿಕ್ಕೆ ಒಬ್ಬ ಪೋಲೀಸ್ ಜವಾನನು ಇಡಲ್ಪಟ್ಟಿದ್ದನೆಂತಲೂ, ಮಧ್ಯರಾತ್ರಿಯಲ್ಲಿ ಈ ಜವಾನನು ಅಪರಾಧಿಯಾದ ಹೆಂಗಸು ಇದ್ದ ಕೊಠಡಿಯ ಬೀಗ ತೆಗೆದು, ಕತ್ತಲೆಯಲ್ಲಿ ಮಲಗಿರುವ ಗರತಿಯನ್ನು ಹಿಡಿಯ ಹುಡುಕಲು, ಭಯದಿಂದ ಆ ಹೆಂಗಸು ತನ್ನ ಅಣ್ಣನನ್ನು ಕೂಗಿದಂತೆಯೂ, ಆ ಶಬ್ದವನ್ನು ಕೇಳಿದ ಆಕೆಯ ಅಣ್ಣನು ಜವಾನನ ಹಿಡಿಯುವದನ್ನು ಕಂಡಂತೆಯೂ,

ಹವಾಲ್ದಾರ್ ಬಂದು ಪೋಲೀಸಿನವನನ್ನು ಹಿಡಿದು, ಹೊತ್ತಾರೆ ... ದಿಂದ ಬಂದ ಪೋಲೀಸ್ ಸುಪರಿಂಟ್ ಸಾಹೇಬರಿಗೆ ಈ ವೃತ್ತಾಂತವನ್ನೆಲ್ಲ ರಿಪೋರ್ಟ್ ಮಾಡಿದಂತೆಯೂ, ಸದರಿ ಸಾಹೇಬರವರು ಆ ಜವಾನನನ್ನು ಬರ್ತರ್ಫ್ ಮಾಡಿದಂತೆಯೂ ಕೇಳುತ್ತೇನೆ. ಈ ಕೇಸಿಗೆ ಮುನ್ಸೀಫ್ ಕೋರ್ಟಿನಲ್ಲಿ ವಿಚಾರಣೆ ಮಾಡುತ್ತಿದ್ದರೆಂತಲೂ ... ವರ್ತಮಾನವು ಹುಟ್ಟಿ, ಕೇಸ್ ವಿಚಾರಣೆಗೋಸ್ಕರ ಇಟ್ಟಿದ್ದಾರೆ. ಮುಂದೆ ಇದರ ಪರಿಣಾಮ ಏನಾಗುತ್ತದೋ ನೋಡಬೇಕಾಗಿದೆ.

ನರಸೀಪುರದ ಪ್ಲೇಗ್ ಗಲಾಟೆಯ ವೇಳೆಯಲ್ಲಿ ಬಳಿ ಮಗ್ಗದ ... ಸ್ಟ್ರಾಪ್ ... ಅರ್ಧ ರಾತ್ರಿಯಲ್ಲಿ—ನಿನ್ನ ಮನೆಗೆ ಪ್ಲೇಗ್ ರೋಗ, ನಡಿ ಕ್ಯಾಂಪ್ ಷೆಡ್ಡಿಗೆ ಎಂದು ಬೆದರಿಸಿ, ಕುಂಬಾರ ಹೆಂಗಸನ್ನು ... ಜೀವನಕ್ಕೋಸ್ಕರ ಇಟ್ಟಿದ್ದ ಎರಡು ರೂಪಾಯಿ ... ವನೆಂದು ಇವನಿಗೆ ಕಠಿಣ ಶಿಕ್ಷೆಯನ್ನು ಕೊಡಲಾಗದೇ ... ಕಳೆದುಕೊಂಡನು ... ದೂರ ... ಪೋಲೀಸ್ ನೌಕರರುಗಳನ್ನು ... ಅನುಚಿತವಾದದ್ದೇ ಸರಿ. ... ಅಧಿಕಾರಿಗಳು ಪೂರ್ಣಸಿಗಾ ಕೊಡುವರೆಂದು ನಂಬಿರುವ

ಜನಾರ್ಧನ...

ತೀರ್ಥಹಳ್ಳಿ ವಿಷಯಗಳು.

ಅಯ್ಯಾ,

ಈ ತೀರ್ಥಹಳ್ಳಿಯು ಮಲೆನಾಡು ... ಮೊದಲನೇ ... ಸ್ಥಳವಾಗಿತ್ತು. ಈಗ ಸುಮಾರು ೪ ತಿಂಗಳ ... ಪ್ಲೇಗ್ ಪ್ರಾರಂಭವಾಗಿ ಅನೇಕ ಜನರನ್ನು ಆಹುತಿಗೊಳಿಸಿಕೊಂಡಿತು. ಅನೇಕ ಜನರು ಊರುಬಿಟ್ಟು ಪರವೂರಿನಲ್ಲಿ ವಾಸಮಾಡುತ್ತಾರೆ. ಊರಿನ ಪಾಠಶಾಲೆ ... ಊರಿನ ಮೇಲ್ಭಾಗದಲ್ಲಿ ಊರೊಳಗೆ ... ಊರಿಗೆ ... ಊರಿನ ಚೊಕ್ಕಟತನಕ್ಕೆ ಹೆಚ್ಚು ಗಮನ ... ಊರ ... ಪ್ರತ್ಯೇಕ ಸ್ಥಳ ... ಮತ್ತು ಪ್ಲೇಗ್ ... ಮ್ಯುನಿಸಿಪಾಲಿಟಿ ... ಸಾಧ್ಯವಾದ ... ಅನೇಕ ಜನಗಳನ್ನು ... ಈ ... ಅಧಿಕಾರಿಗಳಾಗಿದ್ದಾರೆ. ಸಂಸ್ಕೃತ ... ತಿಳಿ ... ಇದ್ದರೆ ... ಈ ಜನರ ... ಆದ್ದು.

ಇದೇ ... ದೇವಸ್ಥಾನದ ... ಮತ್ತು ... ಗಳ ... ಮಸೀದಿ ... ಕಾಲ ... ಪೊಲೀಸಿನವರಿಗೆ ... ಕೃತ್ಯಗಳು ... ಗಳಿಲ್ಲ.

ಇದೇ ಮಾಗಣಿ ಉಂಟೂರ ಬಳಿ ಹಳ್ಳಿಯ ... ಮೇಲೆ ... ಕೊಟ್ಟಿಗೆ ... ಅವರು ... ಇನ್ನೂ ತಿಳಿಯಲಿಲ್ಲ.

... ಮನೆಯ ೫—೬ ... ಕಳವಾದ್ದು ಇನ್ನೂ ಪತ್ತೆ ಇಲ್ಲ. ಅಪರಾಧಿಗಳು ಎಂತ ಕೆಲವರನ್ನು ಹಿಡಿದಿದ್ದವರು ಯಾಕೋ ಬಿಟ್ಟುಬಿಟ್ಟರು. ಇನ್ನೂ ವೃತ್ತಾಂತ ತಿಳಿಯಲಿಲ್ಲ. ೧ ವರುಷವಾಗುತ್ತಾ ಬಂತು.

ಉಂಟೂರ ಬಳಿ ಸ್ಮಶಾನದಲ್ಲಿ ... ಸಮೀಪದ ... ಕೇಸು ಇನ್ನೂ ಪತ್ತೆ ಇಲ್ಲ.

ಈ ತಾಲ್ಲೂಕಿನ ಹೊಸ ಪೋಲೀಸ್ ಇನ್ಸ್‌ಪೆಕ್ಟರ್ ... ಸಾಹೇಬರು ... ಚಿಕಿತ್ಸೆ ... ಪೋಲೀಸಿನವರ ... ದೇವರ ಸನ್ನಿಧಾನಕ್ಕೆ ಪ್ರಾರ್ಥನೆ ... ಮಾಡುತ್ತೇನೆ.

ಪ್ರಜಾಹಿತಚಿಂತಕ.

ಇಂಡಿಯಾ ದೇಶದ ವೃತ್ತಾಂತಗಳು.

ಇಂಪೀರಿಯಲ್ ... ಆಫ್ರಿಕಾ, ... ಪ್ರತಿನಿಧಿಗಳು ಬರುತ್ತಾರೆಂದು ತಿಳಿಯುತ್ತದೆ.

ವಾಯುವ್ಯ ಪ್ರಾಂತ್ಯದ ಸೇರ್ಜಂ ಎಂಬ ಪ್ರದೇಶದಲ್ಲಿ ಮತ್ತು [illegible] ೫೦೦ ಗಜಗಳ ಮೇಲೆ ಸರ್ಕಾರ [illegible] ತಂತಿಗಳ [illegible] ಕಿತ್ತು ಹಾಕಿರುತ್ತಾರೆ.

ಬಂಗಾಳ ಕೊಲ್ಲಿಯಲ್ಲಿ ಕಳೆದ ವಾರ ಒಂದು ಹಡಗು [illegible] ಗಾಳಿಗೆ ಸಿಕ್ಕಿ ನಾಶವಾಯಿತು. ಅದರಲ್ಲಿದ್ದ [illegible] ರೂಪಾಯಿ [illegible] ನೀರಿನ ಪಾಲಾಯಿತು.

[illegible] ತಮ್ಮ [illegible] ಬಂದು [illegible] ಪರಾಜಿತರಾಗಿದ್ದಾರೆ.

[illegible] ೨,೦೦೦ ರೂ. [illegible] ೨,೦೦೦ ರೂ. [illegible] ವಿಧಿಸಲ್ಪಟ್ಟಿತು.

[illegible] ಸಿದ್ಧಿ ಅಥವಾ [illegible] ಕಳುಹಿಸಲ್ಪಡುವದು [illegible] ಕೊಟ್ಟಿದ್ದಾರೆ.

ಬಂಗಾಳದಲ್ಲಿ [illegible] ಸರ್ಕಾರಕ್ಕೆ [illegible] ಆದಾಯ ಬಾಗಿದೆ.

[illegible]

[illegible]

[illegible]

[illegible]

[illegible]

[illegible] ಹಿಂದುಸ್ಥಾನದ [illegible] ಸಂಪೂರ್ಣವಾಗಿ [illegible] ಬರಹವಾಯಿತು [illegible] ಬಿಟ್ಟಿತು [illegible] ಹಾಕ ಬಹುದಾಗಿತ್ತು.

ಒಬ್ಬ ಹೋಲೀಸ್ ನೌಕರ [illegible] ಇರುವ [illegible] ವಿರುದ್ಧವಾಗಿ [illegible] ಎಂದು ಹೇಳಬ [illegible] ವಿರುದ್ಧ [illegible] ಉದ್ದೇಶವಾಗಿದೆ.

ಬಂಗಾಳ [illegible] ವಿದ್ಯಾರ್ಥಿಗಳಿಗೆ [illegible] ವಿದ್ಯಾ [illegible]

[illegible]

[illegible]

[illegible]

[illegible]

[illegible]

[illegible]

[illegible] ಹಿಂದುಸ್ಥಾನದ [illegible] ಕೊಟ್ಟಿದ್ದಾರೆ.

[illegible]

ಮತ್ತು [illegible] ಕೇಳಿದರು.

[illegible] ಕುರಿತು [illegible]

ವಿದೇಶ ವರ್ತಮಾನಗಳು.

[illegible] ಕಡಲಿನ [illegible] ದಶಕದಿಂದ [illegible] ಏರ್ಪಡುವದಿದೆ.

[illegible] ಭೂಕಂಪವಾಯಿತು.

[illegible] ಕಳಿಸಲ್ಪಟ್ಟರು.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ದಕ್ಷಿಣ ಅಫ್ರಿಕಕ್ಕೆ ಸೇರಿದ ಟ್ರಾನ್ಸ್‌ವಾಲ್ ಬಳಿಯಲ್ಲಿ ೨,೦೦೦ ಪ್ರಜೆಗಳು ನಡೆಸಿದ ರಾಜಕೀಯ ವಿಷಯಗಳನ್ನು ಚರ್ಚಿಸುವದಕ್ಕಾಗಿ ಒಂದು ಕಮಿಟಿಯನ್ನು ಏರ್ಪಾಡು ಮಾಡಿಕೊಂಡರು. ಈ ಕಮಿಟಿ ಅಕ್ಕೆ ತರುವದಿಲ್ಲವೆಂದು ಇಂಗ್ಲಿಷ್ ಸರ್ಕಾರದವರು ಅವರಿಗೆ ತಿಳಿಸಿದರಂತೆ.

ರಷ್ಯಾ ರಾಜ್ಯದ ರೈತರು ಸರ್ಕಾರದವರಿಂದ ತುಂಬಾ ಗೋಳಾಡುತ್ತಿರುವದನ್ನು ಹೇಗೆ ಎಷ್ಟು ರೀತಿಯಲ್ಲಿ ಕೇಳ ಚಕ್ರವರ್ತಿಯವರು ಅವರಲ್ಲಿ ಮುಖಂಡರಾದವರನ್ನು ಕರೆಸಿ—ನಿಮ್ಮ ಕಷ್ಟಗಳೆಲ್ಲಾ ನಾವು ನಿವಾರಣೆ ಮಾಡಿಕೊಡುತ್ತೇವೆ; ಧೈರ್ಯದಿಂದಿರಿ ಎಂಬುದಾಗಿ ಸಮಾಧಾನ ಮಾಡಿದಾರೆ.

ವಿಲಾಯಿತಿ ರಾಜ್ಯದವರು ಹೊಸ ರೀತಿಯಲ್ಲಿ ಅಲ್ಲಿನ ವಿದ್ಯಾಭ್ಯಾಸದ ಕ್ರಮಗಳನ್ನು ಬದಲಾವಣೆ ಮಾಡಬೇಕೆಂದು ಒಂದು ಶಾಸನವು ಮಾಡುವದರಲ್ಲಿದಾರೆ. ಈ ಶಾಸನವನ್ನು ಜಾರಿಯಲ್ಲಿ ತರಕೂಡದೆಂದು ಲಿವರ್‌ಪೂಲಿನ ೧೦,೦೦೦ ಪ್ರಜೆಗಳು ಸರ್ಕಾರಕ್ಕೆ ಅರ್ಜಿ ಬರೆದುಕೊಂಡಿರುವರು.

ರಷ್ಯಾ ರಾಜ್ಯದ ಯುವ್ವನ ಇಲಾಖೆಯವರು ಮಂಚೂರಿಯಾ ಸೀಮೆಯಲ್ಲಿರುವ ಚೀನಿಯರನ್ನು ತಮ್ಮ ಸೈನ್ಯಕ್ಕೆ ಭರ್ತಿ ಮಾಡಿ ಸೇರಿಸಿಕೊಳ್ಳುತ್ತಾ ಬಂದಿದಾರೆ. ಚೀನಿಯರು ಇದು ನ್ಯಾಯವಲ್ಲವೆಂಬುದಾಗಿ ರಷ್ಯಾ ಚಕ್ರವರ್ತಿಯವರಿಗೆ ಬರೆದು ತಿಳಿಸಿದರು. ಚೀನಾ ರಾಜ್ಯಾಧಿಕಾರಿಯು ಈ ವಿಷಯಕ್ಕಾಗಿ ಹೋಗುತ್ತಾರೆಂದು ತಂತೀವರ್ತಮಾನ ಬಂದಿದೆ.

ಜರ್ಮನ್ ರಾಜ್ಯದವರು ಇನ್ನು ಆರು ವರುಷಗಳೊಳಗಾಗಿ ೧೪—೨೦ ಯುದ್ಧದ ಹಡಗುಗಳನ್ನು ಕಟ್ಟಿಸಬೇಕೆಂದು ತೀರ್ಮಾನಿಸಿ ಅದಕ್ಕೋಸ್ಕರ ಎರಡು ಕೋಟಿ ಪೌನ್ನು ಸ್ಯಾಂಕ್ಷನ್ ಮಾಡಿದಾರೆ. ಈ ಹಡಗುಗಳನ್ನು ವಿಲಾಯಿತಿ, ಫ್ರಾನ್ಸ್, ಜರ್ಮನಿ ರಾಜ್ಯಗಳ ಕಾರ್ಖಾನೆಗಳಲ್ಲಿ, ಕೆಲವನ್ನು ಜರ್ಮನ್ ರಾಜ್ಯದ ಕಾರ್ಖಾನೆಯಲ್ಲಿ ತಯಾರುಮಾಡಿಸುವರು.

ಬೋಯರ್ ದಳಪತಿಗಳು ಜರ್ಮನಿ ಚಕ್ರವರ್ತಿಯವರ ಭೇಟಿಗೋಸ್ಕರ ಹೋದರು. ಚಕ್ರವರ್ತಿಯವರಾದರೋ ಆ ದಳಪತಿಗಳನ್ನು ವಿಲಾಯಿತಿಯವರ ರಾಯಭಾರಿಗಳ ಮುಖಾಂತರದಿಂದ ತಮ್ಮ ಬಳಿಗೆ ಬರುವಂತೆ ಕೇಳಿಕೊ ... ರು. ದಳಪತಿಗಳು ಇದಕ್ಕೆ ಒಪ್ಪದೆ ಚಕ್ರವರ್ತಿಯವರೇ ಹೇಳಿಕಳುಹಿಸಿದಲ್ಲದೆ ನಾವು ಅವರಬಳಿಗೆ ಹೋಗುವದಿಲ್ಲವೆಂದು ಇನ್ಕಾರ ಮಾಡಿದರು. ಚಕ್ರವರ್ತಿಯವರು ಅವರಿಗೆ ಭೇಟಿ ಕೊಡಲಿಕ್ಕಾಗಲಾರದೆಂದು ತಿಳಿಸಿದರು.

ವಿಲಾಯಿತಿ ರಾಜ್ಯದ ಪ್ರಧಾನಿಯಾದ ಇಲಾಖಾ ಮಂತ್ರಿಯಾದ ಮಿ| ಹ್ಯಾಕ್ ಬಿನಿಯವರು ಶೈಕ್ಷಣಿಕ ... ಕೆಲಸ—ಇವನ್ನು ದೇಶೀಯ ಸರ್ಕಾರದವರು ಪ್ರತಿವರುಷವೂ ಯಪ್ಪನ ಅಲ್ಲಿ ಬಗೆ ೨—೩ ಸಾವಿರ ಕುದುರೆಗಳನ್ನು ಕೊಂಡುಕೊಳ್ಳುತ್ತಾರೆ. ರೈತರಾದ ನೀವು ಕುದುರೆಗಳನ್ನು ಚೆನ್ನಾಗಿ ಸಾಕುತ್ತಾ ಬಂದರೆ ನಿಮ್ಮ ಕುದುರೆಗಳನ್ನೇ ಕೊಂಡುಕೊಳ್ಳುತ್ತೇವೆ. ಇದರಿಂದ ಪರದೇಶಕ್ಕೆ ಹೋಗುವ ಹಣವನ್ನು ನೀವೇ ಪಡೆಯಬಹುದು ಎಂಬುದಾಗಿ ಬುದ್ಧಿಮಾತು ಹೇಳಿದರು. ರೈತರೆಲ್ಲಾ ಸಂತೋಷಪಟ್ಟು ಕುದುರೆಗಳನ್ನು ಸಾಕುವದಾಗಿ ವಾಗ್ದಾನ ಮಾಡಿದಾರೆ.

ಗ್ರೀಸ್ ರಾಜ್ಯದ ಯುವರಾಜರು ವಿಕ್ಟೋರಿಯ ಸಿಂಹಾಸನದಿಂದ ಓಡುವ ಗಾಡಿಯಲ್ಲಿ ಕೂತುಕೊಂಡು ಕಳೆದ ವಾರ ಸಂಚರಿಸುತ್ತಿರುವಾಗ ಆ ಗಾಡಿಯು ೬ ಅಡಿ ತಪ್ಪಿ ಒಂದು ಹಳ್ಳದೊಳಕ್ಕೆ ಮಗುಚಿಕೊಂಡಿತು. ಯುವರಾಜರಿಗೆ ಸ್ವಲ್ಪ ಪೆಟ್ಟಾಯಿತು. ಜಾಗ್ರತೆ ಅವರಿಗೆ ಆರೋಗ್ಯವಾಗುತ್ತದೆ ಎಂದು ತಿಳಿಯುತದೆ. ಅವರ ಸಂಗಡ ಕೂತುಕೊಂಡಿದ್ದ ಒಬ್ಬ ಸಾಹೇಬರಿಗೂ, ಒಬ್ಬ ಇಂಜಿನಿಯರಿಗೂ ಪೂರಾ ಏಟುಬಿದ್ದಿದೆ. ಅವರಿಗೆ ವಾಸಿಯಾಗಲು ಇನ್ನೂ ಕೆಲವು ದಿನಗಳಾಗುವದೆಂದು ತಂತೀವರ್ತಮಾನ ಬಂದಿದೆ.

ಆಫ್ರಿಕಾ ಖಂಡಕ್ಕೆ ಸೇರಿದ ಯುಗಾಂಡಾ ಸೀಮೆಯಲ್ಲಿ ನಿದ್ರಾರೋಗವೆಂಬ ಒಂದು ಹೊಸ ಜಾಡ್ಯವು ಹುಟ್ಟಿ ಅನೇಕಾನೇಕ ಪ್ರಜೆಗಳನ್ನು ಕೊಲ್ಲುತ್ತಿದೆಯಷ್ಟೆ. ಈ ರೋಗವನ್ನು ಪರೀಕ್ಷೆ ಮಾಡುವದಕ್ಕೂ ಅದಕ್ಕೆ ತಕ್ಕ ಚಿಕಿತ್ಸೆಯನ್ನು ಕಂಡು ಹಿಡಿಯುವದಕ್ಕೂ ಲಿವರ್‌ಪೂಲಿನಿಂದ ಡಾಕ್ಟರುಗಳು ಅಲ್ಲಿಗೆ ಹೋಗಿದಾರೆ. ಆ ರೋಗಿಗಳಿಗೆ ಪ್ರತ್ಯೇಕವಾದ ಒಂದು ಆಸ್ಪತ್ರೆಯನ್ನು ಏರ್ಪಡಿಸಿ, ಡಾಕ್ಟರು ರೋಗಿಗಳಿಗೆ ಅಲ್ಲಿ ಚಿಕಿತ್ಸೆ ಮಾಡುತ್ತಿರುವರು. ಇದುವರೆಗೆ ಸುಮಾರು ೬೦೦ ಮಂದಿ ರೋಗಿಗಳನ್ನೂ, ಆ ರೋಗ ಬನ್ನುವರುಗಳ ಹೆಣ್ಣು ಪರೀಕ್ಷೆ ಮಾಡುತ್ತಾರೆಂದು ತಂತೀ ವರ್ತಮಾನ ಬಂದಿದೆ.

ಮಿ| ಕಿಚ್ನರ್‌ರವರು ಯುದ್ಧದಿಂದ ಸರ್ವಸ್ವವನ್ನೂ ಕಳೆದುಕೊಂಡಿದ್ದರೂ ತಮಗೆ ದಯೆಯನ್ನು ತೋರಿ ಅವರು ಬಿಟ್ಟಿಲ್ಲ. ಒಬ್ಬ ಆಸ್ಟ್ರೇಲಿಯಾದವರು ಹೋಗಿ ಅವರನ್ನು ಕೇಳಿದಾಗ ಅವರು—ಇಂಗ್ಲಿಷಿನವರು ಯುದ್ಧದಲ್ಲಿ ಬೋಯರರ ೫೦,೦೦೦ ಜನರನ್ನು ನಾಶ ಮಾಡಿದರು; ಯುದ್ಧಕ್ಕೆ ಮುಂಚೆ ಬೋಯರರಲ್ಲಿ ೫೩,೦೦೦ ಸೈನಿಕರು ಮಾತ್ರವೇ ಇದ್ದರು; ಈ ಸೈನ್ಯ ಯುದ್ಧದಲ್ಲಿ ೩,೦೦೦ ಮಂದಿ ಸತ್ತುಹೋದರು; ಶೇಕಡೆ ೫ಕ್ಕಿಂತಲೂ ಬೋಯರರಿಗೆ ಬಹಳವಾಗಿ ಇನ್ಸೂರ್ ಆದ ನಷ್ಟವಿಲ್ಲ. ಇಂಗ್ಲಿಷರ ಮೇಲೆ ಯುದ್ಧ ಮಾಡಿದರು ಎಂಬುದಾಗಿ ಹೇಳಿದಾರೆ. ಈ ಮಾತನ್ನು ನಿಜವೆಂದು ಯಾರು ನಂಬ್ಯಾರು!

ಅಮೇರಿಕ ರಾಜ್ಯದಲ್ಲಿ ೪೦—೫೦ ಸಾವಿರ ಪ್ರಜೆಗಳು ಗಣಿಗಳಲ್ಲಿ ಕೆಲಸ ತೊರೆಯುವ ಕೂಲಿ ಕೇಳುತ್ತಿದ್ದಾರೆ. ಈ ಕಂಪನಿಯವರು ಯಾರೂ ಹಠಹಿಡಿದು ಕೆಲಸಕ್ಕೆ ಹೋಗದೆ ನಿಂತುಬಿಟ್ಟರು. ಕಲ್ಲಿದ್ದಲಿಗೆ ಕ್ಷಾಮಬಂತು. ಅಧಿಕಾರಿಗಳು ಎಷ್ಟೋ ಉಪಾಯ ಮಾಡಿದರೂ ಕೂಲೀ ಜನರು ಸಗ್ಗಲಿಲ್ಲ. ಕಡೆಗೆ ಪ್ರೆಸಿಡೆಂಟರೇ ಖುದ್ದಾಗಿ ಈ ವ್ಯಾಜ್ಯವನ್ನು ಫೈಸಲ್ ಮಾಡಬೇಕೆಂದು ಪ್ರಯತ್ನಪಟ್ಟರು. ಅವರ ಸಾಹಸವೂ ನಿರರ್ಥಕವಾಯಿತು. ಈಗ ಈ ಕ್ಷಾಮವನ್ನು ಹೋಗಲಾಡಿಸುವದಕ್ಕೆ ವರ್ತಕರು ವಿಲಾಯಿತಿಯಿಂದಲೂ ಯೂರೋಪಿನಿಂದಲೂ ಹತ್ತಾರುಲಕ್ಷ ಟನ್ನುಗಳ ಭಾರವುಳ್ಳ ಕಲ್ಲಿದ್ದಲನ್ನು ಕೊಂಡು ತರಿಸುವವರಾಗಿದಾರೆ. ಇದರಿಂದ ಆ ಪ್ರಾಂತ್ಯಗಳಲ್ಲೂ ಅದರ ಧಾರಣೆಯು ಭಯವಾಗಿರುತ್ತದೆ ಆದ್ದರಿಂದ ಬಲಾತ್ಕಾರಿ ಕೂಲಿಯವರಿಂದ ಮತ್ತೆ ಕೆಲಸ ಪ್ರಾರಂಭಿಸಲು ಅಮೇರಿಕ ಸರ್ಕಾರದವರು ಸೈನ್ಯಗಳನ್ನು ಕಳುಹಿಸಿದಾರೆ.

ತಾಲ್ಲೋಕು ವರ್ತಮಾನಗಳು.

ಬೆಳ್ಳೂರು.—ಈ ಊರಿನ ದೈವಾನುಗ್ರಹದಿಂದ ಆಗಾಗ್ಯೆ ಮಳೆಯು ಹೊಡೆಯುತ್ತಾ ಇರುವುದರಿಂದ ಪೈರುಗಳೆಲ್ಲಾ ಹೊಡೆಗೆ ಬಂದು ನೋಡುವವರ ಕಣ್ಣಿಗೆ ಆನಂದವನ್ನುಂಟುಮಾಡಿರುತ್ತವೆ. ಮುಂದೆ ಹ್ಯಾಗಾಗುತ್ತೋ ನೋಡಬೇಕು.—ಈ ವಾಗ ಆಗಾಗ್ಯೆ ಪ್ಲೇಗು ಸೊಂಕು ಇರುವ ಊರಿನಿಂದ ಜನಗಳು ಬರುತ್ತಾರೆ. ಅವರನ್ನು ಕೇಳುವವರೇ ಇಲ್ಲ.—ಇಲ್ಲಿ ತಾ|| ೧೧ನೇ ಶನಿವಾರದ ದಿವಸ ಶ್ರೀ ಆದಿ ಚುಂಚನಗಿರಿ ಸ್ವಾಮಿಯವರ ಮಹೋತ್ಸವವು ಬಹಳ ವಿಜೃಂಭಣೆಯಿಂದ ನಡೆಯಿತು. ಸುಮಾರು ೨,೦೦೦ ಜನಗಳ ವರೆಗೂ ಸೇರಿತ್ತು. ಈ ಉತ್ಸವಕ್ಕೆ ತಾಲ್ಲೋಕು ಪೋಲೀಸ್ ಇನ್ಸ್‌ಪೆಕ್ಟರು ಮತ್ತು ಅಮಲ್ದಾರರು ಬಂದು ಅತ್ಯಾನಂದದಿಂದ ಉತ್ಸವವನ್ನು ಬೆಳಸಿದರು — ಈ ಊರಿನಲ್ಲಿರುವ ಜೈನರು ತಾವು ದಸರಾ ದಿವಸ ಚೆನ್ನೇದೇವರ ಉತ್ಸವವನ್ನು ಮಾಡಬೇಕೆಂದು ಆಗ್ಯೆ ೧೦—೧೨ ವರುಷಗಳಿಂದ ವಿಚಾರಿಸುತ್ತಾ ಇದ್ದಾರೆ. ನಡೆಯುವದಿಲ್ಲ ವೆಂದಿರುವ ಅಲ್ಲದನ್ನು ನಡೆಸಬೇಕೆಂದು ಪ್ರತಿ ವರುಷವೂ ಕೆಲಸಕ್ಕೆ ಅಮ್ಮನವರ ಉತ್ಸವ ನಡೆಸುತ್ತಾರೆ. ಈ ವಿಷಯದಲ್ಲಿ ಸರಕಾರಗಳಾದ ಸರ್ಕಾರದವರು ಕೆಲಸಕ್ಕೆ ತೊಂದರೆಯಿಲ್ಲದಂತೆ ಯಾವಾಗ ಕ್ರಮದಿಂದ ದಯಪಾಲಿಸುತ್ತಾರೆಯೋ ಎಂದು ನಿರೀಕ್ಷಿಸುತ್ತಾರೆ.—ಈ ಊರಿಗೆ ಹೊಸದಾಗಿ ಬಂದು ಗರ್ನೇಷಾರರು ಏರ್ಪಡಿಸಿ ಈ ಸ್ಟೇಷನ್ ಪ್ರಜೆಗಳೆಲ್ಲಾ ಸರ್ಕಾರದವರನ್ನು ಕೇಳುತ್ತಾರೆ.— ಊರಿನಲ್ಲಿ ಕಚೇರಿ ವಸ್ತಿಗಳಿಗೂ, ಪ್ಲೇಗು ಸೋಂಕು ಇರುವ ಊರುಗಳಿಂದ ಬರುವ ಜನಗಳಿಗೂ ಗ್ರಾಮಾಧಿಕಾರಿಗಳೂ ನಿಗಾ ಕೊಟ್ಟಲ್ಲಿ ಪ್ರಜೆಗಳ ಆರೋಗ್ಯಾಭಿವೃದ್ಧಿಯನ್ನು ಪಡೆಯಬಹುದು. ಆದ್ದರಿಂದ ಈ ವಿಷಯದಲ್ಲಿ ಗ್ರಾಮಾಧಿಕಾರಿಗಳು ನಿಗಾ ಕೊಟ್ಟರೆಂದು ಜನರು ಹಾರೈಸುತ್ತಾರೆ.

ಬೆಂಗಳೂರು:—ಕಳೆದ ವಾರ ಮದರಾಸ್ ಮೆಡಿಕಲ್ ಕಾಲೇಜಿನ ಕ್ರಿಕೆಟ್ ಕ್ಲಬ್ಬಿನವರು ಇಲ್ಲಿನ ಅನೇಕ ಕ್ಲಬ್ಬುಗಳ ಜೊತೆಗೆ ಮ್ಯಾಚು ಆಡಿದರು. ಸೆಂಟ್ರಲ್ ಕಾಲೇಜಿನವರ ಜೊತೆಯಲ್ಲಿ ಆಡಿದಾಗ ಸೆಂಟ್ರಲ್ ಕಾಲೇಜಿನವರು ಹೆಚ್ಚು ಓಟಗಳನ್ನು ಹೊಡೆದು ಗೆದ್ದರು. ಈ ವಾರ ಮದರಾಸ್ ಜಿಂಖಾನಾ ಕ್ಲಬ್ಬಿನವರೂ ಬೆಂಗಳೂರು ಜಿಂಖಾನಾ ಕ್ಲಬ್ಬಿನವರೂ ಎರಡು ದಿನಗಳ ಪರಿಯಂತರ ಮ್ಯಾಚು ನಡೆಸಿತು. ಮದರಾಸಿನವರು ಬಹಳ ಕೌಶಲದಿಂದಲೂ ಸಾಹಸದಿಂದಲೂ ಆಡಿದರೂ ಅವರು ಸುಮಾರು ೨೦೦ಓಟಗಳನ್ನೂ ಬೆಂಗಳೂರಿನವರು ಜಿಂಖಾನಾದವರೇ ಗೆದ್ದರು. ಬೆಂಗಳೂರಿನ ಕಡೆ ಮಿ|| ಬಿ ಜಯರಾಂ ಇವರು ೧೪೮ ಓಟಗಳನ್ನು ಹೊಡೆದರು. ಅವರಿಗೆ ಎರಡನೆಯವರು ಒಬ್ಬ ಯೂರೋಪಿಯನ್ ದೊಡ್ಡ ಮನುಷ್ಯರು ೯೭ ಓಟಗಳನ್ನು ಹೊಡೆದರು. ತಾ|| ೧೧ನೆಯ ಶನಿವಾರದ ದಿವಸ ಕೇವಲ ಯೂರೋಪಿಯನ್ ದೊಡ್ಡ ಮನುಷ್ಯರಿಂದ ತುಂಬಲ್ಪಟ್ಟ ಬೆಂಗಳೂರು ವ್ಯಾಲೀ ವಾಲಂಟಿಯರ್ ಕ್ಲಬ್ಬಿನವರಿಗೂ ಬೆ ಹೆಸರಿಂದ ಮಯವಾದ ಬೆಂಗಳೂರು ಸಂಯುಕ್ತ ಶಾಲೆಯವರ (ಯೂನೈಟೆಡ್ ಇಲೆವೆನ್) ಕ್ಲಬ್ಬಿನವರಿಗೂ ಕ್ರಿಕೆಟ್ ಮ್ಯಾಚ್ ನಡೆಯಿತು. ಅದರಲ್ಲಿ ಬಿ. ಆರ್. ವಿ. ಯವರ ಕಡೆಯವರು ೧೦೯ ಓಟಗಳನ್ನು ಹೊಡೆದರು. ಯುನೈಟೆಡ್ ಇಲೆವೆನ್ ನವರಿಗೆ ೯ ನಿಂದ ೮ ವಿಕೆಟ್ಟುಗಳ ವರೆಗೂ ವೊತ್ತವನ್ನು ಮಾಡಿದರು. ಇವರಲ್ಲಿ ಮಿ|| ಬಿ ಶ್ರೀನಿವಾಸರಾವ್ ಇವರು ೪೬ ಓಟಗಳನ್ನು ಹೊಡೆದರು. ಇವರೇ ಹೆಚ್ಚು ಓಟಗಳನ್ನು ಹೊಡೆದವರು. ಎರಡನೆ ಯವರು ಮಿ|| ಈಶ್ವರಂ ಪಿಂಟೋವರೂ ಮೂರನೆಯವರು ಮಿ|| ರಂಗರಾವ್ ಇವರೂ ಕ್ರಮವಾಗಿ ೩೩—೨೦ ಓಟಗಳನ್ನು ಹೊಡೆದರು ಯುನೈಟೆಡ್ ನವರೇ ಗೆದ್ದರು.

ಹೊಳೇನರಸೀಪುರ.—ಬಹು ದಿವಸಗಳಿಂದಲೂ ನಿರೀಕ್ಷಿಸಲ್ಪಟ್ಟಿದ್ದ ಮಳೆಯು ೬ನೇ ತಾ ಆರಾಭಿಸಿದು ಆದಿನಗಳು ನಾಲ್ಕೈದು ಹದ ಮಳೆ ಬಿದ್ದಿದ್ದರಿಂದ ಜನರೆಲ್ಲರೂ ತುಂಬಾ ಹರ್ಷಿತರಾಗಿದಾರೆ. ಅದೇ ಮಳೆಯು ೧೫—೨೦ ದಿನಗಳಿಗೆ ಮೊದಲೇ ಬಿದ್ದಿದ್ದರೆ ತುಂಬಾ ಪ್ರಯೋಜನವಾಗುತ್ತಿತ್ತು. ಅದರ ಹಿಂದಾದ್ದರಿಂದ ರಾಗಿ ಧಾರಣೆ ಹೆಚ್ಚಾಗಿ ಬಡಜನರಿಗೆ ತುಂಬಾ ಕಷ್ಟವಾಗಿತ್ತು. ಈ ಮಳೆಯಿಂದ ಬಡ ಜನರ ಕಷ್ಟವು ಪರಿಹರಿಸಲ್ಪಟ್ಟಿತು. ಪ್ಲೇಗೋಸ್ಕರ ಬಹು ಕಷ್ಟಪಟ್ಟು ಧರ್ಮಾರ್ಥವಾಗಿ ಬಡ ರೋಗಿಗಳಿಗೆ, ಸ್ವಲ್ಪ ಮಟ್ಟಿಗೆ ಸ್ಥಿತಿವಂತರಿಗೂ ಅತಿ ಶ್ರೇಷ್ಠವಾದ ಗುಣ ಕಂಡುಬಂದಿರುವ ಪ್ಲೇಗ್ ಮಾತ್ರೆಗಳೂ, ಗಡ್ಡೆಯ ಕ್ಷೀಣ ಪಸೈರಗಳೂ ಇರುವಂತ ವೂರು ಆಯುರ್ವೇದ ರತ್ನಾಕರ ಪಂಡಿತರು ಅಯ್ಯಂಗಾರರುವಾಳುಮೆಲ್ಲಿಯವರಿಂದ ಅವಾರ ... ತಿಳಿದು ಕೊಂಡು ಅಂಥಾ ರೋಗಿಷ್ಟರಿಗೆ ಅದನ್ನು ಉಪಯೋಗಿಸಿ ಪ್ರಾಣದಾನ ಮಾಡುವರೆಂದು ಪ್ರಕಟಿಸಿ ಕೊಟ್ಟಿತು. ಈ ಸ್ಥಳದಲ್ಲಿ ಈ ಮಾತ್ರೆಗಳಿಂದಲೂ ಗಡ್ಡೆ ಕರಗಿಸುವ

ಕೊಡಲ್ಪಡುವ ಲೇಪನಗಳಿಂದಲೂ ಅನೇಕ ಮಂದಿ ರೋಗಿಗಳು ಗುಣವಾದದ್ದರಿಂದ ಈ ವಿಷಯವನ್ನು ಮುಂದಿನ ವಾರಿಗೆ ತಿಳಿಯಬೇಕೆಂದು ಕೇಳಿಕೊಂಡದ್ದು ಅದನ್ನು ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಪ್ರಕಟಿಸ ಕೋರುತ್ತೇನೆ.—ಈ ಊರಿಗೆ ಒಂದು ಮೈಲಿ ದೂರದಲ್ಲಿರುವ ಕಡುವಿನ ಹೊಸಹಳ್ಳಿ ಗ್ರಾಮದಲ್ಲಿ ಪ್ಲೇಗ್ ರೋಗವು ಕಾಣಿಸಿಕೊಂಡು ಪ್ರಮಾದವನ್ನು ಅನುಭವಿಸುತ್ತಿರುವರು. ಅಲ್ಲಿನ ಬಡ ಜನರು ಹೊರಗೆ ಗುಡಿಸಲುಗಳನ್ನು ಹಾಕಿಕೊಂಡಿದ್ದರು ಮಳೆಯು ಬಿಡದ್ದರಿಂದ ಅವರು ಆರಿಸ ಪುನಃ ಊರಿಗೆ ಹೊರಟು ಹೋದರು. ಪುನಃ ಪ್ಲೇಗ ಧವಹಿಂದ ೧ ಜನರಿಗೆ ಬಂದರು. ಹಾಸನದಿಂದ ಪ್ರೋ ಸಿ. ಸಾಹೇಬರವರು ಇಲ್ಲಿಗೆ ದಯಮಾಡಿಸಿ ಆ ಜನರನ್ನು ಆದರಿಸಿ ಅವರಿಗೆ ತಕ್ಕ ಧೈರ್ಯ ಕೊಟ್ಟು ಹೊರಟು ಹೋದರು. ಸರಸೀಪುರಕ್ಕೆ ಪ್ಲೇಗ ಬಂದಿದ್ದಾಗ ಜನರಿಗೆ ಇವರು ತುಂಬಾ ಸಹಾಯ ಮಾಡಿದ್ದರಿಂದ ಅವರನ್ನು ಈಗ ಜನರು ಹೊಗಳುತ್ತಿರುವಂತೆಯೇ ಹೊಸಹಳ್ಳಿ ಜನಗಳೂ ಇವರನ್ನು ತುಂಬಾ ಸ್ತೋತ್ರ ಮಾಡುತ್ತಿದಾರೆ—ಹಿಂದೆ ಪ್ಲೇಗ ಗಲಾಟೆ ಕಾಲದಲ್ಲಿ ಈ ಜೂ ಕಳುವಿನಿಂದ ಸಿಕ್ಕ ಮಲ್ಲಿಗೆ ಉಂಟಾದ ನಷ್ಟವನ್ನು ಬಾಧ್ಯರಿಗೆ ನಷ್ಟ ಹೇಳಲಿಕ್ಕಿಲ್ಲ. ಈ ವೊಕದ್ದಮೆಯು ಪಕ್ಷಕಾರರೆಲ್ಲರ ಈ ತಾಲ್ಲೋಕು ಪೋಲೀಸ್ ಆಫೀಸರನ್ನೆಲ್ಲಾ ಬದಲಾಯಿಸುವದು ಹೊಸದಾಗಿ ಬಂದವರು ಅದನ್ನು ಎಲ್ಲೀವರೆಗೆ ಪತ್ತೆ ಮಾಡಿದರೋ ಇಲ್ಲವೆ ಬಿ ಫಾರಂಗೆ ಎಂಟ್ರಿ ಮಾಡಿದರೋ ಎಂದು ಪುರ ಜನರು ಯೋಚನೆ ಮಾಡುತ್ತಿದ್ದಾರೆ ಮುಂದೆ ಏನಾದರೂ ಇಲ್ಲಿ ಗಂಡಾಂತರ ಏನಾಗತಿ ಎಂದು ಜನರು ಹೆದರುತ್ತಾರೆ.

ಚಿತ್ರದುರ್ಗ.—ಇಲ್ಲಿ ಕಳೆದ, ೭, ೮, ೯,ನೇ ತಾ ನಲ್ಲಿ ಹೂರು ಒಳ್ಳೆ ಹದಾ ಮಳೆಗಳಾದವು. ಒಟ್ಟು ೬ ಅಂಗುಲ ೬೯ ಸೆಂಟುಗಳೆಂದು ತಿಳಿದು ಬರುತ್ತೆ. ಈ ಮಳೆಗಳಿಂದ ಅಲ್ಲಿನ ಕೆರೆ ಕಟ್ಟೆಗಳೆಲ್ಲಾ ತುಂಬಿರವು, ಊರಿನ ಬಾವಿಗೆಗೂ ಕೆಲವು ತಿಂಗಳುಗಳ ವರೆಗೂ ಸಾಕಾದಷ್ಟು ನೀರು ಬಂತು. ತಿಮ್ಮಣ್ಣನಾಯ್ಕನ ಕೆರೆಗೂ (ರೆಸರ್ವಾಯರಿಗೂ) ೬ ತಿಂಗಳ ನೀರು ಬಂತು. ಜನರಿಗಿದ್ದ ನೀರಿನ ಕ್ಷೋಭೆ, ಭಗವಂತನ ಕೃಪಾವೃಷ್ಟಿ ಬೀಳಲು ಸಂಪೂರ್ಣವಾಗಿ ಇಲ್ಲದೆ ಹೋಯಿತು. ನೀರಿನ ಕ್ಷೋಭೆ ಬೇಸಿಗೆಯಿಂದ ಪ್ರಜೆಗಳ ವಿಷಯದಲ್ಲಿ ಸರಕಾರದವರಿಗಿದ್ದ ಅಪಾರವಾದ ಚಿಂತೆಯನ್ನು ಭಗವಂತನು ಕ್ಷಣಮಾತ್ರದಲ್ಲಿ ಹೋಗಲಾಡಿಸಿದನು. ಅದಕ್ಕೋಸ್ಕರ ಸರ್ವರೂ ಭಗವಂತನಿಗೆ ಕೃತಜ್ಞತಾ ಸ್ತೋತ್ರವನ್ನು ಅರ್ಪಿಸಬೇಕಾದ್ದು ವಿಹಿತವಲ್ಲವೆ! ಪೈರುಗಳು ಈಗಿದ ಮತ್ತಿಗೂ ಕ್ಷೇಗೆ ಸಿಕ್ಕಬಂದು ಈ ಮಳೆಯು ನಾಲ್ಕಾರು ದಿನಗಳು ತಡೆದು ಬಂದಿದ್ದರೆ ಪೈರೆಲ್ಲಾ ನಾಶವಹೊಂದುತ್ತಿತ್ತು. ಇನ್ನು ಒ ದೆರಡು ಹದಾ ಮಳೆಯಾದರೆ ಎಲ್ಲಾ ಪೈರುಗಳು ತುಂಬಿ ಕಾಳಾಗಿ ಬೆಳೆಯುವದೇನೋ ನಿಜ.—ಕಳೆದ ೩ನೇ ತಾ ನ ದಿನ ಸಾಯಂಕಾಲ ಅಲ್ಲಿನ ಟೌನ್‌ಹಾಲಿನಲ್ಲಿ ಸಭಾ ಇಂಗ್ಲಿಷ್ ಆಫೀಸರ್ ವೆಂಕೋಬರಾವ್ ಮಿಟಿಂಗಿ ನಡೆಯಿತು. ಶ್ರೀ ಜೆ ರು ಅಗ್ರಾಸನವನ್ನು ಅಲಂಕರಿಸಿದ್ದರು. ಎಲ್ಲಾ ಮುಖ್ಯ ದೊಡ್ಡ ಗೃಹಸ್ಥರುಗಳೂ ಸೇರಿದ್ದರು. ಎಕ್ಸಿಕ್ಯುಟಿವ್ ಇಂಜಿನಿಯರ್ ಮಿ|| ಶ್ರೀನಿವಾಸರಾಯರೂ, ಪ್ಲೀಡರ್ ಮಿ|| ತಿರುಮಲರಾಯರೂ, ಮಿ|| ರಾಮಾರಾಯರೇ ಮೊದಲಾದವರು, ಲೇಟ್ ದಿವಾನ್ ಸರ್ ಶೇಷಾದ್ರಿಯ್ಯರವರ ಗುಣಶೀಲ ಸ್ವಭಾವ, ರಾಜಕಾರ್ಯ ನಿರ್ವಾಹಕತ್ವ ಮೊದಲಾದ ವಿಷಯಗಳನ್ನು ಹಿಡಿದು ಯಥೋಚಿತವಾಗಿಯೂ ಮನೋರಂಜಕವಾಗಿಯೂ ಕೆಲವು ಕಾಲ ಪ್ರಸ್ತಾಪಿಸಿದರು. ಅವರೆ ವಿಚಾರವನ್ನು ಹೊಗಳಿದರು. ಅದೇ ಸಾಯಂಕಾಲ ಎಲ್ಲರೂ ತಮ್ಮ ತಮ್ಮ ಶಕ್ತ್ಯಾನುಸಾರ ಚಂದಾ ಹಣ ಕೊಟ್ಟದ್ದರಿಂದ,ಸುಮಾರು ೯೦೦ ರೂಪಾಯಿಗಳು ಉತ್ಪತ್ತಿಯಾಯಿತೆಂದು ತಿಳಿದು ಬರುತ್ತೆ. ಇಲ್ಲಿನ ಸಿವಿಲ್ ಆಸ್ಪತ್ರೆಯಲ್ಲಿ ಸುಮಾರು ೩—೪ ವರುಷಗಳಿಂದಲೂ ಅಸಿಸ್ಟೆಂಟ್ ಸರ್ಜನರಾಗಿ ಕೆಲಸಮಾಡಿದ ಮಿ|| ಶ್ರೀನಿವಾಸಯ್ಯಂಗಾರ್ಯ ವರ್ಗ ಮಾಡಲ್ಪಟ್ಟಿರುವ ವರ್ತಮಾನವು ಅವರ ಹಿತೈಷಿಗಳಿಗೆಲ್ಲಾ ತುಂಬಾ ವಿಷಾದವನ್ನುಂಟುಮಾಡಿದೆ. ಇವರು ತುಂಬಾ ಗುಣಶೀಲರೂ ಅವರ ತಾಪೇದಾರರಲ್ಲಿ ದಯಾಪರವೃತ್ತರೂ ಆಗಿದ್ದರಿಂದಲೂ ಹೇಳುವವರಲ್ಲಿ ಅತ್ಯಾಸಕ್ತರಿಂದ ಮುಂದೆ ಇವರು ಹೋಗತಕ್ಕ ಸ್ಥಳದಲ್ಲಿ ತುಂಬಾ ಕೀರ್ತಿಯನ್ನೂ ಪ್ರಜಾನುರಾಗವನ್ನೂ ಸಂಪಾದಿಸಿಕೊಳ್ಳುವವರಾಗಲಿ ಎಂದು ಹಾರೈಸುತ್ತೇವೆ. ಕಳೆದ ವಾರ ಅಲ್ಲಿನ ಒಂದು ಭಾವಿಯಲ್ಲಿ ನೀರು ಸೇದುವಾಗ್ಯೆ ಒಬ್ಬ ಯೌವನಸ್ಥನು ಕಾಲು ಜಾರಿ ಬಿದ್ದು ತುಂಬಾ ಘಾಯಪಟ್ಟನಂತೂ ಅದಕ್ಕೆ ಮೊದಲೇ ಮೂರು ನಾಲ್ಕು ಜನರು ಬಿದ್ದು ಘಾಯಪಟ್ಟಿರಂತೂ ತಿಳಿಯಬರುತ್ತೆ. ಈ ಭಾವಿಯು ಕೇವಲ ಅಪಾಯವಾದ ಭಾವಿ, ಆದಾಗ್ಯೂ ನಿಬಂಧನೆಗಳ ಸರ್ಕಾರದವರು ಯಾವ ಏರ್ಪಾಡನ್ನೂ ಮಾಡಿರಲಿಲ್ಲ. ಆಗಲಾದರೂ ಈ ಭಾವಿಯು ತುಂಬಿ ಧರ್ಮಾರ್ಥವಾಗಿದೆ. ಅಪಾಯಕ್ಕೆ ಕಾರಣವಿಲ್ಲ. ಹೇಗಾದರೂ ಪೇಟೆ ಕಡೆಯಲ್ಲಿ ನೀರು ಸಾಕಾದಷ್ಟು ಸಿಕ್ಕದೆ ಇರುವದರಿಂದ ಇದರ ನೀರಿನ ಉಪಯೋಗ ಪ್ರಮೇಣ ಹೆಚ್ಚುತ್ತಿರುವದು. ಸರ್ಕಾರದವರು ಸದಾ ನೀರು ಸಿಕ್ಕುವ ಏರ್ಪಾಡು ಮಾಡಿರುವರು.

ಉತ್ತರಧ್ರುವ ಪ್ರಾಂತ್ಯದಲ್ಲಿ ಪ್ರಯಾಣ ಮಾಡಿದ ವೃತ್ತಾಂತ.

೧೮೯೮ನೇ ವರ್ಷ ಜೂನ್ ತಿಂಗಳಿನಲ್ಲಿ ನಾರ್ವೆ ದೇಶದ ರಾಜಧಾನಿಯಾದ ಕ್ರಿಸ್ತಿಯಾನಿಯಾ ನಗರದಿಂದ ಉತ್ತರಧ್ರುವ ಪ್ರಾಂತ್ಯವನ್ನು ಪರಿಶೋಧನೆ ಮಾಡುವದಕ್ಕಾಗಿ ಫ್ರಾಮ್ ಎಂಬ ಹಡಗಿನಲ್ಲಿ ಕೆಲವು ಮಂದಿ ಸಮರ್ಥರು ಹೊರಟರು. ಈ ಪ್ರಕಾರ ಹೊರಟ ೧೬ ಮಂದಿಯಲ್ಲಿ ಆರು ಮಂದಿ ಭೂಗರ್ಭ ಶಾಸ್ತ್ರದಲ್ಲಿಯೂ ವನಸ್ಪತಿ ಶಾಸ್ತ್ರದಲ್ಲಿಯೂ ಪ್ರಾಣಿ ಶಾಸ್ತ್ರದಲ್ಲಿಯೂ ನಿಷ್ಣಾತರಾಗಿದ್ದರು. ಪ್ರಯಾಣ ಮಾಡುವಾಗ ಯಾವ ಸಂದರ್ಭದಲ್ಲಿ ಏನು ತೊಂದರೆ ಸಂಭವಿ

ಪಿನ ಕಾಗದ್ದು ಕಷ್ಟ ಸನ್ನಾಹಗಳನ್ನು ಕಲ್ಪಿಸುವದರಲ್ಲಿ ಕೇವಲ ಸಮರ್ಥರಾದವರೇ ಪೊರಟರು. ಹಡಗಿನಲ್ಲಿ ಪ್ರಯಾಣ ಮಾಡಿದಷ್ಟು ದೂರ ಹೋದ ತರುವಾಯ ಮಂಜುಗಡ್ಡೆ ಸಿಕ್ಕಿದಾಗ ಅದರ ಮೇಲೆ ಗಾಲಿಗಳಿಲ್ಲದ ಬಂಡಿಗಳನ್ನು ಎಳೆಯುವದಕ್ಕಾಗಿ ನಾಯಿಗಳನ್ನು ತೆಕ್ಕೊಂಡಿದ್ದರು. ಈ ಪ್ರಕಾರ ಭಯಂಕರವಾದ ಈ ಪ್ರವಾಸದಲ್ಲಿ ಅವಶ್ಯವಾದ ಸಕಲ ಸನ್ನಾಹಗಳೊಡನೆ ಹೊರಟ ಫ್ರಾಮ್ ಎಂಬ ಹಡಗು ಎರಡು ತಿಂಗಳಲ್ಲಿ ಗ್ರೀನ್ಲ್ಯಾಂಡನ್ನು ಮುಟ್ಟಿ ಸ್ಮಿತ್ ಎಂಬ ಜಲಸಂಧಿಯನ್ನು ದಾಟಿ ಮುಂದಕ್ಕೆ ಹೋಗುವದಕ್ಕಾಗಿ ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಗಿ ಎಲ್ಸ್ಮಿಯರ್ ಲ್ಯಾಂಡ್ ಎಂಬಲ್ಲಿ ಮಂಜುಗಡ್ಡೆಗಳಿಗೆ ಸಿಕ್ಕಿಕೊಂಡಿತು. ತರುವಾಯ ನಡೆದ ವೃತ್ತಾಂತವನ್ನೆಲ್ಲಾ ಆ ಹಡಗಿನ ನಾಯಕನಾದ ಕ್ಯಾಪ್ಟನ್ ಸ್ವೆರ್ಡ್ರುಪ್ ಇಂಗ್ಲಾಂಡಿನ ಟೈಮ್ಸ ಎಂಬ ಪತ್ರಿಕೆಗೆ ಬರೆದು ತಿಳಿಸಿದವನ್ನು ಇಲ್ಲಿ ಮುದ್ರಿಸಿದೆ.

೧೮೯೮ನೇ ಆಗಸ್ಟ ೧೭ರಲ್ಲಿ ಕೇಪ್ ಸಬೈನ್ ಭೂಶಿರಕ್ಕೆ ಸ್ವಲ್ಪ ಉತ್ತರದಲ್ಲಿ ಮಂಜುಗಡ್ಡೆಗಳು ನಮಗೆ ಅಡ್ಡವಾಗಿ ಬಂದದರಿಂದ ನಮ್ಮ ಹಡಗು ಅಲ್ಲೇ ನಿಂತಿತು. ಚಳಿಯು ಆವಾಗಲೆ ಪ್ರಾರಂಭವಾದದರಿಂದ ಆ ಪ್ರದೇಶದ ಹಿಮವು ದಿನದಿನಕ್ಕೆ ಹೆಚ್ಚುವದಾಯಿತು. ಆದಕಾರಣ ನಾವು ಹಿಮಕಾಲವನ್ನು ರೈಸ್ ಜಲಸಂಧಿಯಲ್ಲಿ ಕಳೆಯಬೇಕಾಯಿತು. ಶೀಘ್ರವಲ್ಲಿ ನಾಯಿಗಳು ಕಟ್ಟಿದ ಗಾಡಿಗಳಲ್ಲಿ ಹೊರಟು ಎ

ಲ್ಸ್ಮಿಯರ್ ಲ್ಯಾಂಡಿನ ಹಿಮಪ್ರದೇಶವನ್ನು ಪರಿಶೋಧನೆ ಮಾಡಿದೆವು. ಆ ಪ್ರಾಂತ್ಯವೆಲ್ಲಾ ಭೂಪಟಗಳಲ್ಲಿ ಬರೆಯಲ್ಪಟ್ಟಿಲ್ಲ. ನಾಯಿಗಳ ಆಹಾರಕ್ಕೋಸ್ಕರವಾಗಿ ಕೆಲವು ದೂರ ಹೋಗಿ ಬೇಟೆಯಾಡುತ್ತಲೂ ಕಾಲಹರಣ ಮಾಡಿದೆವು. ಆ ಸ್ಥಳದಲ್ಲಿ ನಾಯಿಗಳಿಗೆ ಅವಶ್ಯವಾದ ಆಹಾರವು ಯಥೇಷ್ಟವಾಗಿ ಸಿಕ್ಕುತ್ತಿದ್ದಿತು. ಆದರೆ ಹಿಮಕಾಲ ಕಳೆಯುವದಕ್ಕೋಸ್ಕರ ಅಲ್ಲೇ ಒಂದು ಗುಡಿಸಲು ಕಟ್ಟಿದ್ದಲ್ಲದೆ, ಗಾಲಿಗಳಿಲ್ಲದ ಬಂಡಿಗಳಲ್ಲಿ ಕುಳಿತು ಸ್ವಲ್ಪ ವಿಸ್ತಾರವಾಗಿ ಪರಿಶೋಧನಾ ಪ್ರಯಾಣವನ್ನು ಮಾಡಬೇಕೆಂತಲೂ ಫ್ರಾಮ್ ಹಡಗನ್ನು ಅಲ್ಲಿಂದ ಹಿಂದಕ್ಕೆ ಮೆಲ್ವಿಲ್ ಕೊಲ್ಲಿಗಾಗಲಿ ಬ್ಯಾಫಿನ್ಸ್ ಲ್ಯಾಂಡಿಗಾಗಲಿ ಕಳುಹಿಸಬೇಕೆಂತಲೂ ಆಲೋಚಿಸಿದೆವು. ಹೀಗೆ ಆ ಹಿಮಕಾಲವನ್ನೆಲ್ಲಾ ಗುಡಿಸಲಲ್ಲಿ ಕಳೆದು ಮಾರನೇ ಬೇಸಗೆಯಲ್ಲಿ ಗ್ರೀನ್ಲ್ಯಾಂಡಿನ ಉತ್ತರತೀರಕ್ಕೆ ಸಬೈನ್ ದ್ವೀಪದ ವರೆಗೂ ಒಂದು ಆ ವರ್ಷದ ಆಗಸ್ಟ—ಸೆಪ್ಟೆಂಬರ್ ತಿಂಗಳಲ್ಲಿ ಫ್ರಾಮ್ ಹಡಗನ್ನು ಸಂಧಿಸಬೇಕೆಂಬುವದೇ ನಮ್ಮ ಉದ್ದೇಶ. ಆದಕಾರಣ ಆ ಹಿಮಕಾಲವೆಲ್ಲಾ ತುಂಬಾ ಪ್ರಯಾಸಪಟ್ಟು ಬೇಕಾದ ಸಾಮಗ್ರಿಗಳನ್ನೆಲ್ಲಾ ಸಿದ್ಧಪಡಿಸಿಕೊಂಡು, ಉದ್ದೇಶಿಸಿದ ಪ್ರಕಾರ ೧೮೯೯ನೇ ವರ್ಷದ ಬೇಸಗೆಯಲ್ಲಿ ಎರಡು ಪ್ರಯಾಣಗಳನ್ನು ಮಾಡಿದೆವು. ಒಂದು ಪ್ರಯಾಣದಲ್ಲಿ ಎಲ್ಸ್ಮಿಯರ್ ಲ್ಯಾಂಡನ್ನು ದಾಟಿ ಪಶ್ಚಿಮದಿಕ್ಕಾಗಿ ಹೊರಟು ಹಿಮಪ್ರದೇಶವನ್ನು ಶೋಧಿಸಿದೆವು. ಮತ್ತೊಂದು ಪ್ರವಾಸದಲ್ಲಿ ಉತ್ತರದಿಕ್ಕಾಗಿ ಹೊರಟು ಹಿಮದ ಗಡ್ಡೆಯಿಲ್ಲದ ಪ್ರದೇಶದಲ್ಲಿ ಸಂಚರಿಸಿದೆವು.

